ಕನ್ನಡ ಪ್ರಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು:- ಬಿ. ಆರ್. ಹೊಸಮನಿ

ವಾರ್ಷಿಕ ಚಂದಾ ೪ ರೂ.

ಬಿಡಿ ಪ್ರತಿ ೬ ಆಣೆ

ಜಗದ್ವಂದ್ಯ ಪಂಡಿತ ಜವಾಹರಲಾಲರು

ಪುಟ ೨೫೦ ಬೆಲೆ: ೨-೧೨-೦

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : **ಎಂ. ಡಿ. ಮೇಲಗಿರಿ**

ಬಿ. ಎ. (ಆನರ್ಸ)

ಮೂಲೋದ್ಯೋಗ ಶಿಕ್ಷಕ ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ

ಸರಕಾರದ ಪಠ್ಯಪುಸ್ತಕ ಸಮಿತಿಯವರಿಂದ ಪ್ರಾಥಮಿಕ ಟ್ರೇ. ಕಾಲೇಜದ ೨ನೆಯ ವರ್ಷದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪೂರಕವಾಚನವೆಂದು ಮಂಜೂರಾಗಿದೆ. ೨ನೆಯ ವರ್ಷದ ಅಭ್ಯಾಸಪತ್ರಿಕೆ ಹಾಗೂ ಪ್ರಾಥಮಿಕ ಶಾಲೆಗಳ ಮೇಲಿನ ವರ್ಗಗಳ ಅಭ್ಯಾಸಪತ್ರಿಕೆ ಇವುಗಳಂತೆ ಬರೆದುದು.

ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

ಎಸ್. ಕೆ. ಮೇಲಗಿರಿ

ಕಮಲಾಪುರ ಭಾಗ (ಈಶ್ವರದೇವರ ಗುಡಿ ಓಣಿ)

ಧಾರವಾಡ

ಪುಟ ೨೨೫ ಬೆಲೆ: ೨-೪-೦

ಕೈನೂಲು

ಲೇಖಕರು: **ಎಮ್. ಡಿ. ಮೇಲಗಿರಿ**

ಬಿ. ಎ. (ಆನರ್ಸ)

ಮೂಲೋದ್ಯೋಗ ಶಿಕ್ಷಕ ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ

ಸರಕಾರದ ಪಠ್ಯಪುಸ್ತಕ ಸಮಿತಿಯವರಿಂದ ಪ್ರಾಥಮಿಕ ಟ್ರೇನಿಂಗ ಕಾಲೇಜಗಳ ೧ನೆಯ ವರ್ಷದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ "ಟೆಕ್ಸ್ಟ್‌ಬುಕ್" ಎಂದು ಮಂಜೂರಾಗಿದೆ. ೧ನೆಯ ವರ್ಷದ ಅಭ್ಯಾಸಪತ್ರಿಕೆ ಹಾಗೂ ಪ್ರಾ. ಶಾಲೆಗಳ ಎಲ್ಲ ವರ್ಗಗಳಿಗೆ ನೂಲುಗಾರಿಕೆ ಸಂಬಂಧಿಸಿದ ಅಭ್ಯಾಸಪತ್ರಿಕೆಗಳು ಇವುಗಳಂತೆ ಬರೆದುದು. ಹತ್ತಿಯ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವ ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಚಿತ ಚಿತ್ರಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ ಶೈಕ್ಷಣಿಕ ಸ್ವರೂಪ ಕೊಟ್ಟು ವಿವರಿಸಿದೆ. ನೂಲುಗಾರಿಕೆಗೆ ಸಂಬಂಧಿಸಿದ ಗಣಿತವನ್ನು ಸಾದ್ಯಂತವಾಗಿ ಸೇರಿಸಿದೆ.

ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

ಎಸ್. ಕೆ. ಮೇಲಗಿರಿ

ಕಮಲಾಪುರ ಭಾಗ (ಈಶ್ವರದೇವರ ಗುಡಿ ಓಣಿ)

ಧಾರವಾಡ

೧–೨ ಪ್ರಾ. ಶಿ. ವಿದ್ಯಾರ್ಥಿಗಳಿಗಾಗಿ

ಶಾಸ್ತ್ರೀಯ

ರಾಗಗೀತ ಪ್ರವೇಶಿಕಾ

ಬರೆದವರು:— ಗಾಯನ ಕಲಾಕೋವಿದ

ಶ್ರೀ. ಜಿ. ಎಸ್. ಜುಕ್ತಿಮಠ

ಪುಟ ೧೨೦ ಬೆಲೆ ೧—೦—೦

ಈ ಪುಸ್ತಕವು ಮುಂಬಯಿ ಸರಕಾರದ ವಿದ್ಯಾ ಖಾತೆಯವರಿಂದ ೧ ಮತ್ತು ೨ನೇ ವರ್ಷ ಟ್ರೇ. ಕಾ. ವಿದ್ಯಾರ್ಥಿಗಳಿಗಾಗಿ ವಿಶೇಷ ವಾಚನವೆಂದು ಮಂಜೂರಾಗಿದೆ. ಈ ಪುಸ್ತಕವು ಮುಲ್ಕಿ ಪರೀಕ್ಷೆಯಲ್ಲಿ ಗಾಯನ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಒಳ್ಳೇ ಉಪಯುಕ್ತವಾಗಿದೆ. ಅಲ್ಲದೆ ಸರಿಗಮ ನಕಾಶ ಕೊಟ್ಟು, ಗಾಯನ ಅಭ್ಯಾಸಿಗಳಿಗೂ ಅನುಕೂಲವಾಗುವಂತೆ ತಯಾರಿಸಲಾಗಿದೆ.

ದೊರೆಯುವ ಸ್ಥಳ:—

ಮಹಾಂತೇಶ ಬುಕ್‌ಡಿಪೋ, ಬಾಗಲಕೋಟ

ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ

ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ ಮತ್ತು ಶ್ರೀ. ಜಿ. ಡಿ. ಮಾಲಿ

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ಖಳಖ, ಕಸಬಾ ಪೇಟೆ, ಪುಣೆ

ಕನ್ನಡ ಪ್ರಾಥಮಿಕ ಶಿಕ್ಷಣ



ಸಂಪಾದಕ ಮಂಡಲ

ಸಂಚಾಲಕರು: ಶ್ರೀ. ಡಿ. ಪ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು: ಶ್ರೀ. ಬಿ. ಆರ್. ಹೊಸಮನಿ ಬಿ.ಎ.ಬಿ ಟಿ., ಡಿ. ಅಯ್. ಪಿ., ಡಿ. ಬಿ. ಈ. ಪ್ರಿನ್ಸಿಪಾಲ್, (I/C.) ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ. ಯೆಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟಿಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೬೧	ಜನೆವರಿ ೧೯೫೨	ಸಂಚಿಕೆ ೯

ಪರಿವಿಡಿ

ವಿಷಯ		ಪುಟ
೧.	ಸಂಪಾದಕೀಯ	೩
೨.	ಹಬ್ಬ ಹುಣ್ಣಿವೆಗಳೂ ಅವುಗಳ ದಿನಾಚರಣೆಯೂ— ಶ್ರೀ. ಬ. ಮ. ಶಿಂತ್ರಿ	೫
೩.	ಅಲ್ಪಾವಧಿ ತರಬೇತಿ ಕೇಂದ್ರ— ಶ್ರೀ. ವೀರೇಶ ಹಿರೇಮಠ	೯
೪.	ಹರುಷದ ಹತ್ತು ದಿವಸಗಳು ....ಶ್ರೀ. ರೇವಣಸಿದ್ಧೇಶ್ವರ ಮಾಳವಾಡ	೧೩
೫.	ಚಕ್ರಬಡ್ಡಿಯ ಲೆಕ್ಕಗಳು (ಬೀಜಗಣಿತದ ಅಗತ್ಯ) ಶ್ರೀ. ತಟ್ಟಿ ಶ್ಯಾಮರಾಯರು	೧೭

ಕೆಲಸದ ಅವಧಿಯಲ್ಲಿ ಕೊಡಬೇಕಾದ ಪಗಾರ (ಡ್ಯೂಟಿ ಪೇ)

. ಹಂಗಾಮಿ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಟ್ರೇನಿಂಗ ಕಾಲೇಜದಲ್ಲಿ ತರಬೇತಿಯನ್ನು ಹೊಂದುತ್ತಿರುವಾಗ ಅವರಿಗೆ ವಿಶೇಷ ಸವಲತ್ತೆಂದು ಚಾಲು ವರ್ಷದಿಂದ (೧೯೫೧-೫೨) ಕೆಲಸದ ಅವಧಿಯಲ್ಲಿ ಕೊಡಬೇಕಾದ ವೇತನವನ್ನು ಕೊಡಬೇಕೆಂದು ಮುಂಬಯಿ ಸರಕಾರವು ನಿಶ್ಚಯಿಸಿದೆ. ಆದರೆ ಅವರ್ಯ ಕೆಲವು ನಿಯಮಗಳಿಗೆ ಒಳಗೊಂಡಿರಬೇಕು.

೧೯೫೧ನೆಯ ಫೆಬ್ರುವರಿಯಲ್ಲಿ ಮುಂಬಯಿ ಸರಕಾರವು ಕೊಟ್ಟ ಅಪ್ಪಣೆಯ ಮೇರೆಗೆ ಕಾಯಂ ಮಾಡಲ್ಪಡುವ ಒಟ್ಟು ಸ್ಥಳಗಳಲ್ಲಿ ೧೦೦ಕ್ಕೆ ೮೦ ಸ್ಥಳಗಳಿಗೆ ಮಾತ್ರ ಇಂಥ ಹಂಗಾಮಿ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರು ಯೋಗ್ಯರಾಗುವರು.

ಟ್ರೇನಿಂಗಿಗೆ ಹೋಗುವ ಪೂರ್ವದಲ್ಲಿ ಜಿಲ್ಲಾ ಸ್ಕೂಲ ಬೋರ್ಡಿನಲ್ಲಿ ತಡೆ ಇಲ್ಲದೆ ಮತ್ತು ಸಮಾಧಾನಕರವಾಗಿ ಕನಿಷ್ಟ ಮೂರು ವರ್ಷ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯತೆಂದು ಕೆಲಸ ಮಾಡಿರದಿದ್ದರೆ ಅವರಿಗೆ ಕೆಲಸದ ಅವಧಿಯಲ್ಲಿಯ ಪಗಾರವು (ಡ್ಯೂಟಿ ಪೇ) ಸಿಗಲಾರದು.

ಟ್ರೇನಿಂಗ ಕಾಲೇಜದಲ್ಲಿ ಕಾದಿಟ್ಟ ೧೦೦ಕ್ಕೆ ೨೦ ಸ್ಥಳಗಳಲ್ಲಿ ಟ್ರೇನಿಂಗಿಗೆ ಕಳಿಸಲ್ಪಟ್ಟ "ಜೂನಿಯರ" ಶಿಕ್ಷಕ ಶಿಕ್ಷಕಿಯರಿಗೂ ಕೆಲಸದ ಅವಧಿಯಲ್ಲಿಯ ಪಗಾರ ಸಿಗಲಾರದು.

ಇಲ್ಲಿಯವರೆಗೆ ಟ್ರೇನಿಂಗಿಗೆ ಕಳಿಸಲ್ಪಟ್ಟ ಹಂಗಾಮಿ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಟ್ರೇನಿಂಗದ ಅವಧಿಯಲ್ಲಿ ಪ್ರತಿ ತಿಂಗಳು ೨೦ ರೂ. ಯಂತೆ 'ಸ್ಟಾಯಪೆಂಡ' ಮಾತ್ರ ಕೊಡಲಾಗುತ್ತಿತ್ತು. ಕೆಲಸದ ಅವಧಿಯ ಪಗಾರವು ಅವರು ಕಾಯಂ ಸ್ಥಳದಲ್ಲಿ ಇಲ್ಲದಿರುವದರಿಂದ ಸಿಗುತ್ತಿರಲಿಲ್ಲ.

ಕಾಯಂ ಆಗಿ ಕೆಲಸ ಮಾಡಲಿಕ್ಕೆ ಬೇಕಾಗುವ ಸ್ಥಳಗಳಲ್ಲಿ ೧೦೦ಕ್ಕೆ ೮೦ ಸ್ಥಳಗಳನ್ನು ಕಾಯಂ ಮಾಡಬೇಕೆಂದು ಗೊತ್ತುಮಾಡಲಾಗಿದೆ. ಆದ್ದರಿಂದ ೧೦೦ಕ್ಕೆ ೮೦ ಸ್ಥಳಗಳಿಗೆ ಮಾತ್ರ ಈ ಪ್ರಕಾರದ ಅಂದರೆ ಕೆಲಸದ ಅವಧಿಯ ಪಗಾರ ಕೊಡುವ ಸವಲತ್ತು ಕೊಡಲಾಗಿದೆ.

ಪ್ರಾಥಮಿಕ ಶಾಲೆಗಳ ವಾರ್ಷಿಕ ಪರೀಕ್ಷೆ

ಎಲ್ಲ ಪೂರ್ಣ (ಫುಲ್) ಪ್ರಾಥಮಿಕ ಶಾಲೆಗಳು ೭ನೆಯ ಇಯತ್ತೆಯ ವಿದಾರ್ಥಿ-ವಿದ್ಯಾರ್ಥಿನಿಯರ ವಾರ್ಷಿಕ ಪರೀಕ್ಷೆಯನ್ನೂ ಉಳಿದ ವರ್ಗಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳುವ ಕಾಲಕ್ಕೆ ತೆಗೆದುಕೊಳ್ಳತಕ್ಕದ್ದು. ೭ನೆಯ ಇಯತ್ತೆಯ ವಾರ್ಷಿಕ ಪರೀಕ್ಷೆಯಲ್ಲಿ ಅಥವಾ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮಾಧ್ಯಮಿಕ ಶಾಲೆಗಳ ೮ನೆಯ ವರ್ಗದಲ್ಲಿ ಪ್ರವೇಶಕ್ಕೆ ಅರ್ಹರಾಗುವರು. ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಉಮೇದವಾರರನ್ನು ಕಳಿಸುವದಕ್ಕೆಂದು ಏರ್ಪಡಿಸಲಾದ ಪ್ರಿಲಿಮ್ನರಿ ಪರೀಕ್ಷೆಯನ್ನು ವಾರ್ಷಿಕ ಪರೀಕ್ಷೆಯೆಂದು ಪರಿಗಣಿಸಲಾಗುವುದಿಲ್ಲ.

ಸಂಪಾದಕೀಯ

ಪ್ರಾಥಮಿಕ ಶಿಕ್ಷಕರ ಸಂಪು :

ಭಾರತದಲ್ಲಿ ಮಹಾಚುನಾವಣೆಯು ನಡೆದಿರುವಾಗ ಪ್ರಾಥಮಿಕ ಶಿಕ್ಷಕರು ಸಂಪು ಹೂಡಬೇಕೆಂದು ನಿರ್ಧರಿಸಿದ್ದರು. ಸಂಪನ್ನು ಅವರು ನಿಲ್ಲಿಸಿದುದು ಸ್ತುತ್ಯವಾದುದಾಗಿದೆ. ಈ ಸಂಪಿನ ಸಂಬಂಧವಾಗಿ ಸರಕಾರವು ತನ್ನ ಅಭಿಪ್ರಾಯವನ್ನು ಒಂದು ಪ್ರಕಟನೆಯನ್ನು ಹೊರಡಿಸಿ ವ್ಯಕ್ತಗೊಳಿಸಿದೆ. (ಮುಂದಿನ ಬಾರಿ ಅದರ ಸಂಕ್ಷಿಪ್ತ ಮಾಹಿತಿಯನ್ನು ಕೊಡಲಾಗುವುದು.) ಅದನ್ನು ಪ್ರಾಥಮಿಕ ಶಿಕ್ಷಕರು ಕೂಲಂಕಷವಾಗಿ ಓದಿ ನೋಡಿದಲ್ಲಿ ಮುಂಬಯಿ ಸರಕಾರವು ಪ್ರಾಥಮಿಕ ಶಿಕ್ಷಕರಿಗಾಗಿ ಇತರ ರಾಜ್ಯಗಳಿಗಿಂತ ಎಷ್ಟು ಹೆಚ್ಚು ಸಂಬಳವನ್ನಿತ್ತಿದೆ ಮತ್ತು ಪ್ರಾಥಮಿಕ ಶಿಕ್ಷಕರ ಏಳ್ಗೆಗಾಗಿ ಎಷ್ಟು ಶ್ರಮಿಸಿದೆ ಎಂಬುದು ಕಂಡುಬರದೆ ಇರಲಾರದು ಮತ್ತು ಪ್ರಾಥಮಿಕ ಶಿಕ್ಷಕರ ಸಂಪು ನ್ಯಾಯಸಮ್ಮತವಿಲ್ಲವೆಂದೂ ಸಮಯೋಚಿತವೂ ಆಗಿಲ್ಲವೆಂಬುದೂ ಕಂಡುಬಾರದಿರಲಾರದು. ಪ್ರಾಥಮಿಕ ಶಿಕ್ಷಕರು ಸಂಪು ನಿಲ್ಲಿಸಿ ಅಭಿನಂದನೀಯರಾಗಿದ್ದಾರೆ.

ಕಂಬನಿ :

ನಮ್ಮ ಭಾಗದ ಸೇವಾನಿವೃತ್ತರಾದ ಪ್ರಥಮ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದ **ಶ್ರೀ. ಭೀಮರಾವ ಥಿಟೆ** ಅವರು ೨೮-೧೧-೫೧ನೆಯ ದಿನ ಕೈಲಾಸವಾಸಿಗಳಾದರೆಂದು ತಿಳಿಸಲು ಖೇದವೆನಿಸುತ್ತದೆ. ಇವರ ನಿಧನದಿಂದ ಶಿಕ್ಷಣ ಕ್ಷೇತ್ರವು ಒಬ್ಬ ಸಮರ್ಥ ಪರಿಯ ವ್ಯಕ್ತಿಗಳನ್ನು ಕಳಕೊಂಡಂತಾಯಿತು. **ಶ್ರೀ. ಥಿಟೆಯವರು** ಕನ್ನಡನಾಡಿನ ಶಿಕ್ಷಣಪ್ರಪಂಚಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. ಇವರ ಜೀವನವೆ ಶಿಕ್ಷಣವನ್ನೀಯುತ್ತಿದ್ದಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಶ್ರೀ. ಭೀಮರಾವ ಥಿಟೆಯವರು ವಿಜಾಪುರ ಜಿಲ್ಲೆಯಲ್ಲಿರುವ ಇತಿಹಾಸ ಪ್ರಸಿದ್ಧವಾದ ಬಾದಾಮಿಯವರು. ಇವರ ಮನೆತನವು ಉದಾರತನಕ್ಕೆ ಪ್ರಸಿದ್ಧವಾಗಿತ್ತು. ಮನೆತನದ ಉದಾರ ಗುಣಗಳು ಶ್ರೀ. ಥಿಟೆ ಭೀವರಾಯರಲ್ಲಿಯೂ ಎದ್ದುಕಾಣುತ್ತಿದ್ದವು. ೧೯೦೬ನೆಯ ಇಸವಿಯಲ್ಲಿ ಬಿ. ಎ ಪಾಸಾಗಿ ವಿಜಾಪುರ ಹೈಸ್ಕೂಲಿನಲ್ಲಿ ಅಸಿಸ್ಟಂಟ ಮಾಸ್ತರರಾಗಿ ತಮ್ಮ ನೌಕರಿಯನ್ನು ಪ್ರಾರಂಭ ಮಾಡಿದರು. ಅಲ್ಲಿಯೆ ೨೮ ವರ್ಷ ಕೆಲಸ ಮಾಡಿದ ನಂತರ ಕಾರವಾರ ಮತ್ತು ಧಾರವಾಡ ಹೈಸ್ಕೂಲುಗಳ ಹೆಡ್‌ಮಾಸ್ತರರಾಗಿದ್ದರು. ಉತ್ತಮ ಶಿಕ್ಷಕರೆಂದು ಇವರು ಬಹು ಖ್ಯಾತಿಯನ್ನು ಪಡೆದಿದ್ದರು. ಇವರ ಸ್ವಭಾವ ಕೋಮಲವಾದುದು, ಸರಳವಾದುದು, ಸಹಕಾರಯುಕ್ತವಾದುದು ಇತ್ಯಾದಿ. ಅದರಿಂದಾಗಿ ಇವರು ವಿದ್ಯಾರ್ಥಿಗಳಿಗೂ, ಶಿಕ್ಷಕವೃಂದಕ್ಕೂ ಅಚ್ಚುಮೆಚ್ಚಿನವರಾಗಿದ್ದರು. ಶ್ರೀ. ಥಿಟೆಯವರ ಸಂಪರ್ಕದಲ್ಲಿ ಬಂದ ಶಿಕ್ಷಕರು ಅವರನ್ನು ಎಂದೂ ಮರೆಯುವಂತಿಲ್ಲ. ಸೇವಾನಿವೃತ್ತರಾದ ಬಳಿಕ ಹುಬ್ಬಳ್ಳಿಯ ಜಗದ್ಗುರು ಗಂಗಾಧರ ಹೈಸ್ಕೂಲನ್ನು ಊರ್ಜಿತಾವಸ್ಥೆಗೆ ತಂದು ಶಿಕ್ಷಣದ ಕಾರ್ಯವನ್ನು ಜೀವನದ ಕೊನೆಯ ಉಸಿರಿನವರೆಗೂ ಮಾಡುತ್ತಿದ್ದರೆಂದು ಹೇಳಿದಲ್ಲಿ ಅತಿಶಯೋಕ್ತಿಯಾಗ

ಲಾರದು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ಶ್ರೀ. ಭೀಮರಾವ ಥಿಟೆಯವರ ನಿಧನದಿಂದಾದ ದುಃಖವನ್ನು ಸಹಿಸುವ ಶಕ್ತಿಯನ್ನೂ ಕೊಡಲೆಂದು ಬೇಡಿಕೊಳ್ಳುತ್ತೇವೆ

ಕನ್ನಡನಾಡಿಗೇ ಇನ್ನೊಂದು ವಜ್ರಾಘಾತವು ೨೨—೧೧—೫೧ ನೆಯ ಸಾಯಂಕಾಲ ೩॥ ಗಂಟೆಗೆ ಆಯಿತು. ಅಂದು ಕನ್ನಡದ ಕುಲಪುರುಷರಾದ ಪ್ರೊ. ಶಿ. ಶಿ. ಬಸವನಾಳರು ಹೃದಯವಿಕಾರದಿಂದ ಲಿಂಗೈಕ್ಯರಾದರು. ಅಂದು ಕನ್ನಡನಾಡಿಗೆ ನಾಡೇ ಕಂಬನಿಗರೆಯಿತು, ಇಂದಿಗೂ ಅಶ್ರುಧಾರೆಯನ್ನು ಹರಿಸುತ್ತ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ. ಕನ್ನಡಿಗರಿಗಾದ ದುಃಖದಲ್ಲಿ ನಮ್ಮ ಸಂಪಾದಕ ಮಂಡಳವೂ ಸಮಭಾಗಿಯಾಗಿದೆ. ಪ್ರೊ. ಶಿ. ಶಿ. ಬಸವನಾಳರು ತಮ್ಮ ಜೀವನವನ್ನು ಶಿಕ್ಷಕವೃತ್ತಿಯಿಂದ ಪ್ರಾರಂಭಿಸಿದರು. ಇವರು ಪದವೀಧರರಾದಾಗ ಇವರಿಗೆ ಸರಕಾರದ ದೊಡ್ಡ ಸ್ಥಾನವು ಕಾಯ್ದಿದ್ದರೂ ನಾಡಿಗೇ ಶಿಕ್ಷಣ ಕೊಡುವ ಉದಾತ್ತ ಶಿಕ್ಷಕನ ಸ್ಥಾನವನ್ನೇ ಇವರು ಮೆಚ್ಚಿದರು. ಆರ್. ಎಲ್. ಎಸ್. ಹೈಸ್ಕೂಲ್, ಲಿಂಗರಾಜ ಕಾಲೇಜ ದಂತಹ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದರು, ಕ. ವಿ. ವರ್ಧಕ ಸಂಘದ ಸಾಹಿತ್ಯ ವಿಭಾಗವನ್ನು ಬೆಳಗಿದರು, ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ, ಅದರ ಪ್ರಗತಿಯ ಸಾಧನೆಗಾಗಿ ಅಹರ್ನಿಶ ದುಡಿದರು. ರಬಕವಿ ಸಾಹಿತ್ಯಸಮ್ಮೇಳನದ ಅಧ್ಯಕ್ಷಪೀಠವನ್ನು ಅಲಂಕರಿಸಿದರು. 'ಜಯಕರ್ನಾಟಕ' ವಾರ ಮಾಸಪತ್ರಿಕೆಗಳ ಸಂಪಾದನ ಮಾಡಿದರು. ಐತಿಹಾಸಿಕದ ಗ್ರಂಥಗಳನ್ನು ಬರೆದರು. ಬಸವಣ್ಣನವರ ವಚನಗಳನ್ನು ಸಂಶೋಧಿಸಿ ಪ್ರಕಟಿಸಿದರು. ಪ್ರೊ. ಬಸವನಾಳರ ಜೀವನವು ಅನೇಕ ಮುಖವಾದುದು. ಇವರ ಮಾತು ತೂಕವುಳ್ಳದ್ದು, ವಾಣಿ ಗಂಭೀರವಾದುದು, ಸ್ವಭಾವ ಕೋಮಲವಾದುದು, ಹೃದಯ ವಿಶಾಲವಾದುದು, ದೃಷ್ಟಿ ಸೂಕ್ಷ್ಮವಾದುದು, ಮಸ್ತಿಷ್ಕ ಪಾಂಡಿತ್ಯಪೂರ್ಣವಾದುದು. ಇವರ ಗುಣಗಳನ್ನೂ ಕಾರ್ಯವನ್ನೂ ವರ್ಣಿಸುತ್ತ ಹೋದಲ್ಲಿ ಉದ್ಗ್ರಂಥವೇ ಆದೀತು. ಇಂಥ ಪ್ರೊ. ಬಸವನಾಳನವರನ್ನು ಕಳಕೊಂಡ ಕನ್ನಡನಾಡು ತಬ್ಬಲಿಯಂತಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನಿಯಲೆಂದೂ ಅವರ ಮನೆಯವರಿಗೆ ಅವರ ನಿಧನದಿಂದಾದ ದುಃಖವನ್ನು ಸಹಿಸುವ ಶಕ್ತಿಯನ್ನಿಯಲೆಂದೂ ಈಶನನ್ನು ಪ್ರಾರ್ಥಿಸುತ್ತೇವೆ.

ಕಾರವಾರ ಟ್ರೇನಿಂಗ ಕಾಲೇಜ

ಕಾರವಾರದ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳು ೭—೧೨—೧೯೫೧ ನೆಯ ದಿನ ವಿವಿಧ ವಿನೋದಾವಳಿಯನ್ನು ಏರ್ಪಡಿಸಿದ್ದರು. 'ನೌಕರಿ ಇಲ್ಲದ ಅಳಿಯ' ಎಂಬ ನಾಟಕವನ್ನು ಪರಿಣಮೆಚ್ಚುವಂತೆ ಅಭಿನಯಿಸಿದರು.

ಶಾರೀರಿಕ ಶಿಕ್ಷಣ ಶಿಬಿರ

೭—೧೨—೫೧ನೆಯ ದಿನ ಕುಮಟಾದಲ್ಲಿ ಪ್ರಾಥಮಿಕ ಶಿಕ್ಷಕರ ಶಾರೀರಿಕ ಶಿಕ್ಷಣದ ಚಟುವಟಿಕೆಗಳ ಪ್ರದರ್ಶನವು ಏರ್ಪಡಿಸಲ್ಪಟ್ಟಿತ್ತು. ಧಾರವಾಡ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರು ಶಿಕ್ಷಕರನ್ನು ಉದ್ದೇಶಿಸಿ ಶಿಸ್ತು ಹಾಗು ಸಂಘಟನೆಯನ್ನು ಕುರಿತು ಮಾತಾಡಿದರು.

ಹಬ್ಬ-ಹುಣ್ಣಿವೆಗಳೂ
ಅವುಗಳ ದಿನಾಚರಣೆಯೂ

ಲೇಖಕರು:—ಶ್ರೀಯುತ ಬ. ಮು. ಶಿಂತ್ರಿ. ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಲೇಖಾಂಕ (೨)

ಬಸವ ಜಯಂತಿ

ವೈಶಾಖ ಶುದ್ಧದಲ್ಲಿ ರೋಹಿಣಿ ನಕ್ಷತ್ರವಿದ್ದ ತಿಥಿಯೇ ಶ್ರೀಬಸವೇಶ್ವರರು ಹುಟ್ಟಿದ ದಿನವು. ಇದು ವೈಶಾಖ ಶುದ್ಧ ದ್ವಿತೀಯೆಯಲ್ಲಿ ಇಲ್ಲವೆ ತೃತೀಯೆಯಲ್ಲಿ ಬರಬಹುದು. ಈ ವರುಷ ಇದು ತೃತೀಯಾ ತಿಥಿಯಲ್ಲಿ ಅಂದರೆ ಅಕ್ಷಯ ತೃತೀಯಾದ ದಿನವೇ ಬಂದಿತ್ತು. ನಮ್ಮ ನಾಡಿನ ಹಳ್ಳಿಗಳಲ್ಲೆಲ್ಲ ಈ ಜಯಂತಿಯನು ಆಚರಿಸುವದುಂಟು. ಬಸವಣ್ಣನವರ ವ ಚ ನ ಗ ಳು ಎಲ್ಲರ ಮನೆಮಾತುಗಳಾಗಿವೆ. ಅವರ ವಚನಗಳು ಭಕ್ತಿಯಿಂದ ತುಂಬಿ ತುಳುಕುತ್ತಿರುವದರಿಂದ ಅವರನ್ನು ಭಕ್ತಿಭಂಡಾರಿ ಬಸವಣ್ಣನವರೆಂದು ಕರೆಯುವದುಂಟು. ಉಪನ್ಯಾಸಕಾರರೂ ಗ್ರಂಥಕಾರರೂ ಅವರ ವಚನಗಳನ್ನು ಹೆಜ್ಜೆಹೆಜ್ಜೆಗೆ ಉದ್ಧರಿಸುವದುಂಟು. ವಚನಗಳು ತಿಳಿಗನ್ನಡದಲ್ಲಿ ಬರೆಯಲ್ಪಟ್ಟಿರುವದರಿಂದ ಅಜ್ಞ ಜನರಿಗೂ ಕೂಡಾ ಅರ್ಥವಾಗುವವು. ಮೊನ್ನೆ ಮೊನ್ನೆ ಶ್ರೀಯುತ ಶಿ. ಶಿ. ಬಸವನಾಳರವರು ಅವರ ವಚನಗಳನ್ನೆಲ್ಲ ಪರಿಶ್ರಮಬಟ್ಟು ಸಂಗ್ರಹಿಸಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ವಚನಗಳ ಬಗೆಗೆ ಅಭಿರುಚಿಯುಳ್ಳವರು ಆ ಗ್ರಂಥವನ್ನು ಓದಿಕೊಳ್ಳುವದು ಲೇಸು. ಈ ಇಪ್ಪತ್ತನೆಯ ಶತಮಾನದಲ್ಲಿ ಮಹಾತ್ಮಾ ಗಾಂಧೀಜಿಯವರು ಮಾಡಲುಪಕ್ರಮಿಸಿದ ಸಮಾಜಕ್ರಾಂತಿಯನ್ನು ಅವರು ಹನ್ನೆರಡನೆಯ ಶತಮಾನದಲ್ಲಿಯೇ ಸಾಧಿಸಿದ್ದಾರಲ್ಲವೇ ? ಅವರ ಯೋಗ್ಯತೆಯು ಎಂತಹದಿತ್ತೆಂಬುದನ್ನು ಕಂಡು ಹಿಡಿಯಲು ಶಕ್ಯವಿಲ್ಲದಾಗಿದೆ. ಆದುದರಿಂದಲೇ ನಮ್ಮ ಕನ್ನಡ ನಾಡಿನ ತುಂಬೆಲ್ಲ ಅವರ ಜಯಂತಿಯನ್ನು ಎಲ್ಲ ಜನರು ಒಳ್ಳೇ ಭಕ್ತಿಯಿಂದಲೂ ಪ್ರೇಮದಿಂದಲೂ ಆಚರಿಸುತ್ತಾರೆ- ಹಳ್ಳಿಗೊಂದು ಬಸವಣ್ಣನ ಗುಡಿ ನಮ್ಮ ನಾಡಿನಲ್ಲಿರುವದರಿಂದ ಆ ದಿವಸ ಮುಂಜಾನೆ ಮೂರುತಿಗೆ ಅಭಿಷೇಕ ಮಾಡಿ ಸಂಜೆಗೆ ಕಾರ್ತಿಕ-ಹಚ್ಚುತ್ತಾರೆ. ಎತ್ತುಗಳನ್ನಲಂಕರಿಸಿ ಮೆರೆಯಿಸುತ್ತ ಬಸವಣ್ಣನ ಗುಡಿಗೆ ಹೋಗಿ ಕಾಯಿ ಒಡೆಯಿಸಿಕೊಂಡು ಬರುತ್ತಾರೆ. ಅನುಕೂಲವಿದ್ದಲ್ಲಿ ವ್ಯಾಖ್ಯಾನಕಾರರನ್ನು ಪ್ರೇಮಾದರದಿಂದ ಬರಮಾಡಿಕೊಂಡು ಬಸವಣ್ಣನವರ ಬಗೆಗೆ ಉಪನ್ಯಾಸವನ್ನು ಕೊಡಿಸುತ್ತಾರೆ. ಎಷ್ಟೋ ಸಾಲೆಗಳು ಈ ಜಯಂತಿಯನ್ನು ಆಚರಿಸಿದ ಪ್ರಕಟನೆಗಳನ್ನು ವರ್ತಮಾನ ಪತ್ರಗಳಲ್ಲಿ ಓದುತ್ತಿರುತ್ತೇವೆ. ಇದು ನಿಜಕ್ಕೂ ಆನಂದದ ಹಂಗತಿಯು ! ಈ ವರೆಗೆ ಆಚರಿಸದೆ ಇದ್ದ ಸಾಲೆಗಳ ಶಿಕ್ಷಕ ಶಿಕ್ಷಕಿಯರು ಇನ್ನು ಮೇಲಿಂದಾದರೂ ಆಚರಿಸುವದು ಲೇಸೆಂದು ನಮ್ಮ ಮತ. ಆ ದಿವಸ ಮುಂಜಾನೆ ನಿತ್ಯದ ಸ್ವಚ್ಛತೆಯ ಕಾರ್ಯಕ್ರಮವಾದ ಮೇಲೆ ಸಾಲೆಯಲ್ಲಿ ಬಸವಣ್ಣನವರ ಚಿತ್ರ (ಫೋಟೋ)ವನ್ನಿಟ್ಟು

ಪೂಜೆ ಮಾಡಿ ಪನಿವಾರವನ್ನು ಹಂಚಿ ಮಕ್ಕಳಿಗೆ ಬಸವಂಣನವರ ಚರಿತ್ರವನ್ನು ಚಿತ್ತಾಕರ್ಷಕವಾಗಿಯೂ ಮನಂಬುಗುವಂತೆಯೂ ಹೇಳಬೇಕು. ಅವರಲ್ಲಿ ಎದ್ದು ಕಾಣುವ ಸದ್ಗುಣಗಳನ್ನು ದೃಷ್ಟಾಂತಗಳೊಡನೆ ವಿವರಿಸಬೇಕು. ಇದಾದ ಮೇಲೆ ಕೆಲವು ಜನಪ್ರಿಯ ವಚನಗಳನ್ನು ಹಾಡಿ ತೋರಿಸುವ ಸ್ಪರ್ಧೆಯನ್ನಿಡಬೇಕು. ಚಲೋ ಹಾಡಿದವರಿಗೆ ಇನಾಮುಗಳನ್ನು ಕೊಡಬೇಕು. ಇದರಿಂದ ಮಕ್ಕಳಿಗೆ ಉತ್ತೇಜನ ಸಿಕ್ಕು ಎಲ್ಲರೂ ವಚನಗಳನ್ನು ಸುಸ್ವರದಿಂದ ಹಾಡುವದನ್ನು ಕಲಿಯಲು ಹಾತೊರೆಯುತ್ತಾರೆ. ಇದುವೇ ನಿಜವಾದ ಶಿಕ್ಷಣವಲ್ಲವೇ ?

ಕಾರ ಹುಂಣಿವೆ

ಇದು ಬೈಲ ಸೀಮೆಯವರಿಗೆ ಒಳ್ಳೇ ಆಡಂಬರದ ಹಬ್ಬವು. ಸುಗ್ಗಿಯಿಂದ ಈ ಸಮಯದ ವರೆಗೆ ಅಲ್ಲಿಯ ದನಕರುಗಳು ಹೊಟ್ಟನ್ನೂ ಬಿಳಿ ಜೋಳದ ದಂಟನ್ನೂ ತಿಂದು ಪುಷ್ಟವಾಗಿರುತ್ತಿವೆ. ಈ ಹಬ್ಬದಲ್ಲಿ ಎತ್ತುಗಳನ್ನು ಸಿಂಗಾರ ಮಾಡಿ ಮೆರೆಯಿಸುತ್ತ ಬಸವಂಣನ ಗುಡಿಗೆ ಹೋಗಿ ಕಾಯಿ ಒಡೆಯಿಸಿಕೊಂದು ಬರುತ್ತಾರೆ. ಮರುದಿನವೇ ಕರಿ ಹಬ್ಬವು. ಅಂದಿನ ದಿವಸ ಸಂಜೆಯಲ್ಲಿ ಎಲ್ಲರೂ ಊರ ಹೊರಗೆ ನಿರ್ದಿಷ್ಟವಾದೊಂದು ಸ್ಥಳಕ್ಕೆ ಹೋಗಿ ಕರಿ ಹರಿಯುತ್ತಾರೆ. ತಮ್ಮ ತಮ್ಮ ಚಕ್ಕಡಿಗಳಿಗೆ ಎತ್ತುಗಳನ್ನು ಹೂಡಿಕೊಂಡು ಹೋಗಿ ಓಡಿಸುವ ಪಂದ್ಯಾಟದಲ್ಲಿ ಭಾಗ ವಹಿಸುವದುಂಟು. ಕ್ಹೊನೆಯಲ್ಲಿ ಒಂದು ಕೆಂದು ಎತ್ತಿನ ಜೋಡಿ ಮತ್ತು ಒಂದು ಬಿಳಿ ಎತ್ತಿನ ಜೋಡಿ ಇನೆರಡರಲ್ಲಿ ಏರಾಟವನ್ನಿಟ್ಟು ಓಡಿಸುತ್ತಾರೆ. ಕೆಂದು ಎತ್ತಿನ ಜೋಡಿ ಗೆದ್ದರೆ, ಆ ವರುಷ ಮುಂಗಾರಿ ಬೆಳೆ (ಕೆಂಪು ಜೋಳ) ಯು ಚನ್ನಾಗಿ ಬರುವದೆಂದು ಹಳ್ಳಿಗರ ನಂಬುಗೆ; ಬಿಳಿ ಎತ್ತಿನ ಜೋಡಿ ಗೆದ್ದರೆ, ಹಿಂಗಾರಿ ಬೆಳೆ (ಬಿಳಿ ಜೋಳ) ಯು ಚಲೋ ಬರುವದೆಂದು ಅವರ ಭಾವನೆ ಈ ಮೂಢನಂಬುಗೆಯು ಅವರಲ್ಲಿ ಹೇಗೋ ಮನೆಮಾಡಿಕೊಂಡಿವೆ. ಆದುದರಿಂದ, ಈ ಹಬ್ಬದ ಮಹತ್ವವು ಅವರಿಗೆ ಅಷ್ಟಿಷ್ಟಲ್ಲ. ಈ ಹಬ್ಬವನ್ನು ಸಾಲೆಯಲ್ಲಿ ಚರಿಸುವದು ಕಷ್ಟ. ಶಿಕ್ಷಕ-ಶಿಕ್ಷಕಿಯರು ಮಕ್ಕಳನ್ನು ಕರಿ ಹರಿಯುವ ಸ್ಥಳಕ್ಕೆ ಕರೆದುಕೊಂಡು ಹೋಗಿ ದೂರದಲ್ಲಿ ನಿಂತು ನಿರೀಕ್ಷಣ ಮಾಡಿಸಿಕೊಂಡು ಬರುವದೊಳಿತು. ಯಾಕಂಬರೆ, ಸ್ಪರ್ಧೆಗಳು ನಡೆದಾಗ ಅಪಘಾತಗಳಾಗುವ ಸಂಭವವಿದೆ.

ಗುಳ್ಳವ್ವ (ಗುಳಕವ್ವ).

ಈ ಹಬ್ಬವು ಹೆಚ್ಚಾಗಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದುದಾಗಿದೆ. ಸುಮಾರು ಹತ್ತು ವರುಷದ ವರೆಗಿನ ಗಂಡು ಮಕ್ಕಳೂ ಇದರಲ್ಲಿ ಭಾಗ ವಹಿಸುವದುಂಟು. ಈ ಹಬ್ಬವು ನಮ್ಮ ನಾಡಿನಲ್ಲೆಲ್ಲ ಆಚರಿಸಲ್ಪಡುತ್ತಿದೆ. ಹಳ್ಳಿಗಾಡದಲ್ಲಿಯಂತೂ ಹೆಚ್ಚಿನ ಪ್ರಮಾಣದಲ್ಲಿ ಆಚರಿಸಲ್ಪಡುತ್ತಲಿದೆ. ಈ ಹಬ್ಬಕ್ಕೆ ಶೈಕ್ಷಣಿಕ ಮಹತ್ವವು ಬಹಳಷ್ಟಿದೆಯಾದುದರಿಂದ ಇದರ ವಿಷಯಕ್ಕೆ ಸವಿಸ್ತರವಾಗಿ ಬರೆಯಲಾಗಿದೆ. ಬೇಸಿಕ್ ಸಾಲೆಗಳಿಗಂತೂ ಇದರ ಮಹತಿಯು ಅಷ್ಟಿಷ್ಟಲ್ಲ. ಈ ಹಬ್ಬವನ್ನು ಎಲ್ಲ ಹೆಂಣು ಸಾಲೆಗಳೂ ಹೆಂಣು ಮತ್ತು ಗಂಡು ಹುಡುಗರಿದ್ದ ಮಿಶ್ರ ಸಾಲೆಗಳೂ ಆಚರಿಸುವದೊಳಿತು. ಆಷಾಢ ಮಾಸದಲ್ಲಿ ಪ್ರತಿ ಮಂಗಳವಾರ ಗುಳ್ಳವ್ವನನ್ನಿಡುತ್ತಾರೆ. ಮೊದಲನೆಯ ಮಂಗಳವಾರ ಒಂದಂತಸ್ತು, ಎರಡನೆಯ ಮಂಗಳವಾರ ಎರಡಂತಸ್ತು, ಮೂರನೆಯ ಮಂಗಳವಾರ ಮೂರಂತಸ್ತು, ನಾಲ್ಕನೆಯ ಮಂಗಳವಾರ ನಾಲ್ಕಂತಸ್ತಿನ ಗುಳ್ಳವ್ವನನ್ನಿಡುವದುಂಟು. ಒಮ್ಮೊಮ್ಮೆ ಈ ಮಾಸದಲ್ಲಿ ಐದು ಮಂಗಳವಾರಗಳು ಬರುವದುಂಟು. ಹಾಗಾದಲ್ಲಿ, ಕೊನೆಯ ಮಂಗಳವಾರ ಐದಂತಸ್ತಿನ ಗುಳ್ಳವ್ವನನ್ನಿಡುತ್ತಾರೆ. ಗುಳ್ಳವ್ವನನ್ನಿಡುವದು ಮಕ್ಕಳಿಗೆ ಒಳ್ಳೇ ಸ್ಪರ್ಧೆಯ ಆಟವು. ಮಗುವಿನಲ್ಲಿ ಎಷ್ಟೋ ಸಹಜ ಪ್ರವೃತ್ತಿಗಳಿವೆ. ರಚನಾ ಪ್ರವೃತ್ತಿಯು ಅವುಗಳಲ್ಲಿ ಮುಖ್ಯವಾದುದಾಗಿದೆ. ಗುಳ್ಳವ್ವನನ್ನಿಡುವ ಆಟದಲ್ಲಿ ಶಿಕ್ಷಕ–ಶಿಕ್ಷಕಿಯರು ಮಕ್ಕಳಲ್ಲಿ ಹುದುಗಿಕೊಂಡಿರುವ ರಚನಾಪ್ರವೃತ್ತಿಗೆ ಪುಟಕೊಟ್ಟು ಅದರಿಂದ ಶೈಕ್ಷಣಿಕ ಲಾಭವನ್ನು ತಕ್ಕೊಳ್ಳಲು ಎಷ್ಟು ಶಕ್ಯವಿದೆಯೋ ಅಷ್ಟೆಲ್ಲವನ್ನು ತಕ್ಕೊಳ್ಳುವದು ವಿಹಿತವು. ಆಟವು ಪಾಠವಾಗಬೇಕು, ಪಾಠವು ಆಟವಾಗಬೇಕು. ಮಕ್ಕಳಿಗೆ ಗುಳ್ಳವ್ವನನ್ನಿಡುವದೊಂದು ದೊಡ್ಡ ಸಮಸ್ಯೆಯು. ಈ ದೊಡ್ಡ ಸಮಸ್ಯೆಯಲ್ಲಿ

ಅವಾಂತರ ಸಮಸ್ಯೆಗಳಿಷ್ಟೋ ಉದ್ಭವಿಸುತ್ತಿವೆ. ಉದಾಹರಣಾರ್ಥವಾಗಿ, ಅರಲು ಎಷ್ಟು ಬೇಕು, ಎಂತಹ ಮಣ್ಣಿನದಿರಬೇಕು, ಬಿರಿಯದ ಹಾಗೆ ಅದನ್ನು ಹದಗೊಳಿಸುವದು ಹೇಗೆ, ಮೊದಲನೆಯ ಅಂತಸ್ತಿನಲ್ಲಿ ನಾಲ್ಕೂ ಮೂಲೆಗಳಲ್ಲಿಡಬೇಕಾದ ಸಿಲಂಡರಾಕೃತಿಯ ಕಂಬಗಳು ಎಷ್ಟು ಎತ್ತರವಿರಬೇಕು ಮತ್ತು ಅವುಗಳ ಪಿಂಡವೆಷ್ಟಿರಬೇಕು, ಅವು ಒಂದರಿಂದೊಂದು ಎಷ್ಟು ಅಂತರದ ಮೇಲಿರಬೇಕು, ಇದರಂತೆ ಉಳಿದ ಅಂತಸ್ತುಗಳಲ್ಲಿಯ ಕಂಬಗಳ ಪಿಂಡ ಮತ್ತು ಎತ್ತರ ಎಷ್ಟಿರಬೇಕು, ಅವು ಒಂದರಿಂದೊಂದು ಎಷ್ಟು ಅಂತರದ ಮೇಲಿರಬೇಕು, ಮೇಲೆ ಹೋದಂತೆ ಅಂತಸ್ತುಗಳ ಎತ್ತರ, ಉದ್ದ ಮತ್ತು ಅಗಲ ಇವುಗಳ ಅಳತೆಗಳು ಏಕೆ ಕಡಿಮೆಯಾಗುತ್ತ ಹೋಗುವವು, ಕಂಬಗಳನ್ನಲಂಕರಿಸಲು ಒಂದು ಅಂತಸ್ತಿಗೆ ಹತ್ತಬಹುದಾದ ಗುಲಗಂಜಿ ಕುಸುಬಿಗಳೆಷ್ಟು, ಕಾಗದದ ಬೇರೆ ಬೇರೆ ಬಣ್ಣದ ಬೀಸಣಿಕೆಗಳೆಷ್ಟು ಹತ್ತುವು, ಬೀಸಣಿಕೆಯನ್ನು ತಯಾರಿಸುವ ಕ್ರಮ ಮತ್ತು ಅದನ್ನು ತಯಾರಿಸಲು ಬೇಕಾಗುವ ಸಾಮಗ್ರಿ, ಗುಳ್ಳವ್ವನ ಮುಂದೆ ಇಡಲು ಬೇಕಾಗುವ ಅರಲಿನ ಕೈಕೆಲಸದ ಒಡವೆಗಳು (ಅರಲಿನ ಹೀರಿಕಾಯಿ ಬದನೆಕಾಯಿ, ಅನೆ, ಎತ್ತು, ಹೊಗ್ಗನ್ನವ ಇತ್ಯಾದಿಗಳು), ಮೊದಲಾದ ಪ್ರಶ್ನೆಗಳೇಳುವವು, ಈ ಪ್ರಶ್ನೆಗಳನ್ನೆಲ್ಲ ಮಕ್ಕಳೇ ಬಗೆಹರಿಸಿಕೊಳ್ಳಬೇಕು. ಅವಶ್ಯವೆನಿಸಿದಲ್ಲಿ ಮಾತ್ರ ಶಿಕ್ಷಕ-ಶಿಕ್ಷಕಿಯರು ಯೋಗ್ಯ ಸಲಹೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತಿರಬೇಕು. ಸಮಸ್ಯೆಗಳನ್ನೆದುರಿಸಿ ಮಾಡಬೇಕಾಗುದಾದುದರಿಂದ ಜೀವನದಲ್ಲಾಗುವ ಅನುಭವಗಳನ್ನೆಲ್ಲ ಸ್ವತಃ ಪಡೆಯುವರು. ಮೇಲೆ ವಿವರಿಸಿದ ಬೇರೆ ಬೇರೆ ಕೆಲಸಗಳನ್ನು ತಮ್ಮ ತಮ್ಮೊಳಗೆ ಹಂಚಿಕೊಂಡು ಒಕ್ಕಟ್ಟಿನಿಂದ ಮಾಡುವದರಿಂದ ಅವರಲ್ಲಿ ಸಹಕಾರವು ಸಾಕಷ್ಟು ಬೆಳೆಯುತ್ತಿದೆ. ಕೆಲಸವೆಲ್ಲ ಪೂರ್ಣವಾದ ಮೇಲೆ ತಮ್ಮ ತಮ್ಮ ಅನುಭವಗಳನ್ನೆಲ್ಲ ಎಲ್ಲರೂ ಬರೆದಿಡಬೇಕು. ಇದೆಂತಹ ಉತ್ತಮವಾದ ಯೋಜನೆಯು! ಇಂತಹ ಯೋಜನೆಯು ಶಿಕ್ಷಣದಲ್ಲಿ ಎಂದಾದರೂ ಸಿಗುವದುಂಟೇ? ಗುಳ್ಳವ್ವನನ್ನಿಡುವದು ಮಕ್ಕಳಿಗೆ ಒಳ್ಳೇ ಹಿಗ್ಗಿನ ವಿಷಯ. ಮಕ್ಕಳು ತಮ್ಮಷ್ಟಕ್ಕೆ ತಾವೇ ಆಯ್ದುಕೊಂಡು ಮಾಡುವ ಚಟುವಟಿಕೆಯು. ಚಿಕ್ಕ ಮಕ್ಕಳು ಈ ಹಬ್ಬವು ಬರುವ ದಾರಿಯನ್ನೇ ನೋಡುತ್ತಿರುವದುಂಟು. ಗುಳ್ಳವ್ವನನ್ನಿಡುವದರಲ್ಲಿ ಯೋಜನಾಪದ್ಧತಿಯೂ ಕೃತಿಪ್ರಧಾನಪದ್ಧತಿಯೂ ಸಮಾವೇಶವಾಗಿವೆ. ಇವೆರಡೂ ಪದ್ಧತಿಗಳಿಂದ ಮಕ್ಕಳು ಹೊಂದಿದ ಅನುಭವವು ಅಮೌಲ್ಯವಾದ ಜ್ಞಾನವಾಗಿದೆಯೆಂಬುದರಲ್ಲಿ ಸಂದೇಹವಿದೆಯೇ? ಈ ಜ್ಞಾನವನ್ನು ಅವರು ತಮ್ಮ ಜೀವಮಾನದಲ್ಲಿ ಎಂದಿಗೂ ಮರೆಯಲಾರರು. ಇದಕ್ಕಿಂತ ಹೆಚ್ಚಿನ ಶಿಕ್ಷಣವು ಯಾವದಿದೆ? ಬೇಸಿಕ್ ಶಿಕ್ಷಣದ ಪ್ರಕಾರ ಗುಳ್ಳವ್ವನನ್ನಿಡುವ ಸಾಮಾಜಿಕ ಚಟುವಟಿಕೆಯೊಂದನ್ನಿಟ್ಟುಕೊಂಡು ಸಮವಾಯ ಪದ್ಧತಿಯಿಂದ ಗಣಿತ, ಭೂಮಿತಿ, ಡ್ರಾಯಿಂಗ, ಕೈಕೆಲಸ, ಪೌರನೀತಿ, ಮಾತೃಭಾಷೆ ಮೊದಲಾದವುಗಳನ್ನು ಹಾಸುಹೊಕ್ಕಾಗುವಂತೆ ಒಂದಕ್ಕೊಂದು ಸಂಬಂಧಿಸಿ ಕಲಿಸಲು ಬರುತ್ತಿದೆ. ಸಂಬಂಧೀಕರಣ (ವಿಷಯಾನುಬಂಧನ)ವು ಚಟುವಟಿಕೆಯಿಂದ ತನ್ನಷ್ಟಕ್ಕೆ ತಾನೇ ಹೊರಹೊಮ್ಮಿ ನೈಜವಾದದ್ದಾಗುತ್ತಿದೆ. ಆದುದರಿಂದ ಎಲ್ಲ ಸಾಲೆಗಳ ಶಿಕ್ಷಕ-ಶಿಕ್ಷಕಿಯರು ಈ ಹಬ್ಬದ ಶೈಕ್ಷಣಿಕ ಲಾಭವನ್ನು ಪೂರ್ಣವಾಗಿ ತಕ್ಕೊಳ್ಳುವದು ಲೇಸೆಂದು ನಮ್ಮ ಮತ.

ಪಂಚಮಿ

ಶ್ರಾವಣ ಶುದ್ಧ ಪಂಚಮಿಗೆ ಪಂಚಮಿ ಹಬ್ಬವೆಂದು ಕರೆಯುತ್ತಾರೆ. ಇದು ಚವತಿಯಿಂದ ಷಷ್ಠಿಯ ವರೆಗೆ ಮೂರು ದಿನಗಳ ಹಬ್ಬವು. ಶ್ರಾವಣಶುದ್ಧ ಚವತಿಯ ದಿವಸ ನಾಗಪ್ಪನಿಗೆ ಹಾಲು ಹೊಯ್ದು ಅರಳು-ಕಂಬಿಟ್ಟುಗಳನ್ನು ತಿನ್ನುತ್ತಾರೆ. ಆದುದರಿಂದ, ಈ ತಿಥಿಗೆ ನಾಗ ಚತುರ್ಥಿಯೆಂದು ಹೆಸರಿದೆ. ಕೆಲವರು ಈ ದಿವಸ ಹೊಸ ಜನಿವಾರವನ್ನು ಹಾಕಿಕೊಳ್ಳುವರು. ಇದೊಂದು ದ್ರಾವಿಡರ ಸಂಸ್ಕೃತಿಯಿಂದ ಬಂದ ಹಬ್ಬವು. ದ್ರಾವಿಡರು ನಾಗರಹಾವಿನ ಮೂರ್ತಿಗಳನ್ನು ಪೂಜಿಸುತ್ತಿದ್ದುದು ಸರ್ವಶ್ರುತವಿದೆ. ದ್ರಾವಿಡರ ಸಂಸ್ಕೃತಿಯು ಆರ್ಯರ ಸಂಸ್ಕೃತಿಗಿಂತ ಮೇಲ್ತರದ್ದಿತ್ತೆಂದು ಕೆಲವರ ಮತ. ಉತ್ತರದಿಂದ ಆರ್ಯರ ಆಘಾತಗಳಾದಂತೆ ದ್ರಾವಿಡರು

ಕೆಳಗೆ ಸರಿಯುತ್ತ ಸರಿಯುತ್ತ ದಕ್ಷಿಣಕ್ಕೆ ಸಾಗಿದರು. ಮುಂದೆ ಬರಬರುತ್ತ ಆರ್ಯರಿಗೂ ದ್ರಾವಿಡರಿಗೂ ಶೀರ ಸಂಬಂಧವಾಗಿ ಮಿಶ್ರ ಜನಾಂಗವೊಂದು ಉದಯವಾಯಿತು. ಕರ್ನಾಟಕ-ಮಹಾರಾಷ್ಟ್ರಗಳಲ್ಲಿ ಕಂಡು ಬರುವ ಜನಾಂಗವೇ ಆ ಮಿಶ್ರ ಜನಾಂಗವೆಂದು ಕೆಲವು ಇತಿಹಾಸಕಾರರ ಮತ. ಈ ಪಂಚಮಿಯ ಹಬ್ಬವೇ ಅದಕ್ಕೊಂದು ಬಲವಾದ ಕಾರಣವಾಗಿದೆ. ಈ ಹಬ್ಬವು ಉತ್ತರಹಿಂದುಸ್ತಾನದಲ್ಲಿ ಪ್ರಚಾರದಲ್ಲಿಲ್ಲ. ನನ್ನ ಕಡೆಗೆ ಇದೊಂದು ದೊಡ್ಡ ಹಬ್ಬವು. ಎಲ್ಲ ಜನರು ತಮ್ಮ ತಮ್ಮ ಹೆಣ್ಣುಮಕ್ಕಳನ್ನು ಮಾವನ ಮನೆಯಿಂದ ಈ ಹಬ್ಬಕ್ಕೆ ಕರೆದುಕೊಂಡು ಬರುವ ಸಂಪ್ರದಾಯವಿದೆ. ನಾಗಪ್ಪನಿಗೆ ಹಾಲು ಹೊಯ್ದು ಮರುದಿನವೇ ಪಂಚಮಿಯು. ಈ ದಿವಸ ಸಹ ನಾಗಪ್ಪನಿಗೆ ಹಾಲು ಹೋಯುತ್ತಾರೆ. ಈ ಹಬ್ಬದಲ್ಲಿ ಜೋಕಾಲಿ ಆಡುವದೊಂದು ವೈಶಿಷ್ಟ್ಯ. ಅದು ವಿಷ್ಣುವು ಗರುಡನನ್ನು ತನ್ನ ವಾಹನವನ್ನಾಗಿ ಮಾಡಿಕೊಂಡಿದ್ದರ ಕುರುಹೆಂದು ಹೇಳುತ್ತಾರೆ. ಆದುದರಿಂದ ಈ ತಿಥಿಗೆ ಗರುಡ ಪಂಚಮಿಯೆಂದು ಕರೆಯುವದುಂಟು. ಸಂಣ ಜೋಕಾಲಿಗಳನ್ನು ಸಣ್ಣವರೂ, ದೊಡ್ಡ ಜೋಕಾಲಿಗಳನ್ನು ದೊಡ್ಡವರೂ ಆಡುತ್ತಾರೆ. ಈ ಹಬ್ಬದಲ್ಲಿ ಚಿಕ್ಕ ಮಕ್ಕಳು ಒಣಗಿದ ಕೊಬ್ಬರಿ ಬಟ್ಟಲವನ್ನು ಬೊಗರೆಯಂತೆ ಮಾಡಿ ಆಟುತ್ತಿರುತ್ತಾರೆ. ಪಂಚಮಿಯ ಮರುದಿನವೇ ಕರೆಕಟ್ಟಂಬಲಿಯ ಹಬ್ಬವು. ಇದು ಶುಭಕಾರ್ಯಗಳಿಗೂ ನೂತನ ಕಾರ್ಯಾರಂಭಗಳಿಗೂ ಸುಮುಹೂರ್ತವು. ಕೆಲವು ಊರುಗಳಲ್ಲಿ ಆ ದಿವಸ ಮುಂಜಾನೆ ಶಿರಿಯಾಳ(ಶ್ರೀಯಾಲ) ಶೆಟ್ಟಿಯ ಮೂರ್ತಿಯನ್ನು ಕೂಡ್ರಿಸಿ ಸಂಜೆಯಲ್ಲಿ ಎಲ್ಲರೂ ದರ್ಶನಕ್ಕೆ ಹೋಗುತ್ತಾರೆ. ಶೆಟ್ಟಿಯು ಒಂದೇ ದಿವಸ ರಾಜ್ಯವಾಳಿದನಂತೆ. ಆ ದಿವಸ ಪ್ರಜರ ಹಿತಕ್ಕಾಗಿ ಎಷ್ಟೋ ಕಾಯಿದೆಗಳನ್ನು ಹೊರಡಿಸಿ ಹೇರಳ ಸಂಪತ್ತನ್ನು ದಾನ ಧರ್ಮ ಮಾಡಿದನಂತೆ. ಅವನು ರಾಜ್ಯವಾಳಿದ ದಿನವೇ ಕರೆಕಟ್ಟಂಬಲಿಯ ಹಬ್ಬವು. ಈ ದಿವಸ ಸಂಜೆಯಲ್ಲಿ ಜೋಕಾಲಿಯನ್ನು ಏರಿಸುವ ಮತ್ತು ಉಸುಕು ತುಂಬಿದ ಕೊಡವನ್ನು ಇಲ್ಲವೆ ಭಾರವಾದ ಕಲ್ಲಿನ ದುಂಡಿಯನ್ನು ಎತ್ತುವ ಏರಾಟಗಳು ಹಳ್ಳಿಗಳಲ್ಲೆಲ್ಲ ನಡೆಯುವದುಂಟು. ಕೆಲವು ಊರುಗಳಲ್ಲಿ ಈ ದಿವಸ ಚಂಗಳಿಗವ್ವನನ್ನಿಟ್ಟು ಕೆಲವು ದಿನಗಳ ವರೆಗೆ ದಿನಾಲು ಸೋಗೊಂದನ್ನು ಹಾಕಿ-ಊರಲ್ಲೆಲ್ಲ ಮೆರೆಯಿಸುವದುಂಟು. ಕೆರೆ ಕಟ್ಟಂಬಲಿಗೆ ಪಂಚಮಿ ಹಬ್ಬವು ಮುಗಿದಂತಾಯಿತು. ಮರುದಿನಕ್ಕೆ ಅಂದರೆ ಶ್ರಾವಣ ಶುದ್ಧ ಸಪ್ತಮಿಗೆ ವರ್ಷ ತೊಡಕೆಂದು ಕರೆಯುತ್ತಾರೆ. ಅವತ್ತಿನ ದಿವಸ ಎಲ್ಲರೂ ಮುಂಜಾನೆಯಿಂದ ಸಂಜೆಯ ವರೆಗೆ ತಮ್ಮ ತಮ್ಮ ನಿತ್ಯದ ಉದ್ಯೋಗದಲ್ಲಿ ತೊಡಗಬೇಕು. ಆ ದಿವಸ ಘಟಿಸಿದ ಸಂಗತಿಗಳು ಇಡೀ ವರುಷ ಸಂಭವಿಸುವವೆಂದು ಜನರ ನಂಬುಗೆ. ಚವತಿಯ ದಿವಸ ಕೆಲವು ಸಾಲೆಗಳಲ್ಲಿ ಸರಸ್ವತಿ ಪೂಜೆಯನ್ನು ಮಾಡುವ ಪಾಠ ವಿದ್ದಂತೆ ತೋರುತ್ತಿದೆ. ಈ ಹಬ್ಬದ ಮುನ್ನಾದಿನವೇ ಅರಲಿನಿಂದ ನಾಗಪ್ಪನನ್ನು ಇಲ್ಲವೆ ಒಣಗಿದ ಕೊಬ್ಬರಿ ಬಟ್ಟಲದಿಂದ ಬೊಗರೆಯನ್ನು ತಯಾರಿಸುವ ಚಟುವಟಿಕೆಯೊಂದನ್ನಿಟ್ಟುಕೊಂಡು ಪಂಚಮಿ ಹಬ್ಬದ ವಿಷಯಕ್ಕೆ ಮಕ್ಕಳಿಗೆ ಮಾಹಿತಿಯನ್ನು ಮಾಡಿಕೊಡಬೇಕು. ಸರಸ್ವತಿ ಪೂಜೆಯನ್ನಿಟ್ಟುಕೊಂಡವರು ಪೂಜೆಯಾದ ಮೇಲೆ ಈ ಹಬ್ಬದ ಬಗೆಗೆ ಸವಿಸ್ತರವಾಗಿ ಹೇಳಬೇಕು.

ಶ್ರಾವಣ–ಸೋಮವಾರ

ಶ್ರಾವಣ ಮಾಸವೆಂದರೆ ಹಳ್ಳಿಗಳಲ್ಲಿ ಹಬ್ಬಗಳ ಸುಗ್ಗಿಯು. ಶ್ರವಣಾನಕ್ಷತ್ರದಿಂದ ಶ್ರಾವಣವೆಂಬ ಹೆಸರು ಮಾಸಕ್ಕೆ ಬಂದಿದೆ. ಈ ಮಾಸದಲ್ಲಿ ಪುರಾಣ-ಶ್ರವಣ (ಪುರಾಣವನ್ನು ಕೇಳುವದು) ವನ್ನು ಮಾಡಿದರೆ ಪುಣ್ಯವು ಪ್ರಾಪ್ತವಾಗುವದೆಂಬ ಭಾವನೆಯು ಜನರಲ್ಲಿದೆ. ಆದುದರಿಂದ ಬಹುತರವಾಗಿ ಎಲ್ಲ ಊರುಗಳಲ್ಲಿ ಯಾವದಾದರೊಂದು ಗುಡಿಯಲ್ಲಾಗಲೀ ಇಲ್ಲವೆ ಮಠದಲ್ಲಾಗಲಿ ಸಂಜೆಗೆ ಪುರಾಣವನ್ನು ಹಚ್ಚುವದುಂಟು. ಹಳ್ಳಿಗಶಿಲ್ಲರು ಹೊಲದಲ್ಲಿಯ ತಮ್ಮ ತಮ್ಮ ಹೋರೆಗಳನ್ನು ತೀರಿಸಿಕೊಂಡು ಸಂಜೆಗೆ ಮನೆಗೆ ಬರುವದರಿಂದ ಅವರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಪುರಾಣವನ್ನು ಸಂಜೆಯಲ್ಲಿ ಹಚ್ಚುವ ಸಂಪ್ರದಾಯವು ಹಳ್ಳಿಗಳಲ್ಲಿ ನೆಲೆಸಿದೆ. ಈ ಮಾಸದಲ್ಲಿ ಬರುವ ಪ್ರತಿಯೊಂದು ಸೋಮವಾರವು ಬಹುತರವಾಗಿ ಎಲ್ಲ ಹಳ್ಳಿಗಳಲ್ಲಿ

ಒಂದು ಹಬ್ಬವಾಗಿದೆ. ಕೆಲವು ವರ್ಷ ನಾಲ್ಕು, ಕೆಲವು ವರ್ಷ ಐದು ಸೋಮವಾರಗಳು ಬರುವದುಂಟು. ಐದು ಸೋಮವಾರಗಳು ಬರುವ ವರುಷಗಳು ಬಹಳ ಕಡಿಮೆ ನಮ್ಮ ನಾಡಿನಲ್ಲಿ ಹಳ್ಳಿಗೊಂದು ಬಸವೇಶ್ವರನ ಗುಡಿಯು ಇರುವದುಂಟು. ಪ್ರತಿ ಶ್ರಾವಣ ಸೋಮವಾರ ಮುಂಜಾನೆ ಬಸವಣ್ಣನ ಮೂರ್ತಿಗೆ ಅಭಿಷೇಕ ಮಾಡಿ ಪೂಜಿಸುತ್ತಾರೆ. ಆ ದಿನ ಮಧ್ಯಾಹ್ನದಲ್ಲಿ ಎಲ್ಲ ಜನರು ಗುಡಿಗೆ ಹೋಗಿ ದೇವರಿಗೆ ನೈವೇದ್ಯ ಕೊಟ್ಟು ಕಾಯಿ ಒಡೆಯಿಸಿಕೊಂಡು ಬರುವ ಪರಿಪಾಠವಿದೆ. ಈ ಗುಡಿಯಿದ್ದ ಹಳ್ಳಿಗಳಲ್ಲೆಲ್ಲ ಬಸವೇಶ್ವರನ ಜಾತ್ರೆಯು ಕಡೇ ಶ್ರಾವಣ ಸೋಮವಾರ ಬಹುತರವಾಗಿ ಆಗುತ್ತಿರುತ್ತದೆ. ಜಾತ್ರೆಯು ದೊಡ್ಡ ಊರುಗಳಲ್ಲಿ ದೊಡ್ಡ ಪ್ರಮಾಣದಲ್ಲಿಯೂ ಸಣ್ಣ ಊರುಗಳಲ್ಲಿ ಸಣ್ಣ ಪ್ರಮಾಣದಲ್ಲಿಯೂ ಆಗುವದುಂಟು. ನಮ್ಮ ಪೂರ್ವಜರು ಈ ಜಾತುರ್ಮಾಸದಲ್ಲಿ ಎತ್ತಿಗೆ ಎಷ್ಟು ಗೌರವವನ್ನು ಕೊಟ್ಟಿರುವರೆಂಬುದನ್ನು ಈ ಸಂದರ್ಭದಲಿ ನಮ್ಮ ಓದುಗರ ಗಮನಕ್ಕೆ ತರಬಯಸುತ್ತೇವೆ. ಮುಂಡೆತ್ತಿನ ಅಮಾವಾಸ್ಯೆಯ ದಿನ ಮುಂಡೆನ ಎತ್ತನ್ನು ಪೂಜಿಸುವದು, ಆಷಾಢಮಾಸದಲ್ಲಿ ಗುಳ್ಳವ್ವನಲ್ಲಿದ್ದ ಬಸವಂಣನನ್ನು ಪ್ರತಿ ಮಂಗಳವಾರ ಪೂಜಿಸುವದು, ಪ್ರತಿ ಶ್ರಾವಣ ಸೋಮವಾರ ಬಸವೇಶ್ವರನ ಜಾತೆಯನ್ನು ಮಾಡುವದು, ದೀವಳಿಗಿ-ಕಾರ ಹುಣಿವೆಗಳಲ್ಲಿ ಎತ್ತುಗಳನ್ನು ಪೂಜಿಸಿ ಸಿಂಗಾರ ಮಾಡಿ ಮೆರೆಯಿಸುವದು, ಪ್ರತಿ ಸೋಮವಾರ ಎತ್ತುಗಳನ್ನು ಹೂಡದೆ ಇರುವದು, ಇವೆಲ್ಲ ಸಂಗತಿಗಳನ್ನು ಕೂಲಂಕಷವಾಗಿ ಅವಲೋಕಿಸಿದರೆ, ಎತ್ತುಗಳೆಂದರೆ ಪಂಚಪ್ರಾಣವೆಂದೂ ದೇವತಾಸ್ವರೂಪಿಗಳೆಂದೂ ಅವರು ಭಾವಿಸಿದ್ದರೆಂಬುದು ವ್ಯಕ್ತವಾಗುತ್ತಿದೆ. ಯಾಕೆಂದರೆ ಎತ್ತಿನಿಂದ ಮಾನವನ ಹೊಟ್ಟೆಯು ನಡೆಯುವದು; ಎತ್ತಿನಿಂದ ಬಟ್ಟೆಯು ಸಿಗುವದು; ಮಾನವನ ಆಗು-ಹೋಗುಗಳೆಲ್ಲವೂ ಎತ್ತಿನ ಮೇಲೆಯೇ ಅವಲಂಬಿಸಿರುವವೆಂದರೆ ಅದು ಎಂದಿಗೂ ಅತಿಶಯೋಕ್ತಿಯಾಗಲಾರದಲ್ಲವೇ ? ಆದುದರಿಂದ ಇಷ್ಟೊಂದು ಮಹತ್ವವನ್ನು ನಮ್ಮ ಹಿರಿಯರು ಎತ್ತಿಗೆ ಕೊಟ್ಟಿದುದು ಯೋಗ್ಯವೇ ಆಗಿದೆಯೆಂದು ನಮ್ಮ ಮತ.

(ಮುಂದುವರಿದುದು)

ಅಲ್ಪಾವಧಿ ತರಬೇತಿ ಕೇಂದ್ರ

ವರದಿಗಾರರು:—ಶ್ರೀ. ವೀರೇಶ ಹಿರೇಮಠ.

ಸರಕಾರದ ಧೋರಣೆಗನುಸಾರವಾಗಿ ಹೊಸದಾಗಿ ಶಿಕ್ಷಣ ಪ್ರಪಂಚದಲ್ಲಿ ಕಾಲಿಟ್ಟ ನವ ಪ್ರಾಥಮಿಕ ಶಿಕ್ಷಕರಿಗೆ ಹೊಸ ಶಿಕ್ಷಣದ ರೂಪರೇಷೆ, ಕಲ್ಪನೆ ಹಾಗೂ ದೃಷ್ಟಿ-ಧ್ಯೇಯಗಳು ರಕ್ತಗತವಾಗಲೆಂಬ ಘನೋದ್ದೇಶದಿಂದ ೨೨-೧೦-೫೧ರಿಂದ ೧೦-೧೧-೫೧ರ ವರೆಗೆ ಅಲ್ಪಾವಧಿ ಕೇಂದ್ರಗಳನ್ನು ಅಲ್ಲಲ್ಲಿ ಉದ್ಘಾಟಿಸಿದ್ದು ವೈಕ್ಷಣಿಕ ದೃಷ್ಟಿಯಿಂದ ಶುಭ ಸೂಚನೆಯೇ ಸರಿ !

ಶಿಕ್ಷಣವು ಕ್ರಿಯಾತ್ಮಕವಾಗಿರಬೇಕು. ಶಿಕ್ಷಣದ ನಾಡಿಗಳಲ್ಲಿ ಚೈತನ್ಯವು ಪ್ರವಹಿಸಬೇಕು. ಹಾಗು ರಚನಾತ್ಮಕವಾಗಿರಬೇಕು. ಶಿಕ್ಷಣವು ಮೂಲ ಉದ್ಯವ ಶೀಲವಾಗಬೇಕು. ಉದ್ಯಮವೇ ಇಂದಿನ ಶಿಕ್ಷಣದ ಮಾಧ್ಯಮ. ಶಿಕ್ಷಣವು ಜೀವನದಿಂದ ವಿಭಿನ್ನವಾಗಿಲ್ಲ

ಜೀವನ ಕಲೆಯಲ್ಲಿ ಸಂಪೂರ್ಣತೆಯನ್ನು ಪಡೆಯುವದಕ್ಕಾಗಿ, ಶಿಕ್ಷಣವು ಒಂದು ಸಾಧನವಾಗಿರಬೇಕು. ಶಿಕ್ಷಣದಿಂದ ಸ್ವಾವಲಂಬನ ವೃತ್ತಿಯು ಜೊತೆಗೆ ಸತ್ಯವು ತಲೆದೋರಿ ಅಹಿಂಸಾವೃತ್ತಿಯ ಸಮಾಜ ನಿರ್ಮಾಣವಾಗಬೇಕೆಂಬುದೇ ಪೂಜ್ಯಬಾಪೂಜಿಯವರ ಹೆಬ್ಬಯಕೆಯಾಗಿತ್ತು. ಈ ಹೊಸ ಶಿಕ್ಷಣದ ಹೊಸ ಸೃಷ್ಟಿಯನ್ನು ಪಡೆಯಲು, ಈ ದಿವ್ಯ ದೀಕ್ಷೆಯನ್ನು ಹೊಂದಲು, ಕೆಲವಟುಗಳನ್ನು ನಮ್ಮ ಆಶ್ರಮಕ್ಕೆ ನಿರೀಕ್ಷಿಸಲಾಗಿತ್ತು. ೨೨-೧೦-೫೧ ನೆಯ ದಿನ ಕೇವಲ ೬೫ ಶಿಕ್ಷಕರು ಬಂದು ಈ ಜೀವನ ನಿಕೇತನವನ್ನು ಸೇರಿದರು. ಕ್ರಮೇಣ ಶಿಕ್ಷಕರ ಸಂಖ್ಯೆಯು ಹೆಚ್ಚಾಗಿ, ಇಂದಿನ ಒಟ್ಟು ಸಂಖ್ಯೆ ೪೭ ಇದೆ. ಈ ಭವ್ಯ ಕಾಲೇಜಿನ ಭವ್ಯ ಕಟ್ಟಡ, ವಿಶಾಲವಾದ ತೋಟ, ವಿಪುಲವಾದ ನೀರು, ಸುಖ ಶಾಂತಿಗಳನ್ನು ಬೀರುವ ಮಹಾಮರಗಳು, ಚೈತನ್ಯಮಯವಾದ ಹಾಗೂ ತೇಜೋಮಯವಾದ ಗಾಳಿ-ಬೆಳಕು, ಈ ೪೭ ನವ ತರುಣರಿಗೆ ನವ ಚೈತನ್ಯವನ್ನು ಕೊಟ್ಟವು. ೨೩-೧೦-೫೧ನೆಯ ಸುಮಂಗಲ ಸುಪ್ರಭಾತದಲ್ಲಿ ವಯೋವೃದ್ಧರೂ, ಜ್ಞಾನವೃದ್ಧರೂ, ಆಶ್ರಮದ ಕುಲಪತಿಗಳೂ ಆದ ಶ್ರೀ ಕುರ್ತಕೋಟಿ ಕೇಶವರಾಯರ ನೇತೃತ್ವದಲ್ಲಿ ಪ್ರಾರ್ಥನಾ ಗೀತಗಳು ಪ್ರಾರಂಭವಾದವು. ಪ್ರಾರಂಭದಲ್ಲಿ ಪ್ರಾರ್ಥನೆಯ ಮಂಗಲ ಗೀತೆಗಳನ್ನು ಶ್ರೀ ವೀರೇಶ ಹಿರೇಮಠರವರು ಹಾಗೂ ಶ್ರೀ ಎನ್. ಆರ್. ಹಿರೇಮಠರವರು ಅಂದು ತೋರಿಸಿ, ಮಾರ್ಗದರ್ಶನ ಮಾಡಿದರು. ಅಂದಿನ ದಿನವೇ ಎರಡು ವರ್ಗಗಳನ್ನು ನಿರ್ಮಿಸಲಾಯಿತು. ಯೋಜನೆ ಮಾಡಿದ ವೇಳಾಪತ್ರಿಕೆಯಂತೆ ವಿಷಯಗಳು ಸಾಗಲು ಪ್ರಾರಂಭವಾದವು. ಅಂದು ಮಧ್ಯಾಹ್ನ ವಿವಿಧ ಶಾಖೆಯ ಮಂತ್ರಿ ಮಂಡಲಗಳನ್ನು ಆಯ್ಕೆ ಮಾಡಿ, ಮಂತ್ರಿ ಮಂಡಲವನ್ನು ರಚಿಸಲಾಯಿತು. ಶಿಕ್ಷಣದ ಮೂಲತತ್ವಗಳನ್ನು ತಿಳಿಸಲು, ಶಿಕ್ಷಣದ ತತ್ವನಿರ್ದೇಶನ ಮಾಡಲು, ಶ್ರೀ ರಾಯಚೂರರವರಿಗೆ ಒಪ್ಪಿಸಲಾಯಿತು. ಶಿಕ್ಷಣದ ತಾತ್ವಿಕ ಹಿನ್ನೆಲೆ, ಧ್ಯೇಯಘೋರಣೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಹೊಣೆಗಾರಿಕೆ ಶ್ರೀ ರಾಯಚೂರರವರದಾಗಿದ್ದರೆ ಶ್ರೀ ಹೊಸಮನಿಯವರ ಹೊಣೆಗಾರಿಕೆ ಮತ್ತಿಷ್ಟು ಹೆಚ್ಚಿನದಾಗಿತ್ತು. ನಮ್ಮ ಹಳ್ಳಿಪಳ್ಳಿಗಳಲ್ಲಿ ಜ್ಞಾನದ ನಂದಾದೀಪವನ್ನು ಹೊತ್ತಿಸುವ ಕಾರ್ಯದಲ್ಲಿ ನಿರತರಾದ ಶಿಕ್ಷಕರಿಗೆ ಉದ್ಭವಿಸುವ ಸಮಸ್ಯೆಗಳು ಅವುಗಳನ್ನು ನಿವಾರಣೆಮಾಡುವ ಉಪಾಯಗಳನ್ನು, ಆಟ ನನ್ನೇ ಮಕ್ಕಳ ಪಾಠವನ್ನು ಮಾಡುವ ರೀತಿ ನೀತಿಗಳನ್ನು, ಪರಿಣಾಮಕಾರಿಯಾಗಿಯೂ, ಪ್ರಭಾವಶಾಲಿಯಾಗಿಯೂ ಮಕ್ಕಳಿಗೆ ಜ್ಞಾನನಿವೇದನಾ ಕಾರ್ಯದಲ್ಲಿ ಅನುಸರಿಸುವ ಪದ್ಧತಿಗಳನ್ನೂ ವಿಧಾನಗಳನ್ನೂ, ಕಲಿಸುವ ಕ್ರಮಗಳನ್ನೂ, ಶ್ರೀ ಹೊಸಮನಿಯವರು ಶಿಕ್ಷಕ ವಿದ್ಯಾರ್ಥಿಗಳಿಗೆ ತಿಳುಹಿಸಿ ಕೊಟ್ಟರು. ಅದು ಅಲ್ಲದೆ ಬಂದ ಶಿಕ್ಷಕರ ತೂಕ, ದೇಹ ರಚನೆ, ಮೊದಲಾದವುಗಳ ನಿರೀಕ್ಷಣೆ ಮಾಡಿ, ಶಿಕ್ಷಕರ ಮಾನಸಿಕ ವಿಕಾಸದ ಕೂಡ, ದೈಹಿಕ ವಿಕಾಸವಾಗುವಂತೆ ಶ್ರೀ ಹೊಸಮನಿಯವರು ಆಟಪಾಟಗಳನ್ನೂ, ಅಂಗಸಾಧನೆಗಳನ್ನು ಏರ್ಪಡಿಸಿದರು. ಶ್ರೀ. ವೀರೇಶ. ಹಿರೇಮಠರವರು ಶಿಕ್ಷಣದಲ್ಲಿ ಸಾಮುದಾಯಿಕ ಜೀವನದ ಸೊಬಗನ್ನು ಹರಡಲು ಪ್ರಯತ್ನಿಸಿದರು. ಪ್ರತಿಯೊಬ್ಬ ಶಿಕ್ಷಕನ ಶಕ್ತಿಯನ್ನು ಅರಿತುಕೊಂಡು, ಸಾಂಘಿಕಜೀವನದ ಅಂಗವಾಗಿ, ಅಮೃತವಾಣಿ ಪಂಚಾಂಗ ಪಠನಗಳನ್ನು, ಅಡಿಗೆಯ ಮನೆಯ ಸ್ವಚ್ಛತೆ, ಕುಡಿಯುವ ನೀರು ಪೂರೈಸುವದು, ಕಾಯಿಪಲ್ಲೆ ಕಾಳು ಹಸನು ಮಾಡುವದು, ಅಡಿಗೆ ತಯಾರಿಸುವದು, ಊಟಕ್ಕೆ ನೀಡುವದು, ಪೇಟೆಗೆ ಹೋಗಿ ಸಂತೆ ಮಾಡಿಕೊಂಡು ಬರುವದು, ಪೇಟೆಯಲ್ಲಿ ತಂದ ಸಾಮಾನುಗಳನ್ನು ಸುವ್ಯವಸ್ಥಿತ ರೀತಿಯಿಂದ ಜತನಮಾಡುವದು ಮೊದಲಾದ ಕೆಲಸದ ವಿವರವನ್ನೂ ವಿಂಗಡಿಸಿ, ವಿದ್ಯಾರ್ಥಿಗಳಲ್ಲಿ ವಿಭಜಿಸಿಮಾಡಿ, ಶಿಕ್ಷಕರನ್ನು ಸ್ವಾವಲಂಬಿಗಳಾಗುವಂತೆಯೂ, ಸಹನ ಶೀಲವುಳ್ಳವರಾಗುವಂತೆಯೂ, ಪ್ರಾಮಾಣಿಕರಾಗುವಂತೆಯೂ, ಉತ್ಸಾಹಭರಿತರಾಗುವಂತೆಯೂ, ವಸತಿಗೃಹದ ವ್ಯವಸ್ಥಾಪಕರು ಸರ್ವ ಪ್ರಯತ್ನ ಮಾಡಿದರು.

ಶ್ರೀ ರಾಯಚೂರರವರು ವ್ಯವಹಾರಿಕ ಜೀವನದಲ್ಲಿ ಗಣಿತದ ವ್ಯವಹಾರಿಕ ಉಪಯುಕ್ತತೆಯನ್ನು ತಿಳಿಸಿದ್ದರೆ, ಶ್ರೀ ವೀರೇಶ, ಹಿರೇಮಠರವರು ಭಾಷೆಯ

ಉಗಮ (ಹುಟ್ಟು) ಬೆಳವಣಿಗೆ ಹಾಗೂ ಭಾವ-ಭಾಷೆಗಳ ಸಂಬಂಧ ಮತ್ತು ಭಾಷೆ–ಭಾವದ ಸಾಧನ ಮೊದಭಾಷಾ ಶಾಸ್ತ್ರದ ತತ್ವಗಳನ್ನು ತಿಳಿಹಿಸಿದರಲ್ಲದೆ ಹಿಂದಿನ ಹಾಗೂ ಇಂದಿನ ಸಾಹಿತ್ಯ ನಭೋಮಂಡಲದಲ್ಲಿಯ ಸಾಹಿತ್ಯ ತಾರೆಗಳ ಸಮೂಹ ಪರಿಚಯ ನೂಡಿಕೊಟ್ಟು, ಅವರ ಸಾಹಿತ್ಯ ಕೃತಿಗಳ ಅಲ್ಪ ಪರಿಚಯ ಮಾಡಿ ಕೊಟ್ಟರು. ಶ್ರೀ ಕರಡಿಯವರು ಸಮಾಜವೆಂದರೇನು? ಸಮಾಜ ವಿಜ್ಞಾನದ ಜ್ಞಾನವು ಮಾನವನ ವಿಕಾಸಕ್ಕೆ ಎಷ್ಟು ಅವಶ್ಯವಿದೆಯೆಂಬದನ್ನೂ, ಮಾನಸಿಕ ಜಿ.ವನಪ್ರ ಕುಂಬು ಜೀವನವಾಗಬೇಕಾದರೆ, ಮಾನವದ ಜೀವನವು ಸಾಫಲ್ಯವನ್ನು ಪಡೆಯಬೇಕಾದರೆ ತನ್ನಲ್ಲಿ ಹುದುಗಿದ ಶಕ್ತಿಗಳ ಅರಿವುಂಟಾಗಿ, ಸಂಚಯ ಶಕ್ತಿಗಳನ್ನು ಸಂಚಾರ ಶಕ್ತಿಗಳನ್ನಾಗಿಮಾಡಿ, ಸಮಾಜದ ಸಮೃದ್ಧ ಬೆಳವಣಿಗೆ ಯಾವ ವಿಧಾನವನ್ನು ಅನುಸರಿಸಬೇಕೆಂಬದನ್ನು ತಿಳುಹಿಸಿದರು. ಅದು ಅಲ್ಲದೆ ಅನಾದಿ ಕಾಲದಿಂದಲೂ ಮಾನವನ ವಿಕಾಸ ಹಾಗೂ ಮಾನವನ ಸಂಸ್ಕೃತಿಯ ಬೆಳವಣಿಗೆ ಯಾವ ರೀತಿಯಲ್ಲಿ ಆಯಿತೆಂದು ಶ್ರೀ ಕರಡಿಯವರು ವಿಂಗಡಿಸಿ ತಿಳಿಸಿದರು. ಶ್ರೀ. ಪಾಸಣ್ಣನವರು ನಾವು ವಸ್ತ್ರ ಸ್ವಾವಲಂಬಿಗಳಾಗ ಬೇಕಾದರೆ ಯಾವ ರೀತಿಯಿಂದ ಹತ್ತಿ ಸ್ವಚ್ಛ ಮಾಡಬೇಕು? ಹಂಜಿಗಳನ್ನು ಹೇಗೆ ತಯಾರಿಸಬೇಕು? ತಕಲಿಯ ಮೇಲೆ ಹೇಗೆ ನೂಲಬೇಕು? ನೂತ ನೂಲನ್ನು ಹೇಗೆ ಜತನ ಮಾಡಬೇಕು? ಮೊದಲಾದ ವಿಷಯಗಳನ್ನು ತಕಲಿಯ ಯೋಗಿಯಾಗಿ ತಿಳಿಸಿದರು. ೮೭ ವಿದ್ಯಾರ್ಥಿಗಳಿಂದ ೧೮೦ ಗುಂಡಿ ನೂಲು ತಯಾರಾಗಿದ್ದಿತು. ಶಿಕ್ಷಕ ವಿದ್ಯಾರ್ಥಿಗಳು ಕೇವಲ ವಸ್ತ್ರ ಸ್ವಾವಲಂಬಿಗಳಾದರೆ ಸಾಲದು. ಆಹಾರ ಸ್ವಾವಲಂಬಿಗಳೂ ಆಗಬೇಕು ಎನ್ನುವ ತತ್ವದಿಂದ ವಸತಿ ನಿಲಯದ ಮೇಲ್ವಿಚಾರಕರಾದ ಶ್ರೀ ವಿಶ್ವಮನಿಯವರ ಸಹಾಯ ಸಲಹೆಗಳನ್ವಯ ಕಾಯಿಪಲ್ಲೆ ತೋಟಗಳ ಕಾರ್ಯಸಂಘಟಿಸಿದರು. ಒಟ್ಟು ೬ ಗುಂಟೆ ಕ್ಷೇತ್ರವಲ್ಲಿ ೮೭ ವಿದ್ಯಾರ್ಥಿಗಳಿಗಾಗಿ ೮೭ ಮಡಿಗಳನ್ನು ರಚಿಸಲಾಯಿತು. ಪ್ರತಿಯೊಬ್ಬನಿಗೂ ಒಂದೊಂದು ಮಡಿಗಳನ್ನು ಕೊಡಲಾಯಿತು. ಮಡಿಗಳಲ್ಲಿ ೪—೪—೦ ಬೆಲೆಯುಳ್ಳ ೭ ಪೌಂಡು ಮೆಂತೆಯ ಬೀಜವನ್ನು ೧—೪—೦ ಬೆಲೆಯುಳ್ಳ ೨ ಸೇರು ಕೊತ್ತುಂಬರಿಯ ಬೀಜಗಳನ್ನು, ೭ ಆಣೆಯ ಬೆಲೆಯುಳ್ಳ ರಾಜಗಿರಿಯ ಬೀಜಗಳನ್ನು ಮಡಿಗಳಲ್ಲಿ ಬಿತ್ತಲಾಯಿತು. ಬೀಜಗಳಿಗಾಗಿ ೬—೩—೦ ವೆಚ್ಚಮಾಡಲಾಗಿದೆ. ಕಾಯಿ ಪಲ್ಲೆಯ ಬೆಳೆಗಳ ಉತ್ಪನ್ನವು ಸುಮಾರು ೧೨ ರೂ. ಆಗಬಹುದೆಂದು ಅಂದಾಜು ಮಾಡಲಾಗಿದೆ. ೫೫-೧೦-೫೧ನೆಯ ದಿನ ನಿದ್ಯಾರ್ಥಿಗಳಿಗಾಗಿ ಮಾಯಾಲಾಂದ್ರದ ಚಿತ್ರಗಳನ್ನು ತೋರಿಸಲಾಯಿತು. ೫೬—೧೦—೫೧ನೆಯ ದಿನ ಸಮೀಪದಲ್ಲಿದ್ದ ಗುಲಗಂಜಿಕೊಪ್ಪ ಹಾಗೂ ಕಾಸ್‌ವೆಂಟರಿ ಸ್ಥಾಲುಗಳನ್ನು ಸಂದರ್ಶಿಸಲಾಯಿತು. ಇದೇ ಮಾದರಿಯ ಪಾಠಗಳನ್ನ ನಿರೀಕ್ಷಿಸಲಾಯಿತು. ೫೭—೧೦—೫೧ನೆಯ ದಿನ ಶ್ರೀ ಬಂಗಾರಿಯವರ ಗಣಿತ ಪಾಠವನ್ನೂ ಶ್ರೀ ಮಣ್ಣೂರವರ ಕವಿತಾ ಪಾಠವನ್ನೂ ಏರ್ಪಡಿಸಲಾಗಿತ್ತು. ೫೮—೧೦—೫೧ನೆಯ ದಿನ ಹಾಗೂ ೪—೧೧—೫೧ನೆಯ ದಿನ ಕಾಲೇಜದ ಕಂಪೌಂಡದ ಆವ ಸಫಾಯಿ ಮಾಡಲಾಯಿತು. ದೀಪಾವಳಿ ಮಹೋತ್ಸವದ ನಿಮಿತ್ತವಾಗಿ ೩೦-೧೦-೫೧ನೆಯ ದಿನ ಅ. ಎ. ಇ. ಎಂದು ಸೇವಾ ನಿವೃತ್ತರಾದ ಬಿ. ಎಂ. ಶಿಂತ್ರಿಯವರನ್ನು ಕರಿಸಲಾಗಿತ್ತು. ಅಂದು ಅವರು ದೀಪಾವಳಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿಸಿಕೊಟ್ಟರು. ೩೧—೧೦—೫೧ನೆಯ ದಿನ ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀ ನಾಡಿಗೇರರವರು ಗ್ರಾಮ ನೈರ್ಮಲ್ಯದ ಬಗ್ಗೆ ಮಾತನಾಡಿದರು. ಸಮಾಜ ಶಿಕ್ಷಣದ ದಿನಾಚರಣೆಯನ್ನು ಮಿಂಚಿನ ಬಳ್ಳಿಯ ಸಂಚಾಲಕರಾದ ಶ್ರೀ ಬುರ್ಲಿ ಬಿಂದು ಮಾಧವರಾಯರ ನೇತೃತ್ವದಲ್ಲಿ ಸಾಂಗವಾಗಿ ಜರುಗಿಸಲಾಯಿತು. ೨—೧೧—೫೧ನೆಯ ದಿನ ಶಿಕ್ಷಕರನ್ನು ಬೋರ್ಡಿಂಗ್ ಸ್ಕೂಲಿಗೆ ನಿರೀಕ್ಷಣೆಗಾಗಿ ಕರೆದುಕೊಂಡು ಹೋಗಲಾಗಿತ್ತು. ೩—೧೧—೫೧ನೆಯ ದಿನ ಬಾನುಲಿ ಕೇಂದ್ರ ಹಾಗೂ ಐತಿಹಾಸಿಕ ಸಂಶೋಧನಾ ಮಂಡಳವನ್ನು ಸಂದರ್ಶಿಸಲಾಯಿತು. ಅನುಭವಿಕರೂ ಆಶ್ರಮದ ಕುಲಪತಿಗಳೂ ಆದ ಶ್ರೀ ಕುರ್ತಕೋಟಿ ಕೇಶವರಾಯರು ಪ್ರಾರ್ಥನೆಯ ಗೀತೆಗಳನ್ನು ರಾಗಬದ್ಧವಾಗಿ

ಅಂದು ಪ್ರಾರ್ಥನೆಯಲ್ಲಿ ಭಕ್ತಿ ಭಾವನೆ ಹುಟ್ಟುವಂತೆ ಮಾಡಿದರು. ಇಲ್ಲಿ ಕಲಿತ ಮಂಗಲ ಗೀತೆಗಳು ಶಿಕ್ಷಕರಲ್ಲಿ ಕೊನೆಯವರೆಗೂ ಉಳಿಯಲೆಂದು ಹಳ್ಳಿ ಹಳ್ಳಿಯಲ್ಲಿಯೂ ಪ್ರಾರ್ಥನೆಯು ಮುಟ್ಟಲೆಂದು ಶಿಕ್ಷಕರೊಬ್ಬರು ಶಿಕ್ಷಕ ವಿದ್ಯಾರ್ಥಿಗಳು ಕಲಿತ ಪ್ರಾರ್ಥನೆಯ ಗೀತೆಗಳನ್ನೆಲ್ಲ ಸಂಗ್ರಹಿಸಿ ಮಂಗಲ ಗೀತೆಗಳಲ್ಲಿ ಸಂಕಲನ ಮಾಡಿ, ಅಕ್ಷನ ತದಿಗೆಯ ದಿನ ಪ್ರಸಿದ್ಧಿಸಿದರು.

ಈ ಅಲ್ಪಾವಧಿ ತರಬೇತಿ ಕೇಂದ್ರಕ್ಕೆ ಜೀವನ ಶಿಕ್ಷಣ ಕೇಂದ್ರ ಅಧ್ಯಾಪಕರಾದ ಶ್ರೀ ಎನ್. ಆರ್. ಹಿರೇಮಠರವರು ಇದೇ ಸಂಸ್ಥೆಯಲ್ಲಿ ಸಂಗೀತ ಶಿಕ್ಷಕರಾದ ಜಹಗೀರದಾರರು ಇದೇ ಕಾಲೇಜ ಶಿಕ್ಷಕ ವಿದ್ಯಾರ್ಥಿಯಾದ ಮುರಿಗೌಡರು ನಮ್ಮ ಕಾರ್ಯದಲ್ಲಿ ಅನೇಕಾನೇಕ ರೀತಿಯಲ್ಲಿ ಸಹಾಯ ಸಲಹೆಗಳನ್ನು ನೀಡಿದ್ದಾರೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಧಾರವಾಡ ವಿಭಾಗದ ಶಿಕ್ಷಣಾಧಿಕಾರಿಗಳೂ, ಶಿಕ್ಷಣ ತಜ್ಞರೂ, ನ್ಯಾಯಪಕ್ಷಪಾತಿಗಳೂ, ಸತತೋದ್ಯೋಗಿಗಳೂ ಆದ ಡಾ. ಡಿ. ವ್ಹಿ. ಚಿಕ್ಕರಮನೆಯವರು ನಮ್ಮ ಮೇಲಣ ಅಪಾರವಾದ ಮಮತೆಯಿಂದ, ಅತುಲವಾದ ವಿಶ್ವಾಸದಿಂದ ತಮ್ಮ ಅನೇಕ ಮಹತ್ವದ, ಹಾಗೂ ಹೊಣೆಗಾರಿಕೆಯ ಕಾರ್ಯಗಳನ್ನೆಲ್ಲ ಬದಿಗೊತ್ತಿ, ನಮ್ಮ ಮಧ್ಯದಲ್ಲಿ ಬಂದು, ಆನಂದವನ್ನು ಪಡೆಯಲು ಹಾಗೂ ಆನಂದವನ್ನೀಯಲು ಬಂದಿದ್ದಾರೆ. ಡಾ. ಚಿಕ್ಕರಮನೆಯವರು ಯಾವಾಗಲೂ ಕರ್ಮಯೋಗಿಗಳು, ಕರ್ಮವೇ ಅವರ ಧರ್ಮ, ಇಂತಹ ಮಹಾವ್ಯಕ್ತಿಗಳು ನಮ್ಮೆಲ್ಲರಿಗೂ ಸಂಜೀವಿನೀ ಶಕ್ತಿಯನ್ನೀಯುವ ಸಂದೇಶವನ್ನೀಯಲಿ. ಡಾ. ಚಿಕ್ಕರಮನೆಯವರಿಗೆ ಭಕ್ತಿಪೂರ್ವಕ ಹಾಗೂ ಹಾರ್ದಿಕ ಸ್ವಾಗತ.

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ

(೧೯೫೨)

ಪರಿಣಾಮ

೧೯೫೨ ಜನೇವರಿ ತಿಂಗಳಲ್ಲಿ ಜರುಗಲಿರುವ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ (ಮುಲ್ಕೀ ಪರೀಕ್ಷೆ)ಯ ಪರಿಣಾಮವು ೭—೩—೧೯೫೨ಕ್ಕೆ ಪ್ರಕಟವಾಗುವದೆಂದು ಧಾರವಾಡ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರು ತಿಳಿಸುತ್ತಾರೆ.

—ಪ್ರಧಾನ ಸಂಪಾದಕರು.

ಹರುಷದ ಹತ್ತು ದಿವಸಗಳು

ಲೇಖಕರು:—ಶ್ರೀ. ರೇವಣಸಿದ್ಧೇಶ್ವರ **ಮಾಳವಾಡ.** ಶಾಲಾಗುರುಗಳು, **ಗೋವನಕೊಪ್ಪ.**

ಪ್ರಾಸ್ತಾವಿಕ:— ಇಂದು ಸರಕಾರ ಶಿಕ್ಷಣದ ಸರ್ವತೋಮುಖ ಉನ್ನತಿಗಾಗಿ ಪ್ರಯತ್ನಿಸುತಿದೆ. ಶಿಕ್ಷಕರ ಹಿತವನ್ನು ಬಹುಪರಿಯಿಂದ ಸಾಧಿಸಲು ಆಸ್ಥೆ-ವಹಿಸಿದೆ. ರಾಷ್ಟ್ರ ಓಜಸ್ವಿ ತೇಜಸ್ವಿಯಾಗಬೇಕಾದರೆ ಶಿಕ್ಷಕನು ಪ್ರಧಾನ ಪಾತ್ರ ವಹಿಸಬೇಕಾಗುವದು. ಶಿಕ್ಷಕನು ಒಂದು ತೇಜಸ್ವಿ ದೀಪ. ಒಂದು ತೇಜಸ್ವಿಯಾದ ದೀಪವು ಕೋಟದೀಪಗಳನ್ನು ಪ್ರಕಾಶಮಾನವಾಗಿ ಮಾಡುವದಲ್ಲದೆ, ತಾನೂ ಸಹ ಅಷ್ಟೇ ಪ್ರಕಾಶ ಮಾನವಾಗಿ ಬೆಳಗಬೇಕಾಗುವದು. ಶಿಕ್ಷಕನ ಜ್ಞಾನಜ್ಯೋತಿಯ ಪ್ರಕಾಶ ಉಜ್ವಲವಾಗುವದಕ್ಕಾಗಿ ಮುಂಬಯಿ ಸರ-ಕಾರದಿಂದ ಶಿಕ್ಷಕರಿಗಾಗಿ ಸಂತೋಷ ಶಿಬಿರಗಳನ್ನು ಏರ್ಪಡಿಸಲಾಗಿದೆ. ಇಂಥ ಶಿಬಿರಗಳು ಈಗಾಗಲೇ ಎರಡು ಬೆಳಕು ಬೀರಿ ಪ್ರಾಥಮಿಕ ಶಿಕ್ಷಕರನ್ನು ಉಲ್ಲಾಸದ ಉಯ್ಯಾಲೆಯಲಿ ಆಡಿಸಿವೆ. ಮೂರನೆಯದಾದ ಈ ಶಿಬಿರ ಕರೂರಲ್ಲಿ ಕಾಲಿಟ್ಟಿತು. ಧಾರವಾಡ ವಿಭಾಗದ ಶಿಕ್ಷಕ-ಶಿಕ್ಷಕಿಯರನ್ನು ಕೈಮಾಡಿ ಕರೆಯಿತು. ಅದಕ್ಕೆ ನಾನು ಓಗೊಟ್ಟೆ.

ವಿಜಾಪುರ ಜಿಲ್ಲೆಯಿಂದ ಆರು, ಬೆಳಗಾಂವ ಜಿಲ್ಲೆಯಿಂದ ಎಂಟು, ಕಾರವಾರ ಜಿಲ್ಲೆಯಿಂದ ಒಬ್ಬರು, ಧಾರವಾಡ ಜಿಲ್ಲೆಯಿಂದ ಮೂವತ್ತೆರಡು ಶಿಕ್ಷಕರು ಇಬ್ಬರು ಶಿಕ್ಷಕಿಯರು ಒಟ್ಟು ನಾಲ್ವತ್ತೊಂಬತ್ತು ಸಹೋದ್ಯೋಗಿಗಳು ದಿನಾಂಕ ೫-೧೧-೫೧ನೆಯ ದಿವಸ ಕರೂರ ಶಿಬಿರದಲ್ಲಿ ಕೂಡಿದೆವು. ಧಾರವಾಡ ವಿಭಾಗದ ಉಪಶಿಕ್ಷಣಾಧಿಕಾರಿಗಳಾದ **ಸನ್ಮಾನ್ಯ** ಶಾಂತಿದೂತ ಜೀವೂರರವರ ಹಿರಿತನದಲ್ಲಿ ನಮ್ಮ **ಕೌಟುಂಬಿಕ** ಜೀವನ ಅಭ್ಯಸಿಸಲು ಆರಂಭವಾಯಿತು. ಅದಕ್ಕೆ ಉಪಸಂಚಾಲಕರಾದ ಶ್ರೀ ಯಲಿ, ಶ್ರೀ ವರಗಿರಿ, ಶ್ರೀ ಪಾಟೀಲರವರು ಕೌಟುಂಬಿಕ ಜೀವನದ ಚಟುವಟಿಕೆ-ಗಳು ಹೆಜ್ಜೆ ಇಟ್ಟು ಮಾರ್ಗದರ್ಶಕರಾಗಿ ಹರ್ಷವನ್ನು ಹುಲುಸಾಗಿ ಬೆಳೆಸಲು ಮುಂಬಂದರು. ಈ ಶಿಬಿರದ **ಕೌಟುಂಬಿಕ** ಜೀವನ ಹಾಗೂ ಚಟುವಟಿಕೆಗಳು ಇಂತಿವೆ.

ಕೌಟುಂಬಿಕ ಜೀವನ:— ದಿನಾಂಕ ೫-೧೧-೫೧ನೆಯ ದಿವಸ ನಾವೆಲ್ಲರೂ ಶಿಬಿರದಲ್ಲಿ ಸಭೆಸೇರಿ ಕಾರ್ಯ ಕಲಾಪಗಳನ್ನು ಗೊತ್ತುಪಡಿಸಲು ಹಾಗೂ ಶಿಬಿರದ ನಾನಾ ಕಾರ್ಯಗಳನ್ನು ಶಿಸ್ತಿನಿಂದ ಸಾಗಿಸಲು ಪ್ರಧಾನ ಮಂತ್ರಿ, ಆಹಾರ ಮಂತ್ರಿ, ಆರೋಗ್ಯ ಮಂತ್ರಿ, ಸಾರಿಗೆಯ ಮಂತ್ರಿ, ಸಾಂಸ್ಕೃತಿಕ ಮಂತ್ರಿಗಳ ಮಂಡಳ ರಚಿಸಿಕೊಂಡೆವು. ನಾನು ಸಂಸ್ಕೃತಿ ಮಂತ್ರಿಯ ಹೊಣೆ ಹೊತ್ತೆ.

ಈ ಶಿಬಿರದ ಪ್ರಾರಂಭೋತ್ಸವ ಧಾರವಾಡ ವಿಭಾಗದ ಸನ್ಮಾನ್ಯ ಶಿಕ್ಷಣಾಧಿಕಾರಿಗಳಾದ ಡಾ|| ಚಿಕ್ಕರಮನೆಯವರಿಂದ ಜರುಗಿತು. ಸಂಚಾಲಕರಾದ ಶ್ರೀಮಾನ್ ಜೀವೂರರವರು ಪ್ರಾಸ್ತಾವಿಕರಾದ ನಾಲ್ಕು ಮಾತು ಮಾತಾಡಿದನಂತರ ಉದ್ಘಾಟಕರು ಉಲ್ಲಾಸಪೂರಿತ ಶೈಲಿಯಲ್ಲಿ ಶಿಬಿರದ ಕೌಟುಂಬಿಕ ಜೀವನದ **ಸತ್ಯ** ಸಿದ್ಧಾಂತವನ್ನು ತಿಳಿಸಿದರು. ನಾವು ಒಂದೇ ಕುಟುಂಬ-ದವರೆಂಬ ಬಂಧು ಭಾವನೆ ಬೆಳೆದು ಹೊಸ ಜೀವನದಲಿ ಬೆಳಕು ಕಂಡೆವು. ಸಾಮೂಹಿಕ ಸದ್ಭಾವ, ಸದಭಿಪ್ರಾಯ, ಭ್ರಾತೃಭಾವನೆ ಇವು ದಿನದಿನಕೆ ಬೆಳೆಯತೊಡಗಿದವು. ಪರಸ್ಪರ ಪ್ರೇಮಾದರಗಳು ಹುಟ್ಟಿ ಮೇಲು-ಕೀಳು, ಜಾತಿ-ಪಂಥ, ಹಿರಿ-ಕಿರಿ, ಬಡವ-ಶ್ರೀಮಂತ, ಎಂಬ ಭೇದ ಭಾವ ತೊಡೆದು ಹಾಕಿ ಸಮನ್ವಯ ಭಾವದಿಂದ

ನಮ್ಮ ಸಾಂಘಿಕ ಜೀವನ ಸಾಗಿತು. ಎಲ್ಲರ ಹೃದಯಗಳು ಒಂದಾಗಿ ಕಾರ್ಯಕ್ಕೆ ಮುಂದಾದವು. ಹೊಸ ಜಗತ್ತು, ಹೊಸ ಸೃಷ್ಟಿ ನಿರ್ಮಿಸಿ ನಕ್ಕುನಲಿಯುವ ಅಂತಃಶಕ್ತಿಯ ದಿವ್ಯ ದೀವಿಗೆಯನ್ನು ಹಿಡಿದೆವು. ಕುಟುಂಬ ಜೀವನದ ಕಾರ್ಯಗಳಾದ ಕಸಗೂಡಿಸುವದು, ಕಾಯಿಪಲ್ಲೆ ಹೆಚ್ಚುವದು, ಊಟಕ್ಕೆ ಬಡಿಸುವದು ಮೊದಲುಮಾಡಿಕೊಂಡು ಎಲ್ಲರೂ ಆಸ್ಥೆಯಿಂದ ಎಲ್ಲ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದೆವು. ಶಿಬಿರದ ಜಾಲಕರು ಉಪಜಾಲಕರು ಈ ಕೌಟುಂಬಿಕ ಜೀವನದಲ್ಲಿ ಭಾಗವಹಿಸಿದ್ದು ಪ್ರಶಂಸನೀಯ.

ಸಾಮೂಹಿಕ ಕಾರ್ಯ:— ಪ್ರತಿಯೊಬ್ಬನು ಪ್ರೀತಿಯಿಂದ ನಕ್ಕು ನಲಿದು ಹಿಗ್ಗಿನ ಹೊನಲನು ನಿತ್ಯಹೃದಯದಿ ಹರಿಸುತ್ತಿದ್ದೆವು. ಹರ್ಷದಿ ಹರದಾಡುತ್ತಿದ್ದೆವು. ಪ್ರತಿದಿನ ಈಶಪ್ರಾರ್ಥನೆ, ಪಂಚಾಂಗಸಠಣ, ಅಮೃತವಾಣಿ, ಸುದ್ದಿಸಂಗ್ರಹ, ಶಾರೀರಿಕ ಚಟುವಟಿಕೆ, ಸಫಾಯಿ, ಫಲಾಹಾರ, ಪ್ರವಾಸ, ಊಟ, ವಿಶ್ರಾಂತಿ, ವಿಚಾರ ಸಂಕೀರ್ಣ, ನಗೆನಲುವಿನಿಂದ ತುಂಬಿ ತುಳುಕುವ ಮನರಂಜನೆ ಇವು ನಮ್ಮ ನಿತ್ಯ ಸಾಮೂಹಿಕ ಕಾರ್ಯಗಳು. ಎಲ್ಲರೂ ಸಾಮೂಹಿಕ ಕಾರ್ಯದಲ್ಲಿ ಸೌಹಾರ್ದತೆಯಿಂದ ಕಾರ್ಯೋನ್ಮುಖರಾಗುತ್ತಿದ್ದೆವು.

ವಿಚಾರ ಸಂಕೀರ್ಣ:— ಜ್ಞಾನದೀಪ ಸ್ವಪ್ರಕಾಶಮಾನವಾಗಬೇಕಾದರೆ ವಿಚಾರ ಸಂಕೀರ್ಣವೆಂಬ ಎಣ್ಣೆ ಅವಶ್ಯ. ಅದಕಾಗಿ ನಮ್ಮಲ್ಲಿ ವಿಚಾರ ಸಂಕೀರ್ಣಕ್ಕೆ ಪ್ರಧಾನ ಪಾತ್ರವಿತ್ತೆಂದು ಹೆಮ್ಮೆಯಿಂದ ಹೇಳಬಹುದು. ಜ್ಞಾನ, ಪ್ರೇಮ, ಸಮತೆಗಳ ಸಾಮರಸ್ಯದಿಂದ ಒಂದೊಂದು ವಿಷಯವನ್ನು ವಿಚಾರಿಸಿ ಅದರ ತಿರುಳು ತಿಳಿಯುತ್ತಿದ್ದೆವು. ವಿಷಯಗಳ ಎಳೆದಾಟ, ಸೆಳೆದಾಟಗಳಲ್ಲಿ ನೈಜವಾದ ಅನುಭವ ಹೊಂದುತ್ತಿದ್ದೆವು. ವಿಚಾರಿಸಿದ ವಿಷಯಗಳು ಇಂತಿವೆ.

(೧) ಪ್ರಾಥಮಿಕ ಶಿಕ್ಷಣದಲ್ಲಿ ಧಾರ್ಮಿಕ ಶಿಕ್ಷಣದ ಮಹತಿ.

(೨) ಶೈಕ್ಷಣಿಕ ಪ್ರವಾಸಗಳ ಹಿರಿಮೆ.

(೩) ಗ್ರಾಮ ಸುಧಾರಣೆಯಲ್ಲಿ ಶಿಕ್ಷಕರ ಸ್ಥಾನ.

(೪) ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗಳ ಆವಶ್ಯಾವಶ್ಯ.

(೫) ಒತ್ತಾಯ ಶಿಕ್ಷಣದಲ್ಲಿ ಶಿಕ್ಷಕರ ಹೊಣೆ.

ಸಂದರ್ಶನ—**ಪ್ರವಾಸ**:— ದಿನಾಂಕ ೬-೧೧-೫೧ನೆಯ ದಿನ ಕರೂರಿನ ಕಲ್ಲಿನ ಕಣಿವೆ ಕಂಡು ಅದರ ಉಪಯೋಗ ಮತ್ತು ಮಹತಿ ಅರಿತುಕೊಂಡೆವು. ದಿ. ೭-೧೧-೫೧ನೆಯ ದಿನ ರಾಣೇಬೆನ್ನೂರಿನ ಶ್ರೀ ರೇಣುಕಾಚಾರ್ಯರ ದೇವಾಲಯ ದರ್ಶನ ತೆಗೆದುಕೊಂಡೆವು. ದರ್ಶನ ಮಾತ್ರದಿಂದಲೇ ಆತ್ಮನ ಅಪಾರ ಅಗಾಧ ಶಕ್ತಿಯ ಅರಿವು ಆಯಿತು. ನಾವೆಲ್ಲರು ವಚನಾಮೃತ ಈಶಮಂಗಲಾರತಿ ಮಾಡಿ ಹೊರಗೆ ಬರಲು ಮರೆವು ಮತ್ತಾವರಿಸಿ ಮನರಂಜನೆಯಲಿ ತೊಡಗಿ ಮೋಟಾರಗಳಲಿ ನಗುತ್ತ ನಲಿಯುತ್ತ ಮದಗಮಾಸೂರ ಸರೋವರಕ್ಕೆ ಹೋದೆವು. ಅಲ್ಲಿಯೇ ಕುಮುದ್ವತಿನದಿಯ ಸೇತುವೆ ಹಾಗೂ ಎರಡು ಗುಡ್ಡಗಳ ನಡುವೆ ಭೋರ್ಗರೆಯುವ ಕುಮುದ್ವತಿಯ ದಭೆ ದಭೆ ಈ ಎಲ್ಲ ಸುಂದರ ದೃಶ್ಯ ಕಂಡು ಮನಾನಂದ ಹೊಂದಿದೆವು. ಸರೋವರಕ್ಕೆ ವಿಜಯನಗರದ ಅರಸರು ಭವ್ಯವಾದ ಗುಡ್ಡದಂಥ ಒಡ್ಡನ್ನು ಹಾಕಿಸಿದ್ದು ಅದರ ಮೇಲೆ ನಿಂತು ನೋಡಿದರೆ ಸರೋವರದ ಸೌಂದರ್ಯ, ಮತ್ತೆಡೆಗೆ ದಭೆದಭೆ, ಇನ್ನೊಂದೆಡೆಗೆ ಸೃಷ್ಟಿಯ ಸೊಬಗು ನಮ್ಮೆಲ್ಲರನು ಸಂತೋಷ ಸಾಗರದಲಿ ಸಾಗಿಸಿದವು ದಿನಾಂಕ ೮-೧೧ ೫೧ನೆಯ ದಿನ ದೇವರಗುಡ್ಡದ ಶ್ರೀ ಮಾಲತೇಶ ಮಂದಿರಕ್ಕೆ ಹೋದೆವು. ಅಲ್ಲಿಯ ಉದ್ಭವ ಹಾಗೂ ಉತ್ಸವ ಮೂರುತಿ ನೋಡಿ ಅಲ್ಲಿದ್ದ ಬಿಲ್ಲು ಬತ್ತಳಿಕೆಗಳು ದೇವರ ದಿವ್ಯ ಮಹಿಮೆಯ ಸೂಚಕಗಳೆಂದು ತಿಳಿದುಕೊಂಡೆವು.

ದಿನಾಂಕ ೯-೧೧-೫೧ನೆಯ ದಿನ ತುಂಗಭದ್ರಾನದಿಯ ತಟಾಕದ ಮೇಲಿರುವ ಐರಣಿಯೊಂಬುದೊಂದು ಪುರಾತನ ಪಳ್ಳಿ. ಆಲ್ಲಿಯ ಕಿಲ್ಲೆ ಕೋಟೆಗಳು ಹಿಂದೊಮ್ಮೆ ಹಾವನೂರ ಹನಮಂತಿಗೌಡರು ಪಾಳಯಗಾರರಿದ್ದ, ಕಾಲಕ್ಕೆ ಕಟ್ಟಿಸಿದವುಗಳೆಂದು ಇತಿಹಾಸದ ಪುಟತಿರುವುತ್ತ ಆ ಚಿಕ್ಕ ಅರಸರ ಹಿರಿಮೆಯನು ಹೊಗಳುತ್ತ

ಅಂದೇ ಸಾಯಂಕಾಲಕ್ಕೆ ಐರಣಿಯ ಬೆಟ್ಟ ಮುಟ್ಟಿದೆವು. ಅದು ೨೦೦-೩೦೦ ಅಡಿ ಎತ್ತರವಿದ್ದು ಅದನ್ನು ಹತ್ತಲೂ ಸಹ ಪರಿಶ್ರಮಬೇಕು. ಪರಿಶ್ರಮದ ಕಡೆಗೆ ಗಮನಿಸಜೆ ಅಂದು ನಾವೆಲ್ಲರು ಬೆಟ್ಟದ ಮೇಲೇರಿದೆವು. ಅಲ್ಲೊಂದು ಜಲದುಂಬಿದ ಆಳವಾದ ಸುಂದರ ಭಾವಿಯನ್ನು ಕಂಡು ಅಚ್ಚರಿಗೊಂಡೆವು. ಅಲ್ಲಿದ್ದ ಬೆಟ್ಟದ ಮಲ್ಲಿಕಾರ್ಜುನ ದೇವರ ದರ್ಶನ ತೆಗೆದುಕೊಂಡು ಬೆಳದಿಂಗಳ ತುಂಗದಿರಿನಲಿ ಸಿರದ ಸವಿಯೂಟ ಸವಿದು ಬೆಟ್ಟದಲಿ ಬೀಡುಬಿಟ್ಟೆವು.

ದಿನಾಂಕ ೧೧-೧೧-೫೧ನೆಯ ದಿನ ಹೊಳೆಆಣವೇರಿಗೆ ಹೋಗುತ್ತಲೆ ಅಲ್ಲಿಯ ಹಿರಿಕಿರಿಯ ಬಂಧು ಭಗಿನಿಯರು ಪ್ರಚಂಡ ಸ್ವಾಗತಗೈದರು. ತಳಿರು ತೋರಣಗಳಿಂದ ತಮ್ಮೂರನ್ನು ಶೃಂಗರಿಸಿದ್ದರು. ನಮಗಾಗಿ ಭವ್ಯ ಮಂಟಪ ನಿರ್ಮಿಸಿದ್ದರು. ಅವರ ಅಪಾರ ಪ್ರೇಮ, ಸರಳಶುದ್ಧ ಜೀವನ ವಿಶ್ವಾಸ ಆದರ ಕಂಡು ಮನವಾರೆ ಹೊಗಳಿದೆವು. ತುಂಗಭದ್ರಾ ಕುಮುದ್ವತಿ ನದಿಗಳ ಸಂಗಮ ಸ್ಥಾನದಲ್ಲಿ ಜಲವಿಹಾರ ಮಾಡಿಕೊಂಡು ಅಲ್ಲಿ ಅಂದಿನ ಊಟ ತೀರಿಸಿದೆವು.

ದಿನಾಂಕ ೧೨-೧೧-೫೧ನೆಯ ದಿನ ಹರಿಹರಕ್ಕೆ ಹೋಗಿ ಅಲ್ಲಿ ಕಿರ್ಲೋಸ್ಕರ ಕಂಪನಿಯವರ ಕಬ್ಬಿಣ ಸಾಮಾನುಗಳ ಕಾರಖಾನೆಗೆ ಸಂದರ್ಶನ ಕೊಟ್ಟು ಹರಿಹರೇಶ್ವರನ ದೇವಾಲಯಕ್ಕೆ ಹೋಗಿ ಆಲ್ಲಿದ್ದ ಹರಿ-ಹರ ಮೂರುತಿಯನ್ನು ಕಂಡು ಹರಿ-ಹರ, ದೇವರಲ್ಲಿ ಬೇಧ ಭಾವ ಮಾಡುವದು ಮಹಾಪಾಪವೆಂಬ ತಿರುಳು ತಿಳಿದು, ದೇವದೇವನ ದಿವ್ಯ ನಂಬುಗೆಯ ಆಳವನು ಅರಿತು, ಮಂಗಲಗೀತೆಯಪಾಡಿ, ತುಂಗಭದ್ರಾ ನದಿಯ ತಟಾಕದ ಮೇಲೆ ನನಭೋಜನ ತೀರಿಸಿಕೊಂಡು, ಅಂದೇ ರಾತ್ರಿ ಡಾವಣಗೆರೆಗೆ ತಲುಪಿ ಶ್ರೀಮಂತ ರಾಜನಹಳ್ಳಿ ಹನುಮಂತಪ್ಪನವರ ಅರಮನೆಯನ್ನು ಹೋಲುವ ಧರ್ಮಛತ್ರದಲ್ಲಿಳಿದುಕೊಂಡು, ರಾತ್ರಿ ಮು ಪಾ ತ್ಯಾ ಪಿಕ್ಚರ್ಸ್‌ದವರು ತಯಾರಿಸಿದ "ಜಗನ್ಮೋಹಿನಿ" ಕನ್ನಡ ಚಲನಚಿತ್ರವನ್ನು ಕಂಡೆವು. ಮರುದಿನ ಡಾವಣಗೆರೆಯ ಪ್ರಾಚೀನ ಹಾಗೂ ಆರ್ವಾಚೀನ ದೇವಾಲಯಗಳನ್ನು ಮತ್ತು ಪಟ್ಟಣವನ್ನು ನಿರೀಕ್ಷಿಸಿ ರೈಲಿನಿಂದ ದಿನಾಂಕ ೧೩-೧೧-೫೧ನೆಯ ದಿನ ೧-೩೦ ಗಂಟೆಗೆ ನಾವೆಲ್ಲರು ನಮ್ಮ ಶಿಬಿರಕ್ಕೆ ಮರಳಿದೆವು.

ಆದರಾತಿಥ್ಯ:——ನಮ್ಮ ಶಿಬಿರದ ಕುಟುಂಬದವರಿಗೆ ನೆರೆಹೊರೆಯ ಹಳ್ಳಿಯ ಹಿರಿಯ ಬಂಧುಗಳು ಹಾಗೂ ಸಹೋದ್ಯೋಗಿಗಳು ತಮ್ಮ ತಮ್ಮ ಹಾರ್ದಿಕ ಹೃದಯದ ಹಿರಿಮೆಯನ್ನು ತೋರಿಸುವದಕ್ಕಾಗಿ ನಮಗೆಲ್ಲರಿಗೆ ತಮ್ಮ ಆದರದ ಆಮಂತ್ರಣವಿತ್ತು ಆದರಿಸಿದ ಅನುಕ್ರಮವು ಈ ಕೆಳಗಿನಂತಿದೆ.

ದಿನಾಂಕ ೭-೧೧-೫೧.	ರಾಜೇಬೆನ್ನೂರ	ರೇಣುಕಾಚಾರ್ಯ ದೇವಾಲಯದಲ್ಲಿ ದೇವಾಲಯ ನಡೆಯಿಸಿದ ಹಿರಿಯ ಶಿಕ್ಷಕ ಬಂಧುವಿನಿಂದ ಫಲಹಾರ.
,,	,,	ಗುಂಡಗಟ್ಟೆ ಊರ ಜನರಿಂದ ರುಚಿಕರ ಊಟ
,,	,,	ಸರೋವರ ದಂಡೆಯ ಮೇಲೆ ವೀರಾಪುರ ಜನರಿಂದ ಚಹಾಪಾನ
,,	,,	ಮೂಸೂರಲ್ಲಿ ಶಿಕ್ಷಕ ಬಂಧುಗಳಿಂದ ಚಹ.
ದಿನಾಂಕ ೯-೧೧-೫೧		ದೇವರಗುಡ್ಡದಲ್ಲಿ ನಮ್ಮ ಉಪಸಂಚಾಲಕರಾದ ಶ್ರೀ ವರಗಿರಿಯವರಿಂದ ಊಟ. ದೇವರಗುಡ್ಡದ ಶಿಕ್ಷಕ ಬಂಧುಗಳಿಂದ ಚಹ.
ದಿನಾಂಕ ೯-೧೧-೫೧		ಹೊಳೆಮತದ ತುಂಗಭದ್ರಾ ನದಿಯ ರಟಾಕದ ಮೇಲೆ ಹಿರೇಬಿದರಿಯ ಶ್ರೀ ಹಾಲನ ಗೌಡರಿಂದ ಬಯಸಿದ ಬೇರೆ ಬೇರೆ ಬಯಕೆಯೂಟ.
ದಿನಾಂಕ ೧೧-೧೧-೫೧		ಹೊಳೆ ಆಣವೇರಿಯ ರೈತ ಬಂಧುಗಳಿಂದ ತುಂಗಭದ್ರಾ ಹಾಗೂ ಕುಮುದ್ವತಿ ನದಿಗಳ ಸಂಗಮ ಸ್ಥಾನದಲಿ ಸವಿಯೂಟ.

ದಿನಾಂಕ ೧೪-೧೧-೫೧ ಕರೂರ ಹಿರಿಯರು ಕೊನೆಯ ದಿನ ಬುಂದೇದ ಊಟ ಕೊಟ್ಟು ಬಲವಾದ ಪ್ರೇಮವ್ಯಕ್ತ ಮಾಡಿದರು.

ಶಿಬಿರದ ಚಲನ ಚಿತ್ರ:— ಸನ್ಮಾನ್ಯ ಸಂಚಾಲಕರ ಪ್ರಯತ್ನದ ಫಲದಿಂದ ಈ ನಮ್ಮ ಶಿಬಿರದ ಕೌಟುಂಬಿಕದ ಕಾರ್ಯ ಕಲಾಪಗಳ ಚಲನ ಚಿತ್ರಪಟ ತಯಾರಿಸಿಕೊಳ್ಳುವದಕ್ಕಾಗಿ ಈ ಸಾರೆ ನಮ್ಮ ಮುಂಬಯಿ ರಾಜ್ಯದ ಪಬ್ಲಿಸಿಟಿ ಡಾಯರೆಕ್ಟರ ಶ್ರೀ ಶಾಂತೇಶ ಪಾಟೀಲರ ಪರವಾಗಿ ಶ್ರೀ ಕಾಂಬಳೆಯವರು ಬಂದು ನಮ್ಮ ಶಿಬಿರದ ವಿವಿಧ ಚಟುವಟಿಕೆಗಳನ್ನು ತಯಾರಿಸಿಕೊಂಡದ್ದು ಶಿಬಿರದ ಕ್ರಿಯಾಶಕ್ತಿಯ ದ್ಯೋತಕವೆಂದು ಹೇಳಬಹುದು.

ಕೊನೆಯ ಮಾತು:— ದಿನಾಂಕ ೧೪-೧೧-೫೧ ನೆಯ ದಿವಸ ಸಾಯಂಕಾಲ ೫ ಗಂಟೆಗೆ ನಮ್ಮ ಸಂತೋಷ ಶಿಬಿರದ ಮುಕ್ತಾಯ ಸಮಾರಂಭವು ಶ್ರೀಮಾನ್ ವ್ಹಿ. ಎಸ್, ಹಿರೇಮಠ ಪ್ರಾಂತ ಆಫೀಸರ ರಾಣೇಬೆನ್ನೂರ ಇವರ ಹಿರಿತನದಲ್ಲಿ ಜರುಗಿತು. ಶಿಬಿರದ ಸಂಚಾಲಕರಾದ ಶ್ರೀ ಜೋಶಿಯವರ ಶುದ್ಧ ಸರಳ ಸ್ವಭಾವ, ಶಿಕ್ಷಕರ ಮೇಲಿನ ಅಪಾರ ಮಮತೆ, ಮನ ಬಿಚ್ಚಿ ಮಾತಾಡುವ ಮಾತಿನ ಮಾಧುರ್ಯ, ಕರುಣೆಯ ನೋಟ ಶಿಬಿರದ ಶಿಕ್ಷಕ-ಶಿಕ್ಷಕಿಯರನ್ನು ಸದಾ ಹರ್ಷದ ಪುಷ್ಪ ಹೆಂದರದಲಿ ನಕ್ಕು ನಗಿಸುತಲಿದ್ದವು. ಶ್ರೀ ಯಲಿಯವರ ಶಿಸ್ತು, ಕಾರ್ಯದಕ್ಷತೆ, ಇವು ಹೊಸ ಜೀವನಕ್ಕೆ ಕನ್ನಡಿಯಂತಿದ್ದವು. ಇದಲ್ಲದೆ ಕೂಡಬೇಕು. ನಲಿಯಬೇಕು, ದುಃಖದಲ್ಲಿಯೂ ಸಮಭಾಗಿಗಳಾಗಬೇಕು ಎಂಬ ಹಿರಿಯ ಪಾಠ ಇವರಿಂದ ಪ್ರತಿಯೊಬ್ಬರು ಕಲಿತೆವು. ಕಾರಣವಿಷ್ಟೆ; ಅವರು ದುಃಖದ ಮಡುವಿನಲ್ಲಿದ್ದರೂ ಹಸುನ್ಮುಖಿಗಳಾಗಿ ವಿಶಾಲದೃಷ್ಟಿಯಿಂದ ಸಮತಾಭಾವದಿಂದ ಸಂತೋಷ ಶಿಬಿರದಲಿ ಸಾಗಿದರು. ಶ್ರೀ ವರಗಿರಿಯವರ ಮುತ್ತಿನ ಹಂಥ ಮುದ್ದಾದ ಮಾತುಗಳು ಬಹಳ ಬೆಲೆಯುಳ್ಳವುಗಳು ಇದ್ದು ಪ್ರತಿಯೊಬ್ಬರು ಕಲಿತುಕೊಳ್ಳಲು ಅನುವು ಮಾಡಿಕೊಟ್ಟವು. ಶ್ರೀ ಪಾಟೀಲರವರ ಹಾಸ್ಯಪೂರಿತ ಮಾತುಗಳು ನಗೆಗಡಲಲಿ ಮುಳುಗಿಸುತ್ತಿದ್ದವು. ಇಷ್ಟೇ ಅಲ್ಲದೆ ಮನಸಿನ ದೌರ್ಬಲ್ಯವನ್ನು ದೂರಿಕರಿಸಲು ದಿವ್ಯ ಔಷಧದಂತೆ ಇದ್ದವು. ಇನ್ನು ಪ್ರಚಾರಕರಾದ ಹುಕ್ಕೇರಿ ಬಾಳಪ್ಪನವರ ಮಿತಿ ಇಲ್ಲದ ಮಾತುಗಳು ಮಿತನಾಗಿ ಮುದುಡಿದ ಮನವನ್ನು ಅರಳಿಸುತ್ತಿದ್ದವು ಎಂದು ಹೇಳಿದರೆ ತಪ್ಪಾಗದು, ಅವರ ಇಂಪಾದ ಗಾಯನದ ಕಂಪು ಭಾರವಾದ ಮನಕೆ ಪೆಂಪು ನೀಡುತಲಿತ್ತು.

ಈ ಶಿಬಿರದ ಸವಿರಸದ ಆಟ, ಹಿಗ್ಗಿನ ಹಬ್ಬದೂಟ, ಕರುಣೆಯ ನೋಟ, ಸ್ನೇಹ ಸೌಹಾರ್ದತೆಯ ಸರಸಾಟ ಹೃದಯ ತುಂಬಿ ಸೂಸಿ ಸೂಸಿ ಹರಿಯುವ ಹಾಸ್ಯರಸದ ಚಲ್ಲಾಟ, ಸೃಷ್ಟಿಸೌಂದರ್ಯದ ಸೊಬಗು, ಶಾಂತಭಾವದ ಮಿರುಗು, ಅನುಭವ ಸಂಪತ್ತಿನಿಂದ ಕೂಡಿದ ವಾಕ್ ವೈಖರಿ, ಇವುಗಳ ಚಿತ್ರ ಇಂದಿಗೂ ನನ್ನ ಮನದಲಿ ಬಂದರೆ ಅಂದಿನ ಶಿಬಿರದ ನೆನಹು ಮನನುಗ್ಗಿ ಆನಂದದ-ಯ್ಯಾಲೆಯಲಿ ಆಡುತಲಿವೆ. ಇಂಥ ಶಿಬಿರ-ಸಂಭ್ರಮಗಳು ಬೇಗ ಬೇಗ ಬಂದು ಶಿಕ್ಷಕ-ಶಿಕ್ಷಕಿಯರೆಲ್ಲರಿಗೂ ಶಿಬಿರದ ಸವಿ ಸವಿಯುವ ಸುಪ್ರಸಂಗಗಳು ಒದಗಲಿ ಎಂದು ಹಾರೈಸುವೆ.

— ಇಂತು ವಿನಯ —

ಚಕ್ರಬಡ್ಡಿಯ ಲೆಕ್ಕಗಳು

ಬೀಜಗಣಿತದ ಅಗತ್ಯ

★

ಲೇ: ತಟ್ಟು ಶಾಮಣ್ಣ

ಸಾಲಗಾರನು ಕೆಲವೊಂದು ಮುದ್ದತ್ತಿನಲ್ಲಿ ಸಾಲ ತೀರಿಸುವೆನೆಂದು ವಚನ ಕೊಟ್ಟು ಅದರಂತೆ ತೀರಿಸಿದರೆ ಮುದ್ದತ್ತಿನ ಮೇಲೆ ಸರಳಬಡ್ಡಿಯ ಆಕರಣೆಯಾಗುವದು; ಅಥವಾ ಸಾಲವನ್ನು ತೀರಿಸುವ ವರೆಗೆ ವರ್ಷ ವರ್ಷಕ್ಕೆ ಬಡ್ಡಿಯನ್ನು ಕೊಡುವೆನೆಂದೂ ಕರಾರು ಮಾಡಿಕೊಂಡಿದ್ದರೆ ಮತ್ತು ಅದರಂತೆ ಕೊಟ್ಟರೆ ಆವನು ಕೊಟ್ಟ ಒಟ್ಟು ಬಡ್ಡಿಯ ಲೆಕ್ಕವು ಸರಳಬಡ್ಡಿಯ ಲೆಕ್ಕವೇ ಆಗುವದು. ವರ್ಷ-ವರ್ಷಕ್ಕೆ ಬಡ್ಡಿಯನ್ನು ಕೊಡುತ್ತ ಹೋಗುವೆನೆಂದು ಹೇಳಿ ಕೊಡಲಿಕ್ಕೆ ತಪ್ಪಿದರೆ ಸಾಪುಕಾರನಿಗೆ ಲುಕಸಾನವಾಗುವದು, ಏಕಂದರೆ ಬಂದ ಬಡ್ಡಿಯ ಹಣವನ್ನು ಅವನು ಬೇರೊಬ್ಬನಿಗೆ ಸಾಲವಾಗಿ ಕೊಡಬಹುದಾಗಿತ್ತು. ಆದ್ದರಿಂದ ಇಂಥ ಪ್ರಸಂಗದಲ್ಲಿ ಸಾವುಕಾರನು ಕೊಡಲಿಕ್ಕೆ ತಪ್ಪಿದ ಬಡ್ಡಿಯ ಹಣವನ್ನು ಅದೇ ಸಾಲಗಾರನಿಗೆ ಹೆಚ್ಚಿಗೆ ಸಾಲ ಕೊಟ್ಟಂತೆ ಲೆಕ್ಕಕ್ಕೆ ಹಿಡಿಯುವನು. ಎರಡು ವರ್ಷ ಹೀಗೆಯೇ ಬಡ್ಡೀ ಕೊಡುವದಕ್ಕೆ ತಪ್ಪಿಸಿ ಮೂರನೆಯ ವರ್ಷದ ಕೊನೆಗೆ ಸಾಲ ತೀರಿಸಿದರೆ ಅವನು ಗಂಟುಬಡ್ಡಿ ಕೂಡಿ ಎಷ್ಟು ಕೊಡಬೇಕಾಗುವದು—ಈ ರೀತಿಯಾಗಿ ಮಾಡಿದ ಬಡ್ಡಿಯ ಲೆಕ್ಕಕ್ಕೆ ಚಕ್ರಬಡ್ಡಿ ಎನ್ನುತ್ತಾರೆ.

ಗಣಿತವು ಸುಲಭವಾಗಬೇಕೆಂದು ೧೦೦ ರೂ. ಅಸಲು, ವರ್ಷಕ್ಕೆ ನೂರಕ್ಕೆ ೧೦ ಬಡ್ಡಿಯ ದರ ಎಂದು ತಿಳಿಯೋಣ, ಮೇಲೆ ಹೇಳಿದ ಪ್ರಸಂಗದಲ್ಲಿ ಸಾಲಗಾರನು ೩ನೆಯ ವರ್ಷದ ಅಂತ್ಯಕ್ಕೆ ೧೦೦ರೂ ಬಡ್ಡಿಯನ್ನು ಕೊಡಬೇಕಾಗಿತ್ತು, ಕೊಡದೆ ಹೋದ್ದರಿಂದ ಅದು ಅವನ ಸಾಲಕ್ಕೆ ಏರಿತು. ಎಂದರೆ ೩ನೆಯ ವರ್ಷದ ಕೊನೆಗೆ ಸಾಲಗಾರನು ೧೧೦೦ರೂ. ಗಳ ಮೇಲಿನ ಬಡ್ಡಿಯನ್ನು ಕೊಡಬೇಕಾಗುವದು. ೩ನೆಯ ವರ್ಷವೂ ಬಡ್ಡಿಯನ್ನು ಕೊಡಲಿಕ್ಕೆ ತಪ್ಪಿದರೆ ೩ನೆಯ ವರ್ಷದ ಆರಂಭಕ್ಕೆ ಆವನ ಸಾಲವು (೧೧೦೦+೧೧೦)ರೂ.= ೧೨೧೦ರೂ. ಆಗುವದು. ಹೀಗೆ ೩ವರ್ಷದ ಮೇಲೆ ಸಾಲ ತೀರಿಸಿದರೆ ಗಂಟು ೧೩೧೦ರೂ. ಮತ್ತು ೧೩೧ರೂ ಬಡ್ಡಿ ಹೀಗೆ ೧೪೩೧ರೂ. ಕೊಡಬೇಕಾಗುವದು; ಅಥವಾ ೧೦೦೦ ರೂ. ನೊದಲು ಒಯ್ದ ಗಂಟು, ೧ನೆಯ ವರ್ಷದ ಬಡ್ಡಿ ೧೦೦ರೂ. ೨ನೆಯ ವರ್ಷದ ಬಡ್ಡಿ ೧೧೦ರೂ ೩ನೆಯ ವರ್ಷದ ಬಡ್ಡಿ ೧೨೧ರೂ. ಅಂತೂ (೧೦೦೦+೧೦೦+೧೧೦+೧೨೧)ರೂ.=೧೪೩೧ರೂ. ಒಟ್ಟು ಕೊಟ್ಟು ಸಾಲ ತೀರಿಸಬೇಕಾಗುವದು. ಹೀಗೆ ಪ್ರತಿ ವರ್ಷ ಸಾಲದ ರಕಮೂ, ಬಡ್ಡಿಯ ರಕಮೂ ಬೆಳೆಯುತ್ತ ಹೋಗುವವು. ಪ್ರತಿವರ್ಷ ಬಡ್ಡಿಯ ಲಿಸ್ತನ್ನು ಹೀಗೆ ತ್ರೈರಾಸಿಕದಿಂದ ಬೇರೆಬೇರೆಯಾಗಿ ಮಾಡಬಹುದು.

೧೦೦ರೂ: ೧೦೦೦ರೂ:: ೧೦ರೂ: ೧೦೦ರೂ; ೧೦೦೦ರೂ+೧೦೦ರೂ=೧೧೦೦ರೂ
೧೦೦ರೂ: ೧೧೦೦ರೂ:: ೧೦ರೂ: ೧೧೦ರೂ; (೧೧೦೦+೧೧೦)ರೂ=೧೨೧೦ರೂ
೧೦೦ರೂ: ೧೨೧೦ರೂ:: ೧೦ರೂ: ೧೨೧ರೂ; (೧೨೧೦+೧೨೧)ರೂ=೧೪೩೧ರೂ

ಇನ್ನೊಂದು ಬಗೆಯಾಗಿ ಯೋಚಿಸಿದರೆ ಈ ಕೆಲಸವು ಇನ್ನೂ ಸುಲಭವಾಗಬಹುದು.

೩ನೆಯ ವರ್ಷದ ರಾಸು ಮೂಲ ಅಸಲಿನ ಎಷ್ಟು ಪಟ್ಟು ಆಗಿರುವದು?

೨ನೆಯ ವರ್ಷದ ರಾಸು ೨ನೆಯ ವರ್ಷದ ಅಸಲಿನ ಎಷ್ಟು ಪಟ್ಟು ಆಗಿರುವದು ?

೩ನೆಯ ವರ್ಷದ ರಾಸು ೩ನೆಯ ವರ್ಷದ ಅಸಲಿನ ಎಷ್ಟು ಪಟ್ಟು ಆಗಿರುವದು ?

ಈ ಪ್ರಶ್ನೆಗಳ ಉತ್ತರಗಳನ್ನು ಯೋಚಿಸುವದರಿಂದ ಪ್ರತಿವರ್ಷದ ರಾಸು ಆ ವರ್ಷಾರಂಭದಲ್ಲಿ ಇದ್ದ ಅಸಲಿನ ಅಷ್ಟೇ ಪಟ್ಟು ಎಂದರೆ ($\frac{೧೧}{೧೦}$=) $\frac{೧೧}{೧೦}$ ಪಟ್ಟು ಆಗುವದು ಎಂದು ಕಂಡುಬರುವದು. ಆದ್ದರಿಂದ ೩ವರ್ಷಗಳ ರಾಸನ್ನು ಹೀಗೆ ತೆಗೆಯಬಹುದು.

೧ನೆಯ ವರ್ಷದ ರಾಸು=೧೦೦೦ರೂ×$\frac{೧೧}{೧೦}$=೧೧೦೦ರೂ.

೨ನೆಯ ವರ್ಷದ ರಾಸು=೧೧೦೦ರೂ×$\frac{೧೧}{೧೦}$=೧೨೧೦ರೂ.

೩ನೆಯ ವರ್ಷದ ರಾಸು=೧೨೧೦ರೂ×$\frac{೧೧}{೧೦}$=೧೩೩೧ರೂ.

ಅಥವಾ ಈ ಲೆಕ್ಕವನ್ನು ಹೀಗೆ ಹಚ್ಚಿಕೊಳ್ಳಬಹುದು :

{(೧೦೦೦ರೂ×$\frac{೧೧}{೧೦}$)×$\frac{೧೧}{೧೦}$}×$\frac{೧೧}{೧೦}$=೧೦೦೦ರೂ×$(\frac{೧೧}{೧೦})^{೩}$

=೧೦೦೦ರೂ×$\frac{೧೧೩೧}{೧೦೦೦}$

=<u>೧೩೩೧ರೂ.</u>

$\frac{೧೧}{೧೦}$ ಇದು ೧ ಅಸಲಿನ ೧ ವರ್ಷದ ರಾಸು ಇರುವದು. ಇದನ್ನು <u>ಮೂರು ಸಾರಿ ಇಟ್ಟು ಗುಣಿಸಿದರೆ</u> ('ಮೂರರಿಂದ ಗುಣಿಸಿದರೆ' ಅಲ್ಲ) ೧ ಅಸಲಿನ ೩ ವರ್ಷದ ರಾಸು ಚಕ್ರಬಡ್ಡಿಯಂತೆ ಬರುವದು. ಆದ್ದರಿಂದ ಸಾಮಾನ್ಯವಾಗಿ ಯಾವದಾದರೊಂದು ಅಸಲಿನ ಇಂತಿಷ್ಟು ವರ್ಷಗಳ ಚಕ್ರಬಡ್ಡಿಯಂತೆ ರಾಸನ್ನು ತೆಗೆಯಬೇಕಾಗಿದ್ದರೆ ಕೆಳಗಿನ ಸೂತ್ರರೂಪವಾಗಿ ಬರೆದ ನಿಯವನ್ನು ಲಕ್ಷ್ಯದಲ್ಲಿಡಬೇಕು :

ಅಸಲು×(೧+ಅಸಲಿನ ೧ ವರ್ಷದ ರಾಸು) ವರ್ಷಗಳ ಸಂಖ್ಯೆ

ಅಥವಾ ಅಸಲು×$\left(\frac{೧೦೦+\text{ಪರ}}{೧೦೦}\right)^{\text{ವ}}$=ರಾಸು.

ಉದಾ: ೫೦೦ರೂ. ಗಳಿಗೆ ವರ್ಷಕ್ಕೆ ನೂರಕ್ಕೆ ೫ ವರದಂತೆ ೪ ವರ್ಷಗಳಲ್ಲಿ ಚಕ್ರಬಡ್ಡಿಯಂತೆ ರಾಸು ಎಷ್ಟು ಆಗುವದು ?

ರಾಸು=೫೦೦ರೂ×$\left(\frac{೧೦೦+೫}{೧೦೦}\right)^{೪}$

=೫೦೦ರೂ×$(೧'೦೫)^{೪}$

ಪಾಟಿಯ ಮೇಲೆ ಈ ಲೆಕ್ಕವನ್ನು ಹೀಗೆ ಮಾಡಬೇಕು.

ರೂಪಾಯಿ	
೫೦೦	ಅಸಲು
೫	
೨೫೦೦	
೨೫.೦೦	೫ರಿಂದ ಗುಣಿಸಿ ೧೦೦ರಿಂದ ಭಾಗಿಸಲು
೫೦೦.೦೦	
೫೨೫	ಅಸಲನ್ನು ಕೂಡಿಸಲು
೫	
೨೬೨೫	

ಚಕ್ರಬಡ್ಡಿಯ ಲೆಕ್ಕಗಳು

೨೬.೨೫	ಮೊದಲಿನಂತೆ ೫ರಿಂದ ಗುಣಿಸಿ ೧೦೦ರಿಂದ ಭಾಗಿಸಲು
೫೨೫.೦೦	
೫೫೧.೨೫	ಹೊಸ ಅಸಲನ್ನು ಕೂಡಿಸಿತು
೫	
೨೭೫೬.೨೫	
೨೭.೫೬೨೫	.೦೫ರಿಂದ ಗುಣಿಸಲಾಗಿ ಅಥವಾ ೫ರಿಂದ ಗುಣಿಸಿ ಬಂದ ಗುಣಾಕಾರವಲ್ಲಿ
೫೫೧.೨೫	ದಶಾಂಶ ಚಿಹ್ನವನ್ನು ೨ಸ್ಥಳ ಹಿಂದೆ ಸರಿಸಿ
೫೭೮.೪೧೨೫	
೫	
೨೮.೯೪೦೬೨೫	.೦೫ರಿಂದ ಗುಣಿಸಿತು
೫೭೮.೪೧೨೫೦೦	
೬೦೭.೭೫೩೧೨೫	ಹೊಸ ಅಸಲನ್ನು ಕೂಡಿಸಿ ಬಂದ ೩ ವರ್ಷದ ರಾಸು.

೧ದಶಸಹಸ್ರಾಂಶ ರೂಪಾಯಿಯು ೪ಯ ಬಹಳ ಸಣ್ಣ ಭಾಗವಾಗುವದರಿಂದ ಅದನ್ನು ಬಿಟ್ಟು ಡಬಹುದು, ಅರ್ಥಾತ್ ಮುಂದಿನ ಅಂಕೆಗಳನ್ನು ಬಿಟ್ಟುಬಿಡಬಹುದು. ಉತ್ತರ ೬೦೭·೭೫ ರೂಪಾಯಿ.

(·೭೫×೧೬)ಆಣೆ = ೧೨·೦೦ಆಣೆ; (·೦೦×೧೨)ಪೈ = ೦೦ಪೈ; ·೦೦ಪೈ ಅರ್ಧ ಪೈಗಿಂತ ಹೆಚ್ಚು ಗುವದರಿಂದ ೧ಪೈ ಉತ್ತರದಲ್ಲಿ ಹಿಡಿಯಬಹುದು.

∴ ೫೦೦ ರೂ. ಗಳಿಗೆ ೪ವರ್ಷದಲ್ಲಿ ಚಕ್ರಬಡ್ಡಿಯಂತೆ ರಾಸು

= ೬೦೭ರೂ. ೧೨ಆ. ೧ಪೈ.

ಬಡ್ಡಿ ಬೇಕಾಗಿದ್ದ ರಾಸಿನಲ್ಲಿ ೫೦೦ರೂ. ಯನ್ನು ಳೆದರೆ ೧೦೭ರೂ. ೧೨ಆ. ೧ಪೈ. ಬರುವದು. ಬಡ್ಡಿಯ ಕ್ಕಗಳಲ್ಲಿ ಅಸಲು; ಬಡ್ಡಿ ಅಥವಾ ರಾಸು; ಬಡ್ಡಿಯ ರ; ಮುದ್ದತು ಹೀಗೆ ನಾಲ್ಕು ಸಂಗತಿಗಳು ಸೇರಿದ್ದು ುವಾದರೂ ಮೂರು ಸಂಗತಿಗಳನ್ನು ಕೊಟ್ಟಾಗ ಾಲ್ಕನೆಯ ಸಂಗತಿಯನ್ನು ತೆಗೆಯಲಿಕ್ಕೆ ಬರಬೇಕು. ದರೆ ಚಕ್ರಬಡ್ಡಿಯಲೆಕ್ಕಗಳಲ್ಲಿ ಅಂಕೆಸಂಖ್ಯೆಗಳಿಂದ ಟಿಲವಾದ ಸುದೀರ್ಘವಾದ ಗಣಿತವನ್ನು ಮಾಡಬೇಕಾ ುವದು. ಇದಕ್ಕಾಗಿ ಬ್ಯಾಂಕು ಮೊದಲಾದ ವ್ಯವ ಹರವ ಸ್ಥಾನಗಳಲ್ಲಿ ತಯಾರಿಸಿದ ಕೋಷ್ಟಕಗಳನ್ನು ಉಪಯೋಗಿಸುವರು.

ಯಾವದೊಂದು ಅಸಲಿನ ಇಂತಿಷ್ಟು ವರ್ಷಗಳ ಾಸನ್ನು ಕೊಟ್ಟು ಅಸಲನ್ನು ತೆಗೆಯ ಹೇಳಿದರೆ ಕೊಟ್ಟ ಅಸಲಿನ ರಾಸಿಗೆ ೧ ಅಸಲಿನ ಹೇಳಿದಷ್ಟು ವರ್ಷಗಳ ಹೇಳಿದ ಬಡ್ಡಿಯದರದಿಂದ ಆಗುವ ರಾಸಿನಿಂದ ಾಗಿಸಬೇಕಾಗುವದು. ಮುದ್ದತು ತೆಗೆಯುವದಿದ್ದರೆ ಕೊಟ್ಟ ಅಸಲಿನ ರಾಸಿನ ಮೇಲಿಂದ ಅಷ್ಟೇ ವರ್ಷಗಳ ೧ ಅಸಲಿನ ರಾಸನ್ನು ತೆಗೆದು ಅದಕ್ಕೆ ೧ ಅಸಲಿನ ೧ ವರ್ಷದ ರಾಸಿನಿಂದ ಭಾಗಿಸುತ್ತ ಹೋಗಬೇಕಾಗು ವದು. ಬಡ್ಡಿಯದರವನ್ನು ತೆಗೆಯಬೇಕಾಗಿದ್ದರೆ ಮುದ್ದತು ೨ ವರ್ಷದಿದ್ದರೆ ೧ ಅಸಲಿನ ೨ ವರ್ಷದ ರಾಸಿನ ವರ್ಗಮೂಲವನ್ನು ತೆಗೆಯಬೇಕು; ೩ ವರ್ಷ ಗಳಿದ್ದರೆ ಘನಮೂಲ ತೆಗೆಯಬೇಕಾಗುವದು, ೫ ವರ್ಷ, ೬ ವರ್ಷ ಹೀಗಿದ್ದರಂತೂ ಕೇವಲ ಅಂಕಗಣಿತ ಅಭ್ಯಾಸಮಾಡಿದ ವಿದ್ಯಾರ್ಥಿಯು ನನಗೆ ಇದು ಸಾಧ್ಯ ವಿಲ್ಲವೆಂದು ಒಪ್ಪಿಕೊಳ್ಳಬೇಕಾಗುವದು.

ಆದರೆ ಬೀಜಗಣಿತವನ್ನು ಕಲಿಯುವ ಮಾಧ್ಯಮಿಕ ಶಾಲೆಯ ೧೦ನೆಯ ಇಯತ್ತೆಯ ವಿದ್ಯಾರ್ಥಿಗಳು 'ಲಾಗ್ರತರು' ಅಥವಾ 'ಅಂತಸ್ತಿನ ಅಂಕೆಗಳು' ಎಂಬ ಕೋಷ್ಟಕಗಳ ಸಹಾಯದಿಂದ ಮೇಲಿನಂತಹ ಪ್ರಶ್ನೆ ಗಳನ್ನು ಅನಾಯಾಸವಾಗಿ ಬಿಡಿಸ ಬಲ್ಲರು.

೨ನೆಯ ವರ್ಷದ ರಾಸು ೨ನೆಯ ವರ್ಷದ ಆಸಲಿನ ಎಷ್ಟು ಪಟ್ಟು ಆಗಿರುವದು ?

೩ನೆಯ ವರ್ಷದ ರಾಸು ೩ನೆಯ ವರ್ಷದ ಆಸಲಿನ ಎಷ್ಟು ಪಟ್ಟು ಆಗಿರುವದು ?

ಈ ಪ್ರಶ್ನೆಗಳ ಉತ್ತರಗಳನ್ನು ಯೋಚಿಸುವದರಿಂದ ಪ್ರತಿವರ್ಷದ ರಾಸು ಆ ವರ್ಷಾರಂಭದಲ್ಲಿ ಇದ್ದ ಆಸಲಿನ ಅಷ್ಟೇ ಪಟ್ಟು ಎಂದರೆ (೧೧೦%=) ೧೧೦ ಪಟ್ಟು ಆಗುವದು ಎಂದು ಕಂಡುಬರುವದು. ಆದರಿಂದ ೩ವರ್ಷಗಳ ರಾಸನ್ನು ಹೀಗೆ ತೆಗೆಯಬಹುದು.

೧ನೆಯ ವರ್ಷದ ರಾಸು=೧೦೦೦ರೂ×೧೧೦=೧೧೦೦ರೂ.

೨ನೆಯ ವರ್ಷದ ರಾಸು=೧೧೦೦ರೂ×೧೧೦=೧೨೧೦ರೂ.

೩ನೆಯ ವರ್ಷದ ರಾಸು=೧೨೧೦ರೂ×೧೧೦=೧೩೩೧ರೂ.

ಅಥವಾ ಈ ಲೆಕ್ಕವನ್ನು ಹೀಗೆ ಹಚ್ಚಿಕೊಳ್ಳಬಹುದು :

{(೧೦೦೦ರೂ×೧೧೦)×೧೧೦}×೧೧೦=೧೦೦೦ರೂ×$(೧೧೦)^೩$

=೧೦೦೦ರೂ×೧೩೩೧/೧೦೦೦

=೧೩೩೧ರೂ.

೧೧೦ ಇದು ೧ ಆಸಲಿನ ೧ ವರ್ಷದ ರಾಸು ಇರುವದು. ಇದನ್ನು ಮೂರು ಸಾರಿ ಇಟ್ಟು ಗುಣಿಸಿದರೆ ('ಮೂರರಿಂದ ಗುಣಿಸಿದರೆ' ಅಲ್ಲ) ೧ ಆಸಲಿನ ೩ ವರ್ಷದ ರಾಸು ಚಕ್ರಬಡ್ಡಿಯಂತೆ ಬರುವದು. ಆದ್ದರಿಂದ ಸಾಮಾನ್ಯವಾಗಿ ಯಾವದಾದರೊಂದು ಆಸಲಿನ ಇಂತಿಷ್ಟು ವರ್ಷಗಳ ಚಕ್ರಬಡ್ಡಿಯಂತೆ ರಾಸನ್ನು ತೆಗೆಯಬೇಕಾಗಿದ್ದರೆ ಕೆಳಗಿನ ಸೂತ್ರರೂಪವಾಗಿ ಬರೆದ ನಿಯಮವನ್ನು ಲಕ್ಷ್ಯದಲ್ಲಿಡಬೇಕು :

ಆಸಲು×(೧ಆಸಲಿನ ೧ ವರ್ಷದ ರಾಸು) ವರ್ಷಗಳ ಸಂಖ್ಯೆ

ಅಥವಾ ಆಸಲು×$\left(\frac{೧೦೦+\text{ದರ}}{೧೦೦}\right)^{\text{ವ}}$=ರಾಸು.

ಉದಾ: ೫೦೦ರೂ. ಗಳಿಗೆ ವರ್ಷಕ್ಕೆ ನೂರಕ್ಕೆ ೫ ದರದಂತೆ ೪ ವರ್ಷಗಳಲ್ಲಿ ಚಕ್ರಬಡ್ಡಿಯಂತೆ ರಾಸು ಎಷ್ಟು ಆಗುವದು ?

ರಾಸು=೫೦೦ರೂ×$\left(\frac{೧೦೦+೫}{೧೦೦}\right)^{೪}$

=೫೦೦ರೂ×$(೧\cdot೦೫)^{೪}$

ಪಾಟಿಯ ಮೇಲೆ ಈ ಲೆಕ್ಕವನ್ನು ಹೀಗೆ ಮಾಡಬೇಕು.

ರೂಪಾಯಿ	
೫೦೦	ಆಸಲು
೫	
೨೫೦೦	
೨೫.೦೦	೫ರಿಂದ ಗುಣಿಸಿ ೧೦೦ರಿಂದ ಭಾಗಿಸಲು
೫೦೦.೦೦	
೫೨೫	ಆಸಲನ್ನು ಕೂಡಿಸಲು
೫	
೨೬೨೫	

ಚಕ್ರಬಡ್ಡಿಯ ಲೆಕ್ಕಗಳು

೨೬.೨೫	ಮೊದಲಿನಂತೆ ೫ರಿಂದ ಗುಣಿಸಿ ೧೦೦ರಿಂದ ಭಾಗಿಸಲು
೫೨೫.೦೦	
೫೫೧.೨೫	ಹೊಸ ಅಸಲನ್ನು ಕೂಡಿಸಿತು
೫	
೨೭೫೬.೨೫	
೨೭.೫೬೨೫	.೦೫ರಿಂದ ಗುಣಿಸಲಾಗಿ ಅಥವಾ ೫ರಿಂದ ಗುಣಿಸಿ ಬಂದ ಗುಣಾಕಾರವಲ್ಲಿ ದಶಾಂಶ ಚಿಹ್ನೆಯನ್ನು ೨ಸ್ಥಳ ಹಿಂದೆ ತರಿಸಿ
೫೫೮.೨೫	
೫೭೮.೪೧೨೫	
೫	
೨೮.೯೪೦೬೨೫	.೦೫ರಿಂದ ಗುಣಿಸಿತು
೫೭೮.೪೧೨೫೦೦	
೬೦೭.೭೫೫೧೨೫	ಹೊಸ ಅಸಲನ್ನು ಕೂಡಿಸಿ ಬಂದ ೩ ವರ್ಷದ ರಾಸು.

೧ದಶಸಹಸ್ರಾಂಶ ರೂಪಾಯಿಯು ೪ಯ ಬಹಳ ಸಣ್ಣ ಭಾಗವಾಗುವದರಿಂದ ಅದನ್ನು ಬಿಟ್ಟು ಬಿಡಬಹುದು, ಅರ್ಥಾತ್ ಮುಂದಿನ ಅಂಕೆಗಳನ್ನು ಬಿಟ್ಟುಬಿಡಬಹುದು. ಉತ್ತರ ೬೦೭.೭೫೫ ರೂಪಾಯಿ.

(೨೫೫×೧೭)ಆಣೆ=೧೨೦೪ಆಣೆ; (೨೦೪×೧೨)ಪೈ=೨೪೬ಪೈ; ೨೪೬ಪೈ ಅರ್ಧ ೪ಗಿಂತ ಹೆಚ್ಚು ಆಗುವದರಿಂದ ೧ಪೈ ಉತ್ತರದಲ್ಲಿ ಹಿಡಿಯಬಹುದು.

∴ ೫೦೦ ರೂ. ಗಳಿಗೆ ೪ವರ್ಷದಲ್ಲಿ ಚಕ್ರಬಡ್ಡಿಯಂತೆ ರಾಸು

=೬೦೭ರೂ. ೧೨ಆ. ೧ಪೈ.

ಬಡ್ಡಿ ಬೇಕಾಗಿದ್ದ ರಾಸಿನಲ್ಲಿ ೫೦೦ರೂ. ಯನ್ನು ಕಳೆದರೆ ೧೦೭ರೂ. ೧೨ಆ. ೧ಪೈ. ಬರುವದು. ಬಡ್ಡಿಯ ಲೆಕ್ಕಗಳಲ್ಲಿ ಅಸಲು; ಬಡ್ಡಿ ಅಥವಾ ರಾಸು; ಬಡ್ಡಿಯ ದರ; ಮುದ್ದತು ಹೀಗೆ ನಾಲ್ಕು ಸಂಗತಿಗಳು ಸೇರಿದ್ದು ಯಾವಾದರೂ ಮೂರು ಸಂಗತಿಗಳನ್ನು ಕೊಟ್ಟಾಗ ನಾಲ್ಕನೆಯ ಸಂಗತಿಯನ್ನು ತೆಗೆಯಲಿಕ್ಕೆ ಬರಬೇಕು. ಆವರೆ ಚಕ್ರಬಡ್ಡಿಯಲೆಕ್ಕಗಳಲ್ಲಿ ಅಂಕೆಸಂಖ್ಯೆಗಳಿಂದ ಜಟಿಲವಾದ ಸುದೀರ್ಘವಾದ ಗಣಿತವನ್ನು ಮಾಡಬೇಕಾಗುವದು. ಇದಕ್ಕಾಗಿ ಬ್ಯಾಂಕು ಮೊದಲಾದ ವ್ಯವಹಾರದ ಸ್ಥಾನಗಳಲ್ಲಿ ತಯಾರಿಸಿದ ಕೋಷ್ಟಕಗಳನ್ನು ಉಪಯೋಗಿಸುವರು.

ಯಾವದೊಂದು ಅಸಲಿನ ಇಂತಿಷ್ಟು ವರ್ಷಗಳ ರಾಸನ್ನು ಕೊಟ್ಟು ಅಸಲನ್ನು ತೆಗೆಯ ಹೇಳಿದರೆ ಕೊಟ್ಟ ಅಸಲಿನ ರಾಸಿಗೆ ೧ ಅಸಲಿನ ಹೇಳಿದಷ್ಟು ವರ್ಷಗಳ ಹೇಳಿದ ಬಡ್ಡಿಯದರದಿಂದ ಆಗುವ ರಾಸಿನಿಂದ ಭಾಗಿಸಬೇಕಾಗುವದು. ಮುದ್ದತು ತೆಗೆಯುವದಿದ್ದರೆ ಕೊಟ್ಟ ಅಸಲಿನ ರಾಸಿನ ಮೇಲಿಂದ ಅಷ್ಟೇ ವರ್ಷಗಳ ೧ ಅಸಲಿನ ರಾಸನ್ನು ತೆಗೆದು ಅದಕ್ಕೆ ೧ ಅಸಲಿನ ೧ ವರ್ಷದ ರಾಸಿನಿಂದ ಭಾಗಿಸುತ್ತ ಹೋಗಬೇಕಾಗುವದು. ಬಡ್ಡಿಯದರವನ್ನು ತೆಗೆಯಬೇಕಾಗಿದ್ದ ಕೆ ಮುದ್ದತು ೨ ವರ್ಷದಿದ್ದರೆ ೧ ಅಸಲಿನ ೨ ವರ್ಷದ ರಾಸಿನ ವರ್ಗಮೂಲವನ್ನು ತೆಗೆಯಬೇಕು; ೩ ವರ್ಷಗಳಿದ್ದರೆ ಘನಮೂಲ ತೆಗೆಯಬೇಕಾಗುವದು, ೫ ವರ್ಷ, ೬ ವರ್ಷ ಹೀಗಿದ್ದರಂತೂ ಕೇವಲ ಅಂಕಗಣಿತ ಅಭ್ಯಾಸಮಾಡಿದ ವಿದ್ಯಾರ್ಥಿಯು ನನಗೆ ಇದು ಸಾಧ್ಯವಿಲ್ಲವೆಂದು ಒಪ್ಪಿಕೊಳ್ಳಬೇಕಾಗುವದು.

ಆದರೆ ಬೀಜಗಣಿತವನ್ನು ಕಲಿಯುವ ಮಾಧ್ಯಮಿಕ ಶಾಲೆಯ ೧೦ನೆಯ ಇಯತ್ತೆಯ ವಿದ್ಯಾರ್ಥಿಗಳು 'ಲಾಗ್ರತರು' ಅಥವಾ 'ಅಂತಸ್ತಿನ ಅಂಕೆಗಳು' ಎಂಬ ಕೋಷ್ಟಕಗಳ ಸಹಾಯದಿಂದ ಮೇಲಿನಂತಹ ಪ್ರಶ್ನೆಗಳನ್ನು ಅನಾಯಾಸವಾಗಿ ಬಿಡಿಸಬಲ್ಲರು.

ಮಹತ್ವರೂಪನದ ಲೆಕ್ಕಗಳಲ್ಲಿಯೂ ಚಕ್ರಬಡ್ಡಿಯ ಲೆಕ್ಕಗಳಲ್ಲಿಯೂ ಸಂಖ್ಯೆಗಳ ವರ್ಗ, ಘನ ಮುಂ ಹವುಗಳನ್ನು ಆಗಾಗ್ಗೆ ತೆಗೆಯಬೇಕಾಗುವದು. ಈ ರೀತಿಗಳೆಲ್ಲವೂ ಬೀಜಗಣಿತದ ಸಾಮಾನ್ಯಸಾರಣಿಗಳಿ ಹೊರಟಿರುತ್ತವೆ.

ಉದಾಃ $(೧೦+೧)^೨ = ೧೦^೨+(೨\times೧೦\times೧)+೧^೨$

$(೧೦+೧)^೩ = ೧೦^೩+(೩\times೧೦^೨\times೧)+(೩\times೧೦\times೧^೨)+೧^೩$

$(೧೦+೪)^೪ = ೧೦^೪+(೪\times೧೦^೩\times೧)+(೬\times೧೦^೨\times೧^೨)+(೪\times೧೦\times೧^೩)+೧^೪$

ಎಂದರೆ $೧೧^೨ = ೧\ ೨\ ೧$

$೧೧^೩ = ೧\ ೩\ ೩\ ೧$

$೧೧^೪ = ೧\ ೪\ ೬\ ೪\ ೧$

ಬೀಜಗಣಿತದ ಕೆಳಗಿನ ಸಾರಣಿಗಳನ್ನು ನೋಡಿರಿ:

$(ಅ+ಬ)^೨ = ೧\ ಅ^೨+೨\ ಅಬ+೧\ ಬ^೨$

$(ಅ+ಬ)^೩ = ೧\ ಅ^೩+೩\ ಅ^೨\ ಬ+೩\ ಅ\ ಬ^೨+೧ಬ^೩$

$(ಅ+ಬ)^೪ = ೧\ ಅ^೪+೪\ ಅ^೩\ ಬ+೬\ ಅ^೨\ ಬ^೨+೪\ ಅಬ^೩+೧ಬ^೪$

೧೨ರ ಅಂತಸ್ತುಗಳಲ್ಲಿ ಕಂಡುಬರುವ ವಿಚಿತ್ರವಾದ ನಿಯಮಬದ್ಧತೆಯನ್ನು ನೋಡಿರಿ.

೧೨ ರ ೧ನೆಯ ಅಂತಸ್ತು ೧ ೧

,, ೨ ,, ,, ೧ ೨ ೧

,, ೩ ,, ,, ೧ ೩ ೩ ೧

,, ೪ ,, ,, ೧ ೪ ೬ ೪ ೧

ಮೇಲಿನ ಸಾಲಿನ ಎರಡು ಅಂಕಿಗಳ ನಡುವೆ ಕೆಳಕ್ಕೆ ಇರುವ ಅಂಕಿಯು ಅವುಗಳ ಬೇರೀಜವಾಗಿರುತ್ತ

ಈಗ ಶಿಕ್ಷಕರ ಶಿಕ್ಷಣಾಲಯದಲ್ಲಿ ಪುನಃ ಬೀಜಗಣಿತಕ್ಕೆ ಒಂದು ಸ್ಥಾನವನ್ನು ಕೊಟ್ಟಿದ್ದು ಯೋಗ್ಯವಾಗಿ ಬೀಜಗಣಿತದ ತೀರ ಬಾಲಪಾಠಗಳ ಜ್ಞಾನವು ಸಹ ಅಂಕಗಣಿತದ ಎಷ್ಟೋ ಕೃತಿಗಳ ಮೇಲೆ ಬೆಳಕನ್ ಚೆಲ್ಲಬಲ್ಲದು.

ತ್ರೈರಾಶಿಕ ಪಂಚರಾಶಿಕ ಮಿತಿಮೀರಿದ ಬಳಕೆಯು ತೀರ 'ಮಾಜೀ, ಕಾಲದ ಅವಶೇಷವಾಗಿದೆ ಎಂಬುದ ಶಿಕ್ಷಕರು ಗಮನಕ್ಕೆ ತಂದುಕೊಳ್ಳಬೇಕು. ಸರಳಬಡ್ಡಿಯ ಲೆಕ್ಕಗಳನ್ನು ಮಾಡಲಿಕ್ಕೆ ಪಂಚರಾಶಿಕವನ್ನು ಉ ಯೋಗಿಸದೆ ಕೆಳಗಿನ ಸುಲಭವಾದ ಸಾರಣಿಯನ್ನು ಉಪಯೋಗಿಸಬೇಕು.

$$\text{ಬಡ್ಡಿ} = \frac{\text{ಗಂಟು}\times\text{ಮುದ್ದತು}\times\text{ದರ}}{೧೦೦}$$

ಸಂಕ್ಷೇಪದಿಂದ, $ಬ = \frac{ಮು\times ಗ\times ದ}{೧೦೦}$

ಒಂದು ಉದಾಹರಣೆಯನ್ನು ಬಿಡಿಸೋಣ, ಉದಾಃ ನೂರಕ್ಕೆ ವರ್ಷಕ್ಕೆ ೫ ಬಡ್ಡಿಯ ದರದಂತೆ ೨೦೦ ರೂ ಗಳಿಗೆ ೩೦ ರೂ. ಬಡ್ಡಿಯು ಎಷ್ಟು ವರ್ಷಗಳಲ್ಲಾಗುವದು ?

$$ಬ = \frac{ಮು\ ಗ\ ದ}{೧೦೦};\quad \text{ಇಲ್ಲಿ } ಬ = ೩೦;\ ಗ = ೨೦೦;\ ದ = ೫$$

$$\text{ಅದ್ದರಿಂದ } ೩೦ = \frac{\text{ಮುದ್ದತು}\times೨೦೦\times೫}{೧೦೦}$$

ಚಕ್ರಬಡ್ಡಿಯ ಲೆಕ್ಕಗಳು

ಎಂದರೆ ಸಿ = ಮುದ್ದತ್ತು×೨×ಚ

ಎಂದರೆ ೫೦ = ಮುದ್ದತ್ತು×೧೦

∴ಆದ್ದರಿಂದ ಮುದ್ದತ್ತು = ೫ ವರ್ಷ.

ಒಂದು ಚಕ್ರಬಡ್ಡಿಯ ಉದಾಹರಣೆಯನ್ನು ಬಿಡಿಸೋಣ- ಉದಾ: ೧೦೦೦ ಪೌಂಡುಗಳಿಗೆ ಯಾವ ಬಡ್ಡಿಯದರದಿಂದ ೨ ವರ್ಷಗಳಲ್ಲಿ ಚಕ್ರಬಡ್ಡಿಯಂತೆ ೧೨೬೦ ಪೌಂಡು ೧೪ ಶಿಲಿಂಗು ರಾಸಾಗುವದು ?

೧೦೬೦ ಪೌ. ೧೪ ಶಿ = ೧೦೬೦·೭ ಪೌಂಡು

ಚಕ್ರಬಡ್ಡಿಯನ್ನು ತೆಗೆಯುವ ಸೂತ್ರ: ರಾಸು = $೧೦೦೦ \times \left(\frac{೧೦೦+\text{ದರ}}{೧೦೦}\right)^{೨}$

ಎಂದರೆ ೧೦೬೦·೭ = ೧೦೦೦ × (೧ ಅಸಲಿನ ೧ ವರ್ಷದ ರಾಸು)^{೨}

ಆದ್ದರಿಂದ $\frac{೧೦೬೦·೭}{೧೦೦೦}$ = (೧ ಅಸಲಿನ ೧ ವರ್ಷದ ರಾಸು)^{೨}

ಎಂದರೆ ೧·೦೬೦೭ = (೧ ರ ರಾಸು)^{೨}

ವರ್ಗಮೂಲವನ್ನು ತೆಗೆಯಲು, ೧·೦೩ = ೧ ಅಸಲಿನ ೧ ವರ್ಷದ ರಾಸು

ಆದ್ದರಿಂದ ೧೦೩ = ೧೦೦ ಅಸಲಿನ ೧ ವರ್ಷದ ರಾಸು

ಆದ್ದರಿಂದ ಬಡ್ಡಿಯ ದರ = ೩

ಲೋಕ ಶಾಲಾ ಪರೀಕ್ಷೆ ೧೯೫೨

ಪ್ರಾಥಮಿಕ ಶಿಕ್ಷಕರೂ ಕೂಡಬಹುದಾದ ಲೋಕ ಶಾಲಾ ಪರೀಕ್ಷೆಯು ಇಮೇ ಎಪ್ರಿಲ್ ತಿಂಗಳಲ್ಲಿ ಜರುಗಲಿದೆ. ಪರೀಕ್ಷೆಯ ಪ್ರವೇಶಕ್ಕಾಗಿ ಕಳಿಸಬೇಕಾದ ಅರ್ಜಿಯನ್ನು ನಿರ್ದಿಷ್ಟಪಡಿಸಿದ ಪತ್ರಿಕೆಯಲ್ಲಿ ತುಂಬಿ, ೧-೩-೧೯೫೨ನೆಯ ದಿನವಾಗಲಿ, ಅಥವಾ ಅವಕ್ಕೂ ಮುಂಚಿತವಾಗಲಿ, ಈ ಪರೀಕ್ಷೆಯ ಮೇಲ್ವಿಚಾರಕರಾದ, ವಿಜಾಪೂರದ ಒಕ್ಕಲತನ ಹೈಸ್ಕೂಲಿನ ಪ್ರಧ್ಯಾಧ್ಯಾಪಕರಿಗೆ ಕಳಿಸಬೇಕು. ಅರ್ಜಿಯನ್ನು ಮಾಡಲು ಬೇಕಾಗುವ ಫಾರ್ಮುಗಳ ಬೆಲೆ ಒಂದಾಣೆ (೧ ಆಣೆ) ಇದ್ದು ಅದನ್ನು,

ಸೆಕ್ರೆಟರಿ, ಲೋಕ ಶಾಲಾ ಕಮಿಟಿ,
ಇನ್ಸಪೆಕ್ಟ್ರಸ್ ಫಾರ ಗರ್ಲ್ಸ ಸ್ಕೂಲ್ಸ,
ಪುಣೆ ವಿಭಾಗ, ಪುಣೆ.

ಇವರಿಂದ ಪಡೆಯಬಹುದು. ಮುಂದುವರಿದ ವರ್ಗದ ಉಮೇದವಾರರಿಗೆ ಪರೀಕ್ಷಾವಂತಿಕೆಯು ೧೦ ರೂಪಾಯಿಗಳು ಇದ್ದು ಹಿಂದುಳಿದ ವರ್ಗದ ಉಮೇದವಾರರಿಗೆ ೮ರೂಪಾಯಿಗಳು ಇರುತ್ತದೆ. ಈ ಪರೀಕ್ಷೆಗೆ ಕೂಡ್ರಲು ಇಚ್ಛಿಸುವ ಪ್ರಾಥಮಿಕ ಶಿಕ್ಷಕರು ತಮ್ಮ ಅರ್ಜಿಗಳನ್ನು ಆಯಾ ಏ. ಓ ಸಾಹೇಬರ ಮುಖಾಂತರವಾಗಲಿ, ಅಥವಾ ಇನಸ್ಪೆಕ್ಟರ ಸಾಹೇಬರ ಮುಖಾಂತರವಾಗಲಿ ಕಳಿಸಬೇಕು.

ಹೊರಟಿದೆ ! ಹೊರಟಿದೆ !!

ಹಿಂದೀ ಶಿಕ್ಷಣ ಮಾಲೆ-೧

हिन्दी शिक्षण माला - १

ಬರೆದವರು : ಶ್ರೀ. ಗುರುನಾಥ ಜೋಶಿ

ಎಲ್ಲ ಕಾಲಗಳ ಮತ್ತು ನಾಮಗಳ ಹಾಗು ಸರ್ವನಾಮ ರೂಪಾವಲಿಗಳ
ಜ್ಞಾನ ಮಾಡಿಕೊಡುವ ಕನ್ನಡಿ ! ಕಾಮಧೇನು !

" ಪ್ರಾಥಮಿಕ "ದಿಂದ " ವಿಶಾರದ " ಪರೀಕ್ಷೆಯ ವರೆಗೆ ಅತ್ಯುಪಯುಕ್ತ !!
ಅಹರ್ನಿಶ ದುಡಿಯುವ ಸರಕಾರೀ ನೌಕರರಿಗೂ ಮನೆಯಲ್ಲಿ ಹಿಂದೀ ಕಲಿಯಲು
ಅತ್ಯಂತ ಸಹಾಯಕ !!

ಇಂದೇ ಕೊಳ್ಳಿರಿ ! ಇಂದೇ ಕೊಳ್ಳಿರಿ !!

ಬೆಲೆ: ೦—೧೪—೦

ಪ್ರಕಾಶಕರು : **ಹಿಂದವಾಣಿ ಮುದ್ರಣಾಲಯ, ಧಾರವಾಡ**

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ ಇವರಿಂದ ಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)
ದ್ವಿತೀಯ ಮುದ್ರಣ.
ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.
೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.
ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.
ಪ್ರೊ. **ಶಿ. ಶಿ. ಬಸವನಾಳ** ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ **ಅಭಿನಂದನೆಯೊಡನೆ ಮಿನುಗುವ ಗ್ರಂಥ.**
ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.
ಕ್ರೌನ್ ೮. ಪ. ಪುಟ. ೧೮೪+೨೦೦
ಬೆಲೆ, ಉತ್ತಮ ಪ್ರತಿ. ರೂ ೩—೦—೦
ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)
ಗ್ರಂಥಗಳು ಸಿಗುವ ವಿಳಾಸಃ—
ಎಸ್. ವಿ. ಹಂಜಿ.
ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟೆ.**

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ ಹೊಸ ಪುಸ್ತಕ ಪ್ರಕಟವಾಗಿದೆ!

ತ್ವರೆ ಮಾಡಿರಿ !!]

ಲೇಖಕ : ನೆ. ರಂಗನಾಥ

[ತ್ವರೆ ಮಾಡಿರಿ !!!

ಪ್ರಶ್ನೋತ್ತರ ಪೌರನೀತಿ

ಬೆಲೆ: ೧ ರೂ. ೮ ಆ.

ಪ್ರಶ್ನೋತ್ತರ ಪದ್ಧತಿಯಲ್ಲಿ ಬರೆದ ಪುಸ್ತಕ ಪ್ರಕಟವಾದುದು ಇದೇ ಹೊಸದು. ಪೌರನೀತಿ ಶಾಸ್ತ್ರದ ಸಮಗ್ರ ಸ್ವರೂಪವನ್ನು ಇದರಲ್ಲಿ ಅಳವಡಿಸಿಕೊಡಲಾಗಿದೆ. ಕಾರಣ ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳು ಈ ಪುಸ್ತಕವನ್ನು ಅವಶ್ಯವಾಗಿ ಸಂಗ್ರಹಿಸಬೇಕು.

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗಂತೂ ಕೈದೀವಿಗೆ!

ವ್ಯಾಪಾರಿಗಳಿಗೆ ಧಾರಳ ಕಮೀಶನ್ !!

ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಎರಡು ಅಮೂಲ್ಯ ಕಾಣಿಕೆಗಳು

ಶೇಮಾನ್ "ಗಲಗಲಿ"ಯವರಿಂದ ಬರೆಯಲ್ಪಟ್ಟ ನೂತನ . . . . .

. . . . ಕಿಸೆಯ ಕೈಪಿಡಿ ಮಾಲೆಯ ಎರಡು ಹೊಸ ಪುಸ್ತಕಗಳು.

ಇದೀಗ ಹೊರಟಿವೆ! ನಿಯಮಿತ ಪ್ರತಿಗಳು !! ತ್ವರೆ ಮಾಡಿರಿ ! !!

ಪರೀಕ್ಷೆಯ ಗುಟ್ಟು

(ಬೇಲೆ ೬ ಆಣೆ)

ಗಣಿತರಹಸ್ಯ

(ಬೆಲೆ ೬ ಆಣೆ)

ಹೆಸರಿಗೆ ತಕ್ಕಂತೆ ವೈಶಿಷ್ಟ್ಯಪೂರ್ಣ ಪುಸ್ತಕಗಳಿವು. ಇವುಗಳ ಮನನ-ಅಭ್ಯಾಸಗಳಿಂದಾಗಿ ಪರೀಕ್ಷೆಯ ಬಗ್ಗೆ ಇದ್ದ ಅಧೈರ್ಯ ಅಳಿದು ಹೊಸ ಹುಮ್ಮಸ್ಸಿನಿಂದ ಮುನ್ನಡೆಯಲು ತುಂಬಾ ಸಹಾಯಕವಾಗುವದು. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚುವುದು. ತಿಳಿಯಾದ ಭಾಷೆ! ಸುಲಭ ಶೈಲಿ !! ಕಾರಣ ಇಂದೇ ನಿಮ್ಮ ನಿಮ್ಮ ಪ್ರತಿಗಳನ್ನು ಪಡೆದುಕೊಳ್ಳುವಿರಿ. ವ್ಯಾಪಾರಿಗಳಿಗೆ ಧಾರಳ ಕಮೀಶನ್ !!!

ಆಕಳವಾಡಿ ಬುಕ್ ಡಿಪೋ, ವಿಜಯ ರೋಡ, ಧಾರವಾಡ

ನೀ

(ಶಿಷ್ಯನಿಗೆ ಬರೆದ ಪತ್ರ)

ಪ್ರಿಯ ಸೋದರನಂತಿರುವ ಶಿಷ್ಯನಿಗೆ

ನೀನು ಪೂರ್ವಜನ್ಮದಲ್ಲಿ ನಾನಿಗೆ ಪೆನ್ನಾಗಿ ಪರಿಚಿತನಾದ ಶ್ರೀಮಾನ್ ಬಸಂತಪ್ಪ ಅವರ ಮಗನೆಂಬ ಮಾತಿನಿಂದ ನಿನ್ನ ಮೇಲೆ "ಮಾತೃಹೃದಯದ ಮೆಚ್ಚುಗೆ" ಎಲ್ಲ ಭಾಗಗಳನ್ನು ನಾನು ಸೂಕ್ಷ್ಮವಾಗಿ ಓದಿ ನೋಡಿದೆನು. ಈ ಪುಸ್ತಕವು ಹೀಗೆ ಹೆಣ್ಣಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಬರೆಯುವದು ಸುಲಭವಾದ ಕೆಲಸವಲ್ಲ. ಅನುಭವದ ಪರಿಪಕ್ವತೆಯಿಂದ ಫಲವಾಗಿರುವದೇನೋ ಎಂಬಂತೆ ಇದು ನನಗೆ ಸಂತೋಷವಾಗುತ್ತದೆ. ಇದು ಒಬ್ಬರು ಯೋಜನೆಯ ಕೆಲಸದಿಂದ ಮೇರೆ ರಹಿತ ಬಿಡುವಿಗಾದ ಎಷ್ಟು ಮಂದಿ ಚಿಕ್ಕಾಸಕ್ತಿಕರಂತೆ ಎಲ್ಲ ಅಂಶಗಳನ್ನು ಒಳಗೊಂಡಿಗೆ. ಅಲ್ಲದೆ ಪರಿಯಾದ ಸಿಕ್ಕುವುದಲ್ಲಿ ಬಾಡಲಾಗಿರುವ, ಅತ್ಯಮನವಾಗಿ ಅಂಕಿದ ವಿಷಯದಿಂದ ಆಯ್ದುಕೊಂಡು ಉಪಾಖ್ಯಾನಗಳನ್ನು ಬಹು ಚೆನ್ನಾಗಿ ಇದು ಇಂದು ಯೋಜನೆಯ ತಳಹದಿಯ ಮೇಲೆ ಬೇರೆಗಳಾದ ವ್ಯಾಪ್ತಿಗಳ ಸಂಬಂಧದಿಂದ ಬಂಧುಜನರೊಳಗೆ ಸುಖಕರವಾಗಿರುವ ಸಂಬಂಧವನ್ನು ಕುರಿತಾಗಿ ಬಂದಿದೆ. ವಿದ್ಯಾರ್ಥಿನಿಗಳಿಗೆ ಈ ಪುಸ್ತಕವು ಉಪಯುಕ್ತವಾಗಿ ಕಾಣುವುದರಲ್ಲಿ ಸಂಶಯವಿಲ್ಲ." ಎಂದು ಎಸ್. ಪಿ. ಕಾಲೇಜಿನ ಗಣಿತ ವಿಷಯದ ಅಧ್ಯಾಪಕರಾದ ಶ್ರೀಮಾನ್ ಕೆ. ಎಸ್. ಕಳಸಾಪುರಕರರು M. A., B. L., M. Ed ಅವರು ಪ್ರಶಂಸಿಸಿದ್ದಾರೆ.

ಪ್ರಸ್ತುತ ಪುಸ್ತಕವು ಶಾಲಾಪಾಠಕ್ಕೆ ಅರ್ಹವಾಗಿದೆ ಎಂದು ಶಿಕ್ಷಣಾಧಿಕಾರಿಗಳಿಂದ ಪ್ರಮಾಣಪತ್ರ ಬಂದಿರುತ್ತದೆ.

ಪ್ರತಿಗಳಿಗೆ ಬೇಡಿಕೆ ಬರೆಯಿರಿ.

ಇಂತಿ ನಿಮ್ಮ ಸೋದರಿ,

ಸುಕುಮಾರಿ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

"ಅನೇಕ ವರ್ಷಗಳಿಂದ ನನಗೆ ಜೆನ್ಮಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಧೆಯವರ "**ವ್ಯಾವಹಾರಿಕ ಗಣಿತ**"ದ ಎಲ್ಲ ಭಾಗಗಳನ್ನು ನಾನು ಕೂಲಂಕಷವಾಗಿ ಓದಿ ನೋಡಿದನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾದ ಅನುಕ್ರಮದಲ್ಲಿ ಕೂಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮುಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ: ಎ. ವ್ಹಿ. ಬೋಧೆ ಫುಲಬಾಗ ೨೨೪/೪೭ ಬೆಳಗಾವಿ

ಗೌರೀಶ ಗ್ರಂಥಪ್ರಕಟನಾಲಯದಿಂದ ಪ್ರಕಟವಾದ ಹೊಸ ಹೊತ್ತಿಗೆಗಳು

೧. ಸ್ವತಂತ್ರ ಭಾರತದ ಗಣರಾಜ್ಯ ಘಟನೆ–ಆದ್ಯ ರಂಗಾಚಾರ್ಯ ಎಂ. ಎ. (ಲಂಡನ) ಕೃತ. ೦–೧೨–೦

೨. ಭಾರತ ರಾಜ್ಯಘಟನೆಯ ತಿಳಿನೋಟ–ಶ್ರೀ. ಗ. ಸ. ಹಾಲಪ್ಪ ಎಂ. ಎ.
ಮಹಾರಾಜಾ ಕಾಲೇಜ, ಮೈಸೂರ. ಕೃತ ೦–೮–೦

೩. ಮನಸ್ಸು ಮತ್ತು ಶಿಕ್ಷಣ ಸಮಸ್ಯೆ-ಶ್ರೀ. ಕಾರಡಗಿ ವೀರಭದ್ರಪ್ಪ. ಎಂ. ಎ. ಎಲ್ ಎಲ್. ಬಿ. ಕೃತಂ-೧೨-೦

೧ನೇ ಮತ್ತು ೨ನೇ ಹೊತ್ತಿಗೆಗಳು ಕನ್ನಡ ೭ನೇ ವರ್ಗದ ಸಲುವಾಗಿ ಸರಕಾರದಿಂದ **ಮಂಜೂರಾಗಿವೆ**.
೩ನೆಯ ಪುಸ್ತಕವು ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೂ ಶಾಲೆಯ ಶಿಕ್ಷಕರಿಗೂ ಮಕ್ಕಳ ಶಿಕ್ಷಣದ ಕಡೆಗೆ ಮನಸ್ಸನ್ನು ಪ್ರತಿಯೊಬ್ಬ ಪಾಲಕರಿಗೂ ಅತ್ಯವಶ್ಯಕವಾದ ಹೊತ್ತಿಗೆಯಾಗಿದೆ. ಇದೂ ಸಹ **ಮಂಜೂರಾಗಿದೆ**.
ಈ ಪ್ರಬಂಧದಲ್ಲಿನ ಪುಸ್ತಕಗಳು ಸರಕಾರದ ಪಠ್ಯಪುಸ್ತಕ ಸಮಿತಿಯಿಂದ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ **ಪೂರಕ ವಾಚನವೆಂದು ಮಂಜೂರಾಗಿವೆ.**

೧. **ಮಾತಿನ ಮುನ್ನಡೆ** ೬ನೆಯ ತರಗತಿಗೆ	೩. **ಮಾತಿನ ಮುನ್ನಡೆ** ೭ನೆಯ ತರಗತಿಗೆ
೨. **ಮಾತಿನ ಮುನ್ನಡೆ** ೫ನೆಯ ತರಗತಿಗೆ	೪. **ಮಾತಿನ ಮುನ್ನಡೆ** ೮ನೆಯ ತರಗತಿಗೆ

—ಎಲ್ಲ ಹೊತ್ತಿಗೆಗಳು ಸಂಗ್ರಹದಲ್ಲಿವೆ.—

ಪ್ರಕಾಶಕರು:

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

ಜಯ-ಹಿಂದ

ಟಿಕ್ಸ್ಟ್ ಬುಕ್ ಕಮಿಟಿಯವರಿಂದಲೂ, ಮೇಲಧಿಕಾರಿಗಳಿಂದಲೂ ಮಾನ್ಯತೆ ಪಡೆದು, ಶಿಕ್ಷಣ ತಜ್ಞರಿಗೂ ಶಿಕ್ಷಕ-ಶಿಕ್ಷಕಿಯರಿಗೂ ಶಾಲಾ ಬಾಲಕರಿಗೂ

ಪ್ರೀತಿಗೆ ಪಾತ್ರವಾದ ಪುಸ್ತಕವೆಂದರೆ

ಇದೊಂದೇ

ಪ್ರಗತಿ ಮಾರ್ಗಜೀವನ

ಇದು ಧಾರವಾಡ, ವಿಜಾಪುರ ಜಿಲ್ಲೆಗಳ ಸ್ಕೂಲು ಬೋರ್ಡುಗಳಲ್ಲಿಯೂ ಮ್ಯು. ಸ್ಕೂಲು ಬೋರ್ಡಿನಲ್ಲಿಯ ಪ್ರಾಥಮಿಕ ಶಾಲೆಗಳ ೫-೬ನೆಯ ವರ್ಗಕ್ಕೆ ಪುಪಠ್ಯಪುಸ್ತಕವೆಂದು ಮಂಜೂರಾಗಿದೆ. ಈ ಹೊತ್ತಿಗೆಯು ಚಿಕ್ಕಮಕ್ಕಳ ಬೌದ್ಧಿಕ, ಮಾನಸಿಕ, ನೈತಿಕ ಶಕ್ತಿಗಳನ್ನು ಬಲಪಡಿಸುವದು. ಇಂದೇ ತರಿಸಿಕೊಳ್ಳಿರಿ.

ಬೆಲೆ: ೧-೪-೦

ಸಿಗುವ ಸ್ಥಳ: ಗ್ರಂಥಕರ್ತರಲ್ಲಿಯೂ, ಗದಗ ಮತ್ತು ಹುಬ್ಬಳಿ ಹೊಂಬಾಳಿ ಬಂಧುಗಳಲ್ಲಿಯೂ

ಶರಭರಾಜ ಕೋಡಿಕೊಪ್ಪಮಠ. ಮಾಸ್ತರ

ಸರಕಾರಿ ಪ್ರ್ಯಾಕ್ಟಿಸಿಂಗ ಸ್ಕೂಲ, ವಿಜಾಪುರ.

೭ನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸ ಚಿ ತ್ರ)

ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: **ನಿ. ವಿ. ನಂದಗಾಂವ**

೬೧೯ ಮಠಗಲ್ಲಿ, ಬೆಳಗಾಂವ

ಮನೆಮನೆಗೆ ಅವಶ್ಯ ಸಂಗ್ರಹಿಸಲೇ ಬೇಕಾದ

ಚಿ. ಶ್ರೀ. ಕುಲಕರ್ಣಿಯವರ ಪುಸ್ತಕಗಳು

ಚಿಕ್ಕ ಕಥೆಗಳು

	ರೂ.	ಆ.
ಪ್ರಲ್ಹಾದ	೦	೨
೧೯೧೯ನೆಯ ತರಗತಿಯ ಕತೆಗಳು	೧	೨
ಮಹಾತ್ಮಾ ಗಾಂಧಿ	೦	೪
ಅಕಬರ-ಬೀರಬಲ್ಲರ ವಿನೋದ ಕತೆ	೦	೬
ಭಾರತೀಯ ಐತಿಹಾಸಿಕ ಕಥೆಗಳು	೦	೮
ರಾಮಕೃಷ್ಣ ನೀತಿಯ ಕಥೆ	೦	೬

ಇತರ ಪುಸ್ತಕಗಳು

ಶ್ರೀವೆಂಕಟೇಶ ಸ್ತೋತ್ರ	೦	೫
ಶ್ರೀ ತುಳಸೀದಾಸ	೦	೫

ತ್ರಿರಂಗಿ ಚಿತ್ರದ ಪುಸ್ತಕಗಳು

ಶಕುಂತಲೆ	೦	೬
ರಾಷ್ಟ್ರೀಯ ಮಹಾಪುರುಷರು	೦	೧೨
ಭಗವಾನ್ ಶ್ರೀರಾಮ	೩	೦

ಅವುಗಳಲ್ಲದೆ ಬೇರೆ ಕಥೆಯ ಪುಸ್ತಕಗಳೂ ದೊರೆಯುತ್ತವೆ.

ಸರಸ್ವತಿ ಪುಸ್ತಕ ಭಾಂಡಾರ

ಬಸವನ ಬೀದಿ, ಬೆಳಗಾಂವಿ

ಹೊರಟಿದೆ ! **ಹೊರಟಿದೆ !**

ಶಿಕ್ಷಣ ದರ್ಶನ

ಲೇಖಕರು: **ಶ್ರೀ. ನಾ.ಲ. ಬಾಪಟ, ಬಿ. ಎ.** ಬಿ.ಟಿ.ಮುಖ್ಯಾಧ್ಯಾಪಕರು,ಕರ್ನಾಟಕಹೈಸ್ಕೂಲ್ ಮಾಳಮರಡಿ, ಧಾರವಾಡ ಬೆಲೆ: ೧-೮-೦. ಟ್ರೇನಿಂಗ ಪಡೆಯುತ್ತಿರುವವರಿಗೂ ಶಿಕ್ಷಕರಿಗೂ ಅತ್ಯುಪಯುಕ್ತವಾದುದು.

ಪುರೋಗಾಮಿ ಶಿಕ್ಷಕ

(ಆಚ್ಚಿನಲ್ಲಿ)

ಲೇಖಕರು: **ಗಜೇಂದ್ರಗಡ ಶಾಮರಾಯರು,** ಬೇಸಿಕ್ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ ಸುಂದರ ಶೈಲಿಯಲ್ಲಿ ಬರೆದಿದ್ದಾರೆ.

ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

Regd. No, B. 5375

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಿಂತೆ ಬರೆಯಲ್ಪಟ್ಟುವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳು ವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆ ಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳಿಸುವ ಸುಂದರ ಚಿತ್ರಗಳು!! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೬-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: **ಶ್ರೀ. ನಾರಾಯಣ ಶರ್ಮ**

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ

Printed by M. A. Kamat. B. sc. at Jai Hind Art Press, Javlipoth, Dharwar. Edited and

ರವೀಂದ್ರ

ಕವಿತೆಯಲ್ಲಿ ಕಿಡಿಗಣ್ಣು

ಸಹಿಯನ್ನು ಕುವೆಂಪು ಸಾಹಿತ್ಯಮಾಲೆ ಪುಟ್ಟಿಗೆ ಇವರ ಕೈಬರಹದಿಂದ

ಸೆಪ್ಟೆಂಬರ್

೧೯೫೨

ಜಯ-ಹಿಂದ

ಟಿಕ್ಸ್ಟ್ ಬುಕ್ ಕಮಿಟಿಯವರಿಂದಲೂ, ಮೇಲಧಿಕಾರಿಗಳಿಂದಲೂ ಮಾನ್ಯತೆ ಪಡೆದು, ಶಿಕ್ಷಣ ಇಲಾಖೆಯವರಿಗೂ ಶಿಕ್ಷಕ-ಶಿಕ್ಷಕಿಯರಿಗೂ ಶಾಲಾ ಬಾಲಕರಿಗೂ

ಪ್ರೀತಿಗೆ ಪಾತ್ರವಾದ ಪುಸ್ತಕವೆಂದರೆ

ಇದೊಂದೇ

ಪ್ರಗತಿ ಮಾರ್ಗಜೀವನ

ಇದು ಧಾರವಾಡ, ವಿಜಾಪುರ ಜಿಲ್ಲೆಗಳ ಸ್ಕೂಲು ಬೋರ್ಡುಗಳಲ್ಲಿಯೂ ಮ್ಯುನಿಸಿಪಲ್ ಸ್ಕೂಲು ಬೋರ್ಡಿನ ಮಿಡಲ್ ಸ್ಕೂಲು ಪ್ರಾಥಮಿಕ ಶಾಲೆಗಳ ೫-೬ನೆಯ ವರ್ಗಕ್ಕೆ ಪುಸ್ತಕವೆಂದು ಮಂಜೂರಾಗಿದೆ. ಈ ಪುಸ್ತಕವು ಚಿಕ್ಕಮಕ್ಕಳ ಬೌದ್ಧಿಕ, ನೈತಿಕ, ಸೌಂದರ್ಯ ಶಕ್ತಿಗಳನ್ನು ಬಲಪಡಿಸುವದು. ಇಂದೇ ತರಿಸಿಕೊಳ್ಳಿರಿ.

ಬೆಲೆ: ೧-೪-೦

ಸಿಗುವ ಸ್ಥಳ: ಗ್ರಂಥಕರ್ತರಲ್ಲಿಯೂ, ಗದಗ ಮತ್ತು ಹುಬ್ಬಳ್ಳಿ ದೊಂಬಾಳಿ ಬಂಧುಗಳಲ್ಲಿಯೂ

ಶರಭರಾಜ ಕೋಡಿಕೊಪ್ಪ ಮುಖ. ಮಾಸ್ತರ

ಸರಕಾರಿ ಪ್ರ್ಯಾಕ್ಟೀಸಿಂಗ ಸ್ಕೂಲ, ವಿಜಾಪುರ.

೭ನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಲೇಖಕರು:— **ವಿ. ಕ. ನಂದಗಾಂವ**

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: **ನಿ. ವಿ. ನಂದಗಾಂವ**

೬೧೯ ಮರಗಲ್ಲಿ, ಬೆಳಗಾಂವ

ಮನೆಮನೆಗೆ ಅವಶ್ಯ ಸಂಗ್ರಹಿಸಲೇ ಬೇಕಾದ

ಬಿ. ಶ್ರೀ. ಕುಲಕರ್ಣಿಯವರ ಪುಸ್ತಕಗಳು

ಚಿಕ್ಕ ಕಥೆಗಳು

	ರೂ.	ಅ.
ಪ್ರಲ್ಹಾದ	೦	೩
ರಿಂದೆ ಅನೆಸು ತರಗತಿಯ ಕತೆಗಳು	೧	೨
ಮಹಾತ್ಮಾಗಾಂಧಿ	೦	೪
ಅಕಬರ-ಬೀರಬಲ್ಲರ ಹಿನೋದ ಕತೆ	೦	೬
ಭಾರತೀಯ ಐತಿಹಾಸಿಕ ಕಥೆಗಳು	೦	೮
ರಾಮಕೃಷ್ಣ ಪೀಠೆಯ ಕಥೆ	೦	೬

ಇತರ ಪುಸ್ತಕಗಳು

ಶ್ರೀನೆ ಕೋಕ ಸ್ತೋತ್ರ	೦	೫
ಶ್ರೀರಾಮ ರಕ್ಷಾ	೦	೫

ತ್ರಿರಂಗಿ ಚಿತ್ರದ ಪುಸ್ತಕಗಳು

ಶಕುಂತಲೆ	೦	೬
ರಾಷ್ಟ್ರೀಯ ಮಹಾಪುರುಷರು	೦	೧೨
ಭಗವಾನ್ ಶ್ರೀರಾಮ	೧	೦

ಅವುಗಳಲ್ಲದೆ ಬೇರೆ ಕಥೆಯ ಪುಸ್ತಕಗಳೂ ದೊರೆಯುತ್ತವೆ.

ಸರಸ್ವತಿ ಪುಸ್ತಕ ಭಾಂಡಾರ

ಬಸವನ ಬೀದಿ, ಬೆಳಗಾಂವಿ

ಹೊ ಟದೆ ! **ಹೊಂಟದೆ !**

ಶಿಕ್ಷಣ ದರ್ಶನ

ಲೇಖಕರು: **ಶ್ರೀ. ನಾ.ಲ. ಬಾಪಟ,** ಬಿ. ಎ. ಬಿ.ಟಿ.ಮುಖ್ಯಾಧ್ಯಾಪಕರು,ಕರ್ನಾಟಕಹೈಸ್ಕೂಲ್ ಮಾಳಮರಡಿ, ಧಾರವಾಡ ಬೆಲೆ: ೧-೮-೦. ಟ್ರೇನಿಂಗ ಪಡೆಯುತ್ತಿರುವವರಿಗೂ ಶಿಕ್ಷಕರಿಗೂ ಅತ್ಯುಪಯುಕ್ತವಾದುದು.

ಪುರೋಗಾಮಿ ಶಿಕ್ಷಕ

(ಅಚ್ಚಿನಲ್ಲಿ)

ಲೇಖಕರು: **ಗಜೇಂದ್ರಗಡ ಶಾಮರಾಯರು,** ಬೇಸಿಕ್ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ ಸುಂದರ ಶೈಲಿಯಲ್ಲಿ ಬರೆದಿದ್ದಾರೆ.

ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಧಾರವಾಡ

ಕನ್ನಡ ಪ್ರಾಥಮಿಕ ಶಿಕ್ಷಣ

ಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ.ಟಿ., ಡಿ. ಪಿ. ಇಡಿ ಡಿ. ಬಿ. ಇ
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು:

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧	ಫೆಬ್ರುವರಿ ೧೯೫೨	ಸಂಚಿಕೆ ೯

ಪರಿವಿಡಿ

ವಿಷಯ		ಪುಟ
೧.	ಸಂಪಾದಕೀಯ	೨
೨.	ಶ್ರೀ. ಎಂ. ಜಿ. ಹಂದ್ರಾಳ (ಪರಿಚಯ)—ಶ್ರೀ. ವಿರೇಶ ಹಿರೇಮಠ	೩
೩.	ಹಳ್ಳಿಗಳ ಪರಿಶೀಲನೆ —ಶ್ರೀ. ಬ. ರಾ. ಹೊಸಮನಿ	೫
೪.	ಕನ್ನಡ ವ್ಯಾಕರಣದಲ್ಲಿ ಜರ್ಜಿಗೆ ಬಾರದ ಕೆಲವಂಶಗಳು —ಶ್ರೀ. ತಟ್ಟಿ, ಶ್ಯಾಮರಾಯರ.....	೭
೫.	ಭೂಗೋಲವನ್ನು ಕಲಿಸುವ ಬಗೆಗಳು (ಲೇ. ೩)—ಶ್ರೀ. ಬ. ಮ. ಶಿಂತ್ರಿ....	೧೧
೬.	ಶಿಕ್ಷಣದಲ್ಲಿಯ ದೋಷಗಳನ್ನು ನಿವಾರಿಸುವ ಬಗೆ—ಡಾ|| ಚಿಕ್ಕರಮನೆ.	೧೫
೭.	ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ	೧೮
೮.	ಶ್ರೀ. ಕೆ. ಜಿ. ಪುರದಕೆರೆ[illegible]	೧೮

ಸಂಪಾದಕೀಯ

ಭಾರತವು ೧೯೫೦ ಜನೆವರಿ ೨೬ ನೆಯ ತಾರೀಖಿನ ದಿನ ತನ್ನ ತೃತೀಯ ಪ್ರಜಾಸತ್ತಾತ್ಮಕ ದಿನವನ್ನು ಆಚರಿಸಿತು. ನಮ್ಮ ಟ್ರೇನಿಂಗ್ ಕಾಲೇಜಿದಲ್ಲಿಯೂ ಈ ದಿನವನ್ನು ಆಚರಿಸಲಾಯಿತು. ಅಂದಿಗೆ ಮೂರು ವರ್ಷಗಳ ಹಿಂದೆ ಭಾರತದ ಲೋಕ ಸಭೆಯು ಭಾರತದ ಹೊಸ ರಾಜ್ಯಘಟನೆಯನ್ನು ಸ್ವೀಕರಿಸಿತು. ಇದಕ್ಕೂ ಪೂರ್ವದಲ್ಲಿ ಜನೆವರಿ ೨೬ ನೆಯ ತಾರೀಖನ್ನು ಸ್ವಾತಂತ್ರ್ಯ ಘೋಷಣೆಯ ದಿನವನ್ನಾಗಿ ಆಚರಿಸಲಾಗುತ್ತಿದ್ದಿತು. ಏಕೆಂದರೆ ೧೯೩೦ ಜನೆವರಿ ೨೬ ನೆಯ ತಾರೀಖಿನ ದಿನವನ್ನು ಪಂಡಿತ ನೆಹರೂರವರು ಕಾಂಗ್ರೆಸ್ಸಿನ ಲಾಹೋರ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಸಂಪೂರ್ಣ ಸ್ವಾತಂತ್ರ್ಯವೇ ಭಾರತೀಯರ ಗುರಿಯಾಗಿದೆ, ಅದನ್ನು ಸಾಧಿಸುವದಕ್ಕಾಗಿ ಪ್ರತಿಜ್ಞೆಯನ್ನು ಮಾಡುವ ದಿನವನ್ನಾಗಿ ಆಚರಿಸಬೇಕೆಂದು ರಾಷ್ಟ್ರಕ್ಕೆ ಆಜ್ಞೆಯನ್ನು ಕೊಟ್ಟಿದ್ದರು. ಅಂದಿನ ದಿನದಿಂದ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಮಾಡುವ ದಿನವಾಗಿದ್ದ ಜನೆವರಿ ೨೬ ನೆಯ ತಾರೀಖು ಮೂರು ವರುಷಗಳಿಂದ ಪ್ರಜಾಸತ್ತಾತ್ಮಕ ದಿನವಾಗಿ ಆಚರಿಸಲ್ಪಡುತ್ತಿದೆ. ಈ ಮೂರು ವರುಷಗಳಲ್ಲಿ ಭಾರತವು ಅತ್ಯಂತ ಮಹತ್ವದ ಕಾರ್ಯಗಳನ್ನು ಮಾಡಿದೆ ಮತ್ತು ಪ್ರಪಂಚದಲ್ಲಿ ತನ್ನ ಮೇಲ್ಮೆಯನ್ನು ಕಾಯ್ದುಕೊಂಡು ಬಂದಿದೆ.

ಸ್ವತಂತ್ರ ಭಾರತದ ಮುಂಬಯಿ ರಾಜ್ಯದಲ್ಲಿ ಈ ಮೂರು ವರುಷಗಳಲ್ಲಿ ಮುಂಬಯಿ ಸರಕಾರವು ಸಾಧಿಸಿದ ಪ್ರಗತಿಯನ್ನು ಕುರಿತು ಮುಂಬಯಿ ರಾಜ್ಯದ ರಾಜ್ಯಪಾಲ (ಗವ್ಹರ್ನರ) ರಾದ ಮಹಾಮಹಿಮ ರಾಜಾ ಮಹಾರಾಜಾಸಿಂಹರು ಜನೆವರಿ ೧೫, ೧೯೫೩ ದಿನವೇ ಆಡಿದ ಮಾತುಗಳು ಉತ್ಸಾಹವರ್ಧಕವಾಗಿವೆ ಮುಂಬಯಿ ರಾಜ್ಯದಲ್ಲಿ ಈಗ ೬ ವಿಶ್ವವಿದ್ಯಾಲಯಗಳು ಇವೆಯೆಂದೂ ಅವಕ್ಕೆ ೪೬.೩೧ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆಯೆಂದೂ, ಔದ್ಯೋಗಿಕ ಶಾಲೆಗಳಿಗೆ ೨೨೦೦೦೦ ರೂಪಾಯಿಗಳ ಸಹಾಯವನ್ನು ನೀಡಲಾಗಿದೆಯೆಂದೂ ಮಾಧ್ಯಮಿಕ ಶಾಲೆಗಳಿಗೆ ೭೫೫೦೦೦ ರೂಪಾಯಿಗಳನ್ನು ಕೊಡಲಾಯಿತೆಂದೂ, ಮ್ಯಾಟ್ರಿಕ ಪರೀಕ್ಷೆಗೆ ಕುಳ್ಳಿರಲು ಅನೇಕ ಅನುಕೂಲತೆಗಳನ್ನು ಮಾಡಿಕೊಡಲಾಗಿದೆಯೆಂದೂ, ೧೦೦೦ಕ್ಕೆ ವೆಲ್ಪಟ್ಟು ಜನಸಂಖ್ಯೆಯುಳ್ಳ ಪ್ರತಿಯೊಂದು ಊರಿನಲ್ಲಿ ಪುಕ್ಕಟೆಯಾಗಿ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಭಾರವನ್ನು ಜಿಲ್ಲೆಯ ಶಾಲಾ ನಿಕಾಯ (ಡಿಸ್ಟ್ರಿಕ್ಟ ಸ್ಕೂಲ ಬೋರ್ಡುಗಳು ವಹಿಸಬೇಕೆಂದು ವಿಧಿಸಲಾಗಿದೆಯೆಂದೂ ಮಹಾಮಹಿಮ ರಾಜ್ಯಪಾಲರು ಹೇಳಿದರು.

ಶಿಕ್ಷಣವು ರಾಷ್ಟ್ರದ ಜೀವಾಳ. ಅದರ ಪ್ರಗತಿಯನ್ನೆ ರಾಷ್ಟ್ರದ ಸರ್ವಾಂಗೀಣ ಪ್ರಗತಿಯು ಅವಲಂಬಿಸಿದೆ ಶಿಕ್ಷಣದ ಪ್ರಗತಿಯು ಇತೋಪ್ಯಧಿಕವಾಗಿ ಆಗಲೆಂದೂ ಸರಕಾರವು ಶಿಕ್ಷಣ ಖಾತೆಯ ಕಡೆಗೆ ಹೆಚ್ಚು ಗಮನ ಕೊಡಲೆಂದೂ ನಮ್ಮ ಹಾರೈಕೆ.

ಪ್ರಿನ್ಸಿಪಾಲ

ಮ. ಗು. ಹಂದ್ರಾಳರು

[ವಿಜಾಪೂರ ಜಿಲ್ಹೆಯ ಡೈಪುಟಿ ಎಜ್ಯುಕೇಶನಲ್ ಇನೆಸ್ಪೆಕ್ಟರರಾಗಿದ್ದ ಶ್ರೀ. ಎಂ ಜಿ. ಹಂದ್ರಾಳರು. ಸೇವಾ ನಿವೃತ್ತರಾದ ಶ್ರೀ. ಕೆ. ಜಿ. ಕುರ್ತಕೋಟಿ ಅವರ ಸ್ಥಳಕ್ಕೆ ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೆಂದು ಸರಕಾರದಿಂದ ನೇಮಕ ಹೊಂದಿ ತಮ್ಮ ಹೊಸ ಅಧಿಕಾರವನ್ನು ೩೧ನೇ ಜನೇವರಿ ದಿನ ಮಧ್ಯಾಹ್ನದನಂತರ ವಹಿಸಿದರು. ಅವರ ಪರಿಚಯ 'ಪ್ರಾಥಮಿಕ ಶಿಕ್ಷಣ'ದ ವಾಚಕರಿಗೆ ಅತ್ಯವಶ್ಯವೆನಿಸಿದುದರಿಂದ ಅವರ ಅಲ್ಪ ಪರಿಚಯವನ್ನು ಕೆಳಗೆ ಕೊಡಲಾಗಿದೆ.]

ಶ್ರೀ ಎಂ. ಜಿ. ಹಂದ್ರಾಳರವರು ಹಾವೇರಿಯವರು. ಚಿಕ್ಕ ವಯಸ್ಸಿನಲ್ಲಿಯೇ ಬಿ. ಎ. (ಆನರ್ಸ) ಪದವಿಯನ್ನು ಸಂಪಾದಿಸಿ, ಶಿಕ್ಷಣ-ಖಾತೆಯನ್ನು ೧೯೩೬ರಲ್ಲಿ ಸೇರಿದರು. ಕೆಲವು ದಿನಗಳ ನಂತರ B. T. ಪರೀಕ್ಷೆ ಪಾಸಾಗಿ, ಕಾಂಡಿವಲಿಯು ಶಾರೀರಿಕ ಶಿಕ್ಷಣದ ತರಬೇತಿಯನ್ನು ಪೊಂದಿದವರೂ ಆಗಿದ್ದಾರೆ.

ಶಿಕ್ಷಣ ಕ್ಷೇತ್ರದ ವಿವಿಧ ಸ್ಥಾನಗಳಲ್ಲಿ ಕೆಲಸ ಮಾಡಿ ಶೈಕ್ಷಣಿಕ ಅನುಭವವನ್ನು ತುಂಬಾ ಪಡೆದಿದ್ದಾರೆ. ಹಲವು ದಿನಗಳವರೆಗೆ ಹೆಣ್ಣು-ಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ, ಬೆಳಗಾವಿಯ ಸರದಾರ್ಸ ಹೈಸ್ಕೂಲಿನಲ್ಲಿ ಕೆಲಸ ಮಾಡಿದ್ದಾರೆ. ಧಾರವಾಡ ಜಿಲ್ಹೆಯ ಬಹು ಭಾಗದಲ್ಲಿ ಅನೇಕ ದಿನಗಳವರೆಗೆ ಅಸಿಸ್ಟಂಟ ಡೈಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಿಂದು ಕೆಲಸ ಮಾಡಿದ್ದಾರೆ. ಶ್ರೀ ಹಂದ್ರಾಳರು ಸತತೋದ್ಯೋಗಿಗಳು, ಕಾರ್ಯ ಸಂಘಟಕರೂ, ಕರ್ತವ್ಯನಿಷ್ಠರೂ, ಸರಳ ಸ್ವಭಾವದವರೂ ಆದ ಮೂಲಕ, ಮುಂಬೈ ಸರಕಾರದವರು ಅವರನ್ನು ೧೯೪೬ನೇ ವರ್ಷ ಮಹಾತ್ಮರ 'ನಯೀ ತಾಲೀಮು' ದೀಕ್ಷೆಗಾಗಿ ವರ್ಧಾಕ್ಕೆ ಕಳಿಸಿದರು. ಅಲ್ಲಿ ೯ ತಿಂಗಳ ಅವಧಿ ತರಬೇತಿ ಪಡೆದನಂತರ. ಆ ಶಿಕ್ಷಣವು ಅವರ ಚಾರಿತ್ರ್ಯದಲ್ಲಿ ಒಂದು ನೂತನ ಪ್ರಭಾವವನ್ನೇ ಹೊರಹೊಮ್ಮಿಸಿತೆಂದು ಹೇಳಬಹುದು, ಅವರ ಆಳವಾದ ಅನುಭವ, ಪ್ರಾಥಮಿಕ ಶಾಲೆಗಳ ಲೋಪ-ದೋಷಗಳನ್ನು, ಅವರು ಸಂಪೂರ್ಣ ಅರಿತುಕೊಂಡವರೆಂದೋ ಏನೋ, ಸರಕಾರದವರು ಅವರನ್ನು ಇಡೀ ಕರ್ನಾಟಕ ವಿಭಾಗಕ್ಕೆ ಮೂಲೋದ್ಯೋಗ ಸಂಘಟಕರೆಂದು ನಿಯಮಿಸಿದರು. ಅದೂ ಅಲ್ಲದೆ, ಅವೇ ಕಾಲಕ್ಕೆ ಡಾಯರೆಕ್ಟರರು, ಅವರ ಯೋಗ್ಯತೆಯನ್ನು ಅರಿತುಕೊಂಡು, ದಿವಂಗತರಾದ ಶ್ರೀ ತಂಬದರವರ ಸ್ಥಳಕ್ಕೆ ಅವರನ್ನು ಟೆಕ್ಸ್ಟ ಬುಕ್ ಕಮಿಟಿಯ ಸೆಕ್ರೆಟರಿಯೆಂದು ನಿಯಮಿಸಿದರು. ೨-೩ ವರುಷಗಳ ವರೆಗೆ ಶ್ರೀ ಹಂದ್ರಾಳರು ಎರಡೂ ಕೆಲಸಗಳನ್ನು ಒಳ್ಳೇ ಸಮಾಧಾನಕಾರಕ ರೀತಿಯಲ್ಲಿ ಸಾಗಿಸಿ, ಡಾಕ್ಟರ ನಂದೀಮಠರ ನೇತೃತ್ವದಲ್ಲಿ ಇಂದಿನ ಪ್ರಾಥಮಿಕ ಶಾಲೆಗಳಲ್ಲಿ ನಾವು ಉಪಯೋಗಿಸುತ್ತಿರುವ ೪ ಪಠ್ಯ ಪುಸ್ತಕಗಳನ್ನು ನಿರ್ಮಾಣ ಮಾಡಿದರು, ಅವುಗಳಲ್ಲಿ ಅವರು ಆಯ್ದುಕೊಂಡ ವಾಕ್ಯಗಳು, ವಿಷಯಗಳ ಜೋಡಣೆ, ಚಿತ್ರಗಳ ಸಂಕಲನ ಎಲ್ಲವೂ ಶ್ರೀ. ಹಂದ್ರಾಳರ ಯೋಗ್ಯತೆಯನ್ನು ಸೂಚಿಸುತ್ತವೆ.

ಶ್ರೀ. ಹಂದ್ರಾಳರು, ಪ್ರಾಥಮಿಕ ಟ್ರೇನಿಂಗ ಸಂಸ್ಥೆಳಲ್ಲಿ ಅನೇಕ ದಿನಗಳವರೆಗೆ ಅಧ್ಯಾಪಕರಾಗಿ ದುಡಿದು. ರ ಪರಿಣಾಮವಾಗಿ 'ಶಿಕ್ಷಣವೂ ಕಲಿಸುವ ಕ್ರಮವೂ' ನವರು ಶಿಕ್ಷಣ ಸುಧಾರಕರು' ಮೊದಲಾದ ಉತ್ಕೃಷ್ಟ ೃಷ್ಣಿಕ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದಾರೆ. ಈ ಪುಸ್ತಕಗಳನ್ನು ಪ್ರಕಟಿಸಲು ದಿವಂಗತ ಈಶ್ವರಪ್ಪಾ ಂಬದ ಹಾಗು ಡಾಕ್ಟರ ಡಿ. ಎಸ್. ಕರ್ಕಿ, M. A. HD. ಅವರು ಇವರಿಗೆ ವಿಶೇಷ ನೆರವಿತ್ತಿದ್ದಾರೆ.

ಮೂಲ-ಶಿಕ್ಷಣದ ತರಬೇತಿಯ ಪರಿಣಾಮವಾಗಿ ಶ್ರೀ. ಹಂದ್ರಾಳರು 'ಮೂಲ-ಶಿಕ್ಷಣ' ಎಂಬ ಅತ್ಯಂತ ಉಪಯುಕ್ತ ಶೈಕ್ಷಣಿಕ ಗ್ರಂಥವನ್ನು ಮೊನ್ನೆ ಮೊನ್ನೆಯೆ ಪ್ರಕಟಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಇಂದಿನ ರಜಿಸ್ಟ್ರಾರರೂ, ಅಂದಿನ ಮೈಸೂರ ವಿಶ್ವವಿದ್ಯಾನಿಲಯದ ಬಿ. ಟಿ. ಕಾಲೇಜದ ಪ್ರಿನ್ಸಿಪಾಲರೂ ಆದ ಡಾಕ್ಟರ ಸಿದ್ಧಲಿಂಗಯ್ಯನವರು ಮುತ್ತಿನಂತಹ ಮಾತುಗಳಿಂದ ಶ್ರೀಯುತರ 'ಮೂಲ-ಶಿಕ್ಷಣ'ವನ್ನು ಮನವಾರೆ ಹೊಗಳಿದ್ದಾರೆ. ಅಷ್ಟೂ ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿದ ಅನೇಕ ಶಿಕ್ಷಣ ತಜ್ಞರು ಈ ಪುಸ್ತಕದ ಬಗ್ಗೆ ಸದಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಇವರ ಲೇಖನಗಳನ್ನು ಅಲ್ಲಲ್ಲಿ ಕಾಣುವದಲ್ಲದೆ ಶ್ರೀ. ವೀರೇಶ ಹಿರೇಮಠರಿಂದ ಪ್ರಕಟವಾದ ' ಕಿರಣ' ದಲ್ಲಿ ಒಂದು ಉತ್ಕೃಷ್ಟ ಲೇಖನವನ್ನು ಕಾಣಬಹುದು.

ಸ್ವಭಾವವಂತೂ ಹೀರ ಸರಲ, ಕುಸುಮದಂತೆ ಮೃದು ವಿದ್ದರೂ, ಪ್ರಸಂಗ ಬಂದಾಗ ವಜ್ರದಷ್ಟು ಕಠೋರ ವೆಂದೂ ಹೇಳಬಹುದು. ಮಾತಿಗಿಂತ ವಿಚಾರವೇ ಹೆಚ್ಚು. ಮಾತಿನ ಮಲಕಿನಿಗಿಂತ ಕೃತಿಯ ಕಟ್ಟಡ ಗಳನ್ನು ಕಟ್ಟುವದರಲ್ಲಿಯೇ ವಿಶೇಷ ಆಸ್ಥೆ ಶ್ರೀ. ಹಂದ್ರಾಳರಿಗೆ.

ಸರಕಾರದವರು ಇವೆಲ್ಲ ಗುಣಗಳನ್ನು ನೋಡಿ, ಇವರಿಗೆ ೩–೪ ತಿಂಗಳ ಮಟ್ಟಿಗೆ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರ ಹುದ್ದೆಯನ್ನು ಕೊಟ್ಟಿದ್ದರು. ಪಬ್ಲಿಕ್ ಸರ್ವಿಸ್ ಕಮಿಶನದಿಂದ ಇನೇ ವರ್ಗದ ನೌಕರಿಯನ್ನು ಸಂಪಾದಿಸಿದ ಭಾಗ್ಯಶಾಲಿಗಳೂ, ವಿದ್ವನ್ಮಣಿಗಳೂ ಆದ ಶ್ರೀ. ಜೇವೂರವರು ಆ ಸ್ಥಳಕ್ಕೆ ಬಂದ ಕೂಡಲೇ ಪುನ ಶ್ರೀ. ಹಂದ್ರಾಳರು ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟ ರರಾಗಿ ಕೆಲಸ ಮಾಡಬೇಕಾಯಿತು.

ನಂತರ ಹಂದ್ರಾಳರನ್ನು ಸರಕಾರದವರು ಧಾರವಾ ಜಿಲ್ಲೆಯ ಡೈಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಥ ದಿಂದ ವಿಜಾಪೂರ ಜಿಲ್ಲೆಯ ಡಿಪ್ಯೂಟಿ ಎಜ್ಯುಕೇಶನಲ ಇನಸ್ಪೆಕ್ಟರೆಂದು ವರ್ಗಾಯಿಸಿದರು-

ಶ್ರೀ. ಹಂದ್ರಾಳರ ಒಲವು, ಆಭಿರುಚಿಗಳಿಗೆ ತಕ್ಕಂತೆ ಸರಕಾರದವರು ಅವರನ್ನು ಗಲ ಸಂಸ್ಥೆಗಳಲ್ಲಿ ಹಿರಿಯಾದ ಕನ್ನಡನಾಡಿನ ಸಾಂಸ್ಕೃತಿಕ ಕೋಟಿಯಂತಹ ಧಾರವಾ ಕನ್ನಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಪ್ರಿನ್ಸಿ ಪಾಲರೆಂದು ನಿಯಮಿಸಿದ್ದು ಶ್ರೀ. ಹಂದ್ರಾಳ ಯೋಗ್ಯತೆಯನ್ನಷ್ಟೇ ಸೂಚಿಸುವದಲ್ಲದೆ, ಸರಕಾ ದವರ ನಿರ್ಣಯಾತ್ಮಕ, ನಿಷ್ಪಕ್ಷಪಾತ ಧೋರಣೆಯನ್ನು ವ್ಯಕ್ತ ಪಡಿಸುತ್ತದೆ.

ಸುಮಾರು ಒಂದು ಶತಕ ಕಾಲಾವಧಿಯಲ್ಲಿ ಇಷ್ಟೊಂದು ತರುಣ, ಉತ್ಸಾಹೀ, ರಚನಾತ್ಮಕ ಪ್ರಿನ್ಸಿ ಪಾಲರು ಆಗಿ ಹೋಗಿದ್ದಿಲ್ಲ. ಏನೋ ಸೇವಾನಿವೃತ್ತಿ ಗಿಂತ ಒಂದು ವರುಷ ಪೂರ್ವದಲ್ಲಿ, ಬೇಸಿಗೆಯಲ್ಲಿ ಮಹಾಬಳೇಶ್ವರಕ್ಕೆ ಹೋದಂತೆ ವಿರಾಮಕ್ಕಾಗಿ ವಿಶ್ರಾಂ ಗಾಗಿ, ಪ್ರಿನ್ಸಿಪಾಲರು ಇಲ್ಲಿ ಬಂದು ಹೋಗುತ್ತಿದ್ದರು ಈಗ ಮಾತ್ರ ಹಾಗಲ್ಲ. ಶಿಕ್ಷಣದ ತಳಹದಿಯನ್ನ ಗಟ್ಟಿಮುಟ್ಟು ಮಾಡಲು, ಶಿಕ್ಷಣ ಕ್ಷೇತ್ರದ ಕೊಳೆಯನ್ನು ಕಿತ್ತೊಗೆಯಲು ಶ್ರೀ. ಹಂದ್ರಾಳರಿಗೆ ತಮ್ಮ ಸರ್ವ ಶಕ್ತಿ ಗಳನ್ನು ಸದ್ವಿನಿಯೋಗಿಸಲು ಇದೊಂದು ಸನ್ನಿವೇಶ ಶ್ರೀ. ಹಂದ್ರಾಳರವರ ವಯಸ್ಸು ೫೯. ಅವರ ಸರ್ವೀಸ್ ಇನ್ನು ೧೫ ವರುಷವಿದೆ. ಶ್ರೀ. ಹಂದ್ರಾಳರಿಂದ ಕನ್ನ ನಾಡಿನ ಶಿಕ್ಷಣ ಕ್ಷೇತ್ರವು ಅನೇಕ ಆಶೆ-ಆಕಾಂಕ್ಷೆಗಳನ್ನ ಇಟ್ಟುಕೊಂಡಿದೆ. ಪರಮಾತ್ಮನು ಅವರಿಗೆ ಒಳ್ಳೆ ಆರೋಗ್ಯವನ್ನು ನೀಡಲಿ. ಶೈಕ್ಷಣಿಕ ಕ್ಷೇತ್ರವನ್ನ ಬೆಳಗಿಸಲಿ. ಸರ್ವ ಶಕ್ತಿಗಳನ್ನು ಕೊಡಲು, ಅವರ ಹುದುಗಿದ ಪ್ರಚಂಡ ಶಕ್ತಿಗಳ ಸದ್ವಿನಿಯೋಗ ಮಾಡು ಪವಿತ್ರ ಮನಸ್ಸಿನಲ್ಲಿ ಪವಿತ್ರ ಭಾವನೆಗಳು ಉದಯಿಸಲಿ

ಹಳ್ಳಿಗಳ ಪರಿಶೀಲನೆ

ಲೇಖಕರು:—
ಶ್ರೀ. ಬ. ರಾ. ಹೊಸಮನಿ ಬಿ ಎ.ಬಿ.ಟಿ.
ಡಿ. ಪಿ. ಈಡಿ. ಡಿ. ಬಿ. ಇ.

ಸರಕಾರದವರು ರಾಜ್ಯದಲ್ಲಿ ಯಾವುದಾದರೊಂದು ಯೋಜನೆ ತಯಾರಿಸುವದಿದ್ದರೆ, ಇಲ್ಲವೆ ಸುಧಾರಣೆಗಾಗಿ ಕಾಯಿದೆ ಕಟ್ಟಳೆಗಳನ್ನು ಪಾಸು ಮಾಡುವದಿದ್ದರೆ, ಮೊದಲು ರಾಜ್ಯದಲ್ಲಿರುವ ಕುಂದುಕೊರತೆ, ಲೋಪದೋಷಗಳನ್ನು ಅರಿತುಕೊಳ್ಳಬೇಕಾಗುವದು. ಸಾಮಾಜಿಕ, ಶೈಕ್ಷಣಿಕ ಇಲ್ಲವೆ ಯಾವದೇ ಕ್ಷೇತ್ರ ವಿರಲಿ ದೋಷಗಳನ್ನು ಮೊದಲು ಕಂಡು ಹಿಡಿಯಬೇಕಾಗುವದು. ದೋಷಗಳು ಗೊತ್ತಾದ ಮೇಲೆ ಅವುಗಳ ಬಗ್ಗೆ ನಿವಾರಣೋಪಾಯಗಳನ್ನು ಯೋಚಿಸಲು ಅನುಕೂಲವಾಗುವದು. ಈ ದೋಷಗಳು ಹಳ್ಳಿಗಳ ಪರಿಶೀಲನೆ ಮಾಡುವದರಿಂದ ತಿಳಿದು ಬರುತ್ತವೆ. ವೈದ್ಯನು ರೋಗಿಯ ಪರೀಕ್ಷೆಮಾಡಿ, ನಿಜವಾದ ರೋಗವನ್ನು ಕಂಡುಹಿಡಿದು ಔಷಧೋಪಚಾರ ಮಾಡಿದರೆ ಮಾತ್ರ ರೋಗವು ನಿವಾರಣೆ ಯಾಗಬಹುದಲ್ಲವೇ ? ಅಂತೆಯೇ ಸರಕಾರದವರು ಅನೇಕ ತಜ್ಞರನ್ನು ಇಂಥ ಕೆಲಸಕ್ಕೆ ತೊಡಗಿಸಿ ಮಾಹಿತಿ ಕಲೆ ಹಾಕುವರು. ಆದರೆ ಶಿಕ್ಷಕರು ತಾವು ಕೆಲಸ ಮಾಡುವ ಹಳ್ಳಿಯ ಪರಿಶೀಲನೆಯನ್ನು ಮಾಡುವ ಅವಶ್ಯಕತೆಯಾದರೂ ಯಾವುದು? ಮಾಡುವದಾದರೆ ಹೇಗೆ ಮಾಡಬೇಕು ?

ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡುವದೇ ಶಿಕ್ಷಕನ ಮುಖ್ಯ ಧ್ಯೇಯವಾಗಿದೆ. ಆ ಮಕ್ಕಳ ಪಾಲಕರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗು ನೈತಿಕ ಸ್ಥಿತಿಗತಿಯನ್ನು ತಿಳಿದುಕೊಂಡು, ಇದಕ್ಕನುಗುಣವಾಗಿ ಮಕ್ಕಳ ಶಿಕ್ಷಣ ಕ್ರಮದಲ್ಲಿ ಮಾರ್ಪಾಟು ಮಾಡಿಕೊಂಡು ಕೆಲಸ ಸಾಗಿಸಿದಲ್ಲಿ, ಯೋಗ್ಯಪ್ರತಿ ಫಲ ಸಿಗದೆ ಇರಲಾರದು. ಪರಿಶೀಲನೆಯಿಂದ ದೊರಕಬಹುದಾದ ಮಾಹಿತಿಯಂದರೆ—

೧) ಮನೆಯಲ್ಲಿ ಎಷ್ಟು ವಿದ್ಯಾರ್ಥಿನಿಯರಿಗೆ ಗೃಹವಿಜ್ಞಾನದ ಜ್ಞಾನ ಪಡೆಯಲು ಸುಸಂಧಿ ದೊರಕುತ್ತದೆ.

೨) ಮನೆಯಲ್ಲಿ ಪಾಲಕರು ತಮ್ಮ ಮಕ್ಕಳನ್ನು ಎಷ್ಟು ಅವಧಿಯ ವರೆಗೆ ಕೆಲಸಕ್ಕೆ ಹಚ್ಚಿ ಕೊಳ್ಳುವರು.

೩) ಪಾಲಕರು ತಮ್ಮ ಮಕ್ಕಳಿಗೆ ಸುಸ್ವಭಾವ ಕಲಿಸುವ ಕೆಲಸವನ್ನು ಎಷ್ಟರ ಮಟ್ಟಿಗೆ ಕೈಕೊಳ್ಳುವರು.

೪) ಕುಡಿಯುವ ಚಟವಿದ್ದ ಪಾಲಕರ ಸಂಖ್ಯೆ.

೫) ಶಿಕ್ಷಣ ಪಡೆದ ಪಾಲಕರ ಸಂಖ್ಯೆ ಇತ್ಯಾದಿ.

ಈ ತರದ ಎಲ್ಲ ಸಂಗತಿಗಳನ್ನು ತಿಳಿದುಕೊಂಡು ಮಕ್ಕಳನ್ನು ಸುಧಾರಿಸುವದು ಅಷ್ಟೇ ಅಲ್ಲ, ಅವರ ಮುಖಾಂತರ ಪಾಲಕರನ್ನೂ ಸುಧಾರಿಸಬಹುದು. ಕುಡಿಯುವ ಚಟವಿದ್ದ ಪಾಲಕರ ಮನಸ್ಸಿನ ಮೇಲೆ ಕುಡಿಯುವದು ಅಪಾಯಕರವೆಂಬ ಸಂಗತಿಯು ಅವರ ಮಕ್ಕಳ ಕಡೆಯಿಂದಲೇ ತಿಳಿಸಿ ಹೇಳಲ್ಪಟ್ಟಲ್ಲಿ, ಪಾಲಕರ ಮನಸ್ಸಿನ ಮೇಲೆ ಯೋಗ್ಯ ಪರಿಣಾಮವಾಗದೆ ಇರಲಾರದು. ಇದರಂತೆ ಇತರ ಜಟಗಳು. ಮನೆಯಲ್ಲಿ ಶಿಕ್ಷಣ ಸಾಗಿಸಲು ಅನುಕೂಲತೆಗಳು ಇರದೆ ಇದ್ದಂಥ ಮಕ್ಕಳಿಗೆ ಶಾಲೆಯಲ್ಲಿಯೇ ಅನುಕೂಲತೆಗಳನ್ನು ಒದಗಿಸಿ ಕೊಡಬೇಕಾಗುತ್ತದೆ. ಇದಲ್ಲದೆ ಶಿಕ್ಷಕನಿಗೆ ಹಳ್ಳಿಯ ಪರಿಶೀಲನೆಯಿಂದ ಬೇರೊಂದು ರೀತಿಯಿಂದಲೂ ಲಾಭದಾಯಕವಾಗುತ್ತದೆಂದು ಹೇಳಬಹುದು. (೧) ಶಿಕ್ಷಕನು ಅಭ್ಯಾಸ ಪತ್ರಿಕೆಯೊಳಗಿನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಸಲಿಕ್ಕೆ ಸಮಾಜದ ಸನ್ನಿವೇಶಗಳನ್ನು ಅರಿತುಕೊಳ್ಳುವದು ಅವಶ್ಯವಿದೆ. (೨) ಇಂದಿನ ಮಕ್ಕಳನ್ನು ಗ್ರಾಮಸುಧಾರಕರನ್ನಾಗಿ ಮಾಡುವದು ಶಿಕ್ಷಕನ ಕರ್ತವ್ಯ. (೩) ಹಳ್ಳಿಯ ಪರಿಶೀಲನೆ ಮಾಡುವದೇ ಒಂದು ತರಗ[illegible]
ವಾದ ಜ್ಞಾನ ಸಂಪಾದನೆ.

ಪರಿಶೀಲನೆಯು (೧) ಪ್ರಾಕೃತಿಕ (೨) ಐತಿಹಾಸಿಕ (೩) ಆರ್ಥಿಕ (೪) ಸಾಮಾಜಿಕ (೫) ರಾಜಕೀಯ (೬) ದೈಹಿಕ (೭) ನೈತಿಕ ಮುಂತಾದ ಸಂಗತಿಗಳನ್ನು ಒಳಗೊಂಡಿರಬೇಕು.

ಪರಿಶೀಲನೆಯನ್ನು ಕೈಕೊಳ್ಳುವ ಸಾಧನಗಳು ಯಾವವೆಂದರೆ:—

(೧) ಸಂದರ್ಶನ (೨) ಐತಿಹಾಸಿಕ ಅವಶೇಷಗಳು (೩) ನಿರೀಕ್ಷಣೆ (೪) ನಕಾಶೆ, ಫೊಟೋಗ್ರಾಫಿ (೫) ಪ್ರಶ್ನಾವಲಿ.

ಪ್ರತಿಯೊಂದು ಸಂಗತಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಸಾಧ್ಯವಿದ್ದ ಬೇರೆಬೇರೆ ಮಾರ್ಗಗಳನ್ನು ಅನುಸರಿಸಿ, ಕಲೆಹಾಕಬೇಕು.

(೧) **ಪ್ರಾಕೃತಿಕ (ಹಳ್ಳಿಯ ಭೂಗೋಲ.):**— ಸುತ್ತುಮುತ್ತಲಿನ ಪ್ರದೇಶ, ಪರ್ವತಗಳು, ಅರಣ್ಯಗಳು, ದಿನಗಳು, ಸರೋವರಗಳು ಇತ್ಯಾದಿ. ಹೊರಗಿನ ಜಗತ್ತಿನಕೂಡ ಸಂಪರ್ಕ ಬೆಳೆಸಲು ಮಾರ್ಗಗಳು, ಹಳ್ಳಿಯಲ್ಲಿ ಸರಕುಸಾಗಿಸುವ ಸಾಧನಗಳು, ಸಮೀಪದ ರೇಲ್ವೆ ನಿಲ್ದಾಣ ಮತ್ತು ಪಟ್ಟಣ, ಮಳೆ ಹಾಗು ಉಷ್ಣತಾ ಮಾನಗಳ ಪ್ರಮಾಣ, ಋತುಮಾನಗಳು ಇತ್ಯಾದಿ.

(೨) **ಹಳ್ಳಿಯ ಇತಿಹಾಸ:** — ಅದು ಇನಾಮಗ್ರಾಮವೋ ಹೇಗೆ ? ಹಳ್ಳಿಯ ಒಬ್ಬ ವೃದ್ಧನಿಂದ ಸಂಗತಿಗಳನ್ನು ಕಲೆಹಾಕಬೇಕು.

(೩) **ಹಳ್ಳಿಯ ಜನರು:**— ಧರ್ಮದ ಪ್ರಕಾರ ಗಂಡು, ಹೆಣ್ಣು ಇವರ ಗಣತಿ ಮಾಡುವದು ಮತ್ತು ಮಕ್ಕಳ ಸಂಖ್ಯೆಯನ್ನು ತೆಗೆಯುವದು. ಎರಡು ಮತ್ತು ಮೂರನೇ ವರ್ಗದವರಿಗೆ ಈ ಕೆಲಸವನ್ನು ಕೊಡಬಹುದು. ಅದರ ಬಗ್ಗೆ ಸ್ತಂಭ ಗ್ರಾಫ್ ತೆಗೆಯಿಸಬಹುದು.

(೪) **ಜೀವನ**—: ಸರ್ವಸಾಧಾರಣ ಮನೆಯ ಹಾಗು ರಸ್ತೆಗಳ ನಕಾಶವನ್ನು ಮಕ್ಕಳ ಕಡೆಯಿಂದ ತೆಗೆಯಿಸಬೇಕು.

(೫) **ಆರ್ಥಿಕ ಸ್ಥಿತಿಯು:**— ಉದ್ಯೋಗ, ಹಳ್ಳಿಯ ಕೈಗಾರಿಕೆಗಳು, ಸ್ವಂತ ಹಾಗು ಲಾವಣಿ ತರೀಮಿ ಜಮೀನು, ಕೂಲಿಯ ದರ, ಬೆಳೆಯುವ ಬೆಳೆಗಳು ಅಂದರೆ ಆಹಾರದ ಬೆಳೆ ಹಾಗು ರೊಕ್ಕದ ಬೆಳೆ, ಕುಡಿಯುವ ಚಟಗಳು, ಆಮದು, ರಫ್ತು ಇತ್ಯಾದಿ.

(೬) **ಸಾಮಾಜಿಕ ಸ್ಥಿತಿಯು:**— ಸಹಕಾರಿ ಸಂಘಗಳು, ಕೋರ್ಟುಗಳು, ಹರಿಜನರನ್ನು ನಡೆಯಿಸಿ ಕೊಳ್ಳುವರೀತಿ, ಹಬ್ಬ ಹುಣ್ಣಿವೆಗಳು, ಲಗ್ನ ಸಮಾರಂಭಗಳು ಹಳ್ಳಿಯ ಆಟಗಳು ಇತ್ಯಾದಿ.

(೭) **ಶಿಕ್ಷಣ:**—ಸಾಕ್ಷರರ ಹಾಗು ನಿರಕ್ಷರಿಗಳ ಸಂಖ್ಯೆ ರಾತ್ರಿಯ ಶಾಲೆ, ವಾಚನಾಲಯ, ಮಾಧ್ಯಮಿಕ ಶಿಕ್ಷಣ ಪಡೆಯಲು ಪರಸ್ಥಳಕ್ಕೆ ಹೋದ ವಿದ್ಯಾರ್ಥಿಗಳು ಅವರಲ್ಲಿ ಮರಳಿ ಹಳ್ಳಿಗೆಬಂದು ವಾಸಿಸಿ ಅಲ್ಲಿಯೇ ಕೆಲಸಮಾಡುತ್ತಿರುವರು ಇತ್ಯಾದಿ.

(೮) **ಹಳ್ಳಿಯ ಆರೋಗ್ಯ** :—ಸ್ಥಳಿಕ ವೈದ್ಯಗಾರರು, ಸಮೀಪದ ದವಾಖಾನೆ, ಸಾಮಾನ್ಯ ರೋಗಾದಿಗಳು, ರೋಗದಿಂದ ಬಳಲಿದವರು ಹಾಗು ಮರಣ ಹೊಂದಿದವರು, ನೀರಿನ ಪೂರೈಕೆ (ನದಿ. ಭಾವಿ, ಕೆರೆ), ಸ್ವಚ್ಛತೆ, ಗೊಬ್ಬರ ಕುಣಿಗಳು ಹಾಗು ತಿಪ್ಪೆಯ ಗುಂಡಿಗಳು, ಮೂತ್ರಿಕುಂಡಿ ಹಾಗು ಪಾಯಿಖಾನೆಗಳು, ಇತ್ಯಾದಿ.

(೯) **ನೀತಿ ಮತ್ತು ಧರ್ಮ** :—ಪೂಜೆಯಸ್ಥಳಗಳು, ಆಚರಿಸುವ ಹಬ್ಬಗಳು ಹಾಗು ಉತ್ಸವಗಳು.

(೧೦) **ಪ್ರಾಣಿಗಳು ಮತ್ತು ಪಕ್ಷಿಗಳು:**—ಸಾಕಿದ ಹಾಗು ಸಾಕದೆ ಇದ್ದಂಥವುಗಳು.

(೧೧) **ಸರಕಾರ**:—ಪಂಚಾಯಿತಿ ಕಮೀಟಿ, ಅದರ ಮೆಂಬರ ಜನರು ಮತ್ತು ಅವರ ಅಧಿಕಾರಗಳು, ಹಳ್ಳಿಯ ಅಧಿಕಾರಿಗಳು ಕಂದಾಯ ಕೂಡಿಸಿ ತಾಲೂಕಾ ಸ್ಥಳಕ್ಕೆ ಕಳಿಸಿ ಕೊಡುವ ಪದ್ಧತಿ ಇತ್ಯಾದಿ.

ಈ ಪ್ರಕಾರವಾಗಿ ಆ ಹಳ್ಳಿಯ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ಮಾಹಿತಿ ಸಂಗ್ರಹ ಮಾಡಬೇಕು. ಹಳ್ಳಿಯ ಜನರು ಅಜ್ಞಾನದಲ್ಲಿದ್ದು ಪುಕ್ಕರಿರುವದರಿಂದ ಕೆಲವೊಂದು ಮಾಹಿತಿ ತಿಳಿಸಲು ನಿರಾಕರಿಸಬಹುದು ಇಲ್ಲವೆ ಸುಳ್ಳು ಮಾಹಿತಿ ಕೊಡಬಹುದು. ಕಾರಣ ಮಕ್ಕಳು ಒಳ್ಳೇ ಜಾಣ್ಮೆಯಿಂದ ಹಾಗು ತಾಳ್ಮೆಯಿಂದ ಅವರಿಂದ ಮಾಹಿತಿ ಪಡೆದುಕೊಳ್ಳುವಂತೆ ಶಿಕ್ಷಕನು ಮಾರ್ಗದರ್ಶನ ಮಾಡುತ್ತಿರಬೇಕು. ಹಳ್ಳಿಯ ಜನರೊಡನೆ ಬೆರೆತು

ಸಮರಸನಾದಲ್ಲಿ ಮತ್ತು ಅವರ ಪ್ರೇಮ ಹಾಗು ನಂಬಿಗೆಯನ್ನು ಗಳಿಸಿಕೊಂಡಲ್ಲಿ ಕೆಲಸವು ಸ್ವಲ್ಪ ಸರಳವಾಗಬಹುದು. ಬಾಲಕರ ಮತ್ತು ಪಾಲಕರ ಸಂಪೂರ್ಣ ಸಹಕಾರ ಪಡೆದುಕೊಳ್ಳಬೇಕು. ಮಕ್ಕಳಿಗೆ ಕೆಲಸವನ್ನು ಅವರವರ ಯೋಗ್ಯತಾನುಸಾರವಾಗಿ ಹಂಚಿಕೊಡುವದರಲ್ಲಿಯೇ ಶಿಕ್ಷಕನ ಜಾಣ್ಮೆಯು ಕಂಡುಬರುತ್ತದೆ- ಹೀಗೆ ಬೇರೆ ರೀತಿಯಿಂದ ಕಲೆಹಾಕಿದ ಮಾಹಿತಿಯನ್ನು ಒಟ್ಟುಗೂಡಿಸಿ, ಒಂದು ವರದಿಯನ್ನು ತಯಾರಿಸಬೇಕು- ಎಲ್ಲ ಸಂಗತಿಗಳನ್ನು ಕಲೆಹಾಕಿದ ನಂತರ ಅನುಮಾನ(Inferences)ಗಳನ್ನು ತೆಗೆಯಬೇಕು. ಮತ್ತು ಅದಕ್ಕನುಸಾರನಾಗಿ ತನ್ನ ಶಿಕ್ಷಣ ಕ್ರಮವನ್ನು ನಿರೂಪಿಸಿ ಕೊಳ್ಳಬೇಕು.

ಕನ್ನಡ ವ್ಯಾಕರಣದಲ್ಲಿ ಜರ್ಜಿಗೆ ಬಾರದ ಕೆಲವಂಶಗಳು

ಲೇಖಕರು:—
ತಟ್ಟಿ ರಾಮರಾಯರು,
ಬಿ. ಎ. ಎಸ್. ಟಿ. ಸಿ. ಡಿ.
ಪ್ರಿನ್ಸಿಪಾಲ ಎಮ್. ಇ. ಬೋರ್ಡ
ಟ್ರೇನಿಂಗ್ ಕಾಲೇಜ, ನವಲಗುಂದ

ಕನ್ನಡ ವ್ಯಾಕರಣದ ಮೇಲೆ ಸಂಸ್ಕೃತ ಭಾಷೆಯ ಪ್ರಭಾವವು ಹೆಚ್ಚಾಗಿ ಆಗಿದೆ. ವ್ಯಾಕರಣದ ಪರಿಭಾಷೆಯ ಶಬ್ದಗಳಂತೂ ಸಂಸ್ಕೃತದಿಂದ ಬಂದು ಬಿಟ್ಟಿವೆ; ಉದಾ. ನಾಮಪದ, ಕ್ರಿಯಾಪದ, ವಿಶೇಷಣ, ಅವ್ಯಯ, ಯಣ್ ಸಂಧಿ, ಅಲುಕ್ ಸಮಾಸ ಮುಂತಾದ ಹೆಸರುಗಳು, ಕರ್ತರಿ ಕರ್ಮಣಿ ಪ್ರಯೋಗಗಳು ಇತ್ಯಾದಿ. ಸಂಸ್ಕೃತ ಸಾಹಿತ್ಯದ ಪ್ರಭಾವವು ಕನ್ನಡ ಸಾಹಿತ್ಯದ ಮೇಲೆ ಬಿದ್ದಂತೆ ಕನ್ನಡ ವ್ಯಾಕರಣದ ಪರಿಭಾಷೆಯೂ ಸಂಸ್ಕೃತಮಯವಾಗಿದೆ. ತೆಲುಗು ವ್ಯಾಕರಣದಲ್ಲಿಯೂ ಇದೇ ಹಾಡು. ಅವರು 'ಸ್ವರ' 'ವ್ಯಂಜನ ಎಂಬ ಶಬ್ದಗಳ ಬದಲಾಗಿ 'ಅಚ್ಚುಲು' 'ಹಲ್ಲುಲು' ಎಂದು ಕರೆಯುತ್ತಾರೆ. 'ಅಚ್' ಎಂಬದು ಪಾಣಿನೀಯ ವ್ಯಾಕರಣದಲ್ಲಿ ಸ್ವರಗಳ ಸಮುದಾಯದ ಸಂಜ್ಞೆಯಾಗಿರುತ್ತದೆ; ಅದರಂತೆ 'ಹಲ್' ಎಂಬದು ವ್ಯಂಜನಗಳ ಸಂಜ್ಞೆ.

ಕರ್ಮಣಿ ಪ್ರಯೋಗವು ಕನ್ನಡ ಭಾಷೆಗೆ ಹೊರತಾದ್ದು. 'ರಾವಣನು ರಾಮನಿಂದ ಕೊಲ್ಲಲ್ಪಡುತ್ತಾನೆ' ಇಂಥ ವಾಕ್ಯದಲ್ಲಿ 'ರಾವಣನು' ಪ್ರಥಮಾ ವಿಭಕ್ತಿಯಲ್ಲಿದ್ದು 'ಕರ್ಮ'ವನ್ನು ಹೇಳುವದೆಂದೂ 'ರಾಮನಿಂದ' ತೃತೀಯಾ ವಿಭಕ್ತಿಯಲ್ಲಿದ್ದು 'ಕರ್ತೃ'ವನ್ನು ಹೇಳುವದೆಂದೂ ವ್ಯಾಕರಣ ಹೇಳುವ ಪರಿಪಾಠವು ಬಿದ್ದಿದೆ. ಇದು ಕೇವಲ ಸಂಸ್ಕೃತ ವ್ಯಾಕರಣದಿಂದ ಅಂಧಾನುಕರಣವಾಗಿದೆ. 'ರಾಘವೋ ರಾಮೇಣ ಹನ್ಯತೇ' ಎಂಬಲ್ಲಿ ಹನ್ ಎಂಬ ಧಾತುವು ಹೇಳುವ ಕ್ರಿಯೆಯ 'ಕರ್ತೃ'ವು ರಾಮನೇನೋ ಆಹುದು. ಆ ಕ್ರಿಯೆಯು—ಎಂದರೆ; ಕೊಲ್ಲುವ ಕ್ರಿಯೆಯು—'ಕರ್ಮ' ರಾವಣನೂ ಆಹುದು. ಸಂಸ್ಕೃತದಲ್ಲಿ ಇದು ಸರಿಯೇ; ಯಾಕೆಂದರೆ 'ಹನ್' ಎಂಬದು ಒಂದು ಧಾತುವು ಎಂದು ಎಣಿಸಲ್ಪಟ್ಟಂತೆ 'ಹನ್ಯ' ಎಂಬದೂ ಒಂದು ಧಾತುವೆಂದು ಎಣಿಸಲ್ಪಟ್ಟಿಲ್ಲ. ಇನ್ನು ಕನ್ನಡದ ಮಾತನ್ನು ತೆಗೆದುಕೊಳ್ಳೋಣ. ರಾವಣನು ಯಾವ ಕ್ರಿಯೆಯ 'ಕರ್ಮ'? ಕೊಲ್ಲುವ ಕ್ರಿಯೆಯ ಕರ್ಮ. ಆದರೆ ಕೊಟ್ಟ ವಾಕ್ಯದಲ್ಲಿ 'ಕೊಲ್ಲಲ್ಪಡು' (ಕೊಲ್ಲಲ್ಪಡುತ್ತ+ಆನೆ) ಎಂಬುದು ಸಂಯುಕ್ತ ಕ್ರಿಯಾಪದವಾಗಿದೆ. ಅದರಲ್ಲಿ ಎರಡು

ನಾತುಗಳ ಸಂಬಂಧವಿದೆ; ಕೊಲ್ಲಲುಪಡು---ಕೊಲ್ಲು ಹಾಗು ಪಡು ಎಂಬ ಎರಡು ಧಾತುಗಳು. ಕೊಲ್ಲಲು ಪಡು' ಎಂಬ ಮಾತಿನ ಅರ್ಥವು ಕೊಲ್ಲುವದನ್ನು ಅನುಭವಿಸು ಅಥವಾ ಸಹಿಸು ಎಂದು ಆಗುವದು. 'ಹಾಡಲು ಕಲಿಸು' ಎಂದರೆ ಹಾಡುವದನ್ನು ಅಥವಾ ಹಾಡನ್ನು ಕಲಿಸು ಎಂದಂತೆ 'ಕೊಲ್ಲಲು ಪಡು' ಎಂದರೆ ಕೊಲ್ಲುವದನ್ನು ಇಲ್ಲವೆ ಕೊಲೆಯನ್ನು ಅನುಭವಿಸು ಎಂದರ್ಥ. ಕೊಲೆಯನ್ನು ಅನುಭವಿಸುವವರು ಯಾರು ? ಅನುಭವಿಸುವ (ಪಡುವ ಅಥವಾ ಸಹಿಸುವ) ಕ್ರಿಯೆಯ ಕರ್ತೃವು ಯಾರು ? ರಾವಣನೋ ರಾವಣನನೋ ? ಅರ್ಥಾತ್ ರಾವಣನು. ಹೀಗಿರುವದರಿಂದ 'ರಾವಣನು' ಎಂಬದು 'ಪ್ರಥಮಾಂತ ಕರ್ತೃ' ಎಂದು ಹೇಳುವದು ಯೋಗ್ಯವಾಗುವದಿಲ್ಲವೇ? ಸಂಸ್ಕೃತದಲ್ಲಿ 'ಹನ್' ಎಂಬುದು ಧಾತುವಿದ್ದಂತೆ 'ಯ' ಎಂಬದು (ಹನ್+ಯ) ಧಾತುವಾಗಲಾರದು. ಅಲ್ಲಿ, ಹನನ ಕ್ರಿಯೆಯೊಂದೇ ಕಾಣುವದರಿಂದ ಅದರ ಕರ್ತೃವು 'ರಾವಣನಾಗಲಾರನು, 'ರಾವಣನೇ ಆಗುವನು. ಅಲ್ಲಿ 'ರಾವಣಃ' ಕರ್ಮ ಎಂದು ಹೇಳುವದು ಸರಿಯೇ.

ಇಂಗ್ಲಿಷಿನಲ್ಲಿ ಒಂದು ಕ್ರಿಯೆಯನ್ನು ಮಾಡುವವನು ಇಲ್ಲವೆ ಅನುಭೋಗಿಸುವವನು ಕರ್ತೃವೆಂದು ಹೇಳಲಾಗಿದೆ. Ravana is killed by Rama—ಈ ವಾಕ್ಯದಲ್ಲಿ Ravana ಎಂಬ ಪದವು ಕರ್ತೃವೆಂದೂ 'is killed' ಕ್ರಿಯಾಪದವೆಂದೂ ಹೇಳುವದು ಇಂಗ್ಲಿಷನ್ನು ಕಲಿತವರೆಲ್ಲರಿಗೂ ಗೊತ್ತಿದೆ. ಕನ್ನಡದಲ್ಲಿ ಕರ್ಮಣಿ ಪ್ರಯೋಗವೇ ಮೊದಲು ಇರಲಿಲ್ಲ ಎಂದು ಹೇಳುವದಕ್ಕೆ ಸಾಕ್ಷ್ಯವಿರುವಾಗ, ಸಂಸ್ಕೃತ ವ್ಯಾಕರಣದಿಂದ ಅದನ್ನು ನಮ್ಮಲ್ಲಿ ಒಂದು ವೇಳೆ ಸೇರಿಸಿಕೊಂಡೆವೆಂದು ತಿಳಿದರೂ, ತೃತೀಯಾಂತ ಕರ್ತೃ, ಪ್ರಥಮಾಂತ ಕರ್ಮ ಎಂದು 'ಕರ್ಮಣಿ' ಪ್ರಯೋಗದ ವಾಕ್ಯದಲ್ಲಿ ವ್ಯಾಕರಣ ಹೇಳುವ ಪರಿಪಾಠವು ಸಾಧುವಾಗಿರುವದಿಲ್ಲ. ಇದನ್ನು ಪಂಡಿತರು ವಿಚಾರಮಾಡಲಿ.

ಕನ್ನಡ ವ್ಯಾಕರಣದ ಸೂತ್ರಗಳನ್ನು ಸಹ ಸಂಸ್ಕೃತದಲ್ಲಿಯೇ ರಚಿಸಿದ ಭಟ್ಟಾಕಲಂಕನ ಕೃತಿಯನ್ನು ನೋಡಿದರೆ ಸಂಸ್ಕೃತಾನುಕರಣವು ಎಷ್ಟು ಆಳವಾಗಿ ಬೇರುಬಿಟ್ಟಿತೆಂಬ ಮಾತು ಹೊಳೆಯುವದು. ಆ ವ್ಯಾಕರಣದಲ್ಲಿ ಷಷ್ಠೀವಿಭಕ್ತ್ಯರ್ಥವನ್ನು ತಿಳಿಸಲಿಕ್ಕೆ ಎರಡು ಸೂತ್ರಗಳು ಅವೆ, ಅವು ಯಾವವೆಂದರೆ (೧) ಯೋಗೇಽದ್ (ಸೂತ್ರ ೨೨೫) ಮತ್ತು (೨) ಕರ್ತೃ ಕರ್ಮಣೋ: ಕೃತಿಭಾವೇ (ಸೂತ್ರ ೨೨೬) ಮೊದಲನೆಯ ಸೂತ್ರದ ಅರ್ಥವು : ಕರ್ತೃ ಕರ್ಮ ಕರಣ ಸಂಪ್ರದಾನಾದಿ ಸಂಬಂಧಗಳನ್ನು ಬಿಟ್ಟು ಸಾಮಾನ್ಯವಾಗಿ ಸಂಬಂಧಮಾತ್ರವನ್ನು ಹೇಳುವಾಗ ಷಷ್ಠೀ ವಿಭಕ್ತ್ಯಿಯು ಬರುವದು; ಅಥವಾ ಕಾರಕರೂಪ ಸಂಬಂಧ ವಿಶೇಷವನ್ನು ಉಳಿದು ಸಂಬಂಧ ಸಾಮಾನ್ಯದಲ್ಲಿ ಷಷ್ಠೀ ಬರುವದು. ಎರಡನೆಯ ಸೂತ್ರದ ಅರ್ಥವು : ಭಾವಾರ್ಥದಲ್ಲಿ ವಿಹಿತವಾದ ಕೃತ್ ಪ್ರತ್ಯಯವನ್ನು ಹಚ್ಚಿಕೊಂಡ ಕೃದಂತ ಶಬ್ದದ ಪ್ರಯೋಗವಿದ್ದಲ್ಲಿ ಅದರಿಂದ ಸೂಚಿಸಲ್ಪಟ್ಟ ಕರ್ತೃವಾಚಕ ಹಾಗು ಕರ್ಮವಾಚಕ ಶಬ್ದಗಳಿಗೆ ಷಷ್ಠೀ ಬರುವದು. 'ಊರೊಡೆಯ' 'ಮರಪಡಕೊಂಬು' ಇವು ಮೊದಲನೆಯದಕ್ಕೆ ಉದಾಹರಣೆಗಳು; ದೇವದತ್ತನ ಘಟದ ಮಾಳ್ಕೆ—ಇದ ಎರಡನೆಯ ಸೂತ್ರಕ್ಕೆ ಉದಾಹರಣೆಯು.

ಷಷ್ಠೀ ವಿಭಕ್ತ್ಯಿಯ ಅರ್ಥವನ್ನು ಹೇಗೆ ಹೇಳಬೇಕು' ಕಾರಕರೂಪ ಸಂಬಂಧವನ್ನುಳಿದು ಬೇರೆ ಸಂಬಂಧಗಳಲ್ಲಿ, ಷಷ್ಠೀ ಬರುವದೆಂದು ಹೇಳೋಣವೆಂದರೆ ಎರಡನೆಯ ಸೂತ್ರವು ಅದಕ್ಕೆ ಅಪವಾದವಾಗಿದೆ 'ದೇವದತ್ತನ ಮಾಳ್ಕೆ' ಎಂಬಲ್ಲಿಯೂ 'ಘಟದ ಮಾಳ್ಕೆ ಎಂಬಲ್ಲಿಯೂ ಕಾರಕರೂಪ (ಅನುಕ್ರಮವಾಗಿ ಕರ್ತೃ ಕರ್ಮ) ಸಂಬಂಧವೇ ಉಕ್ತವಾಗಿರುವದು. ಆದ್ದರಿಂದ ಪ್ರಥಮಾ ವಿಭಕ್ತ್ಯಂತಪದಗಳು ಕ್ರಿಯಾಪದದೊಡನೆ ಸಂಬಂಧವನ್ನು ಹೇಳುತ್ತವೆಂತಲೂ ಷಷ್ಠ್ಯಂತಪದವು ನಾಮಪದದೊಡನೆ ಸಂಬಂಧವನ್ನು ಹೇಳುತ್ತದೆಂತಲು ತಿಳಿಯಾಗಿ ವಿವರಿಸಬೇಕು. ಸಂಬಂಧಾರ್ಥದಲ್ಲಿ ಷಷ್ಠಿಯು ಬರುವದೆಂದು ಹೇಳುವುದಂತೂ ಶುದ್ಧ ಅ-ವಿವೇಕ; ಏಕೆಂದರೆ ಕಾರಕಗಳೆಲ್ಲವೂ ಸಂಬಂಧಾರ್ಥದಲ್ಲಿಯೇ ಇರುವವು, ಲೋಕದಲ್ಲಿ ಸಂಬಂಧವಿಲ್ಲದ ವಿಧಿಯೇ ಇಲ್ಲ. ಆದ್ದರಿಂದ ಆಖ್ಯಾತರೂಪದೊಡನೆ ಸಂಬಂಧವಿದ್ದರೆ ಕಾರಕವಿಭಕ್ತ್ಯಿಯ ಪ್ರಯೋಗವಾಗುವದು, ಉಳಿದೆಡೆಯಲ್ಲಿ (ಷಷ್ಠೀ ಶೇಷೇ ಪಾಣಿನಿ, ೨.೩.೫೦) ಷಷ್ಠೀ ಎಂದು ವಿವರಣೆ ಮಾಡುವದು ಯೋಗ್ಯವಾಗುವದು.

ಇನ್ನೊಂದು ಸಂಗತಿಯು ಯಾವ ವ್ಯಾಕರಣದಲ್ಲಿಯೂ ಸ್ಪಷ್ಟ ಮಾಡಲ್ಪಟ್ಟಿಲ್ಲ. ಪ್ರತ್ಯಯಗಳು ಯಾವ ಅರ್ಥದಲ್ಲಿ ಬರುತ್ತವೆ ಎಂಬುದನ್ನು ಹೇಳುವುದು ವ್ಯಾಕರಣದ ಕೆಲಸ. 'ಅನೆಯ' ಎಂಬ ಪ್ರತ್ಯಯಕ್ಕೆ ಯಾವ ಅರ್ಥವಿದೆ?

"ಪೂರಣಾರ್ಥೇ ಅನೆಯ:" ಎಂದು ಶಬ್ದಾನುಶಾಸನ ಕಾರನು ಹೇಳುತ್ತಾನೆ, ಆದರೆ ಹತ್ತನೆಯ ಭಾಗ, ನಾಲ್ಕನೆಯ ಭಾಗ ಎಂದು ಹೇಳುವಾಗ ಕ್ರಮದಿಂದ ಹತ್ತನೆಯ ಇಲ್ಲವೆ ನಾಲ್ಕನೆಯ ಎಂಬ ಅರ್ಥವಿರುವದಿಲ್ಲ. ೧ ರೂಪಾಯಿಯಲ್ಲಿ ಹೀಗೆ, ೧ರೂ=೬ಆ+೫ಆ+೩ಆ+೨ಆ, ಭಾಗಮಾಡಿದಾಗ ಪೂರಣಾರ್ಥದಲ್ಲಿ ಎಂದರೆ ಕ್ರಮವಾಚಕದ ಅರ್ಥದಲ್ಲಿ ೨ ಆಣೆಯ ನಾಲ್ಕನೆಯ ಭಾಗವಾದರೂ ಅದು ರೂಪಾಯಿಯ ನಾಲ್ಕನೆಯ ಭಾಗವಾಗಲಾರದು. ಆದ್ದರಿಂದ ಈ ಸೂತ್ರವನ್ನು ಹೀಗೆ ಸುಧಾರಿಸಬಹುದು. "ಪೂರಣಭಾಗಾರ್ಥ-ಯೋರನೆಯಃ" ಈ ಎರಡೂ ಅರ್ಥಗಳು ಪಾಣಿನಿಗೆ ಗೊತ್ತಿದ್ದವೆಂತಲೇ "ಪೂರಣಾದ್‌ಭಾಗೇ ತೀಯಾದನ್" (೫. ೩. ೪೮) ಎಂದು ಆತನು ಸೂತ್ರಿಸಿದ್ದಾನೆ.

ಕನ್ನಡ ಭಾಷೆಯ ಹತ್ತುಗಡಿಯು ಸಂಸ್ಕೃತ, ಗ್ರೀಕ್, ಲಟಿನ್, ಗೋಥಿಕ್ ಅವೆಸ್ತಾ ಮೊದಲಾದ ಭಾಷೆಗಳೊಡನೆ ಇರುವದೋ ಹೇಗೆ ಎಂಬುದು ಇನ್ನೂ ಸಂಶೋಧನಾತ್ಮಕ ವಿಷಯವಾಗಿಯೇ ಉಳಿದಿರುವದು. ಸಂಸ್ಕೃತದಿಂದ ಕನ್ನಡ ಸಾಹಿತ್ಯಕ್ಕೂ ಭಾಷೆಗೂ ವಿಶೇಷವಾದ ಉಪಕಾರವಾಗಿದ್ದರೂ ಕನ್ನಡವು ಇಂಡೋ—ಆರ್ಯನ್ ಭಾಷೆಗಳ ವರ್ಗಕ್ಕೆ ಸೇರಿಬ್ಬೋ ಹೇಗೆ ಎಂಬದನ್ನು ಇನ್ನೂ ನಿರ್ಧರಿಸಬೇಕಾಗಿದೆ. ಧಾತುಗಳು ಸರ್ವನಾಮಗಳು, ಸಂಖ್ಯಾವಾಚಕಗಳು, ಅವ್ಯಯಗಳು—ಇವೇ ಯಾವದೊಂದು ಭಾಷೆಯ ಮೂಲಭೂತವಾದ ರಚನೆಯನ್ನು ತೋರ್ಪಡಿಸುತ್ತವೆ ಎಂದು ಆಧುನಿಕ ಭಾಷಾ ಶಾಸ್ತ್ರಜ್ಞರ ಮತವಾಗಿರುವದು.

ಕನ್ನಡ, ತೆಲುಗು, ತಮಿಳ್, ಮಲಯಾಳಂ-ಇವಂತೂ ಒಂದೇ ವರ್ಗಕ್ಕೆ ಸೇರಿದ ಭಾಷೆಗಳೆಂಬುದನ್ನು ಯಾರೂ ಅಲ್ಲಗಳೆಯುವದಿಲ್ಲ. ಹಳೆಗನ್ನಡವು ತಮಿಳಿಗೆ ಬಹು ಸಮೀಪವಾಗಿದೆ. ಎರಡೂ ಭಾಷೆಯ ಧಾತುಗಳಲ್ಲಿರುವ ಸಾದೃಶ್ಯವನ್ನು ನೋಡಿರಿ:—

ಕನ್ನಡ ಧಾತು	ತಮಿಳ್ ಧಾತು	
ನಡೆ	ನಡ	
ಬರೆ	ವರೈ	
ನಡಗು	ನಡುಂಗು	ಕಟ್ಟು, ಮೆಚ್ಚು, ಆಡು, ಕೂಡು, ಕೊಂಡಾಡು, ಒಪ್ಪು, ತಪ್ಪು, ಅಂಜು, ನಗು, ಪಾಡು, ಪಡು—ಈ ಧಾತುಗಳು, ಉದಾಹರಣೆಗಾಗಿ, ತೆಲುಗು, ಕನ್ನಡ, ತಮಿಳುಗಳಿಗೆ ಸಾಮಾನ್ಯವಾಗಿವೆ.
ಕೆಯ್	ಕೆಯ್	
ತಿಳಿ	ತೆಳಿ	
ಸಾ	ಶಾ	
ಬಿಡು	ವಿಡು	ಈ, ಕಾಣ್, ಉಣ್, ನೂಲ್, ನೆಯ್, ಕೊಯ್, ಪಾಯ್, ವೋಲ್, ವಾರ್, ಆಡು, ಉಡು, ಮುಲರ್ ಉದಾ:ಇವು ತಮಿಳ್ ಕನ್ನಡಗಳಿಗೆ ಸಾಧಾರಣವಾಗಿವೆ.
ಸುಡು	ಶುಡು	
ಬೇಡು	ವೇಂಡು	
ಪೆರ್ಚು	ಪರುಗು	
ನೆನೆ	ನಿನೈ	
ತಡಮಾಡು	ತಡುವಾಬು	

ಸರ್ವನಾಮಗಳು ಪ್ರತಿಯೊಂದು ಭಾಷೆಯಲ್ಲಿ ಅತ್ಯಗತ್ಯದ ಮತ್ತು ಸಮೀಪದ ಬಳಕೆಯ ಶಬ್ದಗಳು; ಅವು ಆ ಭಾಷೆಯ ಸ್ವಂತದ ಸ್ಥಿರಸ್ಥಾವರ ಆಸ್ತಿಯಂತೆ; ಕೆಳಗಿನ ಸಾದೃಶ್ಯವನ್ನು ಗಮನಿಸಿರಿ:—

ತಮಿಳ್	ಕನ್ನಡ	ತಮಿಳ್	ಕನ್ನಡ
ಉ. ಏ. ಯಾನ್ ಅಥವಾ ನಾನ್	ಆನ್ ಅಥವಾ ನಾನ್	ಪ್ರ. ಏ. ಅವನ್, ಅವಳ್, ಅದು	ಅವನ್, ಅವಳ್ ಅದ
ಉ. ಬ. ಯಾಂ ಅಥವಾ ನಾಂ	ಅಂ ಅಥವಾ ನಾಂ	ಪ್ರ. ಬ. ಅವರ್, ಅವು	ಅವರ್, ಅವು
ಮ ಏ. ನೀ	ನೀನ್		
ಮ. ಬ. ನೀರ್	ನೀಂ		

ಇದರಂತೆ ಸಂಖ್ಯಾವಾಚಕಗಳು. ತಮಿಳ್, ಒನ್ಪು, ಕನ್ನಡ, ಒಂದು; ತಮಿಳ್ ಇರಂಡು, ಕನ್ನಡ ಎರಡು; ತಮಿಳ್ ಮೂನ್ಪು. ಕನ್ನಡ ಮೂರು ಇತ್ಯಾದಿ.

ಅವ್ಯಯಗಳ ಉದಾಹರಣೆಗಳನ್ನು ತೆಗೆದುಕೊಳ್ಳಿರಿ : ತ ವಟ್ಟು; ಕ ಮತ್ತು

ತ. ಮೇಜು; ಕ. ಬೇಬಿ. ತ. ಶುವ್ಮ್ಮಾ; ಕ. ಸುಮ್ಮನೆ.

ತ. ನಾಳೈ; ಕ. ನಾಳೆ ತ. ಉಡನ್; ಕ. ಒಡನೆ

ಇದಲ್ಲದೆ ದೇಶ್ಯಶಬ್ದಗಳಲ್ಲಂತೂ ಸಾಮ್ಯವಿದ್ದೇ ಇದೆ. ಉದಾಹರಣೆಗಳು:—

ತಮಿಳ್	ಕನ್ನಡ	ತಮಿಳ್	ಕನ್ನಡ
ಕುಜಿಡು	ಕೊಜಿಡು	ಕಣ್ಣಾಡಿ	ಕನ್ನಡಿ
ವಿಳಕ್ಕು	ಬೆಳಕು	ಮನೈ	ಮನೆ
ಪರುತ್ತಿ	ಪಟ್ಟಿ	ವಾನ್	ಬಾನ್
ಎರುಮೈ	ಎರ್ಮೆ	ವಾಲೈ	ಬಾಲೆ
ಕರುಂಬೊನ್	ಕಬ್ಬೊನ್	ತಂಗೈ	ತಂಗೆ
ಶಿಲ	ಕೆಲ	ಕುದಿರೈ	ಕುದುರೆ

ಎರಡೂ ಭಾಷೆಗಳಲ್ಲಿನ ವಾಕ್ಯರಚನೆಯನ್ನು ನೋಡಿರಿ. ಉದಾಹರಣೆಗಳು:—

ತಮಿಳ್ : ಎನ್ ಕುದಿರೈಯೈ ಕ್ಕೊಂಡು ವಾ

ಕನ್ನಡ : ನನ್ನ ಕುದುರೆಯನ್ನು ತಕ್ಕೊಂಡು ಬಾ

ತಮಿಳ್ : ನಾನ್ ಉನಕ್ಕು ಶ್ಶೊಲ್ಲುಗಿಱೈ ಕ್ಕೇಳ್

ಕನ್ನಡ : ನಾನು ನಿನಗೆ ಹೇಳುವದನ್ನು ಕೇಳು

ತಮಿಳ್ : ನಾನ್ ಮಿವುಗವ್ ಶಂತೋಶಮಾಯ್ ಇರುಕ್ಕಿಱೇನ್

ಕನ್ನಡ : ನಾನು ಮಿಗಿಲಾಗಿ ಸಂತೋಷದಿಂದ ಇದ್ದೇನೆ.

ಭಾಷೆಯ ಜೀವಾಳವಾದ ಈ ವ್ಯಾಕರಣ ಪ್ರಕ್ರಿಯೆಗಳನ್ನು ಸಂಸ್ಕೃತಕ್ಕೆ ಹೋಲಿಸಿದರೆ ಎಷ್ಟು ಮಾತ್ರವೂ ನ್ಯಾಯವು ಕಂಡುಬರುವದಿಲ್ಲ.

ಸಂಸ್ಕೃತ ಪ್ರಾಕೃತ ಭಾಷೆಗಳಿಂದ ನಮ್ಮ ಭಾಷೆಯ ಶಬ್ದಭಾಂಡಾರವನ್ನು ಬೇಕಾದಷ್ಟು ಬೆಳಿಸಿಕೊಂಡಿದ್ದರೂ ಕನ್ನಡ ತಮಿಳ್ ಮೊದಲಾದವು ಸಂಸ್ಕೃತದಿಂದ ಸಾಕ್ಷಾತ್ತಾಗಿ ಹುಟ್ಟಿವೆ ಎಂದು ಹೇಳುವದು ಬಹು ಕಷ್ಟ.

ಭೂಗೋಲವನ್ನು ಕಲಿಸುವ ಬಗೆಗಳು

ಲೇಖಕರುಃ—ಶ್ರೀಯುತ ಬ. ಮು. ಶಿಂತ್ರಿ. ಬಿ. ಎ. ಬಿ., ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಲೇಖಾಂಕ ೩

ಕಲಿಸುವ ಪದ್ಧತಿಗಳು (ಮುಂದುವರಿದುದು).

(ಈ) ಪ್ರವಾಸ ಪದ್ಧತಿ :— ಇದು ಕ್ರೀಡಾ ಪದ್ಧತಿಯ ಒಂದಂಗವೆಂದರೂ ಸಲ್ಲುವದು. ಕ್ರೀಡೆಯು ಮಕ್ಕಳ ಜನ್ಮಸಿದ್ಧ ಹಕ್ಕು. ಆಟವು ಆನಂದಮಯವೂ ಶಕ್ತಿಯುತವೂ ಆದದ್ದೊಂದು ಚಟುವಟಿಕೆ. 'ಆಡುತ್ತ ಕಲಿ' ಎಂಬ ಮನಃಶಾಸ್ತ್ರದ ತತ್ವದ ಬಗೆಗೆ ಹೇಳುವಾಗ ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ಭೂಗೋಲವನ್ನು ಕಲಿಸಲು ಕಾಲ್ಪನಿಕ ಪ್ರವಾಸದಲ್ಲಿ ಯಾವ ಯಾವ ಆಟಗಳನ್ನು ಮಕ್ಕಳ ಕಡೆಯಿಂದ ಆಡಿಸಬೇಕೆಂಬುದನ್ನು ವಿವರಿಸಲಾಗಿದೆ. ಅವುಗಳನ್ನೆಲ್ಲ ಇಲ್ಲಿ ಪುನಃ ಹೇಳುವದು ಅನವಶ್ಯಕ. ಪ್ರವಾಸವು ಕಾಲ್ಪನಿಕವಿರಬಹುದು ಇಲ್ಲವೆ ನಿಜವಾದ ಪ್ರವಾಸವನ್ನು ಕೈಕೊಳ್ಳಬಹುದು. ನಿಜವಾದ ಪ್ರವಾಸವನ್ನು ಕೈಕೊಳ್ಳಲು ಶಕ್ಯವಿಲ್ಲದಲ್ಲಿ ಕಾಲ್ಪನಿಕ ಪ್ರವಾಸದ ಆಟವನ್ನು ಹೂಡುವದೊಳಿತು. ಆಯಾ ಹಳ್ಳಿಗಳ ನೆರೆಹೊರೆಯಲ್ಲಿರುವ ಗುಡ್ಡಗಳು, ಹೊಳೆ-ಹಳ್ಳಗಳು, ಸರುವು-ಕಾಲುವೆಗಳು, ಕೆರೆ-ಹೊಂಡಗಳು, ಲೈನರಸ್ತೆಗಳು, ಲೋಹಮಾರ್ಗಗಳು, ಮೊದಲಾದವುಗಳನ್ನು ನಿರೀಕ್ಷಿಸಲು ಚಿಕ್ಕ ಪ್ರವಾಸವನ್ನು ಅನುಕೂಲವಿದ್ದಾಗೆಲ್ಲ ಕೈಕೊಳ್ಳಬೇಕು. ಒಂದು ದೊಡ್ಡ ಮಳೆ ಬಿದ್ದ ಮೇಲೆ ಮಕ್ಕಳನ್ನು ಊರ ಹೊರಗೆ ಕರೆದುಕೊಂಡು ಹೋಗಿ ಅದರ ಪರಿಣಾಮವೇನಾಯಿತೆಂಬುದನ್ನು ತೋರಿಸಬೇಕು. ಕೆರೆಗೆ ನೀನು ಬರುತ್ತಿದ್ದರೆ ಆ ನೀರು ಎಲ್ಲಿಂದ ಬರುತ್ತದೆ, ಕಾಲುವೆಯ ಉಪಯೋಗವೇನು, ಕೋಡಿಯಿಂದ ನೀರು ಹೋಗುತ್ತಿದ್ದರೆ ಆದರ ಅವಶ್ಯಕತೆಯೇನು, ಹೊಳೆ ಇಲ್ಲವೆ ಹಳ್ಳವು ಸಮೀಪದಲ್ಲಿಯೇ ಹರಿಯುತ್ತಿದ್ದರೆ ಆ ನೀರು ಎಲ್ಲಿಂದ ಬಂತು ಮತ್ತು ಹಾಗೆಯೇ ಮುಂದೆ ಎಲ್ಲಿಗೆ ಹೋಗುತ್ತಿದೆ, ಈ ಮೊದಲಾದ ಮಾಹಿತಿಯನ್ನು ಮಾಡಿಕೊಡಬೇಕು. ಸಮೀಪದೊಂದು ಕೆರೆಗೆ ಚಿಕ್ಕ ಪ್ರವಾಸವನ್ನು ಇಟ್ಟುಕೊಂಡಿದ್ದರೆ, ಮಧ್ಯಾಹ್ನದ ಊಟವಾದ ಮೇಲೆ ಎಲ್ಲ ಮಕ್ಕಳಿಗೆ ಒಂದು ಕಾಲನ್ನು ನೀರಿನಲ್ಲಿ ಒಂದು ಕಾಲನ್ನು ನೆಲದ ಮೇಲೆ ಇಟ್ಟು ನೀರು-ನೆಲಗಳ ಉಷ್ಣತೆಯಲ್ಲಿ ಅವರು ಅನುಭವಿಸುವ ಹೆಚ್ಚು ಕಡಿವೆಯನ್ನು ಕಂಡು ಹಿಡಿಯಲು ಹೇಳಬೇಕು. ನೀರು-ನೆಲಗಳು ಕಾಯ್ವುವದು ಮತ್ತು ಆರುವದು ಇವುಗಳ ವ್ಯತ್ಯಾಸದ ಮೇಲೆಯೇ ಮಳೆ-ಗಾಳಿಗಳು ಅವಲಂಬಿಸಿವೆ ಮತ್ತು ಮಳೆ-ಗಾಳಿಗಳ ಮೇಲೆಯೇ ನಮ್ಮ ಅನ್ನ, ವಸ್ತ್ರ, ಆಸರ, ಉದ್ಯೋಗ, ಮೊದಲಾದವುಗಳೆಲ್ಲ ಅವಲಂಬಿಸಿವೆಂಬುದನ್ನು ಆಸರ ಮನಸಿನ ಮೇಲೆ ಆಗ ಬಿಂಬಿಸಬೇಕು. ಸಮೀಪದೊಂದು ಗುಡ್ಡಕ್ಕೆ ಚಿಕ್ಕ ಪ್ರವಾಸವನ್ನಿಟ್ಟುಕೊಂಡಿದ್ದರೆ, ಗುಡ್ಡವನ್ನು ಹತ್ತುವಾಗ ಸ್ವಲ್ಪ ಮುಂದಕ್ಕೆ ಬಾಗಬೇಕಾಗುತ್ತದೆ ಮತ್ತು ಇಳಿಯುವಾಗ ಸ್ವಲ್ಪ ಹಿಂದಕ್ಕೆ ಸೆಟೆಯಬೇಕಾಗುತ್ತದೆ. ಗುರುತ್ವಾಕರ್ಷಣ

ನನ್ನು ತಿಳಿಸಿಕೊಡಲು ಇದುವೇ ಬಂಗಾರದಂತಹ ಸಮಯವು. ಇಂತಹ ಪ್ರಸಂಗವು ಹುಡುಕುತ್ತ ಹೋದರೂ ಸಿಗಲಿಕ್ಕಿಲ್ಲ. ಇದೇ ವೇಳೆಯಲ್ಲಿ ಪೃಥ್ವಿಯು ಸೂರ್ಯನ ಸುತ್ತಲೂ ಚಂದ್ರನು ಪೃಥ್ವಿಯ ಸುತ್ತಲೂ ಏಕೆ ತಿರುಗುತ್ತಿರುವರೆಂಬುದನ್ನು ಪರ್ಯಾಯದಿಂದ ತಿಳಿಸಿ ಹೇಳಲು ಬರುವದು. ಇಂತಹ ಇನ್ನೂ ಎಷ್ಟೋ ಭೌಗೋಲಿಕ ಸಂಗತಿಗಳನ್ನು ಈ ಚಿಕ್ಕ ಪ್ರವಾಸಗಳಲ್ಲಿ ಕಲಿಸಲು ಶಕ್ಯವಿದೆ. ಒಟ್ಟಾರೆ, ಇಂತಹ ಚಿಕ್ಕ ಪ್ರವಾಸಗಳಲ್ಲಿ ಆಟವು ಪಾಠವಾಗಬೇಕು ಮತ್ತು ಪಾಠವು ಆಟವಾಗಬೇಕು. ಶಿಕ್ಷಣಕ್ರಮದಲ್ಲಿ ಇದುವೇ ಪ್ರವಾಸಗಳ ಮೂಲೋದ್ದೇಶವು. ಸೃಷ್ಟಿ ನಿರೀಕ್ಷಣೆಯಿಂದಲೇ ನಮ್ಮ ಮಕ್ಕಳೆಲ್ಲ ಶಕ್ಯವಿದ್ದಷ್ಟು ಭೌಗೋಲಿಕ ಜ್ಞಾನವನ್ನು ಪಡೆಯುವದೊಳಿತು. ಸ್ವಂತ ಅನುಭವದಿಂದ ಪಡೆದ ಜ್ಞಾನವು ಶಾಶ್ವತವಾದುದ್ದಾಗಿದೆ; ಅದನ್ನು ಮಕ್ಕಳು ಎಂದೂ ಮರೆಯಲಾರರು.

(ಊ) ಕೃತಿಪ್ರಧಾನ ಪದ್ಧತಿ :— 'ಮಾಡುತ್ತ ಕಲಿ' ಎಂಬ ತತ್ವವೇ ಈ ಪದ್ಧತಿಯ ತಳಹದಿಯೆಂಬುದನ್ನು ಈ ಮೊದಲೇ ಹೇಳಿದೆ. ಏನಾದರೊಂದು ಕೃತಿಯನ್ನು ಮಾಡುವದು ಮಕ್ಕಳಿಗೆ ಸ್ವಾಭಾವಿಕವಾಗಿ ಸೇರುತ್ತಿದೆಯಲ್ಲವೇ ? ಅದೊಂದು ಅವರ ಸಹಜ ಪ್ರವೃತ್ತಿಯು. ಮಕ್ಕಳಿಗೆ ಚಟುವಟಿಕೆಯೊಂದನ್ನು ಕೊಟ್ಟರೆ, ಅದರಲ್ಲಿ ಸ್ವಾಭಾವಿಕವಾಗಿ ಅವರ ಆಸಕ್ತಿಯೂ ಅಭಿರುಚಿಯೂ ಹುಟ್ಟಿ ಕೊನೆಗೆ ಅದರಲ್ಲಿಯೇ ಅವರು ತಲ್ಲೀನರಾಗುವದುಂಟು. ಇದು ಎಲ್ಲರ ಅನುಭವಕ್ಕೆ ಬಂದ ಮಾತಾಗಿದೆ. ಚಟುವಟಿಕೆಯ ಈ ಶೈಕ್ಷಣಿಕ ಮಹತ್ವದ ಲಾಭವನ್ನು ಶಿಕ್ಷಕ-ಶಿಕ್ಷಕಿಯರು ತಮಗೆ ಎಷ್ಟು ಶಕ್ಯವಿದೆಯೋ ಅಷ್ಟು ಹೆಚ್ಚು ತಕ್ಕೊಳ್ಳುವದೊಳಿತು. ಭೂಗೋಲದಲ್ಲಿ ಈ ಪದ್ಧತಿಯ ಉಪಯೋಗವನ್ನು ಮಾಡಿಕೊಳ್ಳಲು ಶಕ್ಯವಿದೆಯೆಂಬುದನ್ನು ಈ ಮೊದಲೆ 'ಮಾಡುತ್ತ ಕಲಿ' ಎಂಬ ಮನಃಶಾಸ್ತ್ರದ ತತ್ವದ ಬಗೆಗೆ ಹೇಳುವಾಗ ವಿವರಿಸಲಾಗಿದೆ. ಬೇಕಾದಷ್ಟು ಚಟುವಟಿಕೆಗಳನ್ನು ಭೂಗೋಲದಲ್ಲಿ ಕೊಡಲು ಶಕ್ಯವಿದೆ. ಉದಾಹರಣಾರ್ಥವಾಗಿ, ಬಾಹ್ಯರೇಷೆಯ ನಕಾಶದಲ್ಲಿ ಹೊಳೆ-ಹಳ್ಳಗಳು ಗುಡ್ಡ-ಪರ್ವತಗಳು, ರೈಲರಸ್ತೆಗಳು, ಲೋಹಮಾರ್ಗಗಳು ಮೊದಲಾದವುಗಳನ್ನು ತುಂಬಿಸುವದು, ಇಲ್ಲವೆ ಸಾಲೆಯ ಮಾದರಿ (Model) ಯೊಂದನ್ನು ತಯಾರಿಸುವದು, ಇತ್ಯಾದಿ. ಈ ಪದ್ಧತಿಯಿಂದಾಗುವ ಲಾಭಗಳೆಂದರೆ :— (೧) ಕೃತಿಗಳನ್ನು ಮಾಡುವದರಿಂದ ಮಕ್ಕಳ ಅವಧಾನವು ವಿಷಯಕ್ಕೆ ಅಂಟಿಕೊಳ್ಳುತ್ತಿದೆ. (೨) ಕೆಲಸದಲ್ಲಿದ್ದಾಗ ಅವರಿಗೆ ಅಡರುವ ಅಡ್ಡಿ-ಆತಂಕಗಳನ್ನು ಎಡರು-ತೊಡರುಗಳನ್ನೂ ಅವರು ಎದುರಿಸಬೇಕಾಗುತ್ತಿದೆ; ಅದರಿಂದ ಅವರಲ್ಲಿ ಕೆಲಸ ಮಾಡುವ ಸಾಮರ್ಥ್ಯವೂ ವ್ಯವಹಾರ ಜ್ಞಾನವೂ ಬೆಳೆಯುತ್ತವೆ. (೩) ಸ್ವಂತ ಅನುಭವದಿಂದ ಜ್ಞಾನವು ಸಿಗುತ್ತದೆ; ಅದುವೇ ನಿಜಕ್ಕೂ ಮಿಗಿಲಾದ ಜ್ಞಾನವು. (೪) ಕೆಲಸ ಮಾಡುತ್ತ ಮಾಡುತ್ತ ನಡೆದಂತೆ ಅದಕ್ಕಲ್ಲಿ ಕುಶಲತೆಯು ಪ್ರಾಪ್ತವಾಗುತ್ತಿದೆ. ಆದುದರಿಂದ ಶಿಕ್ಷಕ–ಶಿಕ್ಷಕಿಯರು ಮೇಲೆ ಹೇಳಿದಂತಹ ಚಟುವಟಿಕೆಗಳನ್ನು ಕೊಟ್ಟು ಮಕ್ಕಳ ಕಡೆಯಿಂದ ಮಾಡಿಸಬೇಕು. ಅವುಗಳಲ್ಲಿ ಉತ್ತಮವಾದವುಗಳನ್ನು ವರ್ಗದ ಕೋಣೆಯಲ್ಲಿ ಮಕ್ಕಳಿಗೆ ನಿಲುಕದ ಹಾಗೆ ತೂಗ ಹಾಕಬೇಕು. ಇಂತಹವುಗಳನ್ನೆಲ್ಲ ಶೇಖರಿಸಿ ಸಾಲೆಯ ಹುಟ್ಟು-ಹಬ್ಬ, ಪಾಲಕರ ದಿನ, ಮಕ್ಕಳ ದಿನ, ಶಿಕ್ಷಣ-ಸಪ್ತಾಹ, ಮೊದಲಾದ ಶೈಕ್ಷಣಿಕ ಉತ್ಸವಗಳಲ್ಲಿ ಪ್ರದರ್ಶಿಸಬೇಕು.

(ಋ) ಡಾಲ್ಟನ್ ಪದ್ಧತಿ:—ಸಾಲೆಯಲ್ಲಿ ವರ್ಗದ ಪ್ರಕಾರ ಕೋಣೆಗಳಿರದೆ ವಿಷಯಗಳ ಪ್ರಕಾರ ಕೋಣೆಗಳಿರಬೇಕಾಗುವದು. ಆಯಾ ಕೋಣೆಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು ನಕಾಶಗಳು, ನಕ್ಷೆಗಳು, ಪಟಗಳು, ಚಿತ್ರಗಳು, ಮಾದರಿಗಳು, ಇವೇ ಮೊದಲಾದ ಎಲ್ಲ ಸಾಮಗ್ರಿಗಳನ್ನು ಕಲೆ ಹಾಕಿ ಓರಣದಿಂದಲೂ ಕ್ರಮದಿಂದಲೂ ಹೊಂದಿಸಿಟ್ಟಿರಬೇಕು. ಮಕ್ಕಳು ತಮ್ಮ ಮನಸಿಗೆ ಬಂದ ಬೇಕಾದ ವಿಷಯಗಳನ್ನು ಆರಿಸಿಕೊಂಡು ಆಯಾ ಕೋಣೆಗಳಿಗೆ ಹೋಗಿ ತಮ್ಮ ಅಭ್ಯಾಸವನ್ನು ತಾವೇ ಮಾಡಿಕೊಳ್ಳುವರು. ತಮ್ಮ ಅಭ್ಯಾಸವನ್ನು ನಿರ್ದಿಷ್ಟ ಪಡಿಸಿದ ಅವಧಿಯೊಳಗಾಗಿ ಮುಗಿಸುವ ಹೊಣೆಯು ಅವರ ಮೇಲೆಯೇ ಇರುತ್ತದೆ. ಉದಾಹರಣಾರ್ಥವಾಗಿ, ಅವಧಿಯು ಮಾಸಿಕ ತ್ರೈಮಾಸಿಕ ಇಲ್ಲವೆ ಷಣ್ಮಾಸಿಕವಿರಬಹುದು. ಒಂದು

ವಿಷಯದ ಬಗೆಗೆ ಬೇಸರವೆನಿಸಿದರೆ, ಅದನ್ನು ಬಿಟ್ಟು ಮತ್ತೊಂದನ್ನು ಕೈಕೊಳ್ಳಲು ಮಕ್ಕಳು ಪೂರ್ಣ ಸ್ವತಂತ್ರರು. ಶಿಕ್ಷಕ-ಶಿಕ್ಷಕಿಯರು ಕೇವಲ ಸಲಹೆಗಾರರಾಗಿರಬೇಕು; ಸಲಹೆ–ಸೂಚನೆಗಳನ್ನು ಕೊಡುತ್ತ ಮಾರ್ಗದರ್ಶಕರಾಗಿರಬೇಕು. ವೇಳಾಪತ್ರಿಕೆ ವರ್ಗಶಿಕ್ಷಣಗಳಿಗೆ ಇಲ್ಲಿ ಎಡೆಯಿಲ್ಲ. ಮಕ್ಕಳ ವೈಯಕ್ತಿಕ ಪ್ರಗತಿಯನ್ನು ಕಂಡುಹಿಡಿದು ಪ್ರಗತಿರೇಷೆಯ ಪಟಗಳನ್ನು ಶಿಕ್ಷಕ-ಶಿಕ್ಷಕಿಯರು ಇಟ್ಟಿರುವದುಂಟು. ಮಕ್ಕಳು ತಮ್ಮ ಬುದ್ಧಿಶಕ್ತಿಯ ಸಹಾಯದಿಂದ ಸ್ವತಂತ್ರರೀತಿಯಿಂದಲೂ ಸ್ವಂತಪ್ರಯತ್ನಗಳಿಂದಲೂ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಬೇಕೆಂಬುದು ಈ ಪದ್ಧತಿಯ ತಿರುಳು. ಹೀಗೆ ಮಾಡುವದರಿಂದ ಅವರಲ್ಲಿ ಸ್ವಾವಲಂಬನವೂ ಆತ್ಮವಿಶ್ವಾಸವೂ ಬೆಳೆಯುತ್ತವೆ. ಇದು ಮೇಲಿನ ವರ್ಗಗಳಿಗೆ ಮಾತ್ರ ಫಲಕಾರಿಯು. ಕೆಳಗಿನ ವರ್ಗಗಳಿಗೆ ಈ ಪದ್ಧತಿಯಿಂದ ಏನೂ ಪ್ರಯೋಜನವಾಗುವದಿಲ್ಲ. ನಮ್ಮ ದೇಶವು ಬಡ ದೇಶವು. ನಮ್ಮ ಸಾಲೆಗಳಿಗೆ ಹೇಳತೀರದಷ್ಟು ಸ್ಥಳಸಂಕೋಚವು. ಮಕ್ಕಳಿಗೆ ಕೂಡ್ರಲು ಸಹ ಸಾಕಷ್ಟು ಸ್ಥಳ ಸಿಗುವದಿಲ್ಲ. ಆದುದರಿಂದಲೇ 'ಶಿಫ್ಟ್' ಪದ್ಧತಿಯು ಅಮಲಿನಲ್ಲಿ ಬಂದಿದೆ. ಎಷ್ಟೋ ಸಾಲೆಗಳು ಗುಡಿ-ಗುಂಡಾರಗಳಲ್ಲಿವೆ. ಪುಸ್ತಕ-ಉಪಕರಣಗಳ ಅಭಾವವಂತೂ ವರ್ಣನಾತೀತವಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಪದ್ಧತಿಯನ್ನು ಜಾರಿಯಲ್ಲಿ ತರಲು ಹೇಗೆ ತಾನೇ ಸಾಧ್ಯವು? ಆದುದರಿಂದ ಈ ಪದ್ಧತಿಯ ಬಗೆಗೆ ಹೆಚ್ಚಿಗೆ ಬರೆದರೇನು ಫಲ?

(ಎ) **ಯೋಜನಾ ಪದ್ಧತಿ:**— ಉದ್ದೇಶಪೂರ್ವಕವಾದ ಮತ್ತು ರಚನಾತ್ಮಕವಾಕ ಚಟುವಟಿಕೆಯೊಂದನ್ನು ಮಕ್ಕಳೇ ಆಯ್ದುಕೊಂಡು, ಕೈಕೊಂಡು, ಅವರೇ ಅದನ್ನು ಪಾರುಗಾಣಿಸುವದಕ್ಕೆ ಯೋಜನಾ ಪದ್ಧತಿಯೆನ್ನುವದುಂಟು. ಉದ್ದೇಶವಿದ್ದಲ್ಲಿ ಹುರುಪು ಹುಮ್ಮಸಗಳು ತಲೆದೋರುತ್ತಿವೆ. ಹುರುಪು–ಹುಮ್ಮಸಗಳಿದ್ದಲ್ಲಿ ಆಭಿರುಚಿ–ಆಸಕ್ತಿಗಳು ತಾವಾಗಿಯೇ ಉದ್ಭವಿಸುವದುಂಟು. ಸ್ವಸಂತೋಷದಿಂದ ಆರಿಸಿಕೊಂಡು ಮಾಡುವ ಚಟುವಟಿಕೆಯಿಂದುಂಟಾಗುವ ಜ್ಞಾನವು ಶಿಕ್ಷಣ ಕ್ರಮದಲ್ಲಿ ಮಿಗಿಲಾದದ್ದಾಗಿದೆಯೆಂಬುದನ್ನು ಒತ್ತಿ ಹೇಳಬೇಕೇ? ಸಾಲೆಯ ಕೋಣೆಗಳಲ್ಲಿ ಕುಳಿತಲ್ಲಿಯೇ ಕುಳಿತು ಕೆಲಸಕ್ಕೆ ಬಾರದ ಪಾಠಗಳನ್ನು ಕಲಿಯುವನ್ನು ಬದಿಗಿರಿಸಿ, ಮಕ್ಕಳು ತಮ್ಮಷ್ಟಕ್ಕೆ ತಾವೇ ಕೆಲಸ ಮಾಡುತ್ತ ಮಾಡುತ್ತ ವ್ಯವಹಾರ ಜ್ಞಾನದ ಅನುಭವಗಳನ್ನೆಲ್ಲ ಈ ಪದ್ಧತಿಯಿಂದ ಕಲಿಯುತ್ತಾರೆ. 'ಮಾಡುತ್ತ ಕಲಿ' ಮನಃಶಾಸ್ತ್ರದ ತತ್ವವೇ ಈ ಪದ್ಧತಿಯ ತಳಹದಿ. ಭೂಗೋಲದಲ್ಲಿ ಮಕ್ಕಳಿಗೆ ಕೈಕೊಳ್ಳಲು ಬಹಳಷ್ಟು ಯೋಜನೆಗಳಿವೆಯಾದುದರಿಂದ ಇಲ್ಲಿ ಈ ಪದ್ಧತಿಯನ್ನು ಜರುಗಿಸಲು ಸಾಕಷ್ಟು ಅವಕಾಶವದೆ. ಉದಾಹರಣಾರ್ಥವಾಗಿ, ಸಾಲೆಯ ಪಟಾಂಗಣದಲ್ಲಿ ತಾಲೂಕಿನ, ಜಿಲ್ಲೆಯ, ಪ್ರಾಂತದ, ದೇಶದ ಇಲ್ಲವೆ ಜಗತ್ತಿನ ವಿಶಾಲವಾದ ಪಾಕೃತಿಕ ಮಾದರಿ (Model) ಯೊಂದನ್ನು ಹಾಕುವದು, ಜಗತ್ತಿನ ಇಲ್ಲವೆ ಹಿಂದುಸ್ತಾನದ ವಿಶಾಲವಾದ ಬಾಹ್ಯರೇಷೆಯ ನಕಾಶಗಳನ್ನು ತೆಗೆದು ಅದರಲ್ಲಿ ನಿಮಾನ ಮಾರ್ಗಗಳನ್ನು ಇಲ್ಲವೆ ಜಲ ಮಾರ್ಗಗಳನ್ನು ತೋರಿಸುವದು, ಹುಟ್ಟುವಳಿಯನ್ನು ಇಲ್ಲವೆ ಜನವಸತಿಯನ್ನು ತೋರಿಸುವದು, ಕಬ್ಬಿಣ-ಕಲ್ಲಿದ್ದಲಿ ಮೊದಲಾದ ಖನಿಜಗಳು ಸಿಗುವ ಸ್ಥಳಗಳನ್ನು ತೋರಿಸುವದು, ತಮ್ಮ ಹಳ್ಳಿಯದೊಂದು ಮಾದರಿಯನ್ನು ತಯಾರಿಸುವದು, ಕಿರಗಿಡ್ಡುರ ದನಗಳ ಇಲ್ಲವೆ ಆಸ್ಟ್ರೇಲಿಯದ ಕುರಿಗಳದಡ್ಡಿಯೊಂದರ ಮಾದರಿಯನ್ನು ಹಾಕುವದು, ಸುತ್ತುಮುತ್ತಲಿನ ಇಲ್ಲವೆ ದೂರದ ಭೌಗೋಲಿಕ ಮಹತ್ವವುಳ್ಳ ಸ್ಥಳಗಳ ಸಂದರ್ಶನ, ದ್ವೀಪ-ದ್ವೀಪಕಲ್ಪ-ಭೂಶಿರ-ಸಂಯೋಗಭೂಮಿ ಸಾಮುದ್ರಧುನಿ-ಆಖಾತ-ಉಪಸಾಗರಗಳ ನಿಚ್ಚಳವಾದ ಕಲ್ಪನೆಯನ್ನು ಮಾಡಿಕೊಂಡಿರುವ ಮಾದರಿಯೊಂದನ್ನು ರಚಿಸುವದು ಮುಂತಾದವುಗಳು. ಹಿಂದುಸ್ತಾನದ ಪ್ರಾಕೃತಿಕ ಸ್ವರೂಪವನ್ನು ತೋರಿಸುವ ಮಾದರಿಯೊಂದನ್ನು ಸಾಲೆಯ ಪಟಾಂಗಣದಲ್ಲಿ ಹಾಕುವದನ್ನು ಮಕ್ಕಳು ಆಯ್ದುಕೊಂಡರೆಂದು ತಿಳಿಯೋಣ. ಪಟಾಂಗಣದ ಯಾವ ಭಾಗದಲ್ಲಿ ಹಾಕುವದೊಳಿತು, ಹಿಂದುಸ್ತಾನದ ಬಾಹ್ಯರೇಷೆಯ ನಕಾಶವನ್ನು ತೆಗೆಯಲು ಬೇಕಾಗುವ ಸ್ಕೇಲುಗಳಾವವು, ಗುಡ್ಡ-ಪರ್ವತ-ತಪ್ಪಲು-ಪ್ರದೇಶಗಳನ್ನು ತೋರಿಸಲು ಬೇಕಾಗುವ ಅರಲು, ಅದು ಬಿರಿಯದ ಹಾಗೆ ಹದಗೊಳಿಸುವ ಉಪಾಯಗಳು ಹೊಳೆಗಳನ್ನು ತೋರಿಸಲು ಬೇಕಾಗುವ ಬಣ್ಣವನ್ನು

ಹೇಗೆ ತಯಾರಿಸುವದು, ಗುಡ್ಡ-ಪರ್ವತ-ತಪ್ಪಲುಪ್ರದೇಶಗಳ ಎತ್ತರ (ಸಮುದ್ರಸಪಾಟಿಯಿಂದ) ಮತ್ತು ಉದ್ದಗಲತೆಗಳು ಪರ್ವತ ಶಿಖರಗಳು ಮತ್ತು ಅವುಗಳ ಎತ್ತರಗಳು, ಶಿಖರುಗಳನ್ನು ತೋರಿಸಲು ಬೇಕಾಗುವ ಬಣ್ಣವನ್ನು ಹೇಗೆತಯಾರಿಸುವದು, ಕೊಳೆಗಳ ಉದ್ದಳತೆಗಳು, ಅವುಗಳ ಉಗನುಗಳು ಸಂಗಮಗಳು ಮತ್ತು ಮುಖಗಳು, ಸಮುದ್ರತೀರಗಳು ಮತ್ತು ಅವುಗಳ ಉದ್ದಗಲತೆಗಳು, ಬೈಲು ಪ್ರದೇಶಗಳು ಮತ್ತು ಅವುಗಳ ವಿಸ್ತಾರಗಳು, ಇತ್ಯಾದಿ ಪ್ರಶ್ನೆಗಳೇಳುವವು. ಈ ಸವಸ್ಯೆಗಳನ್ನೆಲ್ಲ ಮಕ್ಕಳೇ ಬಗೆಹರಿಸಿಕೊಳ್ಳಬೇಕು. ಶಿಕ್ಷಕ-ಶಿಕ್ಷಕಿಯರು ಸಲಹೆ-ಸೂಚನೆಗಳನ್ನು ಅವಷವಿದಲ್ಲಿ ಮಾತ್ರ ಕೊಡುತ್ತಿರಬೇಕು. ಒಂದು ಯೋಜನೆಯಂದರೆ ಒಂದು ದೊಡ್ಡ ಸಮಸ್ಯೆಯು. ಆ ದೊಡ್ಡ ಸಮಸ್ಯೆಯಲ್ಲಿ ಮೇಲೆ ಹೇಳಿದಂತಹ ಅವಾಂತರ ಸಮಸ್ಯೆಗಳೆಷ್ಟೋ ಉದ್ಭವಿಸುತ್ತವೆ. ಇವುಗಳನ್ನೆಲ್ಲ ಮಕ್ಕಳೇ ಎದುರಿಸಿ ಪರಿಹರಿಸಿಕೊಳ್ಳುವದರಿಂದ ಅವರು ಜೀವನದ ಅನುಭವಗಳನ್ನೆಲ್ಲ ಪ್ರತ್ಯಕ್ಷವಾಗಿಯೂ ಪ್ರಮಾಣಿಸಿಯೂ ಪಡೆಯುವದುಂಟು. ಇದಕ್ಕಿಂತ ಹೆಚ್ಚಿನ ಶಿಕ್ಷಣವು ಯಾವದಿದೆ? ಮೂಲ ಶಿಕ್ಷಣವು ಈ ಪದ್ಧತಿಯಂತೆಯೇ ಇತ್ತೀಚಿಗೆ ಸಾಗುತ್ತಲಿದೆಯಲ್ಲವೇ ?

ಸಾರಾಂಶ : — ಇಲ್ಲಿಯ ವರೆಗೆ ಪದ್ಧತಿಗಳನ್ನೆಲ್ಲ ಕೂಲಂಕಷವಾಗಿ ವಿವರಿಸಿದ್ದಾಯಿತು. ಅವುಗಳ ಬಲಾಬಲಗಳನ್ನು ಮನದಂದು ಸಂದರ್ಭಕ್ಕೆ ತಕ್ಕಂತೆ ತಮಗೆ ಸರಿದೋರಿದ್ದನ್ನನುಸರಿಸುವದರಲ್ಲಿ ಶಿಕ್ಷಕ-ಶಿಕ್ಷಕಯರ ಹಿತವಿದೆ. ಹೊಸ ಶಿಕ್ಷಣದಲ್ಲಿ ವಿಷಯಗಳಿಗೆ ಮಹತ್ವವಿಲ್ಲ, ಮಗುವಿಗೆ ಮಹತ್ವವಿದೆ. ಹೊಸ ಶಿಕ್ಷಣವು ಮಗು ಪ್ರಧಾನವು. ಮಗುವಿಗೆ ಮನಂಬುಗುವಂತೆಯೂ ಹೃದಯಂಗಮಯವಾಗುವಂತೆಯೂ ಕಲಿಸುವದೇ ಈ ಪದ್ಧತಿಗಳಿಲ್ಲವುಗಳ ಗುರಿಯು. ಆ ಗುರಿಯನ್ನು ಸಾಧಿಸಲು ಮೇಲಿಂದ ಮೇಲೆ ಹೊಸ ಹೊಸ ಪದ್ಧತಿಗಳು ಉದಯವಾಗುತ್ತಲಿವೆ. ಶಿಕ್ಷಣ ಶಾಸ್ತ್ರದಲ್ಲಿ ಪದ್ಧತಿಗಳಿಗೆ ಕೊನೆ ಎಂಬುದಿಲ್ಲ. ಈ ಪದ್ಧತಿಗಳ ಜಾಲದಲ್ಲಿ ಸಿಲುಕಿಕೊಂಡು ಶಿಕ್ಷಕ-ಶಿಕ್ಷಕಿಯರು ಒದ್ದಾಡಕೂಡದು. ಅವರ ಹಿಡಿತದಲ್ಲಿ ಪದ್ಧತಿಗಳಿರಬೇಕು; ಪದ್ಧತಿಗಳ-ಹಿಡಿತದಲ್ಲಿ ಅವರು ಸಿಲುಕಿಕೊಂಡು ಕೂಡ್ರಬಾರದು. ಯಾವ ಸಂದರ್ಭದಲ್ಲಿ ಯಾವ ಪದ್ಧತಿಯನ್ನನುಸರಿಸಲು ಯೋಗ್ಯವೆಂಬುದನ್ನು ಕಂಡು ಹಿಡಿಯುವಷ್ಟು ಜಾಣಾಕ್ಷರಿರಬೇಕು. ಮೇಲಿನ ಇಯತ್ತೆಗಳಲ್ಲಿ ಉಪಯೋಗಿಸಲು ಯೋಗ್ಯವಾದ ಪದ್ಧತಿಗಳಾವವು, ಕೆಳಗಿನ ವರ್ಗಗಳಲ್ಲಿ ಉಪಯೋಗಿಸಲರ್ಹವಾದ ಪದ್ಧತಿಗಳಾವವು, ಎಂಬುದನ್ನು ಚನ್ನಾಗಿ ಮನದಂದು ಯಾವ ಪದ್ಧತಿಯು ಎಲ್ಲಿ ಯೋಗ್ಯವೋ ಅಲ್ಲಿಯೇ ಆದನ್ನು ಉಪಯೋಗಿಸುವದೊಳಿತು. ಕಲಿಸುವ ದೊಂದು ಕಲೆಯಿದೆಯಲ್ಲವೇ ? ಪ್ರತಿಯೊಬ್ಬ ಶಿಕ್ಷಕನಿಗೆ ಇಲ್ಲವೆ ಶಿಕ್ಷಕಿಗೆ ಕಲಿಸುವದರಲ್ಲಿ ವ್ಯಕ್ತಿತ್ವವಿದೆ; ತನ್ನದೇ ಆದೊಂದು ವಿಶಿಷ್ಟ ಶೈಲಿರಯಿವದುಂಟು. ಆ ವಿಶಿಷ್ಟ ಶೈಲಿಯನ್ನೇ ದಿನದಿನಕ್ಕೆ ಹೆಚ್ಚಿಚ್ಚಾಗಿ ರೂಪುಗೊಳಿಸುತ್ತಲೂ ಬಲಪಡಿಸುತ್ತಲೂ ಸಾಗುವದರಲ್ಲಿಯೇ ಶ್ರೇಯವಿದೆಯೆಂಬ ಮಾತನ್ನು ಎಲ್ಲರೂ ಬೇಗನೆ ತಿಳಕೊಂಡಷ್ಟು ಲೇಸು. ಈ ಪ್ರಕಾರ ತ್ರಿಕರಣಪೂರ್ವಕವಾಗಿ ಪ್ರಯತ್ನಬಟ್ಟುತಮ್ಮ ತಮ್ಮ ವ್ಯಕ್ತಿತ್ವದ ಮತ್ತು ವಿಶಿಷ್ಟ ಶೈಲಿಯ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳಬೇಕು, ಅಂತಹ ಶಿಕ್ಷಕ-ಶಿಕ್ಷಕಿಯರು ನಿಜಕ್ಕೂ ಆದರ್ಶ ಶಿಕ್ಷಕ-ಶಿಕ್ಷಕಿಯರಾಗುವರೆಂಬಲ್ಲಿ ಸಂದೇಹವಿದೆಯೇ ? ಅವರು ತಾವೂ ಬೆಳಗುವರಲ್ಲದೆ ತಮ್ಮ ಕೈಯಲ್ಲಿ ಕಲಿಯುವ ಮಕ್ಕಳನ್ನೆಲ್ಲ ಬೆಳಗಿಸಬಲ್ಲರು !

(ಮುಂದುವರಿಯುವುದು.)

ಶಿಕ್ಷಣದಲ್ಲಿಯ ದೋಷಗಳನ್ನು ನಿವಾರಿಸುವ ಬಗೆ

[ದಿನಾಂಕ ೨-೨-೨೫೨೨ನೆಯ ಶನಿವಾರ ದಿವಸ ಜರುಗಿದ ಅನ್ಯೂನಭಾವಿ ಗ್ರುಪ್ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ಡಾ! ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ ಧಾರವಾಡ, ಅವರು ಮಾಡಿದ ಭಾಷಣದ ಮುಖ್ಯಾಂಶಗಳು.—ಪ್ರಧಾನ ಸಂಪಾದಕರು.]

ಬಂಧು ಭಗಿನಿಯರೇ,

ಈ ಸಮ್ಮೇಲನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಆಸ್ಪದವಿತ್ತುದಕ್ಕೆ ನಿಮ್ಮೆಲ್ಲರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಸಮ್ಮೇಲನದಲ್ಲಿ ಮುಖ್ಯವಾಗಿ ಮೂರು ವಿಷಯಗಳನ್ನು ಕುರಿತು ಚರ್ಚಿಸಲಾಯಿತು. ಅವು ಯಾವುವೆಂದರೆ (೧) ೧೩ನೆಯ ಇಯತ್ತೆಯಲ್ಲಿ ಮೂಲೋದ್ಯೋಗ. (೨) ಹಾಜರಿ ಸುಧಾರಿಸುವದು (೩) ವಿಷಯಗಳ ಸಮನ್ವಯೀಕರಣ.

ಇವುಗಳಲ್ಲಿ ಪ್ರತಿಯೊಂದರ ಬಗೆಗೆ ನನ್ನ ವಿಚಾರಗಳನ್ನು ನಿಮ್ಮೆದುರಿನಲ್ಲಿ ಮಂಡಿಸುತ್ತೇನೆ—ಕೇವಲ ದೋಷಗಳನ್ನು ಹೇಳುವಲ್ಲಿ ಅರ್ಥವಿಲ್ಲ; ಆದರೆ ದೋಷಗಳನ್ನು ನಿವಾರಿಸುವ ಹಂಚಿಕೆಗಳನ್ನು ಹಾಗೂ ವಿಧಾಯಕ ಸೂಚನೆಗಳನ್ನು ಮಾಡುವದು. ಆದರಂತೆ ಆ ಸೂಚನೆಗಳನ್ನು ಅಮಲಿನಲ್ಲಿ ತರುವದು ಮಹತ್ವದ್ದಾಗಿದೆ.

(೧) ೧೩ನೆಯ ಇಯತ್ತೆಯಲ್ಲಿ ಮೂಲೋದ್ಯೋಗ:-

ಮೂಲೋದ್ಯೋಗವು ೧೩ನೆಯ ಇಯತ್ತೆಯಲ್ಲಿ ತೀರ ತುಸು ಅವಧಿ ಮಾತ್ರ ನಡೆಯುವದು ವಿಹಿತವೆಂದೂ ಬಹಳ ವೇಳೆಯ ವರೆಗೆ ಇರುವದರಿಂದ ಮಕ್ಕಳಿಗೆ ಬೇಸರವಾಗುವದೆಂದೂ ಚರ್ಚೆಯಿಂದ ತಿಳಿಯುತ್ತದೆ. ಬೇಸರವನ್ನು ನೀಗಿಸುವ ಉಪಾಯಗಳನ್ನು ಹುಡುಕಬೇಕಲ್ಲದೆ ಮೂಲೋದ್ಯೋಗವೇ ಬೇಡವೆಂದು ಹೇಳುವದು ಸಮಂಜಸವಾಗದು. ಬೇಸರವನ್ನು ನೀಗಲು ಕೆಳಗಿನ ಉಪಾಯಗಳನ್ನು ಕೈಕೊಳ್ಳಬೇಕು.

(ಅ) ಉದ್ದೇಶ : ಯಾವುದೊಂದು ಕೆಲಸವನ್ನು ಮಾಡಬೇಕಾದರೆ ಅದರ ಉದ್ದೇಶವು ಆ ಕೆಲಸದಲ್ಲಿ ತೊಡಗುವವರಿಗೆ ಬಿಂಬಿಸಿರಬೇಕು. ತಾವು ನೂತ ನೂಲಿನಿಂದ ತಮಗೆ ಆವಶ್ಯವಿರುವಷ್ಟಾದರೂ ಅರಿವೆಯನ್ನು ತಯಾರಿಸುವದು ಸಾಧ್ಯವಿದೆಯೆಂಬುದು ಮಕ್ಕಳಿಗೆ ಹೊಳೆಯಬೇಕು. ಉದ್ದೇಶ-ರಹಿತ ಕಾರ್ಯದಿಂದ ಬೇಸರವುಂಟಾಗುವದು ಸಹಜ. ಉದ್ದೇಶ ತಿಳಿಯದೆ ಒಂದೂವರೆ ತಾಸು ನೂಲ ಹಚ್ಚಿದರೆ ಮಕ್ಕಳಿಗೆ ತಾವು ಮಾಡುವ ಕೆಲಸದ ಅರ್ಥವೇ ಹೊಳೆಯುವದಿಲ್ಲ. ಅಭ್ಯಾಸ ಪತ್ರಿಕೆಯಲ್ಲಿ ನಮೂದಿಸಿದಷ್ಟು ನೂಲನ್ನು ನೂಲಿಸಿ ಬಿಟ್ಟರಾಯಿತು ಎಂದು ಮಕ್ಕಳಿಗೆ ನೂಲ ಹಚ್ಚುವದರಿಂದ ಸಾಲೆಯು ಕಾರಖಾನೆಯಾಗುವ ಸಂಭವವಿದೆ.ಮಕ್ಕಳು ಕೂಲಿಕಾರರಲ್ಲ.ಶಿಕ್ಷಣ ದೃಷ್ಟಿಯು ಪ್ರತಿಯೊಂದು ಕ್ರಿಯೆಯಲ್ಲಿ ಇರಬೇಕು. ಮಗುವು ಪ್ರತಿದಿನ ಮಾಡುವ ಕ್ರಿಯಾಂಗದ ಫಲಶ್ರುತಿಯೆಷ್ಟು ಎಂಬುದು ಅತನಿಗೆ ತಿಳಿಯಬೇಕು.ತಾನೊಂದು ಗುರಿಯ ಕಡೆಗೆ ಸಾಗಿರುವೆನೆಂಬುದು ಅತನಿಗೆ ಹೊಳೆದರೆ ಮಗುವು ಮೂಲೋದ್ಯೋಗದಲ್ಲಿ ಬೇಸರಪಟ್ಟುಕೊಳ್ಳಲಾರನು.

(ಆ) ಕಾರ್ಯದಲ್ಲಿ ವೈವಿಧ್ಯ :

ಬೇಸರವನ್ನು ನೀಗಿಸುವ ಎರಡನೆಯ ಉಪಾಯವೆಂದರೆ ವೈವಿಧ್ಯ. ದಿನಾಲು ನಿರ್ದಿಷ್ಟ ವೇಳೆಗೆ ನಿರ್ದಿಷ್ಟ ಕೆಲಸವನ್ನು ಮಾಡಿಸುವದರಿಂದ ಮಗುವಿಗೆ ಅಷ್ಟೇ ಏಕೆ ಎಲ್ಲರಿಗೂ ಬೇಸರವಾಗುವದು. ದಿನಾಲು ಒಂದೇ ತರದ ಆಹಾರ ಸೇವನೆಯಿಂದ ಸಹ ಬೇಸರ ಬರುವದು. ವಿವಿಧತೆಯು ಬೇಸರವೆಂಬ ರೋಗಕ್ಕೆ ತರಣೋಪಾಯ. ದಿನಾಲು ನೂಲಿಸದೆ—ಒಂದು ದಿನ ಹತ್ತಿಯ ಸ್ವಚ್ಛತೆ, ಇನ್ನೊಂದು ದಿನ ಪತ್ತಿ ಆರೆಯುವದು, ಮತ್ತೊಂದು ದಿನ ಹಿಂಜಿ ಹಿಂಜಿ ಹಾಕುವದು, ಮಗದೊಂದು ದಿನ ನೂಲುವದು, ಇನ್ನೊಂದು ದಿನ ಕೇವಲ ತಾತ್ವಿಕ ಜ್ಞಾನ ಮಾಡಿ ಕೊಡುವದು ಹೀಗೆ ಮೂಲೋದ್ಯೋಗದ

ಕ್ರಿಯೆಗಳಲ್ಲಿ ವಿವಿಧತೆಯನ್ನು, ಬದಲಾವಣೆಯನ್ನೂ ಕಲ್ಪಿಸಿಕೊಂಡು ಮೂಲೋದ್ಯೋಗವನ್ನು ಸಾಗಿಸಿದರೆ ಅದು ಎಂದೂ ಬೇಸರವನ್ನು ಹುಟ್ಟಿಸದು.

(ಇ) ಹಿತಕರವಾದ ಸ್ಪರ್ಧೆ :

ಮೂಲೋದ್ಯೋಗದಲ್ಲಿ ಸಹ ಸ್ಪರ್ಧೆಯು ಇತರ ವಿಷಯಗಳಲ್ಲಿಯಂತೆ ಬೇಸರವನ್ನು ನೀಗಿಸುವದಲ್ಲದೆ ಆಸಕ್ತಿಯನ್ನು ತಂದು ಕೊಡುವದು. ಪ್ರತಿಮಗುವಿಗೆ ಆತನ ದೈನಿಕ ಪ್ರಗತಿಯನ್ನು ತೋರಿಸಬೇಕು,ಆರಂಭದ ದಿನದ ಆತನ ಪ್ರಗತಿ, ಮರುದಿನದ ಪ್ರಗತಿ, ಮರು ವಾರದ ಪ್ರಗತಿಯನ್ನು ಆತನಿಗೆ ತಿಳಿಸಬೇಕು.ಪ್ರಗತಿಯು ಹೆಚ್ಚುತ್ತ ನಡೆದರೆ ಆತನಲ್ಲಿ ಆನಂದವೂ,ಅಭಿಮಾನವೂ ಸಹಜವಾಗಿ ಜನಿಸಿ ಅವನನ್ನು ಮತ್ತಿಷ್ಟು ಹೆಚ್ಚಿಗೆ ಕಾರ್ಯಪ್ರವೃತ್ತನನ್ನಾಗಿ ಮಾಡುವವು. ಪ್ರಗತಿಯು ಕಡಿಮೆಯಾದರೆ ಅವನನ್ನು ಪ್ರೋತ್ಸಾಹಿಸಿ ಹೆಚ್ಚು ಕಾರ್ಯದಕ್ಷನಾಗು ಎಂದು ತಿಳಿಸಬೇಕು. ವ್ಯಕ್ತಿ-ವ್ಯಕ್ತಿಗಳಲ್ಲಿಯ ಪ್ರಗತಿಯನ್ನು ಸಹ ತೋರಿಸಬೇಕು. ಇದಲ್ಲದೆ ಆಗಾಗ ಸಮೀಕ್ಷೆಯ ಶಾಲೆಗಳ ಆಯಾ ವರ್ಗದ ಸ್ಪರ್ಧೆಯನ್ನಿಡಬೇಕು. ಹೀಗೆ ಸ್ಪರ್ಧೆಯಿಂದ ಮೂಲೋದ್ಯೋಗದಲ್ಲಿ ಆಸಕ್ತಿಯು ಹೆಚ್ಚುವದು. ಸ್ಪರ್ಧೆಯು ಹಿತಕರವಾಗಿರಬೇಕು. ಇಲ್ಲದಿದ್ದರೆ ಅದರಿಂದ ದ್ವೇಷಾಸೂಯೆಗಳು ಹೆಚ್ಚುವವು. ಶಿಕ್ಷಕರು ಹಿತಕರವಾದ ಸ್ಪರ್ಧೆಯನ್ನು ಏರ್ಪಡಿಸುವಂತೆ ನೋಡಿಕೊಳ್ಳಬೇಕು.

(ಈ) ಪ್ರೋತ್ಸಾಹ :

ಪ್ರೋತ್ಸಾಹನೆ ಕೊಡುವದರಿಂದ ತೀರ ಹಿಂದುಳಿದ ಮನುಷ್ಯನು ಸಹ ಮುಂದುವರಿಯುವನು. ಮಕ್ಕಳ ವಿಷಯದಲ್ಲಿಯಂತೂ ಪ್ರೇಮ, ಪ್ರೋತ್ಸಾಹಗಳು ಒಳ್ಳೆಯ ಉತ್ಸಾಹಿತರನ್ನಾಗಿ ಮಾಡುವವು. ಮಗುವಿನ ತಪ್ಪುಗಳನ್ನು ನೇರವಾಗಿ ಎಣಿಸದೆ ಅವನ ಅಲ್ಪ ಪ್ರಗತಿಯನ್ನೇ ದೊಡ್ಡದನ್ನಾಗಿ ತೋರಿಸಿ, ಅವನ ಬೆನ್ನು ಚಪ್ಪರಿಸಿ ಹುರುಪುಗೊಳಿಸಿದರೆ, ಆ ಮಗುವು ಬೇಸರಪಟ್ಟುಕೊಳ್ಳದೆ ಪ್ರಗತಿಪರವಾಗಿ ಕೆಲಸ ಮಾಡಬಲ್ಲನು. ಮಗುವಿನ ಮನೋವಿಶ್ಲೇಷಣವೇ ಆ ರೀತಿಯಾಗಿದೆ.

ಮೇಲ್ಕಾಣಿಸಿದ ಈ ಉಪಾಯಗಳನ್ನು ಶಿಕ್ಷಕರು ಕೈಕೊಂಡು ಕಾರ್ಯೋನ್ಮುಖರಾದರೆ ಮೂಲೋದ್ಯೋಗವು ಗನೆಯ ಇಯತ್ತೆಯಲ್ಲಿ ಹಿತಕರವಾದ ಕಾರ್ಯವಾಗಿ ಪರಿಣಮಿಸುವದು.

(೨) ಹಾಜರಿ ಸುಧಾರಿಸುವದು :

ಒತ್ತಾಯ ಶಿಕ್ಷಣವು ಅಮಲಿನಲ್ಲಿ ಬಂದದ್ದರಿಂದ ವಿಶೇಷವಾಗಿ ಗನೆಯ, ೨ನೆಯ ಇಯತ್ತೆಗಳಲ್ಲಿ ಮಕ್ಕಳ ಸಂಖ್ಯೆಯು ಬೆಳೆದಿದೆಯೆಂದು, ಪಾಲಕರ ಅಜ್ಞಾನ ಹಾಗೂ ಬಡತನಗಳಿಂದ ಶಿಕ್ಷಕರು ಎಷ್ಟೇ ಪ್ರಯತ್ನಿಸಿದರೂ ಹಾಜರಿ ಸಂಖ್ಯೆಯು ಬೆಳೆಯಲಿಲ್ಲವೆಂದೂ ಚರ್ಚೆಯಿಂದ ತಿಳಿಯುತ್ತದೆ. ಈ ವಿಷಯದಲ್ಲಿ ಹೇಳಬಯಸುವದಿಷ್ಟೇ-ಭಾರತ ಸ್ವಾತಂತ್ರ್ಯಕ್ಕಿಂತ ಮೊದಲಿನ ಶಿಕ್ಷಕರು ನಾವು ಅಲ್ಲ; ಸ್ವತಂತ್ರ ಭಾರತದ ಶಿಕ್ಷಕರು ನಾವು ಎಂಬ ಭಾವನೆಯು ನಮ್ಮೆಲ್ಲರಲ್ಲಿ ಒಡಮೂಡಬೇಕು. ತನ್ನ ಕಾರ್ಯಕ್ಷೇತ್ರವು ನಾಲ್ಕು ಗೋಡೆಗಳಿಂದ ಮರ್ಯಾದಿತವಾದ ವರ್ಗದ ಕೋಣೆಯಲ್ಲಿ ಮಾತ್ರ ಎಂದೂ, ಕಾರ್ಯದ ಅವಧಿಯು ಸಾಲೆಯ ವೇಳೆ ಅಂದರೆ ೬ತಾಸು ಮಾತ್ರ ಎಂದೂ ಸ್ವತಂತ್ರ ಭಾರತದ ಶಿಕ್ಷಕನು ತಿಳಿಯಬಾರದು. ಪ್ರತಿಯೊಬ್ಬ ನೌಕರನು ತಾನು ದಿನದ ೨೪ ತಾಸುಗಳೆಲ್ಲ ಜನತೆಯ ಸೇವಕನೆಂದು ತಿಳಿಯಬೇಕು. ಅದರಂತೆ ಶಿಕ್ಷಕನು ತಾನು ಕೆಲಸ ಮಾಡುವ ಹಳ್ಳಿಯ ಜನರ ಸೇವಕನೆಂದು ತಿಳಿಯಬೇಕು. ಹಳ್ಳಿಗರು ಕೊಡುವ ಲೋಕಲ್ ಫಂಡಿನಿಂದ ತನಗೆ ಸಂಬಳವು ಸಿಗುತ್ತದೆಂದೂ, ಉಪ್ಪು ಉಣ್ಣುತ್ತಿರುವ ಆ ಹಳ್ಳಿಗರ ಕಲ್ಯಾಣ ಮಾಡುವದು ತನ್ನ ಕರ್ತವ್ಯವೆಂದೂ ಭಾವಿಸಬೇಕು. ಸಾಲೆ ತಪ್ಪಿಸುವ ಪಾಲಕರ ಮನೆಗೆ ಹೋಗಿ ಪಾಲಕರನ್ನು ಕಂಡು ಕೇಳಿ ಅವರ ಮನವೊಲಿಸಿ ಅವರ ಮಕ್ಕಳನ್ನು ಸಾಲೆಗೆ ಬರುವಂತೆ ಯತ್ನಿಸಬೇಕು. ಶಾಲೆಯಿಂದ ಮನೆಗೆ ಬರುವಾಗ, ಮನೆಯಿಂದ ಶಾಲೆಗೆ ಹೋಗುವಾಗ ಪಾಲಕರು ಅಕಸ್ಮಾತ್ತಾಗಿ ಭೆಟ್ಟಿಯಾದಾಗ ಸಹಜರೀತಿಯಿಂದ ಪಾಲಕರನ್ನು ವಿಚಾರಿಸಿ ತನ್ನ ಕಳಕಳಿಯನ್ನು ವ್ಯಕ್ತಪಡಿಸಿದರೆ, ಎಷ್ಟೇ ಅನಾನುಕೂಲತೆಗಳಿದ್ದರೂ ತಂದೆಯು ತನ್ನ ಮಗನನ್ನು ಸಾಲೆಗೆ ಕಳಿಸುವದರಲ್ಲಿ ಸಂದೇಹವಿಲ್ಲ.

ತಂಡೆ-ತಾಯಿಗಳು ಎಷ್ಟೇ ಅಜ್ಞಾನಿಗಳಿದ್ದರೂ, ಮಕ್ಕಳ ಮೇಲಿನ ಮಮತೆಯು ಅವರಲ್ಲಿ ಅಪಾರವಾಗಿ

ಇರುತ್ತದೆ. ಮನುಷ್ಯನು ಮನುಷ್ಯನೇ. ತನ್ನ ಮಗನು ವಿದ್ಯಾವಂತನಾಗಬೇಕೆಂದೂ, ಸುಖಿಯಾಗಿ ಬಾಳಬೇಕೆಂದೂ, ಪ್ರತಿಯೊಬ್ಬನು ವ್ಯಕ್ತಾವ್ಯಕ್ತವಾಗಿ ಇಚ್ಛಿಸುತ್ತಾನೆ. ಪಾಲಕರಲ್ಲಿ ಹುದುಗಿದ ಈ ಅಂತರ್ಜ್ಯೋತಿಯನ್ನು ಹೊತ್ತಿಸುವದು ಶಿಕ್ಷಕರ ಕಳಕಳಿ, ಹಾರ್ದಿಕ ಪ್ರೇಮ ಮಾತ್ರ. ವಿಶಾಲ ದೃಷ್ಟಿಯಿಂದ ಸಾಗಿದ್ದಾದರೆ, ಹಾಜರಿ ಸುಧಾರಿಸುವದು ಅಷ್ಟೊಂದು ಕಠಿಣವಾಗದು.

ಪಾಲಕರ ಅಜ್ಞಾನವು ಸಹ ತಮ್ಮ ಮಕ್ಕಳನ್ನು ಶಾಲೆಯಿಂದ ದೂರಿರಿಸಲಿಕ್ಕೆ ಒಂದು ಕಾರಣವಾಗಿದೆ. ಅಜ್ಞಾನ, ಹಾಗೂ ಅಕ್ಷರ ಶತ್ರುಗಳಾದ ಪಾಲಕರಲ್ಲಿ ಸಾಕ್ಷರತೆಯನ್ನು ಉಂಟು ಮಾಡಲಿಕ್ಕೆ, ಅವರಲ್ಲಿ ಜ್ಞಾನ, ತಿಳಿವಳಿಕೆಯನ್ನು ಹುಟ್ಟಿಸಲಿಕ್ಕೆ ಶಿಕ್ಷಕರು ಯತ್ನಿಸಬೇಕು. ಸಮಾಜಶಿಕ್ಷಣ ವರ್ಗಗಳನ್ನು ತೆರೆದು ಪಾಲಕರಲ್ಲಿ ಜ್ಞಾನದೀಪಟಿಗೆಯನ್ನು ಹೊತ್ತಿಸಿ ಅವರಲ್ಲಿ ದೂರದರ್ಶಿತ್ವವನ್ನು ತರಬೇಕು. ಪಾಲಕರು ಸುಜ್ಞಾನಿಗಳಾದರೆ, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಹಂಬಲವು ತಾನಾಗಿಯೇ ಜನಿಸುವದು ಪಾಲಕರ ಅಜ್ಞಾನ ಹಾಗೂ ಹಾಜರಿ ಸುಧಾರಣೆ ಇವು ಪರಸ್ಪರ ಹೆಣೆದುಕೊಂಡಿವೆ. ಶಹರದಲ್ಲಿ ಬಡತನವಿದ್ದರೂ ಪಾಲಕರು ತಿಳಿವಳಿಕೆಯವರಿರುವದರಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಲಕ್ಷ್ಯಹಾಕುವರು. ಕಾರಣ ಶಿಕ್ಷಕರು ಪಾಲಕರಲ್ಲಿ ಜಾಗ್ರತಿಯನ್ನು ಹುಟ್ಟಿಸಿದರೆ ಮಕ್ಕಳ ಹಾಜರಿಯು ತಾನಾಗಿಯೇ ಬೆಳೆಮ ಬರುವದು.

(೩) **ವಿಷಯಗಳ ಸಮನ್ವಯೀಕರಣ**:—

ವಿಷಯಗಳನ್ನು ಸಮನ್ವಯಗೊಳಿಸಲಿಕ್ಕೆ ಧಾರವಾಡ ಮೊದಲಾದ ಶಹರಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗುವ ಕಾರಣವಿಲ್ಲ. ಮಗುವಿನ ಶಿಕ್ಷಣವು ಆತನು ಹುಟ್ಟಿದ, ಬೆಳೆದು ಬಾಳಬಹುದಾದ ವಾತಾವರಣದ ಮುಖಾಂತರ ಸಾಗುವದು ಹೆಚ್ಚು ಇಷ್ಟವಾದದ್ದು. ಮಗುವು ಶಾಲೆಯಲ್ಲಿ ಮಾಡಬಹುದಾದ ಉದ್ಯೋಗ, ಆತನು ಜೀವಿಸಿರುವ ಹಳ್ಳಿಯ ಸಮಾಜ, ಅನುಭವಿಸುವ, ನೆರವೇರಿಸುವ ಸಾಮಾಜಿಕ ಚಟುವಟಿಕೆಗಳು ತನ್ನ ಹಳ್ಳಿಯ ಸುತ್ತಲಿನ ನಿಸರ್ಗದಲ್ಲಿ ಕಂಡು ಬರುವ ಮನಮೋಹಕ ದೃಶ್ಯಗಳು—ಈ ಮೂರೂ ಸಂಗತಿಗಳು ಮಗುವಿನ ಹೃದಯವನ್ನು ಅರಳಿಸಬೇಕು. ಈ ತ್ರಿವೇಣಿ ಸಂಗಮವು ಮಗುವಿನ ಹೃದಯದಲ್ಲಿ ಉಂಟಾದಾಗ ಮಾತ್ರ ಅವನು ಜ್ಞಾನವಂತನಾಗಿ ಹಳ್ಳಿಯ ಸಮಾಜಕ್ಕೆ ಪರಿಪೋಷಕ ವ್ಯಕ್ತಿಯಾಗುವನು. ಈ ಮೂರು ಪ್ರಕಾರದ ಸಂಪತ್ತುಗಳನ್ನು ಉಪಯೋಗಿಸಿ ಶಿಕ್ಷಕರು ಮಕ್ಕಳಿಗೆ ವಿಷಯಗಳನ್ನು ಸಮನ್ವಯಿಸಬೇಕು.

ಇವಕ್ಕೆ ಸಂಬಂಧವಿಲ್ಲದೆ ಯಾವುದಕ್ಕೂ ಸಂಬಂಧವಿರದ ಪ್ರಕಾಶಕರಿಂದ ಪ್ರಕಟವಾದ ಪಠ್ಯಪುಸ್ತಕಗಳಿಂದ ಪ್ರಯೋಜನವಾಗದು; ವಿರುದ್ಧವಾಗಿ ಅನಿಷ್ಟವಾಗುವದು. ಪಠ್ಯಪುಸ್ತಕಗಳು ಸಮ್ಮೇಲನದ ವಿಚಾರಶಕ್ತಿಯನ್ನು ಕುಂದಿಸಿವೆ; ಕರ್ತವ್ಯವಿಮುಖರನ್ನಾಗಿ ಮಾಡಿವೆ. ಪಾಲಕರ ರಕ್ತವನ್ನು ಜಿಗಲಿಗಳಂತೆ, ಶೋಷಿಸುತ್ತಿವೆ. ಸ್ವೈಜ ಸಂಗತಿಗಳಿಂದ, ಜ್ಞಾನದಿಂದ ನಮ್ಮ ಮಕ್ಕಳನ್ನು ಬಹುದೂರ ಒಯ್ಯುತ್ತಿವೆ. ಪ್ರತ್ಯಕ್ಷ ನೋಡಿದರೂ ಪಠ್ಯಪುಸ್ತಕವೇ ಪ್ರಮಾಣವೆನ್ನುವಷ್ಟು ಗುಲಾಮಗಿರಿಯು ನಮ್ಮಲ್ಲಿ ಬೆಳೆದು ಬಿಟ್ಟಿದೆ. ಶಿಕ್ಷಕರಾದವರು ದಿನಾಲು ಕಾಣುವ ಸತ್ಯ ಸಂಗತಿಗಳಿಂದ, ಅನುಭವಿಸುವ ಅನುಭವಗಳಿಂದ ತಮ್ಮವೇ ಆದ ಪಠ್ಯಪುಸ್ತಕಗಳನ್ನು ರಚಿಸಿಕೊಂಡು ವಿಷಯಕ್ರಮವನ್ನು ಸಾಗಿಸಬೇಕು. ಅಂದರೆ ಮಾತ್ರ ಸ್ವತಂತ್ರ ವಿಚಾರ ಸರಣಿಯನ್ನು, ಸ್ವೈಜ ನಾಗರಿಕತೆಯ ಗುಣಗಳನ್ನು ಮಕ್ಕಳಲ್ಲಿ ಒಡಮೂಡಿಸಲಿಕ್ಕೆ ಅನುಕೂಲವಾಗುವದು.

ಈ ಸಮ್ಮೇಲನವನ್ನು ಕರೆದು, ಅದರಲ್ಲಿ ಭಾಗವಹಿಸಿ ಯಶಸ್ವಿಯಾಗುವಂತೆ ನೆರವೇರಿಸಿದ ನಿಮಗೆಲ್ಲರಿಗೆ ಮತ್ತೊಮ್ಮೆ ನನ್ನ ಕೃತಜ್ಞತೆಗಳು.

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

ಶಿರಸಿ ತಾಲೂಕಾ ಶಾಲೆಯು **ವಿದ್ಯಾರ್ಥಿ** ಎಂಬ ತ್ರೈಮಾಸಿಕ ಕೈಬರೆಹದ ಪತ್ರಿಕೆಯನ್ನು ಪ್ರಕಟಿಸಿತು. ಇದರ ಉದ್ಘಾಟನೆಯ ಸಮಾರಂಭವು ೧೯–೧೧–೧೯೫೧ ನೆಯ ದಿನ ಎಜ್ಯುಕೇಶನಲ್ ಇನಸ್ಪೆಕ್ಟರ ಡಾ|| ಚಿಕ್ಕುರಮನೆ ಆವರ ಹಸ್ತದಿಂದ ನೆರವೇರಿತು.

ಹುಬ್ಬಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ೧೯೫೧ ನವಂಬರ ೩ ಮತ್ತು ೪ನೆಯ ತಾರೀಖಿನ ದಿನ ಮೈಸೂರು ಸಂಸ್ಥಾನದ ವಿದ್ಯಾಖಾತೆಯ ಡೈರೆಕ್ಟರರಾದ **ಡೀ. ಕೆ. ಗುರುದತ್ತ** ಅವರಿಂದ ಉದ್ಘಾಟಿಸಲ್ಪಟ್ಟು, ಹೊಸಪೇಟೆಯ ಡಾ|| ನಾಗನಗೌಡರ ಅಧ್ಯಕ್ಷತೆಯಲ್ಲಿ ಜರುಗಿತು. ಅನೇಕ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳನ್ನು ಕುರಿತು ಚರ್ಚೆಗಳಾದವು.

ಕರೂರದಲ್ಲಿ ಪ್ರಾಥಮಿಕ ಶಿಕ್ಷಕರ ಸಂತೋಷ ಶಿಬಿರವು ೫–೧೧–೧೯೫೧ ರಿಂದ ೧೫–೧೧–೧೯೫೧ರ ವರೆಗೆ ಜರುಗಿತು. ನಾಲ್ಕು ಜಿಲ್ಲೆಗಳಿಂದ ಇರ್ವರು ಶಿಕ್ಷಿಕಿಯರನ್ನೊಳಗೊಂಡು ೫೦ ಶಿಕ್ಷಕರು ಈ ಶಿಬಿರದ ಲಾಭವನ್ನು ಪಡೆದರು. ಈ ಶಿಬಿರದ ಸದಸ್ಯರು ಹರಿಹರ, ಡಾವಣಗೆರೆ, ಮದಗ ಕೆರೆ, ಐಹಣಿ ಕೋಟೆ, ದೇವರಗುಡ್ಡಗಳನ್ನು ಸಂದರ್ಶಿಸಿದರು ಮತ್ತು ಅನೇಕ ಶೈಕ್ಷಣಿಕ ವಿಷಯಗಳನ್ನು ಕುರಿತು ಚರ್ಚೆನಡಿಸಿದರು. ಈ ಶಿಬಿರದ ಸುಂದರ ವರ್ಣನೆಯನ್ನು ಗೋಸನಕೊಪ್ಪದ ಶಾಲಾ ಗುರುಗಳಾದ ಶ್ರೀ. ರೇವಣಸಿದ್ಧೇಶ್ವರ ಮಾಳವಾಡ ಅವರು ಬರೆದು ಕಳುಹಿದ್ದರು. ಅದನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಹಿರೇನರ್ತಿಯ ಕನ್ನಡ ಗಂಡು ಮಕ್ಕಳ ಶಾಲೆಯ ಮೇಲಿನ ವರ್ಗದ ಬಾಲಕರು ೬ ಜನ ಶಿಕ್ಷಕರೊಡನೆ ತಾ. ೭–೧೦–೫೧ ರಿಂದ ಒಂದು ವಾರದ ವರೆಗೆ ತುಂಗಭದ್ರಾ ಒಡ್ಡಿನ ಯೋಜನೆಯಕಾರ್ಯ, ಹಂಪಿ ಮುಂತಾದವುಗಳನ್ನು ನೋಡಲು ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಿದ್ದರು.

ನೆಗಳೂರ ಆದರ್ಶ ಗ್ರಾಮದಲ್ಲಿಯೂ, ಗಾಂಧೀ ಜಯಂತಿಯ ದಿನ ಸ್ವಚ್ಛತೆ, ಹಾಗೂ ಸೂತ್ರಯಜ್ಞ, ಭಾಷಣದ ಕಾರ್ಯಕ್ರಮಗಳು ಜರುಗಿದವು. ಹುನಗುಂದದಲ್ಲಿ ಶಾಲೆಯ ಬಾಲಕರು ಕಳೆದ ತಿಂಗಳ ೧೫ನೆಯ ತಾರೀಖಿನ ದಿನ ಗ್ರಾಮಸ್ವಚ್ಛತೆಯನ್ನುಮಾಡಿದರು. **ಹಳಗೆಜೂಗ** (ಕಾರವಾರ) ದಲ್ಲಿ ಕಳೆದ ತಿಂಗಳ ೧೫ನೆಯ ತಾರೀಖಿಗೆ ಸಮಾಜ ಶಿಕ್ಷಣ ದಿನಾಚರಣೆಯನ್ನು ಆಚರಿಸಲಾಯಿತು ಮತ್ತು ಹೊಸ ಪ್ರೌಢಶಿಕ್ಷಣ ವರ್ಗವು ತೆರೆಯಲ್ಪಟ್ಟಿತು.

ನರೇಂದ್ರ, ಮುಮ್ಮಿಗಟ್ಟಿ, ಗರಗ, ತಡಕೋಡ, ಕೊಟಬಾಗಿ, ಲೋಕೂರ, ಬೆಟಗೇರಿ, ಮುಳಮುತ್ತಲ, ಕಲ್ಲೂರ, ಕಬ್ಬೇನೂರ, ಪುಡಕಲಕಟ್ಟಿ ಈ ಮೂಲಶಿಕ್ಷಣ ಪ್ರಾಯೋಗಿಕ ಕ್ಷೇತ್ರದಲ್ಲಿ ೬೩ನೆಯ ಚರಖಾ ಜಯಂತಿಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ೬೩ ಗಂಟೆಯ ಅಖಂಡ ಸೂತ್ರಯಜ್ಞ ನಡೆಯಿತು. ಒಟ್ಟು ೧೬೧೧ ರೂಪಾಯಿ ೧೧ ಆಣೆ ಬೆಲೆಯ ನೂಲಿನ ಹುಟ್ಟುವಳಿಯಾಯಿತು. ಗರಗ ಶಾಲೆಯ ಬಾಲಕರೇ ತಮ್ಮ ನೂಲಿನಿಂದ ತಾವೇ ಬಟ್ಟೆಯನ್ನು ನೇಯ್ದಿದ್ದಾರೆ. ಮತ್ತು ಸದರ ಸೂತ್ರಯಜ್ಞದಲ್ಲಿ ಭಾಗವಹಿಸಿದವರಿಗೆಲ್ಲರಿಗೂ ಈ ನೂಲಿನಿಂದ ನೇಯ್ದು ಬಟ್ಟೆಯನ್ನು ಹಂಚುವ ವ್ಯವಸ್ಥೆ ಮಾಡಿದೆಯೆಂದು ಬೇಸಿಕ್ ಸುಪರವಾಯಿಜರರಾದ ಶ್ರೀ. ಈ. ಶಿ. ಬಿದರಿಯವರು ತಿಳಿಸುತ್ತಾರೆ.

ಬೆಳಗಾವಿ ಮುನ್ಸಿಪಲ್ ಸ್ಕೂಲ ಬೋರ್ಡಿನ ಎಲ್ಲ ಪ್ರಾಥಮಿಕ ಶಾಲೆಗಳ ಶಾರೀರಿಕ ಶಿಕ್ಷಣದ ಚಟುವಟಿಕೆಗಳನ್ನು ೩೦–೧೧–೫೧ನೆಯ ದಿನ ಮುಂಬಯಿ ರಾಜ್ಯದ ಶಾರೀರಿಕ ಶಿಕ್ಷಣಾಧಿಕಾರಿಗಳಾದ ಶ್ರೀ. ಜಾವಡೇಕರ ಅವರು ನೋಡಿ ಆನಂದವನ್ನು ವ್ಯಕ್ತಗೊಳಿಸಿದರು. **ಸೋಂಡಾ, ಧಾರವಾಡ** ಮುಂತಾದ ಕಡೆಗಳಲ್ಲಿ ಶಾರೀರಿಕ ಶಿಕ್ಷಣ ದಿನಾಚರಣೆಯನ್ನು ವಿಜೃಂಭಣೆಯಿಂದ ಜರುಗಿಸಲಾಯಿತು.

ಮಾರೀಹಾಳದ ಶಾಲೆಯಲ್ಲಿ ಶೈಕ್ಷಣಿಕ ಉಪನ್ಯಾಸ ಮಾಲೆಯ ಪ್ರಾರಂಭೋತ್ಸವವನ್ನು ಮೆ।ಏ.ಓ. ರವರಾದ ಶ್ರೀ. ಹೆಗಡೆಯವರು ೨-೧೨-೫೧ ರಂದು ನೆರವೇರಿಸಿದರು. ಅಂದೇ ಪ್ರೊ. ಎಸ್. ಎಸ್. ಹುಕ್ಕೇರಿ ಅವರು 'ಕನ್ನಡ ಭಾಷೆ'ಯ ಮೇಲೆ ಉಪನ್ಯಾಸ ಮಾಡಿದರು.

ಧಾರವಾಡದಲ್ಲಿ ಪ್ರತಿ ವರುಷದಂತೆ ೧೯-೧೧-೫೧ ರಂದು ಗಣೇಶ ನಿಬಂಧ ಸ್ಪರ್ಧೆಯು ನಡೆಯಿತು. ಅನೇಕ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಐವರು ಸಾರಿತೋಷಕಗಳನ್ನು ಪಡೆದರು. ಪಾರಿತೋಷಕದ ಮೂರು ಮೂರು ರೂಪಾಯಿಗಳನ್ನು ಗಂ. ಸ. ಟ್ರೇ. ಕಾಲೇಜದ ಪ್ರಿನ್ಸಿಪಾಲ ಶ್ರೀ. ಕುರ್ತಕೋಟಿಯವರು ಹಂಚಿದರು.

ಲಚ್ಯಾಣದ ಎಸ್. ಎಸ್. ಟ್ರೇನಿಂಗ ಕಾಲೇಜದ ೨ನೆಯ ವರುಷದ ಶಿಕ್ಷಕ ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರೊಂದಿಗೆ ಧಾರವಾಡದ ಕೃಷಿವಿದ್ಯಾಲಯ, ಜೀವನ ಶಿಕ್ಷಣ ಕೇಂದ್ರ, ಬೋರ್ಸ್ಟಲ್ ಸ್ಕೂಲ್, ಕನ್ನಡ ಸಂಶೋಧನ ಸಂಸ್ಥೆ, ಆಕಾಶವಾಣಿಯ ಕೇಂದ್ರ, ಗಂ. ಸ. ಟ್ರೇ. ಕಾಲೇಜುಗಳನ್ನು, ಹುಬ್ಬಳ್ಳಿಯ ಭಾರತವಿಲ್ ಅ ಭಾ. ಚರಖಾ ಸಂಘ, ಸಂಯುಕ್ತ ಕರ್ನಾಟಕ ಪ್ರೆಸ್ ಗಳನ್ನು ನೋಡಿಕೊಂಡು ಬಾಗಿಲುಕೋಟಿಗೆ ಹೋಗಿ ತಿರುಗಿ ಲಚ್ಯಾಣವನ್ನು ತಲುಪಿ ಶೈಕ್ಷಣಿಕ ಪ್ರವಾಸ ಮುಗಿಸಿದರು.

ಕ. ಗ. ಮ. ಸೆ ಸ್ಕೂಲ್ ಧಾರವಾಡ ಇಲ್ಲಿಯ ಬಾಲಕರ ಚರ್ಚಾಕೂಟದ ದ್ವಿತೀಯ ವಾರ್ಷಿಕೋತ್ಸವ

ದಿ. ೫—೧೨—೧೯೫೧ ರಂದು ಶ್ರೀ. ಬಿ. ಎಮ್. ಶಂತ್ರಿ, ನಿವೃತ್ತ ಅಸಿ॥ ಎ. ಇನಸ್ಪೆಕ್ಟರವರ ಹಿರಿಯತನದಲ್ಲಿ ಚರ್ಚಾಕೂಟದ ದ್ವಿತೀಯ ವಾರ್ಷಿಕೋತ್ಸವು ಜರುಗಿತು. ಪ್ರಾರ್ಥನೆ ಹಾಗೂ ನಾಡಗೀತೆಯೊಡನೆ ಸಭೆಯು ಆರಂಭವಾಯಿತು. ಮುಖ್ಯ ಗುರುಗಳಾದ ಶ್ರೀ. ಕ. ಬ. ಮುಮ್ಮಿಗಟ್ಟಿಯವರು ಸ್ವಾಗತಪರ ಭಾಷಣ ಮಾಡಿದ ಮೇಲೆ ಚರ್ಚೆಗೆ ಆರಂಭವಾಯಿತು. "ಅಧಿಕಾರ ಬಲ ಮೇಲು" ಎಂದು ೫ ಬಾಲಕರೂ, ಶ್ರೀ. ಬಿ. ಕೆ. ಕೆಲಗೇರಿ ಗುರುಗಳೂ, ಹಾಗು "ಸಹಕಾರ ಬಲ ಮೇಲು" ಎಂದು ೫ ಬಾಲಕರೂ, ಶ್ರೀ. ಕೆ. ಎಚ್. ಕುಲಕರ್ಣಿ ಗುರುಗಳೂ, ಚರ್ಚೆಯಲ್ಲಿ ಭಾಗವಹಿಸಿದ್ದರು. ಬಳಿಕ ಶ್ರೀ. ಈ. ಶಿ. ಅರಳಗುಪ್ಪಿಯವರು ಚರ್ಚಾಕೂಟದ ವರದಿಯನ್ನು ಓದಿದ ಮೇಲೆ ಶ್ರೀಮಾನ್ ಬಿ. ಎಸ್. ಲಕಮನಹಳ್ಳಿ ಪ್ರೆಸಿಡೆಂಟ ಮುನಿಸಿಪಲ್ ಬರೋ ಧಾರವಾಡ ಅವರಿಂದ ಶಾಲೆಯ ಬಾಲಕರಿಂದ ಹಾಗೂ ಗುರುಗಳಿಂದ ಬರೆಯಲ್ಪಟ್ಟ " ಬಾಲಕರಣ " ವೆಂಬ ವಾರ್ಷಿಕ ದ್ವಿತೀಯ ಸಂಚಿಕೆಯು ಪ್ರಕಟಿಸಲ್ಪಟ್ಟಿತು. ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಮೊದಲು ಶಾಲೆಯ ಪ್ರಗತಿಪರ ಚಟುವಟಿಕೆಗಳನ್ನು ಕಂಡು ತುಂಬ ಸಂತೋಷ ವ್ಯಕ್ತಗೊಳಿಸಿದರಲ್ಲದೆ, ಅಧಿಕಾರ ಬಲವು ಏಕೆ ಬೇಕು? ಯಾವಾಗ ಬೇಕು? ಅದನ್ನು ಹೇಗೆ ಉಪಯೋಗಿಸಬೇಕು? ಇಲ್ಲವಾದರೆ ಉಂಟಾಗುವ ಅನರ್ಥಗಳೇನು? ಹಾಗೂ ಸಹಕಾರದ ಮಹತ್ವವೇನು? ಅದರ ವ್ಯಾಪಕತೆ ಎಷ್ಟು? ಎಂಬ ಇವೇ ಮೊದಲಾದವುಗಳನ್ನು ಪೌರಾಣಿಕ ಐತಿಹಾಸಿಕ ಉದಾಹರಣೆಗಳಿಂದ ಸ್ಪಷ್ಟವಾಗಿ ತಿಳಿಸಿದರು, ಅಲ್ಲದೆ ಅಧಿಕಾರ-ಸಹಕಾರ ಇವುಗಳ ಸಮರಸದಿಂದಲೇ ನಮ್ಮ ಭಾರತದ ಕಲ್ಯಾಣವಿದೆ ಎಂದೂ ಹೇಳಿದರು. ಶ್ರೀ. ರಾಮಣ್ಣಾ ಆಕಳವಾಡಿಯವರು ದಯಪಾಲಿಸಿದ ೧೦ ಪುಸ್ತಕಗಳನ್ನು ಚರ್ಚೆಯಲ್ಲಿ ಭಾಗವಹಿಸಿದ ೧೦ ಬಾಲಕರಿಗೆ, ಹಾಗೂ ಅಂದಿನ ಸಭೆಯಲ್ಲಿ ಜೆನ್ನಾಗಿ ಮಾತನಾಡಿದ ಮೂವರು ಬಾಲಕರಿಗೆ ಶ್ರೀ. ಬ. ಉ. ಬೆಳ್ಳಕ್ಕಿ ನಿವೃತ್ತ ಶಾಲಾ ಗುರುಗಳು ದಯಪಾಲಿಸಿದ ಮೂರು ಬೆಳ್ಳಿಯ ಪಾರಿತೋಷಕಗಳನ್ನು ಅಧ್ಯಕ್ಷರಿಂದ ವಿತರಣ ಮಾಡಿಸಲ್ಪಟ್ಟಿತು. ಕುಮಾರ ಶ್ರೀ. ತ್ರಿ. ನಾಯಿಕ ಈತನಿಂದ ಪೂಮಾಲೆ ಸಮರ್ಪಣ ಹಾಗೂ ಆಭಾರ ಮನ್ನಣೆಯಾಗಿ ರಾಷ್ಟ್ರಗೀತೆಯೊಡನೆ ಸಭೆಯು ಕೊನೆಗಂಡಿತು. ಅಂದಿನ ಸಭೆಗೆ ಶಿಕ್ಷಣ ತಜ್ಞರೂ, ಶಿಕ್ಷಣಾಧಿಕಾರಿಗಳೂ ಪ್ರತಿಷ್ಠಿತ ನಾಗರಿಕರೂ ಬಂದಿದ್ದರು.

ಸೇವಾನಿವೃತ್ತ

ಶ್ರೀ. ಕುರ್ತಕೋಟಿ ಕೇಶವರಾಯರು

*

ಶ್ರೀ. ಕುರ್ತಕೋಟಿ ಕೇಶವರಾಯರು

ಕನ್ನಡ ಪ್ರಾಥಮಿಕ ಶಿಕ್ಷಣದ ಪ್ರಧಾನ ಸಂಪಾದಕರೂ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದ ಶ್ರೀ. ಕುರ್ತಕೋಟಿ ಕೇಶವರಾಯರು ೧೯೫೧ ಡಿಸೆಂಬರ ೧೦ನೆಯ ತಾರೀಖಿನ ದಿನ ಸೇವಾನಿವೃತ್ತರಾದರು. ಅವರನ್ನು ಬೀಳ್ಕೊಡುವ ಸಮಾರಂಭವು ಡಾ|| ಡಿ. ವ್ಹಿ. ಚಿಕ್ಕರಮನೆ ಎಜ್ಯುಕೇಶನಲ್ ಇನಸ್ಪೆಕ್ಟರ ಧಾರವಾಡ ಭಾಗ, ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ. ಕುರ್ತಕೋಟಿ ಕೇಶವರಾಯರ ಹಿತಚಿಂತಕರೂ ಗೆಳೆಯರೂ ಸೇವಾನಿವೃತ್ತರಾದ ಪ್ರಿನ್ಸಿಪಾಲರೂ ಸಭೆಗೆ ಬಂದಿದ್ದರು. ಅನೇಕ ಶಿಕ್ಷಕ-ವಿದ್ಯಾರ್ಥಿಗಳೂ ಅಧ್ಯಾಪಕರೂ ಶ್ರೀ. ರಂ. ಶ್ರೀ. ಲಕ್ಕುಂಡಿಯವರೂ ಶ್ರೀ- ಕುರ್ತಕೋಟಿಯವರ ಗುಣಗಾನವನ್ನು ಮಾಡಿದರು. ಅಧ್ಯಕ್ಷರು ಶ್ರೀ ಕುರ್ತಕೋಟಿ ಕೇಶವರಾಯರ ಕೂಡ ಅಧ್ಯಾಪಕ ವೃತ್ತಿಯನ್ನು ತಾವು ಮಾಡಿದುದಾಗಿ ಹೇಳಿ ಶ್ರೀ. ಕುರ್ತಕೋಟಿಯವರು ಭಾಷಣ ಕಲೆಯಲ್ಲಿ ನುರಿತವರು, ಸದಾ ಹಸನ್ಮುಖಿಗಳು, ಪ್ರಾರ್ಥನಾಪ್ರಿಯರು, ಆಚಾರ ಸಂಪನ್ನರು, ಕರ್ತವ್ಯದಕ್ಷರು ಎಂದು ಮುಂತಾಗಿ ನುಡಿದು ಶ್ರೀ. ಕುರ್ತಕೋಟಿ ಅವರ ಸೇವಾನಿವೃತ್ತಿಯ ಜೀವನವು ಸುಖಮಯವಾಗಲೆಂದೂ ಆರೋಗ್ಯಲಾಭವು ದೊರೆಯಲೆಂದೂ ಹಾರೈಸಿದರು.

ಶ್ರೀ. ಬ. ರಾ. ಹೊಸಮನಿ

ಶ್ರೀ. ಕೆ. ಜಿ. ಕುರ್ತಕೋಟಿಯವರು ಮೊದಲನೆಯ ಅಸಿಸ್ಟಂಟರಾಗಿದ್ದ ಶ್ರೀ. ಬ. ರಾ. ಹೊಸಮನಿ, ಬಿ. ಎ., ಬಿ. ಟಿ, ಡಿ. ಪಿ. ಇಡಿ., ಡಿ. ಬಿ. ಇ. ಅವರಿಗೆ ಗಂಡುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜಿನ ಸೂತ್ರಗಳನ್ನು ಒಪ್ಪಿಸಿ ೧೯೫೧ ಡಿಸೆಂಬರ ೧೦ನೆಯ ತಾರೀಖಿನ ದಿನ ನಿವೃತ್ತರಾದರು. ಅಂದಿನಿಂದ ಶ್ರೀ. ಬ. ರಾ. ಹೊಸಮನಿಯವರು ೧೯೫೨ ಫೆಬ್ರುವರಿ ೧೯ನೆಯ ತಾರೀಖಿನ ವರೆಗೆ ಇನ್‌ಚಾರ್ಜ ಪ್ರಿನ್ಸಿಪಾಲರಾಗಿ ಕಾರ್ಯ ಮಾಡಿದರು ಮತ್ತು ಶ್ರೀ. ಎಂ. ಜಿ. ಹಂದ್ರಾಳ ಅವರಿಗೆ ೧೯೫೨ ಫೆಬ್ರುವರಿ ೧೯ನೆಯ ತಾರೀಖಿಗೆ ಐತಿಹಾಸಿಕ, ಸಾಂಸ್ಕೃತಿಕ ಹಿನ್ನೆಲೆಯುಳ್ಳ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ, ಈ ಸಂಸ್ಥೆಯ ಸೂತ್ರಗಳನ್ನು ಅರ್ಪಿಸಿದರು.

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ
ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ೪ನೇ ಇಯತ್ತಿಗೆ ಬೆಲೆ ೦-೧೪ ೦

ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ೪ನೆಯ ಇಯತ್ತಿಗೆ ಬೆಲೆ ೦-೧೨-೦

ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ೫ನೆಯ ಇಯತ್ತಿಗೆ ಬೆಲೆ ೧-೪-೦

ಲೇಖಕರು :- ಶ್ರೀಯುತ ಎ. ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತಿಗೆ ಬೆಲೆ ೧-೩೦-೦

ಲೇಖಕರು :- ಸದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತಿಗೆ ಬೆಲೆ ೨-೨-೦

ಲೇಖಕರು :- ಸದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ ಬೆಲೆ ೦-೧೨-೦

ಲೇಖಕರು :- ಆದ್ಯ ರಂಗಾಚಾರ್ಯ ಎಂ. ಎ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತಿಗಳಿಗೆ ಬೆಲೆ ೦-೪-೦

ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೯೫೪ರ ವರೆಗೆ **ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.**

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-
ವಾಚನವೆಂದು ಮಂಜೂರಾಗಿದೆ. ಬೆಲೆ ೦-೧೨-೦

ಲೇಖಕರು :- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೪ನೆಯ ಇಯತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತಿಗೆ
೩. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೪. **ಮಾತಿನ ಮುನ್ನಡೆ.** ೭ನೆಯ ಇಯತ್ತಿಗೆ

೫. ಪತ್ರಗಳ ಪರಿಚಯ. ೬-೭ನೆಯ ಇಯತ್ತಿಗಳಿಗೆ.

ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

ಹೊರಟಿದೆ! ಹೊರಟಿದೆ!!

ಹಿಂದೀ ಶಿಕ್ಷಣ ಮಾಲೆ-೧

हिन्दी शिक्षण माला – १

ಬರೆದವರು: ಶ್ರೀ. ಗುರುನಾಥ ಜೋಶಿ

ಎಲ್ಲ ಕಾಲಗಳ ಮತ್ತು ನಾಮಗಳ ಹಾಗು ಸರ್ವನಾಮ ರೂಪಾವಲಿಗಳ ಜ್ಞಾನ ಮಾಡಿಕೊಡುವ ಕನ್ನಡಿ! ಕಾಮಧೇನು!

"ಪ್ರಾಥಮಿಕ"ದಿಂದ "ವಿಶಾರದ" ಪರೀಕ್ಷೆಯ ವರೆಗೆ ಅತ್ಯುಪಯುಕ್ತ!!

ಅಹರ್ನಿಶ ದುಡಿಯುವ ಸರಕಾರೀ ನೌಕರರಿಗೂ ಮನೆಯಲ್ಲಿ ಹಿಂದೀ ಕಲಿಯಲು ಅತ್ಯಂತ ಸಹಾಯಕ!!

ಇಂದೇ ಕೊಳ್ಳಿರಿ! ಇಂದೇ ಕೊಳ್ಳಿರಿ!!

ಬೆಲೆ: ೦—೧೪—೦

ಪ್ರಕಾಶಕರು: ಹಿಂದಮಾತಾ ಮುದ್ರಣಾಲಯ, ಧಾರವಾಡ

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆ ಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪುನೂಣ ಗ್ರಂಥ.

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.

ಪ್ರೊ. **ಶಿ. ಶಿ. ಬಸವನಾಳ** ಆವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ ಅಭಿನಂದನೆಯೊಡನೆ ಮಿನುಗುವ ಗ್ರಂಥ.

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ಆ. ಪ. ಪುಟ. ೧೪+೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ—

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟ.**

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

" ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಡೆಯವರ " **ವ್ಯಾವಹಾರಿಕ ಗಣಿತ** "ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಆವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾದ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ವ್ಹಿ. ಬೋಡೆ ಫುಲಬಾಗ ೨೨೪/೪೭ ಬೆಳಗಾವಿ

ಅಲ್ಪಾವಧಿಯಲ್ಲಿಯೇ ಪ್ರಖ್ಯಾತಿ ಪಡೆದು, ಕನ್ನಡ ನಾಡಿನಲ್ಲೆಲ್ಲ ಉಪಯೋಗಿಸಲಾಗುತ್ತಿರುವ ಶ್ರೀ. ಗಲಗಲಿಯವರ

ನೂತನ ಕಿಸೆಯ ಕೈಪಿಡಿ ಮಾಲೆ

[ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ]

(೧) ಆರೋಗ್ಯಶಾಸ್ತ್ರ	೦-೬-೦	(೨) ಪರೀಕ್ಷೆಯ ಗುಟ್ಟು	೦-೬-೦
(೩) ಶಾಸ್ತ್ರೀಯ ವಿಷಯ	೦-೬-೦	(೪) ಗಣಿತ ರಹಸ್ಯ	೦-೬-೦
(೫) ಭೂಮಿತಿ	೦-೬-೦	(೬) ಜನಾಖರ್ಚು	೦-೬-೦

[ಅಚ್ಚಿನಲ್ಲಿ]

ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ವಿಷಯನಿರೂಪಣೆಯುಳ್ಳ ಇಂಥ ಪುಸ್ತಕಗಳು ಬೇರೆ ಇಲ್ಲ. **ಕಾರಣ** ವಿದ್ಯಾರ್ಥಿಗಳು ಶ್ರೀ. ಗಲಗಲಿಯವರ ಕೃತಿಗಳನ್ನು ಕೊಂಡು ಓದಿ ತೇರ್ಗಡೆಹೊಂದಲಡ್ಡಿಯಿಲ್ಲ. ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ!

ವ್ಯಾಪಾರಿಗಳಿಗೆ ಧಾರಳ ಕಮೀಶನ್ !!

ಆಕಳವಾಡಿ ಬುಕ್-ಡಿಪೋ, ಧಾರವಾಡ

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ

ಹಬ್ಬ-ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ-೧ ಇತಿಹಾಸ ಬೆಲೆ ೦—೬—೦

,, ೨ ಭೂಗೋಲ ಬೆಲೆ ೦—೬—೦

,, ೩ ಭೂಮಿತಿ-ಜಮಾಖರ್ಚ ೦-೬-೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಕನ್ನಡ ನಾಡಿನಲ್ಲಿಯೇ ಪ್ರ-ಪ್ರಥಮವಾಗಿ, ಪೂರ್ಣವಾಗಿ ಹೊರಟ ಗಣಿತಮಾಲೆ ಇದೊಂದೇ!

ನೂತನ ಗಣಿತ

ಲೇಖಕರು: ಗಲಗಲಿ

(೧ರಿಂದ ೬ನೆಯ ವರೆಗಿನ ವರ್ಗಗಳಿಗಾಗಿ ಪ್ರತ್ಯೇಕ ಗಣಿತಗಳು)

ಸರಕಾರದವರಿಂದ ಮಾನ್ಯತೆ ಪಡೆದಿವೆ. ಕನ್ನಡ ನಾಡಿನ ಪ್ರತಿಯೊಂದು ಶಾಲೆಯಲ್ಲಿಯೂ ಉಪಯೋಗಿಸಲ್ಪಡುತ್ತಿವೆ. ಬೆಲೆಯಾದರೂ ಅತ್ಯಲ್ಪ. ಹೊಸ ಅಭ್ಯಾಸಪತ್ರಿಕೆಗಳನ್ನು ಅನುಸರಿಸಲಾಗಿದೆ. ವಿದ್ವಜ್ಜನರ ಮನ್ನಣೆಯನ್ನೂ ಪಡೆದಿವೆ. ಎಲ್ಲರ ಪ್ರೇಮಾದರಗಳನ್ನೂ ಗಳಿಸಿವೆ.

ಅಂತೇ ಇವು ಶ್ರೇಷ್ಠ ಗಣಿತಗಳು

ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ; ಸಾಕಷ್ಟು ಸಂಖ್ಯೆಯಲ್ಲಿ ಪೂರೈಸುವೆವು.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಸೂಚನೆ: ಮೊದಲನೆಯ ವರ್ಗದ ಗಣಿತ ಅಚ್ಚಿನಲ್ಲಿದೆ.

ಪುಟ ೨೫೦ ಬೆಲೆ: ೨-೧೨-೦

ಕೈನೇಯಿಗೆಯ ಮಾರ್ಗದರ್ಶಿಕೆ

ಲೇಖಕರು : ಎಂ. ಡಿ. ಮೇಲಗಿರಿ

ಬಿ. ಎ. (ಆನರ್ಸ್)
ಮೂಲೋದ್ಯೋಗ ಶಿಕ್ಷಕ ಸರಕಾರಿ ಕ. ಗಂ. ಟ್ರೇ. ಕಾ.
ಧಾರವಾಡ

ಸರಕಾರದ ಪಠ್ಯಪುಸ್ತಕ ಸಮಿತಿಯವರಿಂದ ಪ್ರಾಥಮಿಕ ಟ್ರೇ. ಕಾಲೇಜದ ೨ನೆಯ ವರ್ಷದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪೂರಕವಾಚನವೆಂದು ಮಂಜೂರಾಗಿದೆ. ೨ನೆಯ ವರ್ಷದ ಅಭ್ಯಾಸಪತ್ರಿಕೆ ಹಾಗೂ ಪ್ರಾಥಮಿಕ ಶಾಲೆಗಳ ಮೇಲಿನ ವರ್ಗಗಳ ಅಭ್ಯಾಸಪತ್ರಿಕೆ ಇವುಗಳಂತೆ ಬರೆದುದು.

ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

ಎಮ್. ಕೆ. ಮೇಲಗಿರಿ

ಕಮಲಾಪುರ ಭಾಗ (ಈಶ್ವರದೇವರ ಗುಡಿ ಓಣಿ)
ಧಾರವಾಡ

ಪುಟ ೨೫೫ ಬೆಲೆ: ೨-೪-೦

ಕೈನೂಲು

ಲೇಖಕರು: **ಎಮ್. ಡಿ. ಮೇಲಗಿರಿ**

ಬಿ. ಎ. (ಆನರ್ಸ್)
ಮೂಲೋದ್ಯೋಗ ಶಿಕ್ಷಕ ಸರಕಾರಿ ಕ. ಗಂ. ಟ್ರೇ. ಕಾ.
ಧಾರವಾಡ

ಸರಕಾರದ ಪಠ್ಯಪುಸ್ತಕ ಸಮಿತಿಯವರಿಂದ ಪ್ರಾಥಮಿಕ ಟ್ರೇನಿಂಗ ಕಾಲೇಜಗಳ ೧ನೆಯ ವರ್ಷದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ "ಟೆಕ್ಸ್ಟ್‌ಬುಕ್" ಎಂದು ಮಂಜೂರಾಗಿದೆ. ೧ನೆಯ ವರ್ಷದ ಅಭ್ಯಾಸಪತ್ರಿಕೆ ಹಾಗೂ ಪ್ರಾ. ಶಾಲೆಗಳ ಎಲ್ಲ ವರ್ಗಗಳಿಗೆ ನೂಲುಗಾರಿಕೆ ಸಂಬಂಧಿಸಿದ ಅಭ್ಯಾಸಪತ್ರಿಕೆಗಳು ಇವುಗಳಂತೆ ಬರೆದುದು. ಹತ್ತಿಯ ಬಿತ್ತಿಗೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವ ವರೆಗಿನ ಎಲ್ಲ ಸಂಗತಿಗಳನ್ನು ಸಮಯೋಚಿತ ಚಿತ್ರಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ ಕೈಪ್ಪಣಿಕ ಸ್ವರೂಪ ಕೊಟ್ಟು ವಿವರಿಸಿದೆ. ನೂಲುಗಾರಿಕೆಗೆ ಸಂಬಂಧಿಸಿದ ಗಣಿತವನ್ನು ಸಾದ್ಯಂತವಾಗಿ ಸೇರಿಸಿದೆ.

ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ.

ಎಮ್. ಕೆ. ಮೇಲಗಿರಿ

ಕಮಲಾಪುರ ಭಾಗ (ಈಶ್ವರದೇವರ ಗುಡಿ ಓಣಿ)
ಧಾರವಾಡ

೧-೨ ಪ್ರಾ. ಶಿ. ವಿದ್ಯಾರ್ಥಿಗಳಿಗಾಗಿ

ಶಾಸ್ತ್ರೀಯ

ರಾಗಗೀತ ಪ್ರವೇಶಿಕಾ

ಬರೆದವರು:— ಗಾಯನ ಕಲಾಕೋವಿದ

ಶ್ರೀ. ಜಿ. ಎಸ್. ಜುಕ್ತಿಮಠ

ಪುಟ ೧೨೦ ಬೆಲೆ ೧—೦—೦

ಈ ಪುಸ್ತಕವು ಮುಂಬಯಿ ಸರಕಾರದ ವಿದ್ಯಾ ಖಾತೆಯವರಿಂದ ೧ ಮತ್ತು ೨ನೇ ವರ್ಷ ಟ್ರೇ. ಕಾ. ವಿದ್ಯಾರ್ಥಿಗಳಿಗಾಗಿ ವಿಶೇಷ ವಾಚನವೆಂದು ಮಂಜೂರಾಗಿದೆ. ಈ ಪುಸ್ತಕವು ಮುಲ್ಕಿ ಪರೀಕ್ಷೆಯಲ್ಲಿ ಗಾಯನ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಒಳ್ಳೇ ಉಪಯುಕ್ತವಾಗಿದೆ. ಅಲ್ಲದೆ ಸರಿಗಮ ನಕಾಶ ಕೊಟ್ಟು, ಗಾಯನ ಅಭ್ಯಾಸಿಗಳಿಗೂ ಅನುಕೂಲವಾಗುವಂತೆ ತಯಾರಿಸಲಾಗಿದೆ.

ದೊರೆಯುವ ಸ್ಥಳ:—

ಮಹಾಂತೇಶ ಬುಕ್‌ಡಿಪೋ, ಬಾಗಲಕೋಟ

ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ
ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ ಮತ್ತು **ಶ್ರೀ. ಜಿ. ಡಿ. ಮಾಲಿ**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ಕಳಸ, ಕಸಬಾ ಪೇಟ, ಪುಣೆ

Regd. No, B. 5375

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟುವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳೆಸುವ ಸುಂದರ ಚಿತ್ರಗಳು!! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೬-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು : ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟುದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ : ೧—೦—೦ ಮಾತ್ರ

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೊ, ಧಾರವಾಡ

ಕನ್ನಡ

ಪ್ರಾಥಮಿಕ ಶಿಕ್ಷಣ

ಕೃ. ಪ್ರೂ. ಶಿ. ಶಿ. ಬಸವನಾಳ



ಪಡಿಯಚ್ಚು—"ಜಯಕರ್ನಾಟಕದ ಕೃಪೆಯಿಂದ"

ಪ್ರಧಾನ ಸಂಪಾದಕರು :

ಶ್ರೀ. ಎಂ. ಜಿ. ಹಂದ್ರಾಳ

★

ಮಾರ್ಚ
೧೯೫೨

★

ಬಿಡಿ ಪ್ರತಿ
೦—೬—೦

★

ವಾ. ಚಂದಾ
೦—೪—೦

ಬಸವನಾಳರಿಗೆ

ಮೊಗದಲ್ಲಿ ಕಳೆ ತುಂಬಿ ಮನದಲ್ಲಿ ತಿಳಿ ತುಂಬಿ
ತುಂಬಿ ನಿಂದಿರೆ ರಸವು ಬದುಕಿನಲ್ಲಿ
ಬಸವನಾಳರೆ ತುಂಬ ಜಸದ ಬಾಳನು ಬಾಳ
ಸಂದಿರೈ ಶಿವನಡಿಗೆ ಕುಸುಮವಾಗಿ ॥ ೧ ॥

ನಡೆನುಡಿಗಳಲ್ಲಿ ನಯವೆಂಬ ಮಲ್ಲಿಗೆಯರಳಿ
ಸೊಗಸ ಬೀರುತಲಿತ್ತು ಬಲ್ಲವಂಗೆ
ಒಂದು ದಿನವಾದರೂ ಕುಂದುವಡೆಯದ ಕಾಂತಿ
ಅಳವಡದು ನಿಮ್ಮಂತೆ ಕಂಡವಂಗೆ ॥ ೨ ॥

ಸಾಹಿತ್ಯ ಸೀಮೆಯಲಿ ಸಂಸ್ಕೃತಿಯ ಬೆಳಿಗೆಳಸಿ
ಕೃಷಿಗೈದು ಜೀವನದ ಸಫಲಗೊಳಿಸಿ
ಬಾಳದಂತೆಯೆ ಸಹಜವಾಗಿ ಮೇಲೇರಿದಿರಿ
ಸರ್ವಾತ್ಮನೊಪಲ ಶ್ರೀಮಂತಗೊಳಿಸಿ ॥ ೩ ॥

ತೋರದಿರಲೇನಲರು ? ತೇಲುತಿರುವುದು ಕಂಪು
ತೀಡುತಿರೆ ಸುಳಿಗಾಳಿ ತೋಟದಲ್ಲಿ
ಬೆಳಬೆಳಗಿ ಕೈಗಿತ್ತ ಕೃತಿಕೃತಿಯ ಶ್ರುತಿಯಾಗಿ

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ ಇವರಿಂದವಾಗಿ ಕೋಷಕ ಪಡೆದ ಗ್ರಂಥ

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.

ಮಹಾತ್ಮರ ಸಮಸ್ತ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.

ಪ್ರೊ. **ಶಿ. ಶಿ. ಬಸವನಾಳ** ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ ಅಭಿನಂದನೆಯೊಡನೆ ಮಿನುಗುವ **ಗ್ರಂಥ.**

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ೪. ಪ ಪುಟ. ೧೮೪+೨೦೦

ಬೆಲೆ, ಉತ್ತಮ ಪ್ರತಿ. ರೂ ೩—೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ—

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟೆ.**

೧—೨ ಪ್ರಾ. ಶಿ. ವಿದ್ಯಾರ್ಥಿಗಳಿಗಾಗಿ

ಶಾಸ್ತ್ರೀಯ

ರಾಗಗೀತ ಪ್ರವೇಶಿಕಾ

ಬರೆದವರು:— ಗಾಯನ ಕಲಾಕೋವಿದ

ಶ್ರೀ. ಜಿ. ಎಸ್. ಜುಕ್ತಿಮಠ

ಪುಟ ೧೨೦ ಬೆಲೆ ೧—೦—೦

ಈ ಪುಸ್ತಕವು ಮುಂಬಯಿ ಸರಕಾರದ ವಿದ್ಯಾ ಖಾತೆಯವರಿಂದ ೧ ಮತ್ತು ೨ನೇ ವರ್ಷ ಟ್ರೇ. ಕಾ. ವಿದ್ಯಾರ್ಥಿಗಳಿಗಾಗಿ ವಿಶೇಷ ವಾಚನವೆಂದು ಮಂಜೂರಾಗಿದೆ. ಈ ಪುಸ್ತಕವು ಮುಲ್ಕಿ ಪರೀಕ್ಷೆಯಲ್ಲಿ ಗಾಯನ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಒಳ್ಳೇ ಉಪಯುಕ್ತವಾಗಿದೆ. ಅಲ್ಲದೆ ಸರಿಗಮ ನಕಾಶ ಕೊಟ್ಟು, ಗಾಯನ ಅಭ್ಯಾಸಿಗಳಿಗೂ ಅನುಕೂಲವಾಗುವಂತೆ ತಯಾರಿಸಲಾಗಿದೆ.

ದೊರೆಯುವ ಸ್ಥಳ:—

ಮಹಾಂತೇಶ ಬುಕ್‌ಡಿಪೋ, ಬಾಗಲಕೋಟೆ

ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮಂಟರಿ ಮತ್ತು ಇಂಟರಮೀಡಿಯಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ

ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ ಮತ್ತು **ಶ್ರೀ. ಜಿ. ಡಿ. ಮಾಲಿ**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೨ ೦, ಅಂಚೆಖರ್ಚು ಪ್ರತ್ಯೇಕ. ಐದು ಮತ್ತು ಅದ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ಹೆಚ್ಚವಿಲ್ಲ.

ಜಿ. ನಾಯ್. ರಾಣೆ

ಪ್ರಕಾಶಕರು, ಶಿಳ್ಳೆ, ಕಸಬಾ ಪೇಟೆ, ಪುಣೆ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರನುನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ. ಇ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ಶಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧	ಮಾರ್ಚ ೧೯೫೨	ಸಂಚಿಕೆ ೧೦

ವಿಷಯ

ಪ ರಿ ವಿ ಡಿ

ಪುಟ

೧. ಕನ್ನಡ ವರ್ಧಪ್ರಾಯಿಜ ಪರೀಕ್ಷೆ ೧೯೫೨ .... ೨
೨. ಸಂಪಾದಕೀಯ ೩
೩. ಪ್ರಾ. ಶಿ. ಪ್ರ. ಪ. ಪರೀಕ್ಷೆ ಕಾರ್ಯಕ್ರಮ ೪
೪. ಹಬ್ಬಹುಣ್ಣಿವೆಗಳೂ ಅವುಗಳ ದಿನಾಚರಣೆಯೂ ಶ್ರೀ. ಬ. ಮ. ಶಿಂತ್ರಿ ೫
೫. ವ್ಯಾಕರಣ ಶಾಸ್ತ್ರದಿಂದ ಭಾಷೆಯ ಕಲೆಗಾಗುವ ಪ್ರಯೋಜನ—ಶ್ರೀ. ಶಟ್ಟಿ ಶ್ಯಾಮರಾಯರು ೧೦
೬. ಬಾಲಕರಿಗೆ ಓದಿನ ಆರಂಭ—ಶ್ರೀ. ಹ. ಗ. ಜೋಶಿ ೧೩
೭. ಧಾರ್ಮಿಕ ಶಿಕ್ಷಣ—ಶ್ರೀ. ಎಸ್. ವ್ಹಿ. ಹಂಜಿ ೧೪
೮. ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ ೧೬

ಕನ್ನಡ 'ವರ್ಧ ಪ್ರಾಯೀಜ' ಪರೀಕ್ಷೆ ೧೯೫೩

೧ ಪರೀಕ್ಷೆಯ ವಿಷಯಗಳು :— (ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ—ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು. (ಬ) ವರ್ಧ ಸಾಹೇಬರು ರಚಿಸಿರುವ ಪ್ರಾಕ್ತಾವ್ಯನವಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿರವಣೆ; ಟೀಕೆಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨ ಬಹುಮಾನ :— ಈ ಮೊದಲು ಇದ್ದ ಎಂರೂ. ಗಳು ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ. ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದುವೇಳೆ ಒಬ್ಬನಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩ ಅರ್ಜಿ ಮಾಡತಕ್ಕ ಅವಧಿ :— ಪರೀಕ್ಷೆಗೆ ಕೂತ್ರಲಿಚ್ಛಿಸುವವರು ೧೯೫೩ನೆಯ ಇಸವಿಯ ಆಗಸ್ಟ ತಿಂಗಳ ೧ನೆಯ ತಾರೀಖಿನೊಳಗಾಗಿ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ಧಾರವಾಡ ಭಾಗ, ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು.

ಗವ್ಹರ್ನಮೆಂಟ ಟ್ರೇನಿಂಗ್ ಕಾಲೇಜ
ಫಾರ್ ಮೆನ್, ಧಾರವಾಡ ೩೧-೩-೫೧

೪ ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ :— ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದೆಲ್ಲಿ ಈ ಪರೀಕ್ಷೆಯು ೧೯೫೩ನೆಯ ಇಸವಿಯ ಆಗಸ್ಟ ತಿಂಗಳಲ್ಲಿ ನಡೆಯುವದು ತಾರೀಖು. ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

ಪ್ರಶ್ನೆ ಕಾಗದಗಳು :— ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯು, ೧೦೦ ಗುಣಗಳೂ ಉಂಟು.

ಮೊದಲನೆಯದು :— ಪ್ರಾಕ್ತಾವ್ಯವಾಲೆ ೬೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು :— ಹಳಗನ್ನಡ ನಿಬಂಧ ೫೦; ಕನ್ನಡ ಬಾವುಟದಲ್ಲಿಯ ಕವಿತಾಭಾಗ ೩೦; ಹಳಗನ್ನಡ ಅಪರಿಚಿತ ಗದ್ಯ ಭಾಗಗಳು ೨೦.

ಮೂರನೆಯದು :— ಹೊಸಗನ್ನಡ ನಿಬಂಧ ೭೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ ೭೫.

ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ :— (೧) ರಾಷ್ಟ್ರಕೂಟ ರಾಜನ ಶಾಸನ. ಪುಟ ೫. (೨) ಕನ್ನಡ ನಾಡಿನ ಚೆಲುವು. ಪುಟ ೧೭-೨೦ ಪೂರ್ಣ. (೩) ಬಸವಣ್ಣನವರ ಗುಣ. ಪುಟ ೪೫. (೪) ಮಹಾದೇವಿಯಕ್ಕ. ಪುಟ ೪೬, ೪೯ ಪೂರ್ಣ. (೫) ಕನಕದಾಸರು ಪುಟ ೫೯. ೬೧ ಪೂರ್ಣ. (೬) ಅರುಣೋದಯ ಪುಟ ೬೭. (೭) ಕರ್ಣಾಲದ ವೈಭವ. ಪುಟ ೧೦೦. (೮) ಕೊಡಗು ಪುಟ ೧೦೨. (೯) ತೆಂಕಣ ಗಾಳಿಯೂಟ. ಪುಟ ೧೦೬. (೧೦) ಕುವಾರ ವ್ಯಾಸ. ಪುಟ ೧೨೧. (೧೧) ಬೇಲೂರಿನ ಶಿಲಾಬಾಲಿಕೆಯರು. ಪುಟ ೧೨೬.

ಈ ಕವಿತಾ ಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೭೫ ಗುಣಗಳ ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಯ ಚರಿತೆ ಮೊದಲನೆಯ ಭಾಗವನ್ನು ಓದಬಹುದು.

Sd/ ಎಂ. ಜಿ. ಹಂದ್ರಾಳ
ಪ್ರಿನ್ಸಿಪಾಲ

ಸಂಪಾದಕೀಯ

ಕರ್ನಾಟಕದ ಶಿಕ್ಷಣ-ಕ್ಷೇತ್ರದಲ್ಲಿ ಶ್ರೀ. ಸಿ. ಸಿ. ಕೋಪರು

ಅಮೇರಿಕೆಯ ಸಾಮಾಜಿಕ ಶಿಕ್ಷಣ ತಜ್ಞರಾದ ಶ್ರೀ. ಸಿ. ಸಿ. ಕೋಪರು ಇಡಿ ಭಾರತದಲ್ಲಿ ಸಾಮಾಜಿಕ ಶಿಕ್ಷಣದ ಕಾರ್ಯಕರ್ತರಿಗೆ ಸಲಹೆ-ಸೂಚನೆಗಳನ್ನೀಯಲು ಬಂದಿದ್ದಾರೆ. ಭಾರತ ಸರಕಾರವು ಇವರನ್ನು ಬರ ಮಾಡಿಕೊಂಡಿದೆಯೆಂದು ತಿಳಿಯಲಾಗಿದೆ. ಶ್ರೀ. ಕೋಪರು ಭಾರತದ ಇತರ ಪ್ರಾಂತಗಳಲ್ಲಿ ಸಂಚರಿಸುತ್ತ ನಮ್ಮ ನಾಡಿಗೂ ಬಂದರು. ಅವರನ್ನು ನಮ್ಮ ಭಾಗದ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರರಾದ ಡಾ|| ಚಿಕ್ಕರ-ಮನೆಯವರು ಮತ್ತು ಸಾಮಾಜಿಕ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ಆರ್. ಕೆ. ಮೆಣಶಿ ಅವರು ಸ್ವಾಗತಿಸಿದರು ಮತ್ತು ನಮ್ಮ ನಾಡಿನ ಶಿಕ್ಷಣದ ಪ್ರಗತಿಯ ಜ್ಞಾನವನ್ನು ಅವರಿಗೆ ಮಾಡಿಕೊಟ್ಟರು.

ಶ್ರೀ. ಸಿ. ಸಿ. ಕೋಪರು ೧೯೫೨ ಫೆಬ್ರುವರಿ ೭ನೆಯ ತಾರೀಖಿನಿಂದ ೧೪ನೆಯ ತಾರೀಖಿನ ವರೆಗೆ ಧಾರವಾಡ ಹಾಗು ಬೆಳಗಾಂವಿ ಜಿಲ್ಲೆಯಲ್ಲಿ ಸಂಚರಿಸಿ ಅಮ್ಮಿನಭಾವಿ, ಶಹಾಪೂರ ಮತ್ತು ಬೆಳಗಾಂವಿ ಈ ಊರುಗಳಲ್ಲಿಯ ಸಾಮಾಜಿಕ ಶಿಕ್ಷಣಕೇಂದ್ರಗಳನ್ನು ಸಂದರ್ಶಿಸಿದರು. ಧಾರವಾಡಲ್ಲಿ ಪ್ರ್ಯಾಕ್ಟೆಸಿಂಗ ಸ್ಕೂಲುಗಳಿಗೆ ಮತ್ತು ಗದುಗಿನಲ್ಲಿ ಮೂಲಶಿಕ್ಷಣ ಶಾಲೆಗೆ ಭೆಟ್ಟಿಯನ್ನಿತ್ತರು. ಇದಲ್ಲದೆ ಧಾರವಾಡ ಹಾಗೂ ಬೆಳಗಾಂವಿಯಲ್ಲಿ ವಿದ್ಯಾಧಿಕಾರಿಗಳೊಡನೆ ಸಾಮಾಜಿಕ ಶಿಕ್ಷಣದ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು.

ಧಾರವಾಡದಲ್ಲಿ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟೆಸಿಂಗ ಸ್ಕೂಲಿನಲ್ಲಿ ಸ್ಕೂಲಿನ ವಿದ್ಯಾರ್ಥಿ ಮುಖ್ಯ ಮಂತ್ರಿಯೇ ಶ್ರೀ. ಕೋಪರನ್ನು ವರ್ಗದಿಂದ ವರ್ಗಕ್ಕೆ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳ ಚಟುವಟಿಕೆ ಹಾಗೂ ವಿದ್ಯಾರ್ಥಿಗಳು ಸಿದ್ಧಗೊಳಿಸಿದ ಬಟ್ಟೆ ಹಾಗೂ ಇತರ ವಸ್ತುಗಳ ಸಂಬಂಧವಾಗಿ ಪರಿಚಯ ಮಾಡಿಕೊಟ್ಟುದನ್ನು ಕಂಡು ಆನಂದಭರಿತರಾದರಲ್ಲದೆ 'ನನ್ನ ಜೀವನದಲ್ಲಿಯೇ ವಿದ್ಯಾರ್ಥಿಯೊರ್ವನು ಹೀಗೆ ಸಂದರ್ಶಕರಿಗೆ ತನ್ನ ಸ್ಕೂಲಿನ ಪರಿಚಯ ಮಾಡಿಕೊಡುವದನ್ನು ಪ್ರಥಮತಃ ನೋಡಿದೆ. ಇದು ಅನುಕರಣೀಯ-ವಾಗಿದೆ' ಎಂದು ನುಡಿದಾಗ ನಮ್ಮ ವಿದ್ಯಾಧಿಕಾರಿಗಳು 'ಈ ಬಗೆಯ ವ್ಯವಸ್ಥೆಯನ್ನು ತಾವು ಇಡಿ ಹಿಂದುಸ್ತಾನದಲ್ಲಿ ಎಲ್ಲ ಜೀವನ ಶಿಕ್ಷಣದ ಶಾಲೆಗಳಲ್ಲಿ ಕಾಣುನಿರಿ' ಎಂದು ತಿಳಿಸಿದರು. ಇದನ್ನರಿತು ಶ್ರೀ. ಕೋಪರು ಅಪಾರ ಆನಂದವನ್ನು ವ್ಯಕ್ತಗೊಳಿಸಿದರು. ಇದಲ್ಲದೆ ಬೇರೆ ಕಡೆಗಳಲ್ಲಿ ಅವರು ಕಂಡ ಶಿಕ್ಷಣದ ಪ್ರಗತಿಯನ್ನು ಕುರಿತು ತೆಗೆದ ಉದ್ಗಾರಗಳನ್ನು ಓದುಗರು ಕಾಣಬಹುದು.

೮-೨-೧೯೫೨ ರಂದು ಧಾರವಾಡದ ಎಲ್ಲ ಟ್ರೇನಿಂಗ ಕಾಲೇಜುಗಳ ಶಿಕ್ಷಕ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕ ವೃಂದಕ್ಕೆ ಅಮೇರಿಕೆಯಲ್ಲಿ ನಡೆದಿರುವ ಶೈಕ್ಷಣಿಕ ಪ್ರಗತಿಯನ್ನು ಕುರಿತು ಮಾಡಲಾಗುತ್ತಿರುವ ಪ್ರಯತ್ನ ಗಳನ್ನು ಕುರಿತು ಚಿತ್ರಪಟಗಳನ್ನು ಶ್ರೀ. ಕೋಪರು ತೋರಿಸಿದರು. ಒಂದು ಮರಾಠಿಯಲ್ಲಿಯೂ ಮತ್ತೊಂದು ಇಂಗ್ಲಿಷದಲ್ಲಿಯೂ ಇದ್ದವು. ಮರಾಠಿ ಚಿತ್ರಪಟದಲ್ಲಿ ಹೆಚ್ಚು ಮಾತನಾಡುವ, ವ್ಯಾಖ್ಯಾನ ಕೊಡುವ ಶಿಕ್ಷಿಕೆಯು ತನ್ನ ವರ್ಗದಲ್ಲಿ ಶಿಸ್ತನ್ನು ಕಾಯ್ದುಕೊಳ್ಳಲಾರಳೆಂಬುದನ್ನೂ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿ, ಚಟು ವಟಿಕೆಯ ಮುಖಾಂತರ ಶಿಕ್ಷಣ ಕೊಡುವದು ವಿಹಿತವೆಂಬುದನ್ನೂ ತೋರಿಸಲಾಗಿದ್ದಿತು. ಎರಡನೆಯ ಚಿತ್ರ ಪಟದಲ್ಲಿ ಅಮೇರಿಕೆಯ ಒಸ್ಕಲತನ ಶಾಖೆಯವರು ಸಾಮಾಜಿಕ ಶಿಕ್ಷಣವನ್ನು ಜನರಿಗೆ ಕೊಡುವದಕ್ಕಾಗಿ (ಕ್ಯಾಂಪು) ಶಿಬಿರಗಳನ್ನು ಸಂಘಟಿಸುವ ರೀತಿ ಮತ್ತು ಶಿಕ್ಷಣ ಕೊಡುವ ಪದ್ಧತಿಯನ್ನು ತೋರಿಸಲಾಗಿತ್ತು. ಎಂದರೆ ಎರಡನೆಯ ಚಿತ್ರದಲ್ಲಿ ವಿಜ್ಞಾನದಲ್ಲಿ ಮುಂದುವರಿದ ರಾಷ್ಟ್ರದ ಹಳ್ಳಿಯಲ್ಲಿ ಕೊಡುವ ಶಿಕ್ಷಣದ ರೀತಿ ಯನ್ನು ಪ್ರದರ್ಶಿಸಲಾಗಿತ್ತು. ಈ ಎರಡೂ ಚಿತ್ರಗಳ ಬಗೆಗೆ ಶಿಕ್ಷಕ ವಿದ್ಯಾರ್ಥಿಗಳೂ ಶಿಕ್ಷಕರೂ ಅನೇಕ ಪ್ರಶ್ನೆ ಗಳನ್ನು ಕೇಳಿದರು. ಅವುಗಳಿಗೆ ಶ್ರೀ. ಸಿ. ಸಿ. ಕೋಪರು ಮಧ್ಯ ಮಧ್ಯದಲ್ಲಿ 'ಒಳ್ಳೆಯ ಪ್ರಶ್ನೆ ಇದು' ಎನ್ನುತ್ತ ಹಸನ್ಮುಖಿಗಳಾಗಿ ಹಾವಭಾವದಿಂದ ಉತ್ತರ ಕೊಟ್ಟರು. ಪ್ರಶ್ನೆಗಳನ್ನೂ ಉತ್ತರಗಳನ್ನೂ ಡಾ|| ಚಿಕ್ಕರಮನೆಯವರು

ಕ್ರಮಶಃ ಇಂಗ್ಲಿಷದಲ್ಲಿ ಕನ್ನಡದಲ್ಲಿ ಹೇಳುತ್ತಿದ್ದರು. ಶ್ರೀ. ಸಿ. ಸಿ. ಕೋಪರು ಕೊಟ್ಟ ಉತ್ತರಗಳು ಅವರ ಆಳವಾದ ಅಧ್ಯಯನ ಮತ್ತು ಶಿಕ್ಷಕನಲ್ಲಿರಬೇಕಾದ ಪ್ರಸಂಗಾವಧಾನವನ್ನು ವ್ಯಕ್ತಗೊಳಿಸುತ್ತಿದ್ದವು. ಶ್ರೀ. ಕೋಪರು 'ವಿದ್ಯಾ ವಿನಯೇನ ಶೋಭತೆ' ಎಂಬ ಸುಭಾಷಿತದ ಪ್ರತೀಕರಾಗಿದ್ದರೆಂದು ನಮ್ಮ ಅಭಿಪ್ರಾಯವಾಗಿದೆ ಮತ್ತು ನಮ್ಮ ನಾಡಿನ ಶಿಕ್ಷಣದಲ್ಲಿ ಪ್ರಗತಿಯನ್ನುಂಟು ಮಾಡುವ ಸಾಧನಗಳು ಅಮೇರಿಕೆಗಿಂತ ಭಿನ್ನವಾಗಿರಬೇಕೆಂದೂ ನಮ್ಮ ಸಂಸ್ಕೃತಿಯ ಪರಂಪರೆಗೆ ಹೊಂದಿಕೊಂಡಂತಹವುಗಳಾಗಿರಬೇಕೆಂದೂ ಅಮೇರಿಕೆಯು ಮಾಡಿದಂತೆಯೇ ನಮ್ಮ ನಾಡಿನಲ್ಲಿ ಮಾಡುವದು ಹಾಗು ಸಾಧನಗಳನ್ನುಪಯೋಗಿಸುವದು ಸಾಧ್ಯವಾಗದ ಮಾತೆಂದೂ ಹೇಳಿದಲ್ಲಿ ತಪ್ಪಾಗಲಾರದೆಂದೂ ನಮ್ಮ ಅಭಿಪ್ರಾಯವಾಗಿದೆ. ಏಕೆಂದರೆ ನಮ್ಮ ರಾಷ್ಟ್ರವು ಔದ್ಯೋಗೀಕರಣದ ರಾಷ್ಟ್ರವಾಗಿರುವುದಿಲ್ಲ, ಆಧ್ಯಾತ್ಮಿಕ ಹಿನ್ನೆಲೆಯುಳ್ಳ ರಾಷ್ಟ್ರವಾಗಿದೆ.

— — —

೧೯೫೨ ಎಪ್ರಿಲದಲ್ಲಿ ಜರುಗಲಿರುವ ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆ

ಕಾರ್ಯಕ್ರಮ

ದಿನ ಮತ್ತು ದಿನಾಂಕ	ವೇಳೆ		ವಿಷಯ
	ಇಂದ	ವರೆಗೆ	
ಸೋಮವಾರ ೨೧-೪-೧೯೫೨	೧೧—೦ ೨-೩೦	೧—೦ ೪-೩೦	ಶಿಕ್ಷಣ—೧ನೆಯ ಕಾಗದ ವಿಜ್ಞಾನ (ಸಾಯನ್ಸ)
ಮಂಗಳವಾರ ೨೨-೪-೧೯೫೨	೧೧—೦ ೨-೩೦	೧—೦ ೪-೩೦	ಗಣಿತ—೧ನೆಯ ಕಾಗದ ಭಾಷೆ—೧ನೆಯ ಕಾಗದ
ಬುಧವಾರ ೨೩-೪-೧೯೫೨	೧೧—೦ ೩—೦	೨—೦ ೫—೦	ಬೇಸಿಕ್ ಕ್ರಾಫ್ಟ್ (ತಾತ್ವಿಕ) ಭಾಷೆ—೨ನೆಯ ಕಾಗದ
ಗುರುವಾರ ೨೪-೪-೧೯೫೨	೧೧—೦ ೨-೩೦	೧—೦ ೪-೩೦	ಗಣಿತ—೨ನೆಯ ಕಾಗದ ಶಿಕ್ಷಣ—೨ನೆಯ ಕಾಗದ
ಶುಕ್ರವಾರ ೨೫-೪-೧೯೫೨	೧೧—೦ ೩—೦	೨—೦ ೫—೦	ಇತಿಹಾಸ ಮತ್ತು ಭೂಗೋಲ ಹಿಂದೀ
ಶನಿವಾರ ೨೬-೪-೧೯೫೨	೮—೦	೧೦—೦	ಪ್ರಾದೇಶಿಕ ಭಾಷೆ (ಉರ್ದು ಉಮೇದವಾರರಿಗೆ ಮಾತ್ರ.)

ಎಜ್ಯುಕೇಶನಲ್ ಇನಸ್ಪೆಕ್ಟರರ ಕಚೇರಿ
ಧಾರವಾಡ ಭಾಗ, ಧಾರವಾಡ
೧೯-೧-೧೯೫೨

(ಸಹಿ) ಡಿ. ವ್ಹಿ. ಚಿಕ್ಕರಮನೆ
ಎಜ್ಯುಕೇಶನಲ್ ಇನಸ್ಪೆಕ್ಟರ
ಧಾರವಾಡ ಭಾಗ

ಹಬ್ಬ-ಹುಣ್ಣಿವೆಗಳೂ
ಅವುಗಳ ದಿನಾಚರಣೆಯೂ

ಲೇಖಕರು:—ಶ್ರೀಯುತ ಬ. ಮು. ಶಿಂಪ್ರಿ. ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ,

ಲೇಖಾಂಕ ೩

ಗಣೇಶ ಚವತಿ

ಪಂಚಮಿ ಹಬ್ಬವಾದ ಒಂದು ತಿಂಗಳಿಗೆ ಈ ಹಬ್ಬವು ಬರುತ್ತಿದೆ. ಭಾದ್ರಪದ ಶುದ್ಧ ಚವತಿಯ ದಿನ ಮುಂಜಾನೆ ಗಣಪ್ಪನ ಪ್ರತಿಷ್ಠಾಪನೆಯಾಗುವದು. ಜನರು ಈತನನ್ನು ವೈಭವದಿಂದ ಬರಮಾಡಿಕೊಳ್ಳುವದುಂಟು ಮತ್ತು ಅಷ್ಟೇ ವೈಭವದಿಂದ ಬೀಳ್ಕೊಡುವದುಂಟು. ಈತನು ವೈಭವಪ್ರಿಯನು. ಹಾಡುವದು, ಬಾರಿಸುವದು, ನಾನಾ ತರಡ ವಾದ್ಯಗಳು, ಪಟಾಕ್ಷಿ ಧಡಲ್ಬಾಜಿಗಳನ್ನು ಹಾರಿಸುವದು, ಮೊದಲಾದವುಗಳು ಈತನಿಗೆ ಸೇರುತ್ತಿವೆ. ಮಿಠಾಯಿ, ಮೋದಕ, ಕಡಬು, ಪಾಯಸ, ಮೊದಲಾದ ಸಿಹಿ ಖಾದ್ಯಗಳ ಮೇಲೆ ಇವನ ಪ್ರೇಮ ಬಹಳ. ಈತನು ವೈಭವಪ್ರಿಯನಾಗಿದ್ದುದರಿಂದಲೂ ಸಿಹಿ ಖಾದ್ಯಗಳನ್ನು ಪ್ರೀತಿಸುವದರಿಂದಲೂ ಚಿಕ್ಕಮಕ್ಕಳಿಗೆಲ್ಲ ಒಳ್ಳೇ ಪ್ರಿಯನಾಗಿರುವನು. ಇವನ ಸುತ್ತಲೂ ಸಾಲೆಗೆ ಹೋಗುವ ಮಕ್ಕಳು ಯಾವಾಗಲೂ ಮುಕರುವದುಂಟು. ಯಾಕಂದರೆ, ಇವನಿರುವ ವರೆಗೆ ಅವರಿಗೆ ದಿನಾಲು ತಿನ್ನಲು ಸಿಹಿ ಖಾದ್ಯಗಳು ಮತ್ತು ಹಾರಿಸಲು ಪಟಾಕ್ಷಿ-ಧಡಲ್ಬಾಜಿಗಳು ಸಿಕ್ಕುತ್ತಿವೆ. ಮೇಲಾಗಿ, ಈತನು ಅವರಿಗೆ ಜ್ಞಾನವನ್ನೂ ವಿದ್ಯೆಯನ್ನೂ ಕೊಡುವಂಥವನು. ವಿಘ್ನೇಶ್ವರನೆಂಬದೊಂದು ಈತನಿಗೆ ಹೆಸರಿದೆ. ಇವನ ನಾಮಸ್ಮರಣೆಯನ್ನು ಮಾಡಿದರೆ ನಮಗೆ ವಿಘ್ನಗಳು ಬಂದು ಅಡರದಂತೆ ಅವುಗಳನ್ನು ಹೊಡೆದೋಡಿಸುತ್ತಾನೆ. ಆದುದರಿಂದಲೇ ನಾಟಕವಾಡುವವರೂ ಬೈಲಾಟ ವಾಡುವವರೂ ಎಲ್ಲಕ್ಕೂ ಮೊದಲು ಇವನ ಸ್ತೋತ್ರವನ್ನು ಮಾಡುವದುಂಟು ಮಂಗಳಮೂರ್ತಿಯೆಂಬ ಮತ್ತೊಂದು ಹೆಸರಿದೆ ಈತನಿಗೆ. ಇವನಿದ್ದಲ್ಲಿ ಎಲ್ಲರಿಗೂ ಮಂಗಲವಾಗುವದು. ಶುಭಕಾರ್ಯಗಳಲ್ಲೆಲ್ಲ ಪ್ರಾರಂಭಕ್ಕೆ ಈತನ ಸ್ತೋತ್ರವು ಆಗಲೇಬೇಕು. ಭಾದ್ರಪದ ಶುದ್ಧ ಚವತಿಯಿಂದ ಆಶ್ವಯುಜ ತನಕ ಐದು ದಿನಗಳವರೆಗೆ ಈ ಹಬ್ಬವು ಬಿಟ್ಟೂಬಿಡದೆ ನಡೆಯುತ್ತಿದೆ. ಸಾರ್ವಜನಿಕ ಗಣಪ್ಪನನ್ನಿಟ್ಟವರು ವಾಖ್ಯಾನಕಾರರನ್ನು ಬರಮಾಡಿಕೊಂಡು ದಿನಾಲು ಸಂಜೆಯಲ್ಲಿ ಯಾವದಾದರೊಂದು ಜನಹಿತದ ವಿಷಯದ ಬಗೆಗೆ ಉಪನ್ಯಾಸವನ್ನು ಕೊಡಿಸುತ್ತಾರೆ. ಸಾರ್ವಜನಿಕ ಗಣಪ್ಪನನ್ನಿಡುವ ಪದ್ಧತಿಯನ್ನು ಲೋಕಮಾನ್ಯ ಟಿಳಕರವರು ಸ್ವದೇಶಿ ಚಳವಳಿಯ ಕಾಲಕ್ಕೆ ವಿಶೇಷ ಬಳಿಕೆಯಲ್ಲಿ ತಂದರು. ಅಂದಿನಿಂದ ಈ ಹಬ್ಬಕ್ಕೆ ರಾಷ್ಟ್ರೀಯ ಸ್ವರೂಪವೂ ವಿಶಿಷ್ಟವಾದ ಮೆರಗು-ಬೆರಗುಗಳೂ ಬಂದಿವೆ. ಕೆಲವು ಸಾರ್ವಜನಿಕ ಗಣಪ್ಪನನ್ನಿಟ್ಟವರು ಆಟಗಳ ಪಂದ್ಯಾಟಗಳನ್ನಿಡುವದುಂಟು. ಸಾಲೆಯ ಹುಡುಗರು ಮೇಳಗಳನ್ನು ಮಾಡಿಕೊಂಡು ತಾವು ಕಲಿತಂಥ ಹಾಡುಗಳನ್ನು ಪೀಯನುಪೆಟ್ಟಿಗೆ, ತಬಲಾ ಮೊದಲಾದ ವಾದ್ಯಗಳೊಡನೆ ಕೋಲು ಹಾಕುತ್ತ ಹಾಡಿ ತೋರಿಸುತ್ತಾರೆ. ಕೆಲವರು ಇಂಥ ಮೇಳಗಳ ಏರಾಟವನ್ನಿಡುತ್ತಾರೆ. ಎಲ್ಲ ಸಾಲೆ-

ಗಳೂ ಈ ಹಬ್ಬವನ್ನು ಆಚರಿಸುವದೊಳಿತು. ಒಂದು ದಿನ ಚರ್ಚಾಕೂಟದ ಸ್ಪರ್ಧೆ, ಒಂದು ದಿವಸ ಪಚನಗಳನ್ನು ಇಲ್ಲವೆ ಪದ್ಯಗಳನ್ನು ಹಾಡಿತೋರಿಸುವ ಏರಾಟ, ಒಂದು ದಿನ ಆಟಗಳ ಪಂದ್ಯಾಟ, ಒಂದು ದಿನ ಮೇಳಗಳ ಸ್ಪರ್ಧೆ, ಕೊನೆಯ ದಿನ ಪಾರಿತೋಷಕ ವಿತರಣ ಸಮಾರಂಭ, ಈ ಪ್ರಕಾರ ಕಾರ್ಯಕ್ರಮನ್ನಿಟ್ಟುಕೊಳ್ಳಬೇಕು. ಉದಾಹರಣೆಗಾಗಿ ಕಾರ್ಯಕ್ರಮವೊಂದನ್ನು ಕೊಟ್ಟಿದ್ದಾಗಿದೆ. ಶಿಕ್ಷಕ-ಶಿಕ್ಷಕಿಯರು ತಮಗೆ ಬೇಕಾದದ್ದೊಂದು ಐದು ದಿನಗಳ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕು. ಇಂತಹದೊಂದು ಕಾರ್ಯಕ್ರಮವನ್ನಿಟ್ಟುಕೊಂಡರೆ, ಮಕ್ಕಳ ಎಲ್ಲ ಚಟುವಟಿಕೆಗಳಿಗೆ ಪುಟ ಸಿಕ್ಕಂತಾಗಿ ಎಲ್ಲರೂ ಹುರುಪಿನಿಂದ ಭಾಗವಹಿಸುವ ಮಂಟು. ಕೊನೆಯ ದಿನ ಅಂದರೆ ಅಷ್ಟಮಿಯ ದಿನ ಸಂಜೆಯಲ್ಲಿ ಹಳ್ಳಿಯ ಮುಖಂಡರೊಬ್ಬರ ಅಧ್ಯಕ್ಷತೆಯಲ್ಲಿ ಪಾರಿತೋಷಕ ವಿತರಣ ಸಮಾರಂಭವನ್ನಿಟ್ಟು ಗಣಪತಿ ವಿಸರ್ಜನ ಮಾಡಬೇಕು.

ಗಣಪ್ಪನಿಗೆ ಆನೆಯ ಮುಖವು ಹೇಗೆ ಪ್ರಾಪ್ತವಾಯಿತೆಂಬದನ್ನಷ್ಟು ನೋಡುವಾ. ಈತನು ಪಾರ್ವತಿದೇವಿಯ ಮಾನಸಪುತ್ರನು. ದೇವಿಯು ತನ್ನ ಮೈಯೊಳಗಿನ ಮಣ್ಣನ್ನೆಲ್ಲ ತೆಕ್ಕಿ ತೆಗೆದು ಆ ಮಣ್ಣಿನಿಂದ ಮೂರ್ತಿಯೊಂದನ್ನು ತಯಾರ ಮಾಡಿ ಅದರಲ್ಲಿ ಜೀವವನ್ನು ತುಂಬಿದಳು. ಈತನೇ ಗಣಪ್ಪನು. ಈತನನ್ನು ಬಾಗಿಲ ಕಾಯಲು ಹಚ್ಚಿ ಒಳಗೆ ಯಾರನ್ನೂ ಬಿಡಬೇಡವೆಂದು ಕಟ್ಟಪ್ಪಣೆ ಮಾಡಿ ತಾನು ಸ್ನಾನಕ್ಕೆ ಕುಳಿತಳು. ಆಷ್ಟರಲ್ಲಿ ಈಶ್ವರನು ಬಂದು ಪ್ರವೇಶಿಸಹೋದನು. ಗಣಪ್ಪನು ಈಶ್ವರನನ್ನು ಒಳಗೆ ಹೋಗಗೊಡದೆ ತಡೆ ಹಿಡಿದನು. ಮಹೇಶ್ವರನು ಸಿಟ್ಟಿಗೆದ್ದು ಅವನ ಶಿರಚ್ಛೇದ ಮಾಡಿ ಗೃಹಪ್ರವೇಶ ಮಾಡಿದನು. ಪಾರ್ವತಿದೇವಿಯು ತನ್ನ ಪುತ್ರನನ್ನು ಕೊಂದುದಕ್ಕಾಗಿ ಶೋಕಿಸಹತ್ತಿದಳು ಮತ್ತು ಅವನಿಗೆ ಪುನರ್ಜೀವವನ್ನು ಕೊಡಬೇಕೆಂದು ಹಟ ಹಿಡಿದಳು. ಈಶ್ವರನು ಹೊರಗೆ ಬಂದು ರುಂಡ-ಮುಂಡಗಳನ್ನು ಕೂಡಿಸಿ ಜೀವನನ್ನು ತುಂಬಬೇಕೆಂದು ಆಲೋಚಿಸಿದನು. ಆದರೆ ರುಂಡವಿಲ್ಲ; ಮುಂಡವಷ್ಟೇ ಇದ್ದಿತು. ಉತ್ತರಕ್ಕೆ ತಲೆ ಮಾಡಿಕೊಂಡು ಮಲಗಿದವರ ರುಂಡವನ್ನು ಕೊಯ್ದುಕೊಂಡು ಬೇಗನೆ ಬರಲು ತನ್ನ ಗಣ (ದೂತ)ಗಳಲ್ಲೊಬ್ಬನಿಗೆ ಆಜ್ಞೆ ಕೊಟ್ಟನು. ಆದರೆ ಅಂತಹವರು ಯಾರೂ ಆತನಿಗೆ ಸಿಕ್ಕಲಿಲ್ಲ. ಕೊನೆಗೆ ಸರೋವರದಲ್ಲೊಂದು ಆನೆಯು ಉತ್ತರಕ್ಕೆ ತಲೆ ಮಾಡಿ ನೀರಿನಲ್ಲಿ ಬಿದ್ದುಕೊಂಡಿದ್ದನ್ನು ನೋಡಿ ಅದರ ರುಂಡವನ್ನು ಕೊಯ್ದು ತಂದು ಮಹೇಶ್ವರನಿಗೆ ಒಪ್ಪಿಸಿದನು. ಆ ರುಂಡವನ್ನೇ ಮುಂಡಕ್ಕೆ ಹಚ್ಚಿ ಜೀವಕಳೆ ತುಂಬಿದನಂತೆ! ಹೀಗಾಗಿ ಗಣಪ್ಪನಿಗೆ ಆನೆಯ ಮುಖವು ಪ್ರಾಪ್ತವಾಗಿ ಗಜಾನನನೆಂಬ ಹೆಸರು ಬಂದಿದೆ. ಚವತಿಯ ಚಂದ್ರನನ್ನು ನೋಡಬಾರದೆಂಬ ಬಗೆಗೆ ವಿನೋದ ಪೂರ್ಣವಾದದ್ದೊಂದು ಕಥೆಯಿದೆ. ಅದನ್ನಿಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದೆಂದು ನಮಗೆ ಅನಿಸುತ್ತದೆ. ಚವತಿಯ ದಿವಸ ಗಣಪ್ಪನು ವಿಹಾರಕ್ಕಾಗಿ ಸಂಜೆಯಲ್ಲಿ ತನ್ನ ವಾಹನವಾದ ಇಲಿಯ ಮೇಲೆ ಕುಳಿತು ಸವಾರಿ ಮಾಡುವಾಗ ಇಲಿಯು ಹಾವೊಂದನ್ನು ನೋಡಿ ಬೆದರಿತು. ಆಗ ಗಣಪ್ಪನು ಜೋಲಿತಪ್ಪಿ ಬಿದ್ದನು. ಬಿದ್ದದರಿಂದ ಹೊಟ್ಟೆಯೊಡೆದು ಉಂಡಂಥ ಕಡಬು-ಮೋದಕಗಳು ಹೊರಬಿದ್ದವಂತೆ ಹೊರಬಿದ್ದ ಕಡಬು-ಮೋದಕಗಳನ್ನು ಯಾರಿಗೂ ಕಾಣದ ಹಾಗೆ ಲಗುಬಗೆಯಿಂದ ಪುನಃ ಹೊಟ್ಟೆಯಲ್ಲಿ ಸೇರಿಸಿ ಅಲ್ಲಿಯೇ ಇದ್ದ ಹಾವಿನಿಂದ ಹರಿದ ಭಾಗವನ್ನು ಗಟ್ಟಿಯಾಗಿ ಕಟ್ಟಿಕೊಂಡನಂತೆ ಇವನ್ನೆಲ್ಲ ಈಶ್ವರನ ತಲೆಯ ಮೇಲಿನ ಚಂದ್ರನು ನೋಡಿ ಬಿದ್ದು ಬಿದ್ದು ನಕ್ಕನಂತೆ! ಚಂದ್ರನು ನಕ್ಕದ್ದನ್ನು ನೋಡಿ ಗಣಪ್ಪನ ಮನಸಿಗೆ ಹತ್ತಿತು. ಆತನು ಸಿಟ್ಟಿಗೆದ್ದು "ಚವತಿಯ ದಿವಸ ನಿನ್ನನ್ನು ಯಾರೂ ನೋಡಬಾರದು. ಒಂದು ವೇಳೆ ಯಾರಾದರೂ ನೋಡಿದರೆ ಅವರಿಗೆ ಅನಿಷ್ಟವು ಪ್ರಾಪ್ತವಾಗುವದು" ಎಂದು ಶಾಪ ಕೊಟ್ಟನು. ಆದುದರಿಂದ, ಅವತ್ತಿನ ದಿವಸ ಚಂದ್ರನನ್ನು ಯಾರೂ ನೋಡುವದಿಲ್ಲ. ಒಂದು ವೇಳೆ ತಪ್ಪಿತಸ್ಸಿ ನೋಡಿದರೆ, ಯಾರಾದರೊಬ್ಬರ ಕಡೆಯಿಂದ ಬೈಸಿಕೊಳ್ಳುವದುಂಟು. ಹೀಗೆ ಮಾಡಿದರೆ, ಚಂದ್ರನನ್ನು ನೋಡಿದ ದೋಷವು ಪರಿಹಾರವಾಗುವದೆಂದು ಜನರ ನಂಬುಗೆ. ಗಣಪ್ಪನ ಹೊಟ್ಟೆಯ ಮೇಲೆ ಹಾವಿರುವದೇ ಈ ಕಥೆಗೆ ಸಾಕ್ಷಿಯಾಗಿದೆ. ಹಾವಿರುವ ಸ್ಥಳದಲ್ಲಿಯೇ ಅವನ ಹೊಟ್ಟೆಯು ಹರಿದಿರುತ್ತದೆ. ಅದರಂತೆ ಅವನು ಲಗ್ನವಾಗದೆ ಬ್ರಹ್ಮಚಾರಿಯಾಗಿದ್ದುದಕ್ಕೆ ಸೋಜಿಗವಾದ

ಮತ್ತೊಂದು ಕಥೆಯಿದೆ. ಗಣಪ್ಪನು ವಯಸ್ಕನಾದ ಮೇಲೆ ತನ್ನ ತಂದೆಯಾದ ಮಹೇಶ್ವರನನ್ನು ತನ್ನ ಲಗ್ನ ಮಾಡೆಂದು ಕೇಳಿಕೊಂಡನಂತೆ. ಮಹೇಶ್ವರನು ನಾಳೆ ಯೆಂದು ಉತ್ತರ ಕೊಡುತ್ತಲೇ ಇದ್ದಾನಂತೆ. ಹೀಗಾಗಿ, ಗಣಪ್ಪನು ಇನ್ನೂ ವರೆಗೂ ಲಗ್ನವಿಲ್ಲದೆ ಕುಳಿತುಬಿಟ್ಟಿರುವನಂತೆ. ಅದುದರಿಂದ, ಮಾಡಲು ಪ್ರಯತ್ನಿಸದೆ ಮುಂದೂಡುತ್ತ ಮುಂದೂಡುತ್ತ ಹೋಗುವ ಕೆಲಸಕ್ಕೆ ಗಣಪ್ಪನ ಲಗ್ನವೆಂದು ಹೆಸರಿಡುವದು ವಾಡಿಕೆಯಲ್ಲಿದೆ. ದಂತಕಥೆಗಳೇನೇ ಇರಲಿ, ಅವುಗಳ ಮರ್ಮವನ್ನಷ್ಟು ಓದುಗರು ತಿಳಕೊಂಡರಾಯಿತು. ಒಟ್ಟಿನಲ್ಲಿ, ಗಣಪ್ಪನು ವಿದ್ಯಾಧಿದೇವತೆಯೂ, ವಿಘ್ನೇಶ್ವರನೂ ಮಂಗಳ ಮೂರ್ತಿಯೂ ಆಗಿರುವನು. ಅಷ್ಟಮಿಯ ದಿನ ಅವನು ತಿರುಗಿ ಕೈಲಾಸಕ್ಕೆ ಹೋಗುವನು. ಎಲ್ಲರೂ ಆ ದಿನ ಸಂಜೆಗೆ 'ಗಣಪತಿ ಗಣಪತಿ ಮೋರಯಾ ಪುಂಡಿಪಲೆ ಸೋರಯಾ' ಎಂದು ಒದರುತ್ತ ಜೀರುತ್ತ ವಾದ್ಯಗಳನ್ನು ಬಾರಿಸುತ್ತ ಪಟಾಕ್ಷಿ-ಧಡಲ್ಬಾಜಿಗಳನ್ನು ಹಾರಿಸುತ್ತ ವೈಭವದಿಂದ ಬೀಳ್ಕೊಡುವದುಂಟು.

ಜೋಕುಮಾರ

ಗಣಪ್ಪನು ಹೋದ ದಿನವೇ ಅಂದರೆ ಭಾದ್ರಪದ ಶುದ್ಧ ಅಷ್ಟಮಿಯ ದಿನವೇ ಈತನು ಬರುತ್ತಾನೆ. ಅಷ್ಟಮಿಯಿಂದ ಹುಣ್ಣಿವೆಯ ವರೆಗೆ ಈತನು ಇರುತ್ತಾನೆ. ಹುಣ್ಣಿವೆಯ ದಿನ ಈತನು ಕೈಲಾಸಕ್ಕೆ ಹೋಗುವನು. ಗಣಪ್ಪನ ಹಾಗೆ ಈತನನ್ನು ಎಲ್ಲರೂ ತಮ್ಮ ತಮ್ಮ ಮನೆಯಲ್ಲಿಟ್ಟು ಪೂಜಿಸುವದಿಲ್ಲ. ಬಾರಿಕೇರ ಜನರು ಅರಲಿನಿಂದ ಈತನ ಮೂರ್ತಿಯನ್ನು ಮಾಡಿ ಪೂಜಿಸುಸುತ್ತಾರೆ. ಬಾರಕೇರ ಹೆಣ್ಣುಮಕ್ಕಳು ಈತನ ಮೂರ್ತಿಯನ್ನು ಬುಟ್ಟಿಯಲ್ಲಿಟ್ಟುಕೊಂಡು ಮೂರ್ತಿಯ ಸುತ್ತಲೂ ಬೇವಿನ ತೊಪ್ಪಲುಗಳನ್ನು ಹರವಿ ಮನೆಮನೆಗೆ ಭಿಕ್ಷೆಯೆತ್ತುತ್ತ ಬರುವದುಂಟು. ಈತನ ಹೊಟ್ಟೆಯು ಬೆನ್ನಿಗೆ ಹತ್ತಿರುತ್ತಿದೆ. ಗಣಪ್ಪನ ಹಾಗೆ ಹೊಟ್ಟೆಯವನಲ್ಲ. ಈತನಿಗೆ ಕೊಡುವ ನೈವೇದ್ಯವೆಂದರೆ ಜೋಳದ ನುಚ್ಚು. ಯಾಕಂದರೆ, ಈಗ ಮುಂಗಾರಿ ಮಳೆಗಳು ಮುಗಿದಿರುತ್ತಿವೆ. ಹಿಂಗಾರಿ ಮಳೆಗಳು ಇನ್ನೂ ಪ್ರಾರಂಭವಾಗಿರುವದಿಲ್ಲ. ಈ ಮಧ್ಯಂತರ ಅವಧಿಯಲ್ಲಿ ಮಳೆ ಕಟ್ಟಾಗಿರುವದರಿಂದ ಜನರೆಲ್ಲ ಕಂಗಾಲಾಗಿ ಮೋ ಒಣಗಿಸಿಕೊಂಡು ಆಕಾಶದ ಕಡೆಗೊಮ್ಮೆ ಪೈರಿನ ಕಡೆ ಗೊಮ್ಮೆ ನೋಡುತ್ತ ಚಿಂತೆಯಲ್ಲಿರುತ್ತಾರೆ. ಇಂತಹ ಕಷ್ಟಕರವಾದ ಸಮಯದಲ್ಲಿ ಜೋಕುಮಾರನು ಬರುವದರಿಂದ ಈತನಿಗೆ ಅಂಬಲಿಯ ನೈವೇದ್ಯವನ್ನಿಡುವದು ಸ್ವಾಭಾವಿಕ. ಏಳು ದಿನಗಳ ವರೆಗೆ ಅಂಬಲಿಯನ್ನುಂಡು ಏನೂ ಕಾಣದೆ ತಿರುಗಿ ಕೈಲಾಸಕ್ಕೆ ಹೋಗುವನು ಗಣಪ್ಪ-ಜೋಕುಮಾರರ ಬಗೆಗೆ ಸೊಗಸಾದ ಕಥೆಯೊಂದು ಹಳ್ಳಿಗರಲ್ಲಿ ಪ್ರಚಲಿತವಿದೆ. ಆ ಕಥೆಗೆ ಭೂಗೋಲು ಶಾಸ್ತ್ರದ ಹಿನ್ನೆಲೆಯಿದ್ದು ಭೌಗೋಲಿಕ ಕಾರಣಗಳನ್ನು ಕೊಡಬಹುದಾಗಿದೆ. ಮಹೇಶ್ವರನು ಲೋಕದ ಸಮಾಚಾರವನ್ನು ತಿಳಿದುಕೊಂಡು ಬರಲು ಇವರೀರ್ವರನ್ನು ಕಳಿಸಿಕೊಡುವ ಪರಿಪಾಠವನ್ನಿಟ್ಟುಕೊಂಡಿರುವನಂತೆ. ಮೊದಲು ಗಣಪ್ಪನನ್ನು ಕಳಿಸಿ ಕೊಡುವನಂತೆ. ಈತನು ಬಂದಾಗ ಮುಂಗಾರಿ ಮಳೆ (ಮೃಗಪಂಚಕ)ಗಳು ಚನ್ನಾಗಿ ಆಗಿರುತ್ತವೆ. ಈತನು ಬರುವ ಸಮಯವೆಂದರೆ ಸುಮಾರು ಆಗಷ್ಟ ತಿಂಗಳ ಕೊನೆಯ ವಾರ. ಈಗ ನೈರುತ್ಯದ ಮುನ್ಸೂನ ಗಾಳಿಗಳಿಂದ ಸಾಕಷ್ಟು ಮಳೆಯಾಗಿರುವದರಿಂದ ಜನರು ಒಳ್ಳೇ ಹುರುಪಿನಲ್ಲಿರುವದುಂಟು. ಆದುದರಿಂದ ಜನರು ಗಣಪ್ಪನಿಗೆ ದಿನಾಲು ತರತರದ ಪಕ್ವಾನ್ನಗಳ ನೈವೇದ್ಯವನ್ನು ಮಾಡಿ ಪಟಾಕ್ಷಿ-ಧಡಲ್ಬಾಜಿಗಳನ್ನು ಹಾರಿಸುವದುಂಟು. ಗಣಪ್ಪನು ಕೈಲಾಸಕ್ಕೆ ಹೋಗಿ ಜನರೆಲ್ಲರೂ ಒಳ್ಳೇ ಸುಖದಲ್ಲಿರುವರೆಂದೂ ದಿನಾಲು ತರತರದ ಪಕ್ವಾನ್ನಗಳನ್ನು ತಿನಿಸಿದರೆಂದೂ, ಪಟಾಕ್ಷಿ-ಧಡಲ್ಬಾಜಿಗಳನ್ನು ಲೆಕ್ಕವಿಲ್ಲದಷ್ಟು ಹಾರಿಸಿದರೆಂದೂ ಮಹೇಶ್ವರನಿಗೆ ನಿಜ ಸಂಗತಿಗಳ ವರದಿಯನ್ನು ಒಪ್ಪಿಸುತ್ತಾನೆ. ಲೆಕ್ಕವಿಲ್ಲದಷ್ಟು ಪಟಾಕ್ಷಿ-ಧಡಲ್ಬಾಜಿಗಳನ್ನು ಹಾರಿಸಿದ ವೃತ್ತಾಂತವನ್ನು ಕೇಳಿ ಜನರು ಅತಿ ಸೌಖ್ಯದಿಂದ ಸೊಕ್ಕಿಗೆ ಬಂದಿರುವರೆಂದು ತಿಳಿದು ಮಹೇಶ್ವರನು ವರುಣ (ಮಳೆದೇವ)ನನ್ನು ಕರೆಯಿಸಿ ಮಳೆಯನ್ನು ತಡೆಹಿಡಿಯಲು ಅಪ್ಪಣೆ ಕೊಡುವನು. ಕೂಡಲೆ ವರುಣನು ಮಳೆಯನ್ನು ತಡೆಹಿಡಿಯುವನು. ಈ ಮಾತು ಭೂಗೋಲ ಶಾಸ್ತ್ರಕ್ಕೆ ಹೊಂದಿಕೆಯಾಗಿದೆ. ಯಾಕಂದರೆ,

ಈಗ ನೈರುತ್ಯದ ಮನ್ಸೂನು ಗಾಳಿಗಳ ಕಸುವು ಕಡಿಮೆಯಾಗಿ ಅವು ಕುಗ್ಗಿರುತ್ತಿವೆ. ಇನ್ನೂ ಈಶಾನ್ಯದ ಮನ್ಸೂನು ಗಾಳಿಗಳು ಬೀಸಲು ಪ್ರಾರಂಭವಾಗಿರುವದಿಲ್ಲ. ಈ ಅವಧಿಯಲ್ಲಿ ಮಳೆಯು ಕಟ್ಟಾಗುವದರಿಂದ ಜನರಲ್ಲಿ ಹಾಹಾಕಾರವು ಏಳುತ್ತಿದೆ. ಈ ಸಮಯದಲ್ಲಿಯೇ ಜೋಕುಮಾರನು ಬರುತ್ತಾನೆ. ಗಣಪ್ಪನಂತೆ ಇವನೂ ದೇಶವನ್ನೆಲ್ಲ ಸುತ್ತಾಡಿ ಜನರ ಕಷ್ಟಕರವಾದ ಸ್ಥಿತಿಯನ್ನು ಕಣ್ಣಾರೆ ಕಂಡುಕೊಂಡು ಕೈಲಾಸಕ್ಕೆ ಹೋಗಿ ಮಳೆಯಿಲ್ಲದ್ದಕ್ಕೆ ದೇಶದಲ್ಲೆಲ್ಲ ಹಾಹಾಕಾರವೆದ್ದಿದೆಯೆಂದೂ ತನಗೆ ತಿನ್ನಲು ಬರೇ ಜೋಳದ ನುಚ್ಚು ಕೊಟ್ಟರೆಂದೂ ಬಿರಿತ ಹುಟಿಗೆ ಹಚ್ಚಿಕೊಳ್ಳಲು ಬೆಣ್ಣೆಯನ್ನು ಸಹ ಯಾರೂ ಕೊಡಲಿಲ್ಲವೆಂದೂ ಹೇಳಿ ಬೆನ್ನಿಗೆ ಹತ್ತಿರ ಹೊಟ್ಟೆಯನ್ನು ತೋರಿಸಿ ತನ್ನ ವರದಿಯನ್ನು ಅರ್ಪಿಸುತ್ತಾನೆ. ಈ ವೃತ್ತಾಂತವನ್ನೆಲ್ಲ ಕೇಳಿ ಗಾಬರಿಗೊಂಡು ಮಹೇಶ್ವರನು ಕೂಡಲೆ ವರುಣನನ್ನು ಕರೆಯಿಸಿ ಮಳೆಯನ್ನು ತತ್‌ಕ್ಷಣವೇ ಕೊಡಲು ಆಜ್ಞಾಪಿಸಿದನು. ವರುಣನು ಆಪ್ಪಣೆಯನ್ನು ಶಿರಸಾವಹಿಸಿ ನಿಂತ ಕಾಲಮೇಲೆಯೇ ಮಳೆಗರೆಯುವನು. ಜೋಕುಮಾರನು ಹೋದಕೂಡಲೆ ಬರುವ ಮಳೆಗಳು ಹಿಂಗಾರಿ ಮಳೆ (ಮಘಪಂಚಕ)ಗಳು. ಈಶಾನ್ಯದ ಮನ್ಸೂನಿನ ಗಾಳಿಗಳು ಈಗ ಬೀಸಲು ಪ್ರಾರಂಭವಾಗುತ್ತಿರುತ್ತಿವೆ. ಮನ್ಸೂನಿನ ಗಾಳಿಗಳು ಪ್ರಾರಂಭವಾಗುವಾಗ ಗುಡುಗು-ಮಿಂಚಿನಿಂದ ಕೂಡಿದ ದೊಡ್ಡ ದೊಡ್ಡ ಮಳೆಗಳಾಗುವುದುಂಟು. ಈ ಮಳೆಗಳಿಗೆ ನಾವು ಹಿಂಗಾರಿ ಮಳೆಗಳೆಂದು ಕರೆಯುತ್ತೇವೆ. ಹಳ್ಳಿಗರಲ್ಲಿ ಜನಜನಿತವಾಹ ಈ ಕಥೆಗೂ ಭೂಗೋಲ ಶಾಸ್ತ್ರಕ್ಕೂ ಹೇಗೆ ಸರಿಹೋಗುವದೆಂಬುದನ್ನಷ್ಟು ನಮ್ಮ ಓದುಗರ ಗಮನಕ್ಕೆ ತಂದುಕೊಡುವ ಉದ್ದೇಶದಿಂದ ಇದನ್ನಿಷ್ಟು ದೀರ್ಘವಾಗಿ ವಿಸ್ತರಿಸಲಾಯಿತು. ಮಕ್ಕಳಿಗೆ ರುಚಿಸುವ ಈ ಕಥೆಯನ್ನು ಶಿಕ್ಷಕ-ಶಿಕ್ಷಕಿಯರು ಚಿತ್ತಾಕರ್ಷಕವಾಗಿ ಹೇಳಿ ಅದರಲ್ಲಿ ಅಳವಡಿಸಿಕೊಂಡಿರುವ ಭೂಗೋಲಿಕ ಕಾರಣಗಳನ್ನು ಬೈಲಿಗೆಳೆದು ತೋರಿಸಬೇಕು, ಬೇಸಿಕ್ ಸಾಲೆಯ ಶಿಕ್ಷಕ-ಶಿಕ್ಷಕಿಯರು ಇದಕ್ಕನುರೂವಾಗುವಂತಹ ಚಟುವಟಿಕೆಯೊಂದನ್ನಿಟ್ಟುಕೊಂಡು ಈ ಸಂಗತಿಗಳನ್ನು ಮನಂಬುಗುವಂತೆ ಕಲಿಸಬೇಕು.

ದಸರೆ.

ಈ ಹಬ್ಬವು ಆಶ್ವೀನ ಶುದ್ಧ ಪ್ರತಿಪದೆಯಿಂದ ದಶಮಿಯ ವರೆಗೆ ಬಿಟ್ಟೂ ಬಿಡದೆ ಹತ್ತು ದಿನಗಳ ವರೆಗೆ ನಡೆಯುವದು. ಇದಕ್ಕೆ ನವರಾತ್ರಿಯ ಹಬ್ಬವೆಂದೂ ನಾಡಹಬ್ಬವೆಂದೂ ಕರೆಯುತ್ತಾರೆ. ಪ್ರತಿಪದೆಯ ದಿವಸ ಘಟಸ್ಥಾಪನೆಯಾಗಿ ನಂದಾದೀವಿಗೆಯು ಒಂಬತ್ತು ದಿನಗಳ ವರೆಗೆ ಹಗಲು-ರಾತ್ರಿ ಒಂದೇ ಸವನೆ ಉರಿಯುವದರಿಂದ ಇದಕ್ಕೆ ನವರಾತ್ರಿ ಹಬ್ಬವೆಂಬ ಹೆಸರು ಬಂದಿದೆ. ಕನ್ನಡ ಅರಸರೆಲ್ಲ ಶಕ್ತಿ ದೇವಿಯ ಭಕ್ತರು. ಈ ಹಬ್ಬದಲ್ಲಿ ನಮ್ಮ ನಾಡಿನ ಎಲ್ಲ ಅರಸರೂ ಪ್ರಜೆಗಳೂ ಶಕ್ತಿ (ಶಮಿ) ದೇವಿಯನ್ನು ಪೂಜಿಸುತ್ತಿದ್ದರಾದುದರಿಂದ ಇದನ್ನು ನಾಡಹಬ್ಬವೆಂದು ಕರೆಯಹತ್ತಿದರು. ಪರಂಪರಾನುಸಾರವಾಗಿ ಈ ಹಬ್ಬವು ಈಗ ಎಲ್ಲ ಊರುಗಳಲ್ಲಿ ಅತಿ ವಿಜೃಂಭಣೆಯಿಂದ ಸಾರ್ವಜನಿಕವಾಗಿ ಆಚರಿಸಲ್ಪಡುತ್ತಿದೆ. ಕೆಲವು ಊರುಗಳಲ್ಲಿ ಸಾಹಿತಿಗಳನ್ನೂ ವ್ಯಾಖ್ಯಾನಕಾರರನ್ನೂ ತಮ್ಮಲ್ಲಿಗೆ ಪ್ರೇಮಾದರದಿಂದ ಬರಮಾಡಿಕೊಂಡು ದಿನಾಲು ಸಂಜೆಗೆ ಒಬ್ಬೊಬ್ಬರ ಉಪನ್ಯಾಸವನ್ನಿಡುವರಂತೆ. ಈ ಉಪನ್ಯಾಸಗಳ ಕಾರ್ಯಕ್ರಮವನ್ನು ಮೊದಲೇ ಸಿದ್ಧಪಡಿಸಿ ಎಲ್ಲರಿಗೂ ಗೊತ್ತಾಗಲೆಂಬ ಉದ್ದೇಶದಿಂದ ವರ್ತಮಾನಪತ್ರಗಳಲ್ಲಿ ಪ್ರಸಿದ್ಧಿಸುವದುಂಟು. ದೈನಿಕ ವರ್ತಮಾನ ಪತ್ರಗಳಲ್ಲಿ ನಾವು ಓದುವ ಪ್ರಕಟನೆಗಳ ಮೇಲಿಂದ ಕಂಡು ಬರುವದೇನಂದರೆ ಇತ್ತಿತ್ತಲಾಗಿ ಈ ನಾಡಹಬ್ಬವು ನಮ್ಮ ನಾಡಿನ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳಲ್ಲೆಲ್ಲ ಆಚರಿಸಲ್ಪಡುತ್ತಲಿದೆ. ಇದು ನಿಜಕ್ಕೂ ಸಂತೋಷದ ಸಂಗತಿಯು. ಈ ಹಬ್ಬವನ್ನು ಎಲ್ಲ ಸಾಲೆಗಳು ಆಚರಿಸಬೇಕು. ಹತ್ತು ದಿನಗಳ ವರೆಗೆ ದಿನಾಲು ಒಂದೊಂದರಂತೆ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕು. ಒಂದು ದಿನ ಮಕ್ಕಳಿಗೆ ರುಚಿಸುವಂತಹ ವಿಷಯದ ಬಗೆಗೆ ಉಪನ್ಯಾಸ, ಒಂದು ದಿನ ಚರ್ಚಾಕೂಟ, ಒಂದು ದಿನ ತಕಲಿಯಿಂದ ನೂಲುವ ಪಂದ್ಯಾಟ, ಒಂದು ದಿನ ರಾಟಿಯಿಂದ ನೂಲುವ ಪಂದ್ಯಾಟ, ಒಂದು ದಿನ ಆಟಗಳ ಏರಾಟ, ಒಂದು ದಿನ ವಚನಗಳನ್ನು ಇಲ್ಲವೆ ಪದ್ಯಗಳನ್ನು ಹಾಡಿ ತೋರಿಸುವ ಸ್ಪರ್ಧೆ, ಇತ್ಯಾದಿ, ಮತ್ತು ಕೊನೆಯ ದಿನ ಸಾರಿತೋಷಕ

ಸಮಾರಂಭವನ್ನಿಟ್ಟುಕೊಳ್ಳಬೇಕು. ಈ ಹಬ್ಬದಲ್ಲಿ ಹತ್ತು ದಿನಗಳ ವರೆಗೆ ದಿನಾಲು ಪಕ್ವಾನ್ನವೊಂದನ್ನು ತಯಾರಿಸಿ ನೈವೇದ್ಯಮಾಡಿ ಊಟ ಮಾಡುವದುಂಟು. ಕೊನೆಯವೆರಡು ದಿನಗಳು ಅಂದರೆ ಮಹಾನವಮಿ ಮತ್ತು ವಿಜಯಾದಶಮಿ ಇವು ಹೆಚ್ಚಿನ ಮಹತ್ವದವುಂಟು. ಮಹಾನವಮಿಯ ದಿವಸ ಖಂಡೇಪೂಜೆಯಾಗಬೇಕು. ಸೈನಿಕರಿದ್ದವರು ತಮ್ಮ ಶಸ್ತ್ರಾಸ್ತ್ರಗಳನ್ನು ಪೂಜಿಸುವರು. ಬೇರೆ ಉದ್ಯೋಗಗಳನ್ನು ಮಾಡುವವರು ತಮ್ಮ ತಮ್ಮ ಉಪಕರಣಗಳನ್ನು ಪೂಜಿಸುವದುಂಟು. ಸಾಲೆಯ ಹುಡುಗರು ಸಾಲೆಯಲ್ಲಿ ಪಾಟಿ-ಪುಸ್ತಕಗಳನ್ನಿಟ್ಟು ಪೂಜೆ ಮಾಡುವದೊಳಿತು. ಕೊನೆಯ ದಿನವು ವಿಜಯಾದಶಮಿಯು. ಈ ದಿವಸ ಎಲ್ಲರೂ ತಮ್ಮ ತಮ್ಮ ಮನೆಯಲ್ಲಿ ಬನ್ನಿಯನ್ನು ಪೂಜಿಸುವದುಂಟು. ಕುದುರೆಗಳನ್ನು ಸಾಕಿದವರು ಅವುಗಳನ್ನು ಸಿಂಗಾರ ಮಾಡಿ ಮೆರೆಯಿಸುತ್ತ ಗುಡಿಗೆ ಹೋಗಿ ಕಾಯಿ ಒಡೆಯಿಸಿಕೊಂಡು ಬರುವದುಂಟು. ಸಂಜೆಯ ನಾಲ್ಕು ಗಂಟೆಯ ಸುಮಾರಿಗೆ ಕೆಲವು ಊರುಗಳಲ್ಲಿ ಕುದುರೆಗಳನ್ನು ಓಡಿಸುವ ಶರ್ಯತ್ತುಗಳನ್ನಿಡುವದುಂಟು. ಹೊತ್ತು ಮುಳುಗುವ ಸಮಯಕ್ಕೆ ಎಲ್ಲರೂ ಸಿಮೋಲ್ಲಂಘನ ಮಾಡಿ (ಊರ ಹೊರಗೆ ಹೋಗಿ) ಶಮೀ ದೇವತೆ (ಬನ್ನಿಗಿಡ)ಯನ್ನು ಪೂಜಿಸಿ ಬನ್ನೀ ಮುಡಿಯುತ ಊರೊಳಗೆ ಬರುತ್ತಾರೆ. ಆ ದಿನ ಬನ್ನೀ ಎಲೆಗೆ ಬಂಗಾರವೆಂದು ಕರೆಯುತ್ತಾರೆ. ಒಬ್ಬರಿಗೊಬ್ಬರು ಬನ್ನೀ ಎಲೆಗಳನ್ನು ಕೊಟ್ಟು ಬಂಗಾರದಂತಿರೋಣವೆಂದು ಹಾರೈಸುವದುಂಟು. ಪರಸ್ಪರರಲ್ಲಿ ಸ್ನೇಹ-ಸಹಕಾರದ ಭಾವನೆಗಳನ್ನು ಹುಟ್ಟಿಸುವದು ಈ ಹಬ್ಬದ ಉದ್ದೇಶವು. ಬನ್ನಿಯ ಎಲೆಯ ಬದಲು ಆರಿಯ ಎಲೆ ಇಲ್ಲವೆ ಜೋಳದ ಎಲೆಯನ್ನು ಈ ದಿನ ಉಪಯೋಗಿಸುವದುಂಟು. ಈ ದಿವಸ ಬನ್ನೀಗಿಡವನ್ನೇಕೆ-ಪೂಜಿಸುವರೆಂಬುದನ್ನಷ್ಟು ನೋಡೋಣ.

ಉತ್ತರಾಷಾಢಾ ಮತ್ತು ಶ್ರವಣಾ ನಕ್ಷತ್ರಪುಂಜಗಳ ನಟ್ಟ ನಡುವೆ ಅಭಿಜಿತ್ ಎಂಬ ಹೆಸರಿನ ಮೂರು ನಕ್ಷತ್ರಗಳಿಂದ ಕೂಡಿದ ಪುಂಜವೊಂದಿದೆ. ದಶಮಿ ತಿಥಿಯ ದಿವಸ ಈ ಅಭಿಜಿತ್ ನಕ್ಷತ್ರದ ಯೋಗವಿರುತ್ತಿದೆ. ಈ ಮುಹೂರ್ತವು ವಿಜಯ (ವಿಶೇಷ ಜಯ)ವನ್ನು ಕೊಡುವದರಿಂದ ಈ ದಶಮಿ ತಿಥಿಗೆ ವಿಜಯ ದಶಮಿಯೆಂಬ ಹೆಸರು ಬಂದಿದೆ. ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟನಗರಕ್ಕೇ (ಧಾರವಾಡ ಜಿಲ್ಲೆಯಲ್ಲಿಯ ಹಾನಗಲ್ಲಿಗೆ) ಹೋಗುವ ಮುನ್ನ ತಮ್ಮ ಶಸ್ತ್ರಾಸ್ತ್ರಗಳನ್ನೂ ಪೋಷಾಕುಗಳನ್ನೂ ಒಂದು ಗಂಟಿನಲ್ಲಿ ಕಟ್ಟಿ ಅದನ್ನು ಗಿಡಗಳ ಜುಡುಪಿನ ಮಧ್ಯದಲ್ಲಿದ್ದದ್ದೊಂದು ಬನ್ನಿ ಗಿಡದ ಮೇಲೆ ಯಾರಿಗೂ ಕಾಣದ ಹಾಗೆ ಇಟ್ಟು ಶಮೀ ದೇವತೆಯ ವಶಕ್ಕೆ ಕೊಟ್ಟಿದ್ದರು. ಈ ದಶಮಿ ತಿಥಿಗೆ ಅಜ್ಞಾತವಾಸದ ಮುಕ್ತಾಯವು ಸಮೀಪಿಸಿತ್ತು. ಧರ್ಮರಾಜನು ವಿರಾಟನಗರದಲ್ಲಿ ಪಂಚಾಂಗ ಹೇಳುವ ಜೋಯಿಸನಾಗಿದ್ದನು. ಅವನೇ ಲಕ್ಷ ಹಾಕಿ ಈ ಅಭಿಜಿತ್ ಮುಹೂರ್ತವನ್ನು ಹುಡುಕಿ ತೆಗೆದು ತನ್ನ ತಮ್ಮಂದಿರಿಗೆಲ್ಲ ತಿಳಿಸಿದನು. ಆ ಮುಹೂರ್ತದಲ್ಲಿಯೇ ಪಾಂಡವರೆಲ್ಲರೂ ಆ ಬನ್ನೀ ಗಿಡಕ್ಕೆ ಹೋಗಿ ಶಮೀದೇವಿಯನ್ನು ಪೂಜೆ ಮಾಡಿ ತಮ್ಮ ತಮ್ಮ ಪೋಷಾಕುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಧಾರಣ ಮಾಡಿದರು. ಆದುದರಿಂದ, ಮುಂದೆ ಕುರುಕ್ಷೇತ್ರದಲ್ಲಿ ಕರ್ಣ, ಅಶ್ವತ್ಥಾಮ, ದ್ರೋಣ, ಭೀಷ್ಮ, ದುರ್ಯೋಧನರಂತಹ ಅತಿರಥಿ-ಮಹಾರಥಿಗಳಗೂಡ ಯುದ್ಧ ಮಾಡಿ ವಿಜಯವನ್ನು ಸಂಪಾದಿಸಲು ಶಕ್ಯವಾಯಿತೆಂದು ನಂಬುಗೆಯಿದೆ. ಪೂರ್ವಕಾಲದಲ್ಲಿ ಕ್ಷತ್ರಿಯರು ಈ ಮುಹೂರ್ತದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಪೂಜೆಮಾಡಿ ಧಾರಣಮಾಡಿಕೊಂಡು ದಿಗ್ವಿಜಯಕ್ಕಾಗಿ ಹೊರಡುತ್ತಿದ್ದರು. ಈ ಪರಂಪರೆಯು ಮರಾಠರ ಕಾಲದ ವರೆಗೂ ನಡೆದು ಬಂದಿತ್ತು. ಮರಾಠರಾದರೂ ಪ್ರತಿವರುಷ ದಸರೆಯ ಹಬ್ಬದಲ್ಲಿ ಶಸ್ತ್ರಾಸ್ತ್ರಗಳನ್ನು ಪೂಜೆ ಮಾಡಿಕೊಂಡು ಜೌಥಾಯಿ-ಸರದೇಶಮುಖಿಗಳನ್ನೆತ್ತಲು ಹೊರಡುತ್ತಿದ್ದರು. ಕನ್ನಡ ಕುಲದ ಅರಸರಾದ ಮೈಸೂರ ಶ್ರೀಮನ್ ಮಹಾರಾಜರವರು ದಸರೆಯ ಮಹೋತ್ಸವವನ್ನು ಎಷ್ಟು ಆಟ್ಟಹಾಸದಿಂದ ನೆರವೇರಿಸುವರೆಂಬುದನ್ನು ನಮ್ಮಲ್ಲಿಯ ಎಷ್ಟೋ ಜನರು ಪ್ರತಿವರುಷ ಮೈಸೂರಿಗೆ ಹೋಗಿ ನೋಡಿ ಬರುವರಲ್ಲವೇ? ಇದು ನಿಜಯಾದಶಮಿಯ ಮಹತ್ವವನ್ನು ತೋರಿಸಿಕೊಡು

ನದಲ್ಲವೇ ? ಆದುದರಿಂದಲೇ ಈ ಸುಮೂಹೂರ್ತದಲ್ಲಿ ಪ್ರಾರಂಭ ಮಾಡಿದ ಕೆಲಸಕ್ಕೆ ವಿಜಯವು ಕಟ್ಟಿಟ್ಟದ್ದೇ ಎಂಬ ದೃಢ ವಿಶ್ವಾಸವು ಮಾತ್ರ ಜನರಲ್ಲಿ ಮನೆಮಾಡಿಕೊಂಡಿದೆ. ನಾನು ವಿಜಯಾದಶಮಿಯ ದಿವಸ ಕೆಲಸವನ್ನು ಪ್ರಾರಂಭಿಸಿದ್ದೇನಾದುದರಿಂದ ನನಗೆ ವಿಜಯವು ಸಿಗಲಿಕ್ಕೇಬೇಕೆಂಬ ಆತ್ಮವಿಶ್ವಾಸದಿಂದ ಆ ಕೆಲಸವನ್ನು ಮಾಡಲು ಪ್ರವೃತ್ತನಾದವನಿಗೆ ವಿಜಯವು ಸಿಕ್ಕೇ ಸಿಗುವದು. ಈ ಸದುದ್ದೇಶದಿಂದಲೇ ನಮ್ಮ ಪೂರ್ವಜರು ಈ ಸುಮುಹೂರ್ತಗಳನ್ನು ರಚಿಸಿಟ್ಟಿರಬೇಕೆಂಬುದು ನಮ್ಮ ಊಹೆ. ಯಾಕಂದರೆ, ಅವನಲ್ಲಿ ನೆಲಸಿದ ಆತ್ಮವಿಶ್ವಾಸವು ಅವನನ್ನು ಯೋಗ್ಯ ದಿಶೆಯಲ್ಲಿ ಪ್ರಯತ್ನ ಮಾಡಲು ಆಣಿಗೊಳಿಸುತ್ತಿರುತ್ತಿದೆ. ಹಿಡಿದ ಕೆಲಸವನ್ನು ನಿರ್ವಹಿಸಲು ಬೇಕಾಗುವ ಯುಕ್ತಿ-ಪ್ರಯುಕ್ತಿಗಳೂ ಹಂಚಿಕೆಗಳೂ ಉಪಾಯಗಳೂ ತಮ್ಮಷ್ಟಕ್ಕೆ ತಾವೇ ಅವನಿಗೆ ಹೊಳೆಯುತ್ತಿವೆ. ಹೀಗಾಗಿ, ಅವನು ತನ್ನ ಕೆಲಸದಲ್ಲಿ ಯಶವನ್ನು ಹೊಂದೇ ತೀರುವನು. ಮನಃಶಾಸ್ತ್ರವು ಇದನ್ನು ಸಂಪೂರ್ಣವಾಗಿ ಒಪ್ಪುತ್ತಿದೆ. ಉದಾಹರಣಾರ್ಥವಾಗಿ, ಉತ್ತಮ ಪಾಠವನ್ನು ಕೊಡಬೇಕೆಂಬ ಆತ್ಮವಿಶ್ವಾಸದಿಂದ ಶಿಕ್ಷಕ-ಶಿಕ್ಷಕಿಯರ ಹೃದಯವು ಒಮ್ಮೆ ತುಂಬಿಕೊಂಡಿತೆಂದರೆ, ಅವರು ಪಾಠಕ್ಕೆ ಬೇಕಾಗುವ ಉಪಕರಣಗಳನ್ನೆಲ್ಲ ಚನ್ನಾಗಿ ತಯಾರಿಸುವದುಂಟು; ಪಾಠದ ಟಿಪ್ಪಣಿಗಳನ್ನು ಆಚ್ಚುಕಟ್ಟಾಗಿ ಬರೆದಿಡುವದುಂಟು; ಪಾಠವು ರುಚಿಕಟ್ಟಾಗಲು ಅವಶ್ಯವಿದ್ದ ಹಂಚಿಕೆಗಳನ್ನೆಲ್ಲ ಮೊದಲೇ ಆಲೋಚಿಸಿ ಆರಗಿಸಿಕೊಳ್ಳುವದುಂಟು; ಇಷ್ಟೆಲ್ಲ ಆದ ಮೇಲೆ, ಆ ಪಾಠವು ಚನ್ನಾಗಿ ಆಗಲೇ ಬೇಕಲ್ಲವೇ ? ಇತಿಹಾಸದಲ್ಲಿಯಂತೂ ಇದಕ್ಕೆ ದೃಷ್ಟಾಂತಗಳು ಹೇಳತೀರದಷ್ಟು ಸಿಕ್ಕುತ್ತಿವೆ. ಅವುಗಳನ್ನೆಲ್ಲ ಇಲ್ಲಿ ವಿವರಿಸುವದು ಅನುಚಿತ. ಖಂಡೇ ಪೂಜೆಯ ಮತ್ತು ಶಮೀದೇವತೆಯ (ಬನ್ನೀ ಗಿಡ) ಪೂಜೆಯ ಚಟುವಟಿಕೆಯನ್ನಿಟ್ಟುಕೊಂಡು ಶಿಕ್ಷಕ-ಶಿಕ್ಷಕಿಯರು ದಸರೆಯ ಹಬ್ಬದ ವಿವರಗಳನ್ನೆಲ್ಲ ಮಕ್ಕಳಿಗೆ ಮನದಟ್ಟಾಗುವಂತೆ ತಿಳಿಸಿಕೊಡಬೇಕು.

(ಮುಂದುವರಿದುದು)

ವ್ಯಾಕರಣ ಶಾಸ್ತ್ರದಿಂದ
ಭಾಷೆಯ ಕಲಿಗಾಗುವ ಪ್ರಯೋಜನ

ಲೇಖಕರು :— **ಶ್ರೀ. ತಟ್ಟಿ ಶ್ಯಾಮರಾಯರು,** ಪ್ರಿನ್ಸಿಪಾಲ ಕನ್ನಡ ಟ್ರೇ. ಕಾ. ನವಲಗುಂದ

ಶುದ್ಧವಾಗಿ ಮಾತಾಡಲಿಕ್ಕೂ ಓದಲಿಕ್ಕೂ ಬರೆಯಲಿಕ್ಕೂ ಕಲಿಸುವದೇ ವ್ಯಾಕರಣದ ಪ್ರಯೋಜನವೆಂದು ನಾವು ಹೇಳುತ್ತೇವೆ. ಈ ಮಾತನ್ನು ಸ್ವಲ್ಪ ಪರಾಮರ್ಶಿಸೋಣ. ನಾವು ಮಾತನಾಡುವದು ವ್ಯಾಕರಣಕ್ಕೆ ಶುದ್ಧವಾಗಿರುವದೋ, "ನಾವು ಮಾತಾಡೋದು ವ್ಯಾಕರಣಕ್ಕ ಶುದ್ಧ ಇರತದೇನು?" "ಮಾತಾಡೋದು" "ಇರತದೇನು ?" ಇವು ವ್ಯಾಕರಣದ ರೂಪಸಿದ್ಧಿಯ ನಿಯಮಗಳಿಗೆ ಸರಿಯಾಗಿರುವವೇನು ? ಇಲ್ಲಿ ಮಾತನಾಡುವ ಮಾತಿನ ರೀತಿಯೇ ಬೇರೆ.

ಎಲ್ಲ ಭಾಷೆಗಳಲ್ಲಿಯೂ ಹೆಚ್ಚುಕಡಿಮೆಯಾಗಿ ಹೀಗೆ ಇದ್ದದ್ದೇ, ಅದರೆ ಮಾತಾಡುವಾಗ ಕೆಲವು ಪದಗಳು ರೂಪಭ್ರಷ್ಟವಾಗಿದ್ದರೂ, ಮಾತಿನ ರೀತಿಯೂ,

ವಾಕ್ಯರಚನೆಯ ಪ್ರಕಾರವೂ ಸಾಮಾನ್ಯವಾಗಿ ವ್ಯಾಕರಣವನ್ನು ಬಿಟ್ಟಿರುವದಿಲ್ಲ. ಇದಕ್ಕೆ ಮಾತ್ರ ವ್ಯಾಕರಣದ ಅಭ್ಯಾಸವೇನು ಬೇಕಿಲ್ಲ; ಏಕೆಂದರೆ ಮಕ್ಕಳಾಡುವ ಮಾತು ಅವರ ತಾಯ್ನುಡಿಯಾಗಿರುವದರಿಂದ ಅವರು ತಾನಾಗಿಯೇ ಅದನ್ನು ಆಡಾಡುತ್ತ ಕಲಿಯುವರು; ಎಂದ ಮೇಲೆ ಶುದ್ಧವಾಗಿ ಮಾತಾಡಲಿಕ್ಕೆ ವ್ಯಾಕರಣವನ್ನು ಕಲಿಯಬೇಕೆಂದ ಹಾಗಾಯಿತೇನು? ಹೇಳಿರಿ.

ಇನ್ನು ಬರೆಯಲಿಕ್ಕೆ ಬೇಕಾಗುವದೆನ್ನೋಣವೆ? ನೀವು ನಿಮ್ಮ ಬಂಧು-ಬಳಗದವರಿಗೆ ಇಷ್ಟಮಿತ್ರರಿಗೆ ಬರೆದ ಪತ್ರಗಳನ್ನು ಓದಿ ನೋಡಿದರೆ ಬರಹವು ಶುದ್ಧ ಗ್ರಂಥಸ್ಥ ಭಾಷೆಯಂತೆ ಇರುವದೇನು? ನಿಮಗೆ ಅನ್ಯರಿಂದ ಬಂದ ಪತ್ರಗಳನ್ನು ನೋಡಿರಿ, ಸ್ವಲ್ಪ ಕಲಿತವರಾಗಲಿ, ಹೆಚ್ಚು ಕಲಿತವರಾಗಲಿ, ಅವರು ಬರೆದಿರುವ ಭಾಷೆಯು ಶುದ್ಧವಾಗಿರಲಿ, ಅಶುದ್ಧವಾಗಿರಲಿ ನಿಮಗೆ ಅರ್ಥವಾಗುವದಕ್ಕೆ ತೊಂದರೆಯಾಗುವದೇನು? ಸುತರಾಂ ಇಲ್ಲ. ಹೇಳಿದ ಮಾತಿನ ಭಾವವು ಅಥವಾ ತಾತ್ಪರ್ಯವು ತಿಳಿದರಾಯಿತು. ಮೂಕರು ಸನ್ನೆಗಳಿಂದ ತಿಳಿಸುವ ಪ್ರಕಾರಕ್ಕಿಂತಲೂ ಅದು ನೂರು ಪಾಲಿಗೆ ಬೇಕಷ್ಟೇ? ಎಂದ ಮೇಲೆ ಪತ್ರಲೇಖನಕ್ಕಂತೂ ವ್ಯಾಕರಣ ಬೇಕಾಗಿಲ್ಲ ಎಂದಹಾಗಾಯಿತು.

ಕೋರ್ಟಿನಲ್ಲಿ ಅರ್ಜಿ ದಸ್ತೈವಜು ಮೊದಲಾದ ಕಾಗದಪತ್ರಗಳಲ್ಲಿಯಂತೂ ವ್ಯಾಕರಣದ ರೂಪಗಳ ಕೊಲೆಯು ಕಂಡುಬರುವದು.

"ಬಸಪ್ಪ" ಎಂದು ಬರೆಯುವ ಬದಲು "ಬ್ಸಪ್ಪ" ಎಂದು ಬರೆಯುವದು "ವಹಿವಾಟೇ" ಆಗಿ ಹೋಗಿದೆ. 'ಬಾಡಿಗೆ' ಎನ್ನುವದರ ಬದಲಾಗಿ "ಭಾಡೆ" ಎನ್ನುವದು ಇತ್ಯಾದಿ. ನಾಟಕ ಸಂಭಾಷಣೆಗಳನ್ನು ಆಡುವ ಸೂತಿನಲ್ಲಿಯೇ ಬರೆಯುವದು ಒಂದು ಹೆಚ್ಚಳವೆಂದು ಎಣಿಸಲ್ಪಟ್ಟಿದೆ.

ಕೈಲಾಸಂ ರ ನಾಟಕಗಳನ್ನು ನೋಡಿರಿ.

ಇನ್ನುಳಿಯಿತು ಓದುವವರ ವಿಚಾರ. ಓದಲಿಕ್ಕೆ ಬರಬೇಕಾದರೆ ಸಾಲೆಯಲ್ಲಂತೂ ಓದಿರಬೇಕು; ಎಂದ ಮೇಲೆ ಸ್ವಲ್ಪ ವ್ಯಾಕರಣದ ಜ್ಞಾನವೂ ಆಗಿರಬೇಕು. ಆದರೂ ಪರೀಕ್ಷೆಯಲ್ಲಿ ವ್ಯಾಕರಣದಲ್ಲಿ ಶೂನ್ಯ ಗುಣಗಳನ್ನು ಪಡೆದು ವಾಚನದಲ್ಲಿ ಹತ್ತಕ್ಕೆ ಹತ್ತು ಗುಣಗಳನ್ನು ದೊರಕಿಸುವದು ಅಪೂರ್ವವಲ್ಲ.

ಹಾಗಾದರೆ ವ್ಯಾಕರಣದ ಅಭ್ಯಾಸದಿಂದ ಆಗುವ ಪ್ರಯೋಜನವೇನು? ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಾಸಿಸುವ ಜನರು ಆಡುವ ಮಾತಿನ ನುಡಿಗಟ್ಟಿನಲ್ಲಿ ಒಡೆದು ಕಾಣುವಷ್ಟು ಭಿನ್ನ ಭೇದವಿದೆ.

ಬೆಳಗಾವಿಯವರು "ತೊಗೋರಿ" ಎಂದು ಹೇಳಿದರೆ, ಮೈಸೂರವರು 'ತಕ್ಕೊಳ್ಳಿ' ಎಂದೂ ಧಾರವಾಡದವರು 'ತೊಗೊಳ್ರಿ' ಎಂದು ಹೇಳುವರು. ಧಾರವಾಡದವರು 'ಐತಿ' ಅಥವಾ 'ಅಜಿ' ಎಂದು ಹೇಳಿದರೆ ಮೈಸೂರವರು 'ಇದೆ' ಎಂದೂ, ಕಾರವಾರದವರು 'ಉಂಟು' ಎಂದೂ ಹೇಳುವರು. ಒಂದು ಕಡೆಯವರು 'ಅವರು ಮನೆಯಲ್ಲಿ ಇಲ್ಲಾಗಿದ್ದರು.' ಎಂದೂ ಹೇಳಿದರೆ ಇನ್ನೊಂದು ಕಡೆಯವರು 'ಅವರು ಮನೆಯಲ್ಲಿ ಇರಲಿಲ್ಲ' ಎಂದೂ ಮತ್ತೊಂದು ಕಡೆಯವರು 'ಅವರು ಮನೆಯಲ್ಲಿ ಇದ್ದಿಲ್ಲ' ಎಂದೂ ಹೇಳುವರು.

'ತನಗದು ಬೇಡಾ ಹೇಳಿವ ನನ್ನ ಹತ್ತರ' ಎಂದು ಕಾರವಾರದವರೂ 'ತನಗದು ಬೇಡವೆಂದು ನನ್ನ ಎದುರಿನಲ್ಲಿ ಹೇಳಿದ' ಎಂದು ಮೈಸೂರಿನವರೂ 'ತನಗದು ಬ್ಯಾಡಂತ ನನ್ನ ಮುಂದೆ ಹೇಳಿದ' ಎಂದು ಧಾರವಾಡದವರೂ ಹೀಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಬೇರೆ ಬೇರೆ ಭಾಗದ ಕನ್ನಡಿಗರು ಹೇಳುವರು. ಹಾಗೆ ಹೇಳುವಾಗ ಅರ್ಥ ತಿಳಿಯುವದಕ್ಕೆ ತೊಂದರೆಯೇನೂ ಆಗುವದಿಲ್ಲ, ಆದರೆ ಸಮಾರಂಭಗಳಲ್ಲಿ ಎಲ್ಲ ಭಾಗದ ಕನ್ನಡಿಗರು ಒಂದೆಡೆ ಕೂಡಿದಾಗ ಗ್ರಾಂಥಿಕ ಅಥವಾ ವ್ಯಾಕರಣ ಶುದ್ಧವಾದ ಭಾಷೆಯನ್ನು ಉಪಯೋಗಿಸುವದು ಅವಶ್ಯವಾಗಿರುವದು. ಇಲ್ಲದೆ ಹೋದರೆ ಮಾತನಾಡುವವರ ಅಯಾ ರೀತಿಯ ವೈಚಿತ್ರ್ಯದಿಂದ ಕೇಳುವ ಜನರ ಲಕ್ಷ್ಯವು ವಿಷಯದಿಂದ ಮಾತಿನ ರೀತಿಯ ಕಡೆಗೆ ವಿಚಲಿತವಾಗುವದು. ಅದಕ್ಕಾಗಿಯೇ ಒಂದು ಸಾಮಾನ್ಯ ವ್ಯಾಕರಣಪ್ರಕ್ರಿಯೆಗೂ, ನುಡಿಯ ಕಟ್ಟುಪಾಟಿಗೂ ಒಳಪಟ್ಟ ಭಾಷೆಯು ಬೇಕಾಗುವದು. ಇಂಥ ಭಾಷೆಯ ಬಳಕೆಯು ವ್ಯಾಕರಣದ ಅಭ್ಯಾಸದಿಂದ ಸಾಧ್ಯವು.

ಗ್ರಂಥಗಳಲ್ಲಿ ಪ್ರಕಾಶಿತವಾಗುವ ಭಾಷೆಯೂ ಈ ಬಗೆಯದಿರಬೇಕಾಗುವದು. ಕಾರಣವು ಸ್ಪಷ್ಟವಿದೆ—

ಆದು ಎಲ್ಲ ಭಾಗದ ಜನರಿಗೆ ಮನಸ್ಸಿಗೆ ಹಿಡಿಯಬೇಕು; ಅರ್ಥವಾಗಬೇಕು. ಕವಿಗಳಿಗೂ, ನಾಟಕಕಾರರಿಗೂ, ಕಥೆ ಕಾದಂಬರಿಗಳನ್ನು ಬರೆಯುವವರಿಗೂ ಈ ಭಾಷೆಯ ಬಳಕೆಯಿಂದ ಹೆಚ್ಚು ಪ್ರಯೋಜನವುಂಟು. ಕೈಲಾಸಂ ರ ನಾಟಕಗಳು ಮತ್ತು ವಿಡಂಬನೆಗಳೂ ಉತ್ತರ ಕರ್ನಾಟಕದ ಜನರ ಮನಸ್ಸಿಗೆ ಅಷ್ಟೊಂದು ಹಿಡಿಯುವದಿಲ್ಲ—ಅದರಲ್ಲಿಯ ಭಾಷೆಯೆ ಕಾರಣ. ಬೇಂದ್ರೆಯವರ ಹಲವು ಕವನಗಳು ಜನಪದ ಗೀತಗಳು ಅಷ್ಟೊಂದು ಮೆಚ್ಚುಗೆಯಾಗುವದು ಸಾಧ್ಯವಿಲ್ಲ.

ವ್ಯಾಕರಣದ ಅಭ್ಯಾಸದಿಂದ ಇನ್ನೊಂದು ಪ್ರಯೋಜನವುಂಟು. ಅದರ ಜ್ಞಾನದಿಂದ ಹೊಸ ಶಾಸ್ತ್ರೀಯ ಪರಿಭಾಷೆಯನ್ನು, ಹೊಸ ಪ್ರಯೋಗಗಳನ್ನು ರಚಿಸಿಕೊಳ್ಳಲು ಹಾಗು ಅಸಮರ್ಪಕ ಹಾಗು ಅಶುದ್ಧ ಪ್ರಯೋಗಗಳನ್ನು ಗ್ರಾಂಥಿಕ ಭಾಷೆಗೆ ಅಯೋಗ್ಯವೆಂದು ಬಿಡಲು ಬರುವದು. ಶಬ್ದಭಾಂಡಾರವನ್ನು ಹೆಚ್ಚಿಸಿಕೊಳ್ಳುವದಕ್ಕೆ ಮೂರು ಮಾರ್ಗಗಳನ್ನು ವ್ಯಾಕರಣವು ತೋರಿಸುವದು.

ಧಾತುಗಳೂ, ಪ್ರಾತಿಪದಿಕಗಳೂ ಯಾವುದೊಂದು ಭಾಷೆಯ ಮೂಲ ಧನ. ೧) ಕೃತ್ ೨) ತದ್ಧಿತ ೩) ಸಮಾಸಗಳಿಂದ ಅದನ್ನು ರಾಶಿಗಟ್ಟಲೆ ಬೆಳೆಸಿಕೊಳ್ಳಬಹುದು. ರಕ್ತದ ಒತ್ತಡ (Blood pressure) ಎಂಬಲ್ಲಿ 'ಒತ್ತಡ' ಎಂಬ ಕೃದಂತವು ಒತ್ತು ಧಾತುವಿನಿಂದ ಮಾಡಿಕೊಂಡದ್ದು. ವಿಧಾನ ಅಥವಾ ಶಾಸನ ಎಂಬುದು 'Act' ಎಂಬುದಕ್ಕೂ ವಿಧೇಯಕ ಎಂಬುದು 'Bill' ಎಂಬುದಕ್ಕೂ ಒಳ್ಳೇ ಸಮರ್ಪಕವಾಗಿವೆ.

'ಭಾಷೆಯು 'ವಿಚಾರದ ಮಾಧ್ಯಮ' ಎಂಬಲ್ಲಿ ಮಾಧ್ಯಮ ಎಂಬ ಶಬ್ದವು ಮಧ್ಯಮ ಎಂಬ ವಿಶೇಷಣದಿಂದ ಮಾಡಿಕೊಂಡ ತದ್ಧಿತಾಂತವು. ಜಾತಿ ಎಂಬ ನಾಮದಿಂದ 'ಜಾತೀಯ' 'ಜಾತೀಯ' ಶಬ್ದದಿಂದ 'ಜಾತೀಯತೆ' ಇವು ತದ್ಧಿತ ಪ್ರತ್ಯಯಗಳಿಂದ ಸಿದ್ಧವಾಗಿವೆ.

'ವಿಧಿಬಿಂದು' ಎಂಬ ಪದವು 'ಕ್ರಮಭಂಗದ ಅಂಶ' ಎಂಬರ್ಥದಲ್ಲಿ ಹೊಸ ಸಮಾಸದ ನಿರ್ಮಿತಿಯು.

'ಭಾವಗ್ರಂಥಿ' ಎಂಬುದು 'ಸಂಸ್ಕಾರಗಳ ಗಂಟು' ಎಂಬರ್ಥದಲ್ಲಿ ಸಮಾಸವು. ಹೀಗೆ ಆವಶ್ಯವಿರುವ ಹೊಸ ಶಾಸ್ತ್ರೀಯ ಪರಿಭಾಷೆಯು ನಿರ್ಮಾಣವಾಗುತ್ತಲಿದೆ.

'ಸ್ವಾತಂತ್ರ್ಯ' 'ಕೋಟ್ಯಾಂತರ' 'ಸಾಲ್ಯಾಂಶ' ಮುಂತಾದ ಅಪಪ್ರಯೋಗಗಳನ್ನು ಶಾಸ್ತ್ರಾದ್ರೂಢೀ ಬರಲೀಯಸಿ ಎಂಬ ನೆವವನ್ನೂ ಮುಂದೆ ಮಾಡಿ ಹಾಗೆಯೇ ಬಳಸಗೊಡುವದು ಭಾಷೆಯ ಸೌಂದರ್ಯಕ್ಕೆ ಕಲಂಕಪ್ರಾಯವಾದುದು. ಇಂತಹ ತಪ್ಪುಗಳನ್ನು ಶಿಕ್ಷಕರು ತಿದ್ದಿ ತಿಳಿಸಿ ಹೇಳಬೇಕು. ಭಾಷೆಯ ಏಕರೂಪತೆಯು ಅಖಂಡ ಕರ್ನಾಟಕದ ದೃಷ್ಟಿಯಿಂದ ಅತ್ಯಗತ್ಯವಾದುದು. ಅಪಪ್ರಯೋಗವು ಜನರ ಬಾಯಲ್ಲಿ ದೀರ್ಘ ಕಾಲದ ವರೆಗೂ ನೆಲೆಸಿ ರೂಢಮೂಲವಾಗಿದ್ದರೆ ಮುಂದೆ ಅದೇ ಹೊಸ ಶಾಸ್ತ್ರವಾಗುವದು—ಸಾಮಾನ್ಯ ನಿಯಮಕ್ಕೆ ಅಪವಾದವಾಗಿ ಪರಿಣಮಿಸುವದು. ತಿಳಿದ ವಿದ್ಯಾವಂತರು ತಪ್ಪುಗಳನ್ನು ತೋರಿಸಿಕೊಟ್ಟರೆ ತಿದ್ದಿಕೊಳ್ಳುವದು ವಿಹಿತ. ಪ್ರಕೃತಿ ಪ್ರತ್ಯಯಗಳಿಂದ ಶಬ್ದದ ಅರ್ಥವು ತಂತಾನೆ ಹೊಳೆಯುವಂತಿರುವದು, ಭಾಷೆಯ ಸತ್ವಸಾರಕ್ಕೂ, ಅದು ನೇರವಾಗಿ ಹೃದಯವನ್ನು ಮುಟ್ಟುವದಕ್ಕೂ ಪ್ರಬಲ ಕಾರಣವಾಗಿದೆ.

ಬಾಲಕರಿಗೆ ಓದಿನ ಆರಂಭ

ಸಂಗ್ರಹಿಸಿದವರು :— ಶ್ರೀ. ಹ. ಗ. ಜೋಶಿ

[ಇಲ್ಲಿಯ ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನಲ್ಲಿ ಧಾರವಾಡ ಜಿಲ್ಲೆಯ ಉಪಶಿಕ್ಷಣಾಧಿಕಾರಿಗಳ ಒಂದು ಅಲ್ಪಾವಧಿಯ ತರಬೇತಿಯು ನಡೆದಿದ್ದು ಆ ಸಂದರ್ಭದಲ್ಲಿ ನಮ್ಮ ಒಬ್ಬ ವಿದ್ಯಾಧಿಕಾರಿಗಳಾದ ಡಾಕ್ಟರ ಬಿಕ್ಕರಮನೆಯವರು ತಾ. ೪—೨—೫೩ ರಂದು 'ಮಕ್ಕಳಿಗೆ ಕಲಿಸುವ ವಿಧಾನ' ಎಂಬ ವಿಷಯವನ್ನು ಕುರಿತು ಸುಮಾರು ಅರ್ಧ ಗಂಟೆಯ ವರೆಗೆ ಮಾತನಾಡಿದರು. ಆ ಸಂದರ್ಭದಲ್ಲಿ ಅವರು ಹೇಳಿದ ಕೆಲ ಮಾತುಗಳು.—ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ ಒಳ್ಳೇ ಪ್ರಯೋಜನಕಾರಿಯಾಗುವದೆಂದು ಮುಖ್ಯ ಮಾತುಗಳನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿದೆ. ಆ ವರ್ಗವು ವಿದ್ಯಾಖಾತೆಯು ಈಚೆಗಿನ ಪಠ್ಯಪುಸ್ತಕಗಳನ್ನು ಹೇಗೆ ಕಲಿಸಬೇಕೆಂಬ ಕುರಿತು ನಡೆದುದರಿಂದ ಭಾಷಾವಿಷಯವನ್ನೇ ಸಂಬಂಧಿಸಿ ಆಡಿದ ಮಾತುಗಳಾಗಿವೆ.—ಪ್ರ. ಸಂಪಾದಕರು]

ಸಾಮಾನ್ಯವಾಗಿ ಇಂದಿನ ಶಿಕ್ಷಕರು ಹಳ್ಳಿಯ ಶಾಲೆಗಳಲ್ಲಿ ಮಕ್ಕಳಲ್ಲಿ ವರ್ಣಮಾಲೆಯನ್ನೇ ಕಲಿಸುವಕ್ಕಾಗಿ ಕುದಿಯುತ್ತಿರುವರು. ಮಗುವು ಶಾಲೆಯ ಹೊಸತಿಲವನ್ನು ಸೇರಿದೊಡನೆಯೇ 'ಶ್ರೀ' ಯನ್ನಾಗಲಿ, 'ಗಣೇಶ' ನನ್ನಾಗಲಿ, 'ರ'ವನ್ನಾಗಲಿ, "ಠ" ಆಗಲಿ ಇಲ್ಲವೆ 'ಅ,' 'ಆ' ಎಂದಾಗಲೀ, ಹಲಗೆಯ ಮೇಲೆ ಹಾಕಿಕೊಟ್ಟು ಅದನ್ನೇ ತೀಡಲು-ಅನುಕರಣ ಮಾಡಲು ಹೇಳಿಕೊಡುತ್ತಿರುವದುಂಬು. ಆದರೆ ಇದು ಸರಿಯಾದ, ಶಾಸ್ತ್ರ ಶುದ್ಧವಾದ ಪದ್ಧತಿಯಲ್ಲವೆಂಬುದನ್ನು ಶಿಕ್ಷಣ ತಜ್ಞರು ಕಂಡು ಹಿಡಿದಿದ್ದಾರೆ. ಸರಿಯಾದ ಮಾರ್ಗವೆಂದರೆ—(೧) ಮಾತು (೨) ಓದು (೩) ಬರಹ ಈ ಕ್ರಮದಲ್ಲಿ ಸಾಗಬೇಕು ಮಗುವಿನ ಶಿಕ್ಷಣ. ಮೊದಲು ಮಗುವಿನೊಡನೆ ಮಾತನಾಡಿಸಿ—ವಿಷಯದ ಜಾಡುಹಿಡಿದು—ಆ ಮಾತುಗಳನ್ನು ಬೆಳಸಿ ಮುಂದೆ ಸಾಗಬೇಕು. ಶಿಕ್ಷಕನಿದ್ದಲ್ಲಿ ಯಾವುದಾದರೊಂದು ಪಾಠವನ್ನು ತೆಗೆದುಕೊಂಡು ಅದರ ವಿಷಯದಲ್ಲಿ ಸಾಕಷ್ಟು ಚರ್ಚೆಯನ್ನು ಮಗುವಿನೊಡನೆ ಮಾಡಬಹುದು. 'ಆಕಳು' ಈ ವಿಷಯವನ್ನೇ ಕಲಿಸುವದಿದೆಯೆಂದು ಇಟ್ಟುಕೊಳ್ಳುವಾ. ಆ ಸಂದರ್ಭದಲ್ಲಿ 'ಆಕಳ' ಒಂದು ಚಿತ್ರವನ್ನು ತೋರಿಸಿ, ಅದರ ಕಾಲುಗಳೆಷ್ಟು? 'ಕೋಡು ಗಳೆಷ್ಟು?' ಅದರ ಕುತ್ತಿಗೆಯಲ್ಲಿ ಏನು ನೇತಾಡುತ್ತಿದೆ. ಬಿಪಕ್ಕೇನೆನ್ನುವರು, ಅದರ ಮೊಲೆಗಳೆಷ್ಟು? ಹಾಲು ಎಲ್ಲಿಂದ ಬರುವದು?—ಎಂದು ಮುಂತಾಗಿ ಮಗುವಿನೊಡನೆ ಚರ್ಚಿಸಿ—ಅಂದರೆ ಮಾತು ಬೆಳಸಿ, ಸಮಗ್ರವಾಗಿ ವಿಷಯದ ಚರ್ಚೆಯಾದ ನಂತರ ಓದಿಗೆ ಸಾಗಬಹುದು.

ಅಕ್ಷರಗಳ ಜ್ಞಾನವಿಲ್ಲದಲೆ ಮಗು 'ಓದಬೇಕು ಹೇಗೆ?' ಎಂಬ ಪ್ರಶ್ನೆಯೊಂದು ಏಳಬಹುದು. ಮಗುವಿನ ಕಣ್ಣು ಒಂದು ಬಿಂಬಗ್ರಾಹಕ ಕನ್ನಡಿಯಂತಿರುವುದು. ಒಮ್ಮೆ ಒಂದು ವಸ್ತುವಿನ ಪರಿಚಯ ಶಬ್ದದಿಂದಾಗಲೀ, ವಾಕ್ಯದಿಂದಾಗಲೀ, ವಸ್ತುವಿನ ಸಾಹಚರ್ಯದಿಂದ ಮಾಡಿಕೊಂಡರೆ—ಆ ವಸ್ತುವನ್ನು ಆದು ಓದಿನಲ್ಲಿ ಗುರುತಿಸಬಹುದು. ಒಂದೆರಡು ಸಲದಲ್ಲಿ ಇದು ಸಾಧ್ಯವಾಗದಿದ್ದರೂ—ಹತ್ತೆಂಟು ಸಲದ ಅಭ್ಯಾಸದ ಬಲದಿಂದಲಾದರೂ—ಆ ಮಗುವು ಆ ವಸ್ತುವನ್ನು 'ಶಬ್ದದಲ್ಲಿ' ಗುರುತಿಸಬಲ್ಲದು. ಮುಂದೆ ಅದನ್ನು ಸರಾಗವಾಗಿ ಓದಬಲ್ಲದು. ಒಮ್ಮೆ ಓದುವ ರೂಢಿಯಾದರೆ ಸಾಕು—ಅದನ್ನು ಸುಲಭವಾಗಿ—ಸಹಜವಾಗಿ ಸುಂದರವಾಗಿ ಬರೆಯಬಲ್ಲದು. ಈ ತೆರನಾಗಿ ಮಗುವಿಗೆ ಓದುಬರಹಗಳನ್ನು ಕಲಿಸುವದು ಹೆಚ್ಚು ಶಾಸ್ತ್ರೀಕೃತವಾದುದು. ತದ್ವಿರುದ್ಧವಾದರೆ — ಕುದುರೆಯನ್ನು ಮೊದಲು ನಿಲ್ಲಿಸಿ ಅದರೆದುರಿಗೆ ರಥವನ್ನು ಇಟ್ಟಂತಾಗುವದು.

ಈ ಸಂದರ್ಭದಲ್ಲಿ ಶಿಕ್ಷಕರಾದವರಿಗೆ ಕೆಲ ಎಡರು-ತೊಡರುಗಳನ್ನು ಎದುರಿಸುವ ಪ್ರಸಂಗ ಒದಗಿದರೂ ಒದಗಬಹುದು. ಕೆಲ ಸಾಲಕರು 'ನಮ್ಮ ಮಕ್ಕಳನ್ನು

ಶಾಲೆಗೆ ಕಳಿಸಿ ಆರು ತಿಂಗಳಾಗುತ್ತ ಬಂದಿದ್ದರೂ ಇನ್ನೂ ಅವರಿಗೆ ಆರು ಅಕ್ಷರುಗಳು ಕೂಡ ಬರುವದಿಲ್ಲ. ಶಾಲೆಯಲ್ಲಿ ಶಿಕ್ಷಕರು ಏನು ಕಲಿಸುತ್ತಾರೆ ? ಎಂಬ ಗೊಂದಲವನ್ನು ಎಬ್ಬಿಸಿದರೂ ಎಬ್ಬಿಸಬಹುದು. ಏಕೆಂದರೆ ಈ ಶಾಸ್ತ್ರ ಶುದ್ಧ ಪದ್ಧತಿಯಿಂದ ನಾಗಿದಲ್ಲಿ ಅಕ್ಷರಗಳನ್ನು ಬರೆಯಲು ತಡವಾಗಬಹುದು. (ಒಸ್ಮೊಮ್ಮೆ ಆರು ತಿಂಗಳವರೆಗೂ ಹಾಗೇ ಹೋಗುವದು.) ಆದರೆ ಶಿಕ್ಷಕರು ಮಾತ್ರ ಎದೆಗಾರಿಕೆಯಿಂದ ಮುಂದಡಿಯಿಟ್ಟಲ್ಲಿ ನಿಃಸಂದೇಹವಾಗಿ ಅವರಿಗೆ ಕಲಿಸುವ ವಿಷಯದಲ್ಲಿ ಜಯಸಿಗುವದುಂಟು.

ಇನ್ನೊಂದು ಮಾತು. ಶಿಕ್ಷಕರು ಭಾಷಾಪಾಠಗಳನ್ನು ಕಲಿಸುವಲ್ಲಿಯೂ ಸಲಕರಣೆಗಳ ಬಗ್ಗೆ ಸಾಕಷ್ಟು ಜಾಗ್ರತೆವಹಿಸಬೇಕು. ಎಷ್ಟೋ ಜನರು ಭಾಷಾಪಾಠಗಳಲ್ಲೇಕೆ ಈ ಸಾಧನ ಸಾಮಗ್ರಿಗಳ ಗೊಂಜಾಟವೆಂದೆನ್ನುವದುಂಟು. ಆದರೆ ಇಲ್ಲಿಯೂ ಸಲಕರಣೆಗಳ ಅವಶ್ಯಕತೆ ತುಂಬಾ ಉಂಟು. ಅವು ಪ್ರಯೋಜನಕಾರಿಗಳಾಗಿವೆ ಎಂಬ ವಾತಿನಲ್ಲಿ ಸಂದೇಹವಿರದು.

ಚಿತ್ರ, ನಕಾಶ, ವಸ್ತು, ಬಣ್ಣ, ಮುಂತಾದವುಗಳ ಉಪಯೋಗವನ್ನು ಮಾಡಿಕೊಳ್ಳಬೇಕು. ಚಿತ್ರಗಳ ಸಹಾಯವಂತೂ ಹೇಳತೀರದಷ್ಟಿದೆ. ಸ್ಥಳ ಸಮಯಗಳ ಹದವರಿತು ಅವುಗಳ ಪ್ರಯೋಜನವನ್ನು ಶಿಕ್ಷಕನು ಪಡೆಯಬಹುದು. ಹೀಗಾದಲ್ಲಿ ಮಗುವು ಯಾವ ಪಾಠವನ್ನಾದರೂ ಶುದ್ಧವಾಗಿ ಶಾಶ್ವತ ಸ್ವರೂಪದಲ್ಲಿ ಗ್ರಹಿಸಿಕೊಳ್ಳಬಲ್ಲದು.

ಧಾರ್ಮಿಕ ಶಿಕ್ಷಣ

ಲೇಖಕರು :— ಶ್ರೀ. ಎಸ್. ವ್ಹಿ. ಹಂಜಿ, ಎಂ. ಎ., ಬಿ. ಟಿ., ಡಿ. ಬಿ. ಈ.

ಸದ್ಯಕ್ಕೆ ಪ್ರಚಲಿತವಾಗಿರುವ ಮೂಲ ಶಿಕ್ಷಣದ ಯೋಜನೆಯಲ್ಲಿ ಧಾರ್ಮಿಕ ಶಿಕ್ಷಣವು ಬಹಳ ಮಹತ್ವದ ವಿಷಯವಾಗಿದೆ. ಭಾರತ ಸರಕಾರದ ಉಚ್ಚ ಧ್ಯೇಯವಾದ ಜಾತ್ಯಾತೀತವಾದ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಇದು ಬಹು ಪೋಷಕವಾಗಿದೆ. ಆದರೆ ಧಾರ್ಮಿಕ ಶಿಕ್ಷಣವನ್ನು ಕೊಡುವದು ಅವಶ್ಯವಿಲ್ಲವೆಂದೂ ಇದರಿಂದ ಧಾರ್ಮಿಕ ಕಲಹಗಳು ಉತ್ಪನ್ನವಾಗುವವೆಂದೂ ಕೆಲವರ ತಿಳಿವಳಿಕೆ. ಪ್ರಾಥಮಿಕ ಶಾಲೆಗಳಿಗೆ ಬರುವ ಬಾಲಕ ಬಾಲಿಕೆಯರು ಯಾವ ಧರ್ಮದ ವಿಷಯವಾಗಿಯೂ ಅಷ್ಟೊಂದು ಗಹನ ವಿಚಾರ ಮಾಡಿರುವದಿಲ್ಲ. ಅವರಿಗೆ ಮಾನವನಿಗೆ ಬೇಕಾದ ವಿಶ್ವಧರ್ಮ (Universal Religion)ದ ಉದಾತ್ತ ತತ್ವಗಳನ್ನೂ, ಆವುಗಳನ್ನು ಆಚರಣೆಯಲ್ಲಿ ತರುವ ವಿಧಾನಗಳನ್ನೂ ತಿಳಿಸಿಕೊಟ್ಟು ಮಾನವಮಾನವರಲ್ಲಿ ಪ್ರೇಮ, ಅಂತಃಕರಣ, ಸಮತಾಭಾವ, ಸಹಾನುಭೂತಿ ಮೊದಲಾದ ಒಳ್ಳೆಯ ಗುಣಗಳನ್ನು ಬಿಂಬಿಸಲು ಇದೇ ಯೋಗ್ಯ ಹದಗಾಲವು ಅವರಿಗೆ ನಿಜವಾಗಿ ಧಾರ್ಮಿಕ ಶಿಕ್ಷಣವನ್ನು ಕೊಡುತ್ತಿರುವೆವೆಂದು ಕಲ್ಪನೆಯೂ ಸಹ ಬರುವದಿಲ್ಲ. ಆದರೆ ಸಹಜವಾಗಿ ಸ್ವಾಭಾವಿಕವಾಗಿ ಅವರಲ್ಲಿ ನಿಜವಾದ ಮಾನವ ಧರ್ಮದ ತತ್ವಗಳು ತಾವಾಗಿಯೇ ತಿಳಿಯುವವು.

ವರ್ಗಗಳಲ್ಲಿ ನಾನಾ ಜಾತಿಯ ಪಂಥದ ಬಾಲಕ ಬಾಲಿಕೆಯರು ಇರುವರು. ನಾವು ಯಾವದೊಂದು

ತಿಯ ವಿಷಯವಾಗಿ ಅದರ ಸಾಂಪ್ರದಾಯಗಳನ್ನು ಶ್ಲೀಲಕೊಡದೆ ಆ ಧರ್ಮದಲ್ಲಿ ಹುದುಗಿದ ಸತ್ಯ, ಪ್ರೀಮ, ಸೇವೆ, ಸ್ವಾರ್ಥತ್ಯಾಗ, ಅಹಿಂಸೆ ಮೊದಲಾದ ಉತ್ತಮ ತತ್ವಗಳನ್ನೇ ಆರಿಸಿ ತಿಳಿಸಿಕೊಟ್ಟು ಆ ಧರ್ಮವನ್ನು ಸ್ಥಾಪಿಸಿದವನ ಇಲ್ಲವೆ ಉದ್ಧಾರ ಮಾಡಿದ ಮಹಾಪುರುಷನ ಬಗೆಗೆ ಕಥಾರೂಪವಾಗಿ ಜೀವನ ಚರಿತ್ರೆಯನ್ನು ಹೇಳಿಕೊಡಬೇಕು. ಹೀಗೆ ಎಲ್ಲ ಧರ್ಮ ಸಂಸ್ಥಾಪಕರ ವಿಷಯವಾಗಿ ಅವರಲ್ಲಿ ಆದರ ಪ್ರೇಮ ಭಾವಗಳು ಬೆಳೆಯುವಂತೆ ಮಾಡಬೇಕು. ಒಬ್ಬರ ವಿಷಯವಾಗಿ ಅನಾದರ ಜುಗುಪ್ಸೆ ಹುಟ್ಟುವಂತೆ ಧಾರ್ಮಿಕ ಪುರುಷರ ಚರಿತ್ರೆ ತಿಳಿಸಿಕೊಟ್ಟರೆ ನಿಜವಾಗಿಯೂ ನಾವು ಜಾತೀಯತೆಯ ಬೀಜವನ್ನು ಬಿತ್ತಿದಂತಾಗುತ್ತದೆ. ಆದುದರಿಂದ ನಾವು ಬಹಳ ಮುಂಜಾಗ್ರತೆ ವಹಿಸಬೇಕು; ಮತ್ತು ಆ ಆ ಮಹಾಪುರುಷರ ಉತ್ತಮ ವಚನಗಳನ್ನೂ, ಉಕ್ತಿಗಳನ್ನೂ ಪ್ರತಿದಿನ ಒದಿಸಿ ಅವುಗಳ ಇಂಗಿತವನ್ನು ತಿಳಿಸಿಕೊಡಬೇಕು. ಜಗತ್ತಿನ ಮಹಾನುಭಾವರಾದ ಯೇಸುಕ್ರೈಸ್ತ, ಮಹಮ್ಮದ ಪೈಗಂಬರ, ಭಗವಾನ್ ಬುದ್ಧ, ಶ್ರೀಕೃಷ್ಣ,, ಶ್ರೀ. ಬಸವೇಶ್ವರ, ಸ್ವಾಮಿ ವಿವೇಕಾನಂದ, ಮಹಾತ್ಮಾ ಗಾಂಧಿ, ಡಾ. ರವೀಂದ್ರನಾಥ ಟಾಗೋರ, ಶ್ರೀ. ಅರವಿಂದ ಘೋಷ ಮೊದಲಾದವರ ಉತ್ತಮ ವಚನಾಮೃತವನ್ನು ಸಂಗ್ರಹ ಮಾಡಿ ಬಾಲಬಾಲಿಕೆಯರಿಗೆ ತಾನ ಮಾಡಿಸಬೇಕು. ಪ್ರಸಂಗ ಬಂದಾಗ ಅವರ ಜಯಂತಿ, ಪುಣ್ಯತಿಥಿಗಳನ್ನು ಆಚರಿಸುವಾಗ ಅವರ ವಿಷಯವಾಗಿ ಅನೇಕ ದೃಷ್ಟಿಕೋನಗಳಿಂದ ಚರ್ಚಿಸಿ ಅವರ ವ್ಯಕ್ತಿತ್ವವನ್ನೂ ಪ್ರಭಾವವನ್ನೂ ಬೀರಬೇಕು.

ಸದ್ಯಕ್ಕೆ ಧಾರ್ಮಿಕ ಶಿಕ್ಷಣವನ್ನು ಕೊಡುವದು ಅಷ್ಟೊಂದು ಕಠಿಣವಾದ ಸಮಸ್ಯೆಯವಲ್ಲವೆಂದು ಸಹಜವಾಗಿ ತಿಳಿಯುವದು. ಜಾತೀಯತೆಯ ಭಾವನೆಗಳನ್ನು ಮನಸ್ಸಿನಲ್ಲಿ ತಂದುಕೊಂಡು ಅದನ್ನು ನಾವು ಗಹನ ವಿಷಯವನ್ನಾಗಿ ಮಾಡಿಬಿಟ್ಟಿದ್ದೇವೆ. ಮೊದಲಿನ ಕಾಲದಲ್ಲಿದ್ದಂತೆ ಬಾಲಕ ಬಾಲಿಕೆಯಲ್ಲಿ ಭೇದಭಾವವು ಅಳಿಯಹತ್ತಿರುವದು ಶುಭಲಕ್ಷಣ. ಬ್ರಾಹ್ಮಣ, ಲಿಂಗಾಯತ, ಮುಸಲ್ಮಾನ, ಹರಿಜನ, ಕ್ರೈಶ್ಚನ್, ಜೈನ್ಧ ನೊದಲಾದ ಇನ್ನೂ ಅನೇಕ ಜಾತಿಪಂಥಗಳ ಬಾಲಕ ಬಾಲಿಕೆಯರಿದ್ದರೂ, ಅವರಲ್ಲಿ ಸೋದರ ಪ್ರೇಮ ಭಾವವು ಬೆಳೆಯುತ್ತಿರುವದು. ಅವರೆಲ್ಲರೂ ಕೂಡಿ ಆಡುವರು, ಹಾಡುವರು, ಕುಣಿಯುವರು, ಕಲಿಯುವರು, ತಿಂಡಿತಿನಸುಗಳನ್ನು ತಿನ್ನುವರು. ನೀರು, ಚಹಾ, ಕಾಫಿ, ಹಾಲುಗಳನ್ನು ಕುಡಿಯುವರು. ಅಂಥ ಮೇಲೆ ಜಾತೀಯತೆಯ ಕಲ್ಪನೆಯು ಅವರಲ್ಲಿ ಎಳ್ಳಷ್ಟೂ ಇರುವದಿಲ್ಲ. ಇದೇ ತಳಹದಿಯ ಮೇಲೆ ನಾವು ಅವರಲ್ಲಿ ಅವರವರ ಧರ್ಮದ ಉದಾತ್ತ ತತ್ವಗಳನ್ನು ಸಂಗ್ರಹಿಸಿ, ವಿಶಾಲವಾದ ಮಾನವ ಧರ್ಮ ಅಥವಾ ವಿಶ್ವಧರ್ಮದ ದಿಸೆಗೆ ಅವರನ್ನು ಒಯ್ಯಬೇಕು ಆದುದರಿಂದ ಶಿಕ್ಷಕರಾದ ನಮ್ಮಲ್ಲಿ ಮೊದಲು ಜಾತೀಯತೆಯ ಭಾವನೆಯು ಸಂಪೂರ್ಣವಾಗಿ ಅಳಿಯಬೇಕು. ಅಂದರೆ ಸಹಜವಾಗಿ ನಾವು ಅವರಲ್ಲಿ ಹುದುಗಿದ ಸ್ವಾಭಾವಿಕ ಉದಾತ್ತ ಗುಣಗಳನ್ನು ಬೆಳೆಯಿಸಿ ಅವರನ್ನು ಜಗತ್ತಿನ ನಾಗರಿಕರನ್ನಾಗಿ ಮಾಡಲು ಸಮರ್ಥರಾಗುತ್ತೇವೆ.

ಧಾರ್ಮಿಕ ಶಿಕ್ಷಣವನ್ನು ಕೊಡುವದು ಅವಶ್ಯವಿಲ್ಲವೆಂದು ಅನ್ನುವದು ಸಂಕುಚಿತ ಸ್ವಭಾವದವರ ವಿಚಾರ. ಭಾರತದಲ್ಲಿ ಅನೇಕ ಜಾತಿಮತಪಂಥಗಳ ಜನರಿದ್ದು ಅದರ ಆಡಳಿತವು ಸೂಸುತ್ರವಾಗಿ ಸಾಗಿ ಎಲ್ಲರೂ ಸುಖಶಾಂತಿಗಳಿಂದ ಬಾಳಬೇಕಾದರೆ ಧಾರ್ಮಿಕ ಸಹಿಷ್ಣುತೆಯು ಅತ್ಯವಶ್ಯ. ಆದುದರಿಂದ ಮೂಲಶಿಕ್ಷಣದ ಸಂಸ್ಥಾಪಕರಾದ ಪೂಜ್ಯ ಮಹಾತ್ಮಾ ಗಾಂಧಿಯವರು ಇದನ್ನು ಪೂರ್ಣವಾಗಿ ಅರಿತು ಹೊಸ ಪೀಳಿಗೆಯ ಬಾಲಕ ಬಾಲಿಕೆಯರಲ್ಲಿ ಎಲ್ಲ ಧರ್ಮಗಳ ಬಗೆಗೆ ಉದಾತ್ತ ಭಾವನೆಗಳನ್ನುಂಟು ಮಾಡಿದರು. ಸ್ವತಂತ್ರ ಭಾರತೀಯರು ಜಗತ್ತಿನಲ್ಲಿ ಶ್ರೇಷ್ಠ ನಾಗರಿಕರಾಗಿ ಒಕ್ಕಟ್ಟಿನಿಂದಲೂ ಜಾತೀಯ ಕಲಹಗಳನ್ನು ಬಿಟ್ಟು ಶಾಂತಿ ಸಮಾಧಾನಗಳಿಂದಲೂ ಬಾಳುವರೆಂಬ ಮುಂಗೋರಣೆಯನ್ನು ತಾಳಿ ತಮ್ಮ ಜೀವಮಾನದ ವರೆಗೂ ಜಾತೀಯ ಸೌಹಾರ್ದತೆಯ ಸಲುವಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದರು. ಒಟ್ಟಿನ ಮೇಲೆ ಧಾರ್ಮಿಕ ಶಿಕ್ಷಣವು ಅತ್ಯವಶ್ಯವಾಗಿದ್ದು ಅದನ್ನು ಒಳ್ಳೆಯ ಜಾಗ್ರತೆಯಿಂದ ಕೊಟ್ಟರೆ ಅದರಿಂದ ಭಾರತದ ಭವಿಷ್ಯವು ಉಜ್ವಲವಾಗದಿರದು.

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

ಹೊಸ ಪೆನ್ಶನ್ ನಿಯಮಗಳಂತೆ ಪೆನ್ಶನ್ ಪಡೆಯಲಿಚ್ಛಿಸುವುದಕ್ಕಾಗಿ ನಿರ್ದಿಷ್ಟಗೊಳಿಸಿದ ತಾರೀಖನ್ನು ೩೧-೩-೧೯೫೨ರ ವರೆಗೆ ಬೆಳೆಸಲಾಗಿದೆ. ಈ ಅವಧಿಯೊಳಗಾಗಿ ಪ್ರಾಥಮಿಕ ಶಿಕ್ಷಕರು ತಾವು ಯಾವ ನಿಯಮಗಳ ಪ್ರಕಾರ ಪೆನ್ಶನ್ ಪಡೆಯಲಪೇಕ್ಷಿಸುವರೆಂಬುದನ್ನು ತಿಳಿಸದಿದ್ದರೆ ಅವರೆಲ್ಲರೂ ಹೊಸ ಪೆನ್ಶನ್ ನಿಯಮಗಳಿಗೆ ಅನುಸಾರವಾಗಿ ಪೆನ್ಶನ್ ಪಡೆಯಲಪೇಕ್ಷಿಸುತ್ತಾರೆ ಎಂದು ಗಣಿಸಲಾಗುವದು.

ಬೆಳಗಾಂವಿ ಮರಾಠಿ ಟ್ರೇನಿಂಗ ಕಾಲೇಜದವರು ತಾ. ೩೧-೧೦-೫೨ನೆಯ ದಿನ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ ಆವರ ಅಧ್ಯಕ್ಷತೆಯಲ್ಲಿ ಸ್ನೇಹಸಮ್ಮೇಲನ (ಸೋಶಲ್ ಗ್ಯಾದರಿಂದ)ವನ್ನು ಜರುಗಿಸಿದರು. ವಿವಿಧ ವಿನೋದಾವಳಿಯ ಕಾರ್ಯಕ್ರಮವು ಜೀವಕಳೆಯಿಂದ ತುಂಬಿತ್ತು. ಪ್ರಿನ್ಸಿಪಾಲ್ ಶ್ರೀ. ವಾಳ್ವೇಕರರು ಕಳೆದ ಹತ್ತು ವರ್ಷಗಳಲ್ಲಿ ಕಾಲೇಜು ಪ್ರಗತಿಗೈದ ವರದಿಯನ್ನು ಸಂಕ್ಷಿಪ್ತವಾಗಿ ನಿವೇದಿಸಿದರು.

ಅಮ್ಮಿನಭಾವಿಯಲ್ಲಿ ಪ್ರಾಥಮಿಕ ಶಿಕ್ಷಕ-ಶಿಕ್ಷಿಕೆಯರ ಗ್ರುಪ್ ಸಮ್ಮೇಲನವು ೨೨-೨-೧೯೫೩ನೆಯ ದಿನ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮವಾಯ ಪದ್ಧತಿಯ ಮಾದರಿ ಪಾಠ, ಮೂಲ ಶಿಕ್ಷಣದ ಸಮಸ್ಯೆಗಳನ್ನು ಕುರಿತು ಚರ್ಚೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸಾಮಾಜಿಕ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ಆರ್. ಕೆ. ಮೆಣಶಿಯವರು ಸಾಮಾಜಿಕ ಶಿಕ್ಷಣ ವರ್ಗಗಳನ್ನು ಪ್ರಾರಂಭಿಸುವ ಹಾಗು ನಡೆಯಿಸುವ ಬಗ್ಗೆ ವಾಖ್ಯಾನವನ್ನು ಕೊಟ್ಟರು.

ಹುಬ್ಬಳ್ಳಿಯಲ್ಲಿ ಮರಾಠಿ ಹೆಣ್ಣು-ಗಂಡು ಮಕ್ಕಳ ಶಾಲೆಗಳು ಬಾಲ ಪಾಲಕ ದಿನಾಚರಣೆಯನ್ನು ಸಾಂಗಗೊಳಿಸಿದವು. ಮಾಜಿ ಮು. ಸ್ಕೂ. ಬೋರ್ಡ ಚೇರಮನ್ನರಾದ ಶ್ರೀ. ಟಿ. ಎನ್. ಹಬೀಬರು ಅಧ್ಯಕ್ಷತೆ ವಹಿಸಿದ್ದರು ಮತ್ತು ಅವರು ಶಿಕ್ಷಕರ ಕರ್ತವ್ಯದಕ್ಷತೆಯನ್ನು ಪ್ರಶಂಸಿಸಿದರು.

ಸಂಗಮೇಶ್ವರ (ಧಾರವಾಡ ಜಿಲ್ಲೆ)ಕ್ಕೆ ಧಾನ್ಯ ಎತ್ತುವಳಿಗಾಗಿ ಕೊಡಲ್ಪಡುವ ಇನಾಮಿನ ೪೦೦೦ ರೂಪಾಯಿಗಳಿಂದ ಈ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯನ್ನು ಕಟ್ಟಿಸಲಾಗುವದೆಂದು ಗೊತ್ತುಪಡಿಸಲಾಗಿದೆ.

ಕರಗಾ (ಕಾರವಾರ ಜಿಲ್ಲಾ)ಕ್ಕೆ ಧಾನ್ಯ ಎತ್ತುವಳಿಗಾಗಿ ಕೊಡಲ್ಪಡುವ ಇನಾಮಿನ ೫೦೦೦ ರೂಪಾಯಿಗಳಿಂದ ಈ ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯನ್ನು ಕಟ್ಟಿಸುವ ಏರ್ಪಾಡನ್ನು ಮಾಡಲಾಗಿದೆ.

ಬಾಡ, ಚಂಡಿಯೆ, ಬಂಕಿಕೊಡ್ಲ, ಬನವಾಸಿ ಮತ್ತು **ತೇರಗಾಂವ** ಈ ಕಾರವಾರ ಜಿಲ್ಲೆಯ ಹಳ್ಳಿಗಳ ಶಾಲೆಗಳಲ್ಲಿಯೂ **ಸಂದಗಡ, ಖಾನಾಪುರ** ಮತ್ತು **ಚಂದಗಡ** ಈ ಬೆಳಗಾಂವಿ ಜಿಲ್ಲೆಯ ಹಳ್ಳಿಗಳಲ್ಲಿಯ ಕನ್ನಡ—ಮರಾಠಿ, ಗಂಡುಮಕ್ಕಳ ಶಾಲೆಗಳಲ್ಲಿ ಜೇನ್ನೊಣ ಸಾಕುವಿಕೆಯನ್ನು ಉಪವೃತ್ತಿಯಾಗಿ ಕಲಿಸುವ ಏರ್ಪಾಡನ್ನು ಮುಂಬಯಿ ಸರಕಾರದವರು ಮಾಡಿದ್ದಾರೆ.

ಬಂಕಾಪುರದಲ್ಲಿ ೨೮-೧೨-೫೨ನೆಯ ದಿನ ಪ್ರಾಥಮಿಕ ಶಿಕ್ಷಕ-ಶಿಕ್ಷಿಕೆಯರ ಸಮ್ಮೇಲನವು ಮೆ|| ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೆ|| ಡಿ. ಇ. ಆಯ್. ಅವರು ಹೊಸ ಅಭ್ಯಾಸಪತ್ರಿಕೆಯ ರೂಪರೇಷೆಯನ್ನು ಕುರಿತು ಮತ್ತು ಮೆ|| ಅ ಡೆ. ಎ. ಇನಸ್ಪೆಕ್ಟ್ರೆಸ್ ಇವರು ಗೃಹವಿಜ್ಞಾನ ಕಲಿಸುವ ಪದ್ಧತಿಯನ್ನು ಕುರಿತು ವ್ಯಾಖ್ಯಾನ ಮಾಡಿದರು. 'ವರದಕ್ಷಿಣೆ' ಎಂಬ ಪ್ರಹಸನ ಮತ್ತು ಕವನ, ಹೂಗಳ ಸಂಭಾಷಣೆಗಳೂ ಜರುಗಿದವು.

ಹೊಸಕೋಟೆ (ರಾಮದುರ್ಗ) ೨೬-೧೨-೫೨ನೆಯ ದಿನ ಶಾಲೆಯ ವಾದವಿವಾದ ಮಂಡಳದ ವತಿಯಿಂದ ದಿವಂಗತ ಪ್ರೊ. ಶಿ. ಶಿ. ಬಸವನಾಳರಿಗೆ ಶ್ರದ್ಧಾಂಜಲಿ-

ಗಳನ್ನು ಅರ್ಪಿಸಲಾಯಿತು.

ಕುಮಟಾದಲ್ಲಿ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಶಾರೀರಿಕ ಶಿಕ್ಷಣ ತರಬೇತಿ ವರ್ಗಗಳು ೧೫-೧೦-೫೧ರಿಂದ ನಡೆದು ಯಶಸ್ವಿಯಾಗಿ ೧೨ ೧೨-೫೧ಕ್ಕೆ ಮುಕ್ತಾಯವಾದವು. ಅನೇಕ ಶಿಕ್ಷಣತಜ್ಞರು ಈ ವರ್ಗಗಳಿಗೆ ಸಂದರ್ಶನಕೊಟ್ಟು ಸಂತೋಷ ವ್ಯಕ್ತ ಮಾಡಿದರು.

ಉಣಕಲ್ಲದಲ್ಲಿ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಪ್ರೌಢ ಸಮ್ಮೇಲನವು ನೆ। ಎಜ್ಯುಕೇಶನಲ್ ಇನಸ್ಪೆಕ್ಟರ ಅಧ್ಯಕ್ಷತೆಯಲ್ಲಿ ೧೦-೧-೫೨ನೆಯ ದಿನ ಜರುಗಿತು. 'ಪ್ರಬಂಧ ಬರೆಹದಲ್ಲಿ ಪ್ರಗತಿಯಾಗುವದೆಂತು' ಎಂಬ ವಿಷಯವು ಚರ್ಚಿಸಲ್ಪಟ್ಟಿತು. ಶಾರೀರಿಕ ಚಟುವಟಿಕೆಗಳು, ಮನರಂಜನೆಯ ಕಾರ್ಯಕ್ರಮಗಳು ಏರ್ಪಡಿಸಲ್ಪಟ್ಟಿದ್ದವು. ಸ್ಥಾನಿಕ ನಾಗರಿಕರು ಈ ಸಮ್ಮೇಲನಕ್ಕೆ ಮತ್ತು ವಿವಿಧ ಕಾರ್ಯಕ್ರಮಗಳಿಗೆ ಸಂದರ್ಶಕವಾಗಿ ಬಂದಿದ್ದರು.

ದಿಂಡವಾರದಲ್ಲಿ ಶ್ರೀ. ಎಸ್. ಬಿ. ತಿಪ್ಪಣ್ಣನವರ ಬಿ.ಡಿ.ಇ.ಆಯ್. ರ ಅಧ್ಯಕ್ಷತೆಯಲ್ಲಿ ೧೫-೧-೫೨ನೆಯ ದಿನ ವಿದ್ಯಾರ್ಥಿಗಳು ಮನರಂಜನೆಯ ಕಾರ್ಯಕ್ರಮವನ್ನು ಸಾಂಗಗೊಳಿಸಿದರು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ೫ರೂ. ಬಹುಮಾನ ಕೊಟ್ಟರು.

ಸವಣೂರದಲ್ಲಿ ಜರುಗಿದ ಶಾರೀರಿಕ ಶಿಕ್ಷಣದ ಚಟುವಟಿಕೆಗಳನ್ನು ಮೆ॥ ಏ. ಓ. ಎಸ್. ಬಿ. ಧಾರವಾಡ ಅವರು ತಮ್ಮ ಅಸಿಸ್ಟಂಟರೊಡನೆ ನೋಡಿ ಆನಂದ ವ್ಯಕ್ತಗೊಳಿಸಿದರು.

ಭಿತಗುಣಕಿ ಶಾಲೆಯ ಬಾಲಕರು ಶ್ರೀ. ಆರ್. ಜಿ. ನಿಂಬರಗಿ ಗುರುಗಳಿಗೆ ವರ್ಗವಾದ ನಿಮಿತ್ತ ಬೀಳ್ಕೊಡುವ ಸಮಾರಂಭವನ್ನು ೬-೨-೫೨ಕ್ಕೆ ಏರ್ಪಡಿಸಿದ್ದರು.

ಹಳೆಗಾದಲ್ಲಿ ೨೫-೧೧-೫೧ನೆಯ ದಿನ ೧೩ನೆಯ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಜೇವೂರ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಶೈಕ್ಷಣಿಕ ಸಮ್ಮೇಲನವು ಜರುಗಿತು.

ಹಣಕೋಣದ ಶಾಲೆಯಲ್ಲಿ ೧-೧೧-೫೧ನೆಯ ದಿನ ಶಾರೀರಿಕ-ಶಿಕ್ಷಣ ದಿನಾಚರಣೆ ಸಾಮಾಜಿಕ ಶಿಕ್ಷಣ ದಿನಾಚರಣೆಯನ್ನು ಸಾಂಗಗೊಳಿಸಲಾಯಿತು. ಮೇ। ಡಿ. ಎ. ಇನಸ್ಪೆಕ್ಟರರು ಅಧ್ಯಕ್ಷತೆ ವಹಿಸಿದ್ದರು.

ತಂಗಡಗಿ ೨೬-೧-೧೯೫೨ರಂದು ಪ್ರಜಾರಾಜ್ಯದ ಉತ್ಸವವನ್ನು ಜರುಗಿಸಲಾಯಿತು.

ಹಳ್ಯಾಳ ಶಾಲೆಯ ೫ನೆಯ ಇಯತ್ತೆಯ ಬಾಲಕರು ಶಿಕ್ಷಕರೊಂದಿಗೆ ೨೦-೧೨-೫೨ನೆಯ ದಿನ ದಾಂಡೇಲಿಯ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಿದ್ದರು.

ಕಾರವಾರ ಟ್ರೇನಿಂಗ ಕಾಲೇಜದ "ದ್ವಿಸಾಪ್ತಾಹಿಕ ಶಿಬಿರ"

೧೯೫೧ ಡಿಸೆಂಬರ ತಿಂಗಳ ೧೯ನೇ ತಾರೀಖಿನಿಂದ ೨೩ನೇ ತಾರೀಖಿನ ವರೆಗೆ ಕಾರವಾರ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ತೆಗೆದ "ಶಿಬಿರ"ದ ಮಾಹಿತಿಯನ್ನು ಸಂಕ್ಷೇಪವಾಗಿ ಕೆಳಗೆ ಕೊಟ್ಟಿರುತ್ತದೆ.

ಒಂದನೆಯ ವರುಷದ ಎರಡು ವರ್ಗಗಳು ಮತ್ತು ಎರಡನೆಯ ವರುಷದ ಎರಡು ವರ್ಗಗಳು; ಹೀಗೆ ಒಟ್ಟು ನಾಲ್ಕು ವರ್ಗಗಳ ಮಾರ್ಗದರ್ಶನ ಮತ್ತು ಸೇಲ್ವಿಚಾರಣೆಯನ್ನು ಮಾಡುವದಕ್ಕೋಸ್ಕರ ಪ್ರತಿಯೊಂದು ವರ್ಗಕ್ಕೆ ಇಬ್ಬಿಬ್ಬರಂತೆ ಶಿಕ್ಷಕರನ್ನು ನಿಯಮಿಸಿತ್ತು. ಅವರಲ್ಲಿ ಒಬ್ಬರು ವ್ಯಾಯಾಮ ಶಿಕ್ಷಣದಲ್ಲಿ ತರಬೇತಿ ಹೊಂದಿದವರಾಗಿದ್ದರು. ನಾಲ್ಕೂ ವರ್ಗಗಳ ವಿದ್ಯಾರ್ಥಿಗಳು ಕೆಳಗಿನ ಸ್ಥಳಗಳಲ್ಲಿ ಶಿಬಿರಗಳನ್ನು ತೆಗೆದಿದ್ದರು.

೧ ಅ	ಚೆಂಡಿಯಾ	ಕಾರವಾರ ತಾಲೂಕ
೧ ಬ	ಮಾಜಾಲಿ	
೨ ಅ	ಹಾಲಗೆ	
೨ ಬ	ಆವರಸಾ	ಅಂಕೋಲಾ ತಾಲೂಕ

ಶಿಬಿರದ ೧೫ ದಿನಗಳ ಅವಧಿಯಲ್ಲಿ ಅವರು ಕೆಳಗಿನ ಕೆಲಸಗಳನ್ನು ಪೂರ್ತಿಗೊಳಿಸಿದರು.

(೧) ಹಳ್ಳಿಗಳ ಸರ್ವೆ (ಮೋಜಣಿ)
(೨) ಸಾಮಾಜಿಕ ಕೆಲಸ
(೩) ಕೌಟುಂಬಿಕ ಜೀವನದ ಕೆಲಸ
(೪) ಸಫಾಯಿ
(೫) ಸಾಪ್ತಾಹಿಕ ಪಾಠಗಳು
(೬) ಹಳ್ಳಿಯ ಶಾಲೆಗಳ ಮೇಲ್ವಿಚಾರಣೆ

ಅವರ ದಿನದ ಕಾರ್ಯಕ್ರಮ ಕೆಳಗಿನಂತೆ ಇತ್ತು.

ಬೆಳಿಗಿನ ೫–೫೦	ಏಳುವದು.
೫ ೫೦—೬	ಪ್ರಾತರ್ವಿಧಿ
೬—೬–೫೦	ಪ್ರಾರ್ಥನೆ
	ಮೌನಕತಾಯಿ
೬–೫೦—೬–೪೫	ಶಿಬಿರದ ಸುತ್ತ-ಲಿನ ಸಫಾಯಿ
೬–೪೫—೭–೧೫	ಶಾರೀರಿಕ ಶಿಕ್ಷಣ
೭–೧೫—೭–೫೫	ನಾಶ್ತಾ
೮-೦—೧೦–೫೦	(ವರ್ಗಗಳು) ಮತ್ತು ಸಾಮಾಜಿಕ ಮತ್ತು ಕೌಟುಂಬಿಕ ಕೆಲಸಗಳು
೧೧—೧೨	ಸ್ನಾನಪಾನಾದಿಗಳು
೧೨—೧	ಊಟ
೧—೨	ವಿಶ್ರಾಂತಿ
೨-೫೦—೫	ವರ್ಗಗಳು ಮತ್ತು ಸರ್ವೆ
೫—೬-೫೦	ವಿಶ್ರಾಂತಿ,ಆಟಪಾಟ
೬-೫೦—೭-೫೦	ಊಟ
೭-೫೦—೯	ವಿವಿಧ ವಿನೋದಾವಳಿ, ಅಗ್ನಿ ಶಿಬಿರ, ಮದ್ಯಪಾನ ನಿರೋಧ ಪ್ರಚಾರ

ಪ್ರತಿಯೊಂದು ಶಿಬಿರದಲ್ಲಿ ವರ್ಗದ ಅರ್ಧ ಹುಡುಗರು ಮುಂಜಾನೆ ಸಂಜೆಗೆ ಕೂಡಿ ಒಂದು ವಾರದವರೆಗೆ ಕಲಿಸುತ್ತಿರುವಾಗ ಇನ್ನುಳಿದ ಅರ್ಧ ಹುಡುಗರು ಮುಂಜಾನೆ ಸಾಮಾಜಿಕ, ಮತ್ತು ಕೌಟುಂಬಿಕ ಜೀವನದ ಕೆಲಸಗಳನ್ನೂ ಸಂಜೆಗೆ ಹಳ್ಳಿಯ ಸರ್ವೆಯನ್ನು ಮಾಡುತ್ತಿದ್ದರು. ಮರುವಾರದಲ್ಲಿ ಎರಡೂ ಗುಂಪಿನವರು ತಮ್ಮ ತಮ್ಮ ಕೆಲಸಗಳನ್ನು ಅದಲು ಬದಲು ಮಾಡುತ್ತಿದ್ದರು.

ಹೀಗಾಗಿ ಪ್ರತಿಯೊಬ್ಬರೂ ೧ ವಾರದವರೆಗೆ ಕಲಿಸುವದಕ್ಕೂ, ಮತ್ತು ಒಂದು ವಾರದ ವರೆಗೆ ಇತರ ಕೆಲಸಗಳನ್ನು ಮಾಡುವದಕ್ಕೂ ಅನುಕೂಲವಾಯಿತು.

ಕೆಳಗಿನ ಸ್ಥಳಗಳಲ್ಲಿ ಸಫಾಯಿ ನಡೆಯಿತು.

೧ ಯೋಗ್ಯ ಕಂಡ ೬ ಸ್ಥಳಗಳಲ್ಲಿ ಕಸದ ಗುಗಳನ್ನು ತೋಡಲಾಯಿತು.

೨ ಹಾಲಗೆ, ಉಲಗೆ, ತೋಡೂರ, ಮೇದಿಶಿ ಮುಂತಾದ ಸ್ಥಳಗಳಲ್ಲಿ ಖಾದಿಯ ಪ್ರಚಾರವ ಕೈಕೊಂಡಿತು.

೩. ಮಾಜಾಳಿಯ ಹತ್ತರದ ಕೃಷ್ಣಪುರದಲ್ಲಿ ಪಾ ನಿರೋಧದ ಪ್ರಚಾರ ಮಾಡಲಾಯಿತು.

೪. (ಅ) ಎಲ್ಲ ಕಡೆಯಲ್ಲಿಯೂ ವಿವಿಧ ವಿನೋದ ವಳಿಗಳನ್ನು, ಶಿಬಿರಾಗ್ನಿ, ಯಕ್ಷಗಾ ಕಾವ್ಯಗಾಯನ ಏರ್ಪಡಿಸಿತ್ತು.

(ಬ) ಹಾಲಗೆಯಲ್ಲಿ ಮತ್ತು ಅವರಸಾ ಹಲವಾರು ಏಕಾಂಕ ನಾಟಕಗಳನ್ನು ಆ ತೋರಿಸಿದರು. ಸುಮಾರು ೨೦೦೦ ಜನ ನೋಡಲು ಬಂದಿದ್ದರು.

೫ ಮಾಯಾಲಾಂದ್ರದ ಸಹಾಯದಿಂದ ೯ ವಿಷ ಗಳ ಮೇಲೆ ಭಾಷಣಗಳನ್ನು ಏರ್ಪಡಿಸಿತ್ತು.

೬. ಭಜನೆ, ಕೀರ್ತನೆಗಳನ್ನು ಏರ್ಪಡಿಸಿದ್ದರು.

೭. (ಅ) ೧೪–೧೨–೫೧ನೆಯ ದಿನಾಂಕ ಅವರ ದಲ್ಲಿ ಮತ್ತು ೨೦-೧೨-೫೧ನೆಯ ದಿನಾ ಮಾಜಾಳಿಯಲ್ಲಿ ಶೈಕ್ಷಣಿಕ ಪರಿಷತ್ತ ಕೂಡಿಸಲಾಗಿತ್ತು.

(ಬ) ನಾಲ್ಕೂ ಶಿಬಿರಗಳಲ್ಲಿ ಮತ್ತು ಅಗ ತೋಡೂರಗಳಲ್ಲಿ ಸಾರ್ವಜನಿಕ ಸ ಯನ್ನು ಕರೆಯಲಾಗಿತ್ತು.

(ಕ) ಎಲ್ಲ ಶಿಬಿರಗಳಲ್ಲಿಯೂ ಸರದಾರ ಪಟೆ ಲರ ಪುಣ್ಯತಿಥಿಯನ್ನು ಆಚರಿಸಲಾಯಿತ

೮. ಅಧಿಕ ಆಹಾರ ಉತ್ಪಾದನೆಯ ಪ್ರಚಾರವನ ಕೆಲವೆಡೆಯಲ್ಲಿ ಮಾಡಲಾಯಿತು.

೯. ತಮಗೆ ಕೊಟ್ಟಂಥ ಪ್ರಶ್ನೆ ಪತ್ರಿಕೆಗಳ ಸಹಾ ದಿಂದ ಹಳ್ಳಿಯ ಸರ್ವೆಯನ್ನು ಕೈಕೊಂಡ

೧೦. (ಅ) ಎಲ್ಲ ಶಿಬಿರದವರೂ ಸಮೀಪದ ಸ್ಥ ಗಳನ್ನು ಸಂದರ್ಶಿಸುವದಕ್ಕಾಗಿಯೂ, ಸ ಭೋಜನಕ್ಕಾಗಿಯೂ, ಪ್ರವಾಸಕ್ಕಾಗಿಯ ಹೋಗಿದ್ದರು.

(ಬ) ಹುಡತುತು, ಕುಂಟಾಟದ, ಹಾಯಸ್ಕೂಲಿನ ಪಂದ್ಯಾಟಗಳನ್ನು ಏರ್ಪಡಿಸಿತ್ತು.

(ಕ) ರೆವೆನ್ಯೂ ಅಧಿಕಾರಿಗಳ ಆಪ್ಪಣೆಯ ಪ್ರಕಾರ, ಅಂಕೋಲಾ, ಅವರಸಾಗಳಲ್ಲಿ ಚುನಾವಣೆಗೆ (ಸಂಬಂಧಿಸಿದ) ನಾಟಕಗಳನ್ನು ಆಡಿತೋರಿಸಿದರು.

ಒಟ್ಟಿನಲ್ಲಿ ಹೇಳುವದಾದರೆ ವಿದ್ಯಾರ್ಥಿಗಳಿಗೆ ಹಳ್ಳಿಯ ಜನಜೀವನದಲ್ಲಿ ಬೆರೆತು ಅಲ್ಲಿಯ ಪರಿಸ್ಥಿತಿಯನ್ನೂ, ಜನರನ್ನೂ ಆಳವಾಗಿ ತಿಳಿದುಕೊಳ್ಳುವ ಸುಸಮಯವು ಒದಗಿತೆಂದು ಹೇಳಬಹುದು. ಇದರಿಂದ ಅವರಿಗೆ ಇಲ್ಲಿ ದೊರೆತ ಅನುಭವದಿಂದ ಹಳ್ಳಿಯ ಜನರ ವಿಷಯವಾಗಿ ತಾವು ಪಾಲಿಸತಕ್ಕ ಕರ್ತವ್ಯಗಳ ಮತ್ತು ತಪ್ಪು ಜವಾಬ್ದಾರಿಗಳ ಹೆಚ್ಚಿನ ಜ್ಞಾನ ಉಂಟಾಯಿತೆಂದು ನಿಸ್ಸಂದೇಹವಾಗಿ ಹೇಳಬಹುದು ಈ ಅನುಭವವನ್ನು ಮುಂದೆ ತಪ್ಪು ಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ಉಪಯೋಗ ಮಾಡಿಕೊಳ್ಳುವರೆಂದು ಆಶಿಸಿದೆ.

ಸಾಮಾಜಿಕ ಶಿಕ್ಷಣ ಸಪ್ತಾಹ

ದಿನಾಂಕ ೪-೧೧-೧೯೫೫ರಿಂದ ೧೫-೧೧-೧೯೫೫ರ ವರೆಗೆ ವಿಜಾಪುರ ಜಿಲ್ಲಾ ಸಮಾಜ ಶಿಕ್ಷಣ ಸಮಿತಿಯವರು ಕಲಾಪಗಿ ಹಾಗು ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಸಮಾಜ ಶಿಕ್ಷಣ ಸಪ್ತಾಹವನ್ನು ಆಚರಿಸಿದರು. ಈ ಸಮಿತಿಯ ಕಾರ್ಯದರ್ಶಿಗಳೂ, ವಿಜಾಪುರ ಜಿಲ್ಲೆಯ ಎಡ್ಮಿನಿಸ್ಟ್ರೇಟಿವ್ ಆಫೀಸರರೂ ಆದ ಶ್ರೀ. ಗುಂಜೀಕರ, ಡೆ. ಎ. ಇ. ರಾದ ಶ್ರೀ. ಹಂದ್ರಾಳ, ಜಿಲ್ಲೆಯ ಆರೋಗ್ಯ ಅಧಿಕಾರಿಗಳಾದ ಡಾ ರಾವ, ಪಬ್ಲಿಸಿಟಿ ಆಫೀಸರರಾದ ಶ್ರೀ ಕುಲಕರ್ಣಿ ಇವರು ಕಾರ್ಯಕ್ರಮಗಳಲ್ಲಿ ಒಳ್ಳೇ ಉತ್ಸಾಹದಿಂದ ಭಾಗವಹಿಸಿದರು. ಅಲ್ಲದೆ ಸಮಿತಿಯ ಸದಸ್ಯರಾದ ಶ್ರೀ ಜೋರಾಪುರ, ಟ್ರೇ. ಪಿ. ಮಂಡಳ ಟ್ರೇ. ಕಾ. ಪ್ರಿನ್ಸಿಪಾಲರಾದ ಶ್ರೀ ಸವಣೂರ, ಸರ್ವೋದಯ ಸಮಿತಿಯ ಸಂಚಾಲಕರಾದ ಶ್ರೀ. ಕೌಜಲಗಿ ಇವರೆಲ್ಲರೂ ಹೃತ್ಪೂರ್ವಕವಾಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಯಶಸ್ಸು ತರಲು ಸಹಕರಿಸಿದರು. ಹಳ್ಳಿಯ ಬಾವಿ ಕೆರೆಗಳು, ರಸ್ತೆಗಳು, ಸುತ್ತು ಮುತ್ತಲಿನ ಸ್ಥಳಗಳು ಮೊದಲಾದವುಗಳನ್ನು ನಿರೀಕ್ಷಣೆ ಮಾಡಿ, ಅವುಗಳ ಸ್ವಚ್ಛತೆ, ದುರಸ್ತಿಗಳನ್ನು ಆವಶ್ಯ ಕಂಡಲ್ಲಿ ಮಾಡಲಾಯಿತು; ಅಲ್ಲದೆ ಗೊಬ್ಬರ ಕುಣಿಗಳನ್ನು ತೆಗೆಯುವ, ಮುಚ್ಚುವ, ಪಾಯಖಾನೆಗಳನ್ನು ತೋಡಿಕೊಳ್ಳುವ, ಬಚ್ಚಲ ಕುಣಿ ಮಾಡಿಕೊಳ್ಳುವ ಮೊದಲಾದ ವಿಧಾನಗಳನ್ನು ಹಳ್ಳಿಯ ಜನರ ಸಹಕಾರದಿಂದ ಮಾಡಿ, ಪ್ರದರ್ಶಿಸಲಾಯಿತು. ಆಹಾರ ಧಾನ್ಯ ಬೆಳೆಯಿರಿ, ಸಹಕಾರ ತತ್ವವನ್ನು ಜನತೆಯಲ್ಲಿ ಹರಡಿರಿ, ಶಿಕ್ಷಣ ಪ್ರಸಾರ ಮಾಡಿರಿ, ಸಾರ್ವಜನಿಕ ಸ್ವಚ್ಛತೆಯ ಬಗ್ಗೆ ಎಚ್ಚರಾಗಿರಿ, ವೈಯಕ್ತಿಕ ಸ್ವಚ್ಛತೆಯನ್ನು ಕಾಯ್ದುಕೊಳ್ಳಿರಿ. ಬೇನೆಗಳಿಂದ ಬಳಲುವ ರೋಗಿಗಳಿಗೆ ತಕ್ಕೆ ಉಪಾಯ ಮಾಡಿರಿ ಮೊದಲಾದ ಸಂದೇಶಗಳನ್ನು ಜನತೆಯಲ್ಲಿ ಬಿಂಬಿಸುವದಕ್ಕಾಗಿ ತಯಾರಿಸಲ್ಪಟ್ಟ ಸಿನೆಮಾ ಫಿಲ್ಮುಗಳನ್ನು ಪಬ್ಲಿಸಿಟಿ ಆಫೀಸರರಾದ ಶ್ರೀ. ಕುಲಕರ್ಣಿಯವರು ಪ್ರತಿದಿನ ರಾತ್ರಿ ಒಂದೊಂದು ಹಳ್ಳಿಯಲ್ಲಿ ತೋರಿಸಿದರು. ಈ ಕಾರ್ಯಕ್ರಮವು ಹಳ್ಳಿಯ ಜನರನ್ನೆಲ್ಲ ಒಂದೆಡೆ ಕಲೆ ಹಾಕಿ, ಸಾಮಾಜಿಕ ಜಾಗ್ರತೆಯನ್ನುಂಟು ಮಾಡಲು ಅತ್ಯಂತ ಪರಿಣಾಮಕಾರಿಯಾಯಿತು. ಸಮಾಜ ಶಿಕ್ಷಣದ ವಿವಿಧ ಅಂಗಗಳನ್ನೆಲ್ಲ ಪ್ರಯೋಗಿಸಲು ಮೊದಲು ಮಾಡಿದ ಈ ಸಾಹಸಕ್ಕಾಗಿ ವಿಜಾಪೂರ ಜಿಲ್ಲೆಯ ಸಮಾಜ ಶಿಕ್ಷಣ ಸಮಿತಿಯವರಿಗೆ ಧನ್ಯವಾದಗಳು- ಜನತೆಯು ಇನ್ನು ಹೆಚ್ಚು ಹೆಚ್ಚಾಗಿ ಉತ್ಸಾಹದಿಂದ ಸೇರಿ, ಇಂಥ ಕಾರ್ಯಗಳ ಲಾಭ ಪಡೆಯಬೇಕು.

ದಿನಾಂಕ ೧೫-೧೧-೧೯೫೫ನೇ ದಿನ ವಿಜಾಪುರ ಜಿಲ್ಲೆಯ ಕೋಲ್ಹಾರದಲ್ಲಿ ಸುತ್ತುಮುತ್ತಲಿನ ಹಳ್ಳಿಗಳ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ವಿಜಾಪುರ ಸರಕಾರಿ ಟ್ರೇ. ಕಾ. ಪ್ರಿನ್ಸಿಪಾಲರಾದ ಶ್ರೀ. ಎಸ್. ಆರ್. ಜೋಶಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಬಾಲಕ ಬಾಲಕಿಯರ ಶಾರೀರಕ ಚಟುವಟಿಕೆಗಳು, ಮಾದರಿಯ ಪಾಠ, ಶೈಕ್ಷಣಿಕ ವಿಷಯಗಳ ಬಗ್ಗೆ ಚರ್ಚೆ, ಮನರಂಜನೆಯ ಚಟುವಟಿಕೆಗಳು ಇತ್ಯಾದಿಗಳಲ್ಲೆಲ್ಲವೂ ಯಶಸ್ವಿಯಾಗಿ ಸಾಗಿದವು ಈ ಪ್ರಸಂಗದಲ್ಲಿ ಜಿಲ್ಲೆಯ ಎ. ಓ. ರಾದ ಶ್ರೀ- ಗುಂಜೀಕರ ಹಾಗು ಡೆ. ಎ. ಇ. ರಾ. ಶ್ರೀ. ಹಂದ್ರಾಳ ಇವರು ಉಪಸ್ಥಿತರಿದ್ದು, ಶೈಕ್ಷಣಿಕ ವಿಷಯ ಚರ್ಚೆಯಲ್ಲಿ ಭಾಗವಹಿಸಿದರು. ಊರ ಪ್ರಮುಖರೂ ಸೇರಿ, ಈ ಕಾರ್ಯಕ್ಕೆ ಕಳೆಕಟ್ಟಿದರು.

ಪುಟ ೨೦) ಮೂಲ ಶಿಕ್ಷಣ (ಬೆಲೆ: ೩-೦-೦

ಲೇಖಕರು:— ಶ್ರೀ. ಮ. ಗು. ಹಂದ್ರಾಳ. ಬಿ. ಎ., (ಆನರ್ಸ) ಬಿ. ಟಿ.

(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಸತ್ಯ, ಅಹಿಂಸೆ, ಅಸ್ಪೃಶ್ಯತಾನಿವಾರಣೆ ಸ್ವದೇಶಪ್ರೇಮ ಇತ್ಯಾದಿ ರಾಷ್ಟ್ರೀಯ ಭಾವನೆಗಳ ವಿಶೇಷತಃ ಗಾಂಧೀಜಿಯ ಫಿಥಾಯಕ ವಿಚಾರಗಳ

ಭಾರತೀಯರ ಕಥೆಗಳು

ಕನ್ನಡ ೩ನೆಯ ವರ್ಗಕ್ಕೆ

ಲೇಖಕ:—ಶ್ರೀ ಹಿರೇಮಠ ಬೆಲೆ ೮ ಆಣೆ

ಪು. ಬುದ್ಧನಿಂದ ದಾದಾಭಾಯಿ ನವರೋಜಿ. ತಥಾ ಮ. ಗಾಂಧೀಜಿಯವರೆಗಿನ ಕಥೆಗಳನ್ನು ಸುರಸ ಹಾಗು ಸರಳ ಶೈಲಿಯಲ್ಲಿ ರಚಿಸಿದೆ.

ಸಾಮಾನ್ಯ ಜ್ಞಾನ

ಮತ್ತು

ಧಾರವಾಡ ಜಿಲ್ಲೆಯ ಭೂಗೋಲ

ಪೌರನೀತಿ ಸಹಿತ ಬೆಲೆ ೧೦ ಆಣೆ.

೩ನೆಯ ವರ್ಗಕ್ಕೆ ಪಠ್ಯಪುಸ್ತಕದ ಜೊತೆಗೆ ಈ ಎರಡೇ ಪುಸ್ತಕಗಳು ಸಾಕು!

ಮಾರಾಟಗಾರರು:—ಆಕಳವಾಡಿ ಬುಕ್‌ಡಿಪೋ, ಧಾರವಾಡ.

ಶಾರೀರಿಕ ಶಿಕ್ಷಣ ಶಿಬಿರಗಳು

ವಿಜಾಪುರ ಜಿಲ್ಲೆಯ ಪ್ರಾಥಮಿಕ ಶಿಕ್ಷಕರಿಗಾಗಿ ಎರಡು ಶಾರೀರಕ ಶಿಕ್ಷಣ ಶಿಬಿರಗಳು ನಡೆದವು, ಒಂದು ಬಾಗಲಕೋಟೆಯಲ್ಲಿ, ಮತ್ತೊಂದು ವಿಜಾಪುರದಲ್ಲಿ. ಬಾಗಲಕೋಟೆಯ ಶಿಬಿರದ ಮುಕ್ತಾಯ ಸಮಾರಂಭವು ದಿನಾಂಕ ೧೩-೧೨-೧೯೫೧ರಂದು ಧಾರವಾಡ ಭಾಗದ ಶಿಕ್ಷಣಾಧಿಕಾರಿಗಳಾದ ಡಾ. ಚಿಕ್ಕರಮನೆ ಅವರ ಅಧ್ಯಕ್ಷತೆಯಲ್ಲಿ ಹಾಗು ವಿಜಾಪುರ ಶಿಬಿರದ ಮುಕ್ತಾಯ ಸಮಾರಂಭವು ಪ್ರೊ. ಎಚ್. ಟಿ. ಸಾಸನೂರ ಅವರ ಅಧ್ಯಕ್ಷತೆಯಲ್ಲಿ ಜರುಗಿದವು. ಆ ದಿನಗಳಲ್ಲಿ ನಡೆದ ಶಾರೀರಕ ಚಟುವಟಿಕೆಗಳನ್ನು, ಶಿಬಿರಗಳ ಶಿಸ್ತು, ಸಂಘಟನೆಗಳನ್ನು ಅಧ್ಯಕ್ಷರೀರ್ವರು ಮನವಾರೆ ಮೆಚ್ಚಿ, ಶಿಕ್ಷಕರಿಗೆ ಉಪದೇಶದ ಮಾತುಗಳನ್ನು ಹೇಳಿದರು. ಎರಡು ತಿಂಗಳುಗಳ ಅವಧಿಯಲ್ಲಿ ಶಾರೀರಕ ಶಿಕ್ಷಣದ ವಿವಿಧ ಚಟುವಟಿಕೆಗಳನ್ನು ಕಲಿಸಲಾಯಿತು. ಶಿಕ್ಷಕ-ವಿದ್ಯಾರ್ಥಿಗಳೇ ಶಿಬಿರಗಳ ಸಂಚಾಲಕರಾಗಿ ಹೊಣೆ-ಹೊತ್ತು, ತರಬೇತಿಗಾಗಿ ಬಂದ ಶಿಕ್ಷಕ-ಶಿಕ್ಷಕಿಯರ ಸಹಕಾರ, ಪ್ರೇಮಗಳನ್ನು ಗಳಿಸಿ, ತಕ್ಕ ಮಾದರಿ ಹಾಕಿ ಕೊಟ್ಟುದುದು ತುಂಬಾ ಪ್ರಶಂಸನೀಯವು. ಆ ಜಿಲ್ಲೆಯ ಡಿ. ಎ. ಇ ರರೂ, ಶಾರೀರಿಕ ಶಿಕ್ಷಣದ ಉಪಶಿಕ್ಷಣಾಧಿಕಾರಿಗಳೂ ಈ ಶಿಬಿರಗಳ ಬಹುಮುಖ ಕಾರ್ಯಕಲಾಪಗಳನ್ನು ಸೂಕ್ತವಾಗಿ ಸಂಘಟಿಸಿ, ಶಿಬಿರಗಳ ಮಹತಿಯನ್ನು ಹೆಚ್ಚಿಸಿದುದು ಅನುಕರಣೀಯವು.

ಬನಶಂಕರಿ ಸಂತೋಷ ಶಿಬಿರ

ದಿನಾಂಕ ೧೭-೧೧-೧೯೫೧ರಿಂದ ೨೩-೧೧-೧೯೫೧ರ ವರೆಗೆ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಸಂತೋಷ ಶಿಬಿರವು ನಡೆಯಿತು. ಬನಶಂಕರಿಯಲ್ಲಿ ಶಿಬಿರವು ತನ್ನ ಕಾರ್ಯಕ್ರಮವನ್ನು ಆರಂಭಿಸಿತು. ಐತಿಹಾಸಿಕ ಸ್ಥಳಗಳ ಸಂದರ್ಶನ, ನಿರೀಕ್ಷಣೆಗಳೂ, ಅನುಭವಿಕರ ಹಿತೋಕ್ತಿಗಳೂ, ಸ್ವಾವಲಂಬಿ ಸಮಾಜದ ಚಟುವಟಿಕೆಗಳೂ ಈ ಶಿಬಿರದ ವೈಶಿಷ್ಟ್ಯಗಳಾಗಿದ್ದವು. ಬಾಲಕರಲ್ಲಿ ಕಾಣಬರುವ ಸಹಜ ಪ್ರವೃತ್ತಿಗಳನ್ನು ಪ್ರಚೋದಿಸುವ, ಕೂಡಿ ಇರುವ, ಕೆಲಸ ಮಾಡುವ ಅನುಭವ ಗಳಿಸುವ ಸನ್ನಿವೇಶಗಳನ್ನು ಒದಗಿಸಲಾಗಿತ್ತು. ಹಳ್ಳಿಯ ಜನರ ಸಂಪರ್ಕ ಬೆಳಸುವದಕ್ಕಾಗಿ ಸಂಜೆಗೆ ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಶೈಕ್ಷಣಿಕ ಚಲಚಿತ್ರಗಳನ್ನು ತೋರಿಸಲಾಯಿತು. ಪ್ರೊಫೆಸರ ಸುಂಕಾಪುರ ಹಾಗು ಶ್ರೀ ಚಂದನಗೌಡರ ಇವರು ಶಿಬಿರದ ಕಾರ್ಯಕಲಾಪಗಳನ್ನು ಕಂಡು ಸಂತೋಷ ವ್ಯಕ್ತಮಾಡಿದರು, ಅಲ್ಲದೆ ತಮ್ಮ ಅನುಭವಯುಕ್ತ ಹಲವು ಹಿತೋಕ್ತಿಗಳನ್ನು ಹೇಳಿದರು. ಬದಾಮಿ, ಶಿವಯೋಗಮಂದಿರ, ಜೊಳಜ ಗುಡ್ಡ, ಪಟ್ಟದಕಲ್ಲು, ಐಹೊಳೆ ಮೊದಲಾದ ಸ್ಥಳಗಳನ್ನೆಲ್ಲ ಸಂದರ್ಶನವಮಾಡಿಕೊಂಡು ಸೂಳೇಬಾವಿಯಲ್ಲಿ ಕಾರ್ಯಕಲಾಪಗಳೆಲ್ಲ ಕೊನೆಗಂಡವು. ಎಲ್ಲ ಊರುಗಳಲ್ಲಿ ಅಲ್ಲಿಯ ಪ್ರಮುಖರು, ಶಿಕ್ಷಕ-ಶಿಕ್ಷಕಿಯರು ತುಂಬಾ ಸಹಾಯ-ಸಹಕಾರ ನೀಡಿ, ಶಿಬಿರದ ಯಶಸ್ಸಿಗೆ ಕಾರಣರಾದುದು ಹೆಮ್ಮೆಯ ವಿಷಯ. ಈ ಶಿಬಿರದ ಲಾಭವನ್ನು ೩೬ ವಿದ್ಯಾರ್ಥಿಗಳೂ, ೪ ಶಿಕ್ಷಕರೂ ಪಡೆದುಕೊಂಡರು. ಈ ಶಿಬಿರದ ಕಾರ್ಯಕ್ರಮಗಳೆಲ್ಲ ಶೈಕ್ಷಣಿಕ ಸ್ವರೂಪದವೂ, ಬಾಲಕರಿಗೆ ಮನಮೆಚ್ಚುವಂತೆಯೂ ಆಗಬೇಕೆಂದು ಜಿಲ್ಲೆಯ ಡಿ. ಎ. ಇ ರರೂ, ಶಾರೀರಕ ಶಿಕ್ಷಣ ಉಪಶಿಕ್ಷಣಾಧಿಕಾರಿಗಳೂ, ಆ ಭಾಗದ ಉಪಶಿಕ್ಷಣಾಧಿಕಾರಿಗಳೂ ಯತ್ನಿಸಿದರು. ಇಂಥ ಶಿಬಿರದ ಲಾಭವನ್ನು ಹೆಚ್ಚು ಬಾಲಕರಿಗೆ ಮಾಡಿಕೊಡುವಂತೆ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರು ಯೋಜಿಸುವರಾಗಿ ನಮ್ಮ ಬಯಕೆ.

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ-ಹುಣ್ಣಿವೆಗಳು

ಬೆಲೆ: ೦—೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ-೧		ಇತಿಹಾಸ	ಬೆಲೆ ೦—೬—೦
,,	೨	ಭೂಗೋಲ	ಬೆಲೆ ೦—೬—೦
,,	೩	ಭೂಮಿತಿ-ಜಮಾಖರ್ಚ	೦-೬-೦
,,	೪	ವ್ಯಾಕರಣ (ಅಚ್ಚಿನಲ್ಲಿ)	

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಕನ್ನಡ ನಾಡಿನಲ್ಲಿಯೇ ಪ್ರ-ಪ್ರಥಮವಾಗಿ, ಪೂರ್ಣವಾಗಿ ಹೊರಟ ಗಣಿತಮಾಲೆ ಇದೊಂದೇ!

ನೂತನ ಗಣಿತ

ಲೇಖಕರು: **ಗಲಗಲಿ**

(೧ರಿಂದ ೭ನೆಯ ವರೆಗಿನ ವರ್ಗಗಳಿಗಾಗಿ ಪ್ರತ್ಯೇಕ ಗಣಿತಗಳು)

ಸರಕಾರದವರಿಂದ ಮಾನ್ಯತೆ ಪಡೆದಿವೆ. ಕನ್ನಡ ನಾಡಿನ ಪ್ರತಿಯೊಂದು ಶಾಲೆಯಲ್ಲಿಯೂ ಉಪಯೋಗಿಸಲ್ಪಡುತ್ತಿವೆ. ಬೆಲೆಯಾದರೂ ಅತ್ಯಲ್ಪ. ಹೊಸ ಅಭ್ಯಾಸಪತ್ರಿಕೆಗಳನ್ನು ಅನುಸರಿಸಲಾಗಿದೆ. ವಿದ್ವಜ್ಜನರ ಮನ್ನಣೆಯನ್ನೂ ಪಡೆದಿವೆ. ಎಲ್ಲರ ಪ್ರೇಮಾದರಗಳನ್ನೂ ಗಳಿಸಿವೆ.

ಅಂತೇ ಇವು ಶ್ರೇಷ್ಠ ಗಣಿತಗಳು

ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ; ಸಾಕಷ್ಟು ಸಂಖ್ಯೆಯಲ್ಲಿ ಪೂರೈಸುವೆವು.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಸೂಚನೆ: ಮೊದಲನೆಯ ವರ್ಗದ ಗಣಿತ ಅಚ್ಚಿನಲ್ಲಿದೆ.

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

" ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋತೆಯವರ " **ವ್ಯಾವಹಾರಿಕ ಗಣಿತ** "ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾದ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾವ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವವರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಎಸ್. **ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ಬ್ಹಿ. ಬೋತೆ ಫುಲಬಾಗ ೨೨೪/೪೭ ಬೆಳಗಾವಿ

ಅಲ್ಪಾವಧಿಯಲ್ಲಿಯೇ ಪ್ರಖ್ಯಾತಿ ಪಡೆದು, ಕನ್ನಡ ನಾಡಿನಲ್ಲೆಲ್ಲ ಉಪಯೋಗಿಸಲಾಗುತ್ತಿರುವ ಶ್ರೀ. ಗಲಗಲಿಯವರ

ನೂತನ ಕಿಸೆಯ ಕೈಪಿಡಿ ಮಾಲೆ

[ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ]

(೧) ಆರೋಗ್ಯಶಾಸ್ತ್ರ	೦-೬-೦	(೨) ಪರೀಕ್ಷೆಯ ಗುಟ್ಟು	೦-೬-೦
(೩) ಶಾಸ್ತ್ರೀಯ ವಿಷಯ	೦-೬-೦	(೪) ಗಣಿತ ರಹಸ್ಯ	೦-೬-೦
(೫) ಭೂಮಿತಿ	೦-೬-೦	(೬) ಜನಾಖರ್ಚು	೦-೬-೦
(೭) ಪ್ರಬಂಧ ಲೇಖನ	೦-೬-೦	(೮) ವ್ಯಾಕರಣಚ್ಛಂದೋಽಲಂಕಾರ	೦-೬-೦

ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ವಿಷಯನಿರೂಪಣೆಯುಳ್ಳ ಇಂಥ ಪುಸ್ತಕಗಳು ಬೇರೆ ಇಲ್ಲ. ಕಾರಣ ವಿದ್ಯಾರ್ಥಿಗಳು ಶ್ರೀ. ಗಲಗಲಿಯವರ ಕೃತಿಗಳನ್ನು ಕೊಂಡು ಓದಿ ತೇರ್ಗಡೆಹೊಂದಲಡ್ಡಿಯಿಲ್ಲ. ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ!

ವ್ಯಾಪಾರಿಗಳಿಗೆ ಧಾರಳ ಕಮೀಶನ್ !!

ಆಕಳವಾಡಿ ಬುಕ್-ಡಿಪೋ, ಧಾರವಾಡ

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟಿವೆ! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣೆಳೆಸುವ ಸುಂದರ ಚಿತ್ರಗಳು!! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦-೫-೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦-೭-೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦-೧೦-೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೮—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ

ಜಯ-ಹಿಂಬ

ಟೆಕ್ಸ್ಟ್ ಬುಕ್ ಕಮಿಟಿಯನುಸಂದಲೂ, ಮೇಲಧಿಕಾರಿ
ಗಳಿಂದಲೂ ಮಾನ್ಯತೆ ಪಡೆದು, ಶಿಕ್ಷಣ ತಜ್ಞರಿಗೂ
ಶಿಕ್ಷಕ-ಶಿಕ್ಷಕಿಯರಿಗೂ ಬಾಲ ವಿದ್ಯಾರ್ಥಿಗಳಿಗೂ
ಪ್ರೀತಿಗೆ ಪಾತ್ರವಾದ ಪುಸ್ತಕವೆಂದರೆ

ಇದೊಂದೇ

ಪ್ರಗತಿ ಮಾರ್ಗ ಜೀವನ

ಇದು ಧಾರವಾಡ, ವಿಜಾಪುರ ಜಿಲ್ಲೆಗಳ ಸ್ಕೂಲು
ಬೋರ್ಡುಗಳಲ್ಲಿಯೂ ಮುಂಬಯಿ ಸ್ಕೂಲು ಬೋರ್ಡಿನ
ಲಿ ೨ ಪ್ರಾಥಮಿಕ ಶಾಲೆಗಳ ೫-೬ನೆ ೨ ವರ್ಗಕ್ಕೆ ಪ್ರಾ
ಪಠ್ಯಪುಸ್ತಕವೆಂದು ಮಂಜೂರಾಗಿದೆ. ಈ ಪೊಪ್ಪಿಗೆ ಎ
ಚಿಕ್ಕಮಕ್ಕಳ ಬೌದ್ಧಿಕ, ಮಾನಸಿಕ, ನೈತಿಕ ರಕ್ಷಣೆ ಸ್ಪ
ಬಲಪಡಿಸುವದು. ಇಂದೇ ತರಿಸಿಕೊಳ್ಳಿರಿ.

ಬೆಲೆ: ೧-೪-೦

ಸಿಗುವ ಸ್ಥಳ: ಗ್ರಂಥಕರ್ತರಲ್ಲಿಯೂ, ಗದಗ ಮತ್ತು
ಹುಬ್ಬಳ್ಳಿ ಹೊಂಬಾಳಿ ಬಂಧುಗಳಲ್ಲಿಯೂ

ಶರಭರಾಜ ಕೋಡಿಕೊಪ್ಪಮಠ. ಮಾಸ್ತರ

ಸರಕಾರಿ ಪ್ರೈಮರಿ ಸಿಂಗ ಸ್ಕೂಲ, ವಿಜಾಪುರ.

ಏನಯು ಇಯತ್ತ್ರೆಯ ಹೊಸ ಅಭ್ಯಾಸಪತ್ರಿಕೆ
ಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಸ್ಥಾಪನೆ

(ಸಚಿತ್ರ)

ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೫—೦

ಮಾನ್ಯರಾದ ಎಸ್.ಎಸ್. ಅಂಗಡಿ, ಪ್ರಿ ರೆಡ್ಡಿ,
ಪ್ರಿ. ಜೋಶಿ, ಪ್ರಿ. ಇಂಜಲ, ಪ್ರಿ. ಪರ್ಟ್, ಪ್ರಿ.
ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು,
ಶ್ರೀ. ಶಾನಭಾಗ (ಡಿ.ಎಸ್.ಪಿ.) ಮುಂತಾದವ
ರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ
ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: ನಿ. ವಿ. ನಂದಗಾಂವ
೬೧೯ ಮಠಗಲ್ಲಿ, ಬೆಳಗಾಂವ

ಮನೆಮನೆಗೆ ಅವಶ್ಯ ಸಂಗ್ರಹಿಸಲೇ ಬೇಕಾದ
ಜಿ. ಶ್ರೀ. ಕುಲಕರ್ಣಿಯವರ ಪುಸ್ತಕಗಳು

ಚಿತ್ರ ಕಥೆಗಳು

	ರೂ.	ಆ.
ಪ್ರಲ್ಹಾದ	೦	೫
ನರಿಂದೆಳನೆಯ ತರಗತಿಯ ಕತೆಗಳು	೧	೨
ಮಹಾತ್ಮಾ ಗಾಂಧಿ	೦	೪
ಅಕಬರ್-ಬೀರಬಲ್‌ರ ಹಾಸ್ಯ ಕತೆ	೦	೬
ಭಾರತೀಯ ಐತಿಹಾಸಿಕ ಕಥೆಗಳು	೦	೮
ರಾಮಕೃಷ್ಣ ಪರಮಹಂಸ ಕಥೆ	೦	೬

ಇತರ ಪುಸ್ತಕಗಳು

ಶ್ರೀಪತಿ ಕವೀಶ್ವರ ಸ್ತೋತ್ರ	೦	೫
ಶ್ರೀರಾಮ ರಕ್ಷಾ	೦	೫

ತ್ರಿವರ್ಣ ಚಿತ್ರದ ಪುಸ್ತಕಗಳು

ಶಕುಂತಲೆ	೦	೬
ರಾಷ್ಟ್ರೀಯ ಮಹಾಪುರುಷರು	೦	೧೨
ಭಗವಾನ್ ಶ್ರೀರಾಮ	೩	೦

ಅವುಗಳಲ್ಲದೆ ಬೇರೆ ಕಥೆಯ ಪುಸ್ತಕಗಳೂ
ದೊರೆಯುತ್ತವೆ.

ಸರಸ್ವತಿ ಪುಸ್ತಕ ಭಾಂಡಾರ
ಬಸವನ ಬೀದಿ, ಬೆಳಗಾಂವಿ

ಹೊ ಟೆದೆ! ಹೊಂಟದೆ!

ಶಿಕ್ಷಣ ದರ್ಶನ

ಲೇಖಕರು: ಶ್ರೀ. ನಾ. ಲ. ಚಾಪಟೆ, ಬಿ. ಎ.
ಬಿ.ಟಿ. ಮುಖ್ಯಾಧ್ಯಾಪಕರು, ಕರ್ನಾಟಕ ಹೈಸ್ಕೂಲ್
ಮಾಳಮರಡಿ, ಧಾರವಾಡ ಬೆಲೆ: ೧-೮-೦.
ಟ್ರೇನಿಂಗ ಪಡೆಯುತ್ತಿರುವವರಿಗೂ ಶಿಕ್ಷಕರಿಗೂ
ಅತ್ಯವಶ್ಯಕವಾಗಿದೆ.

ಪ್ರಯೋಗಾತ್ಮಕ ಶಿಕ್ಷಕ

(ಅಚ್ಚಿನಲ್ಲಿ)

ಲೇಖಕರು: ಗಜೇಂದ್ರಗಡ ಶಾಮರಾಯರು,
ಬೇಸಿಕ್ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ
ಸುಂದರ ಶೈಲಿಯಲ್ಲಿ ಬರೆದಿದ್ದಾರೆ

ಸ್ಟೂಡೆಂಟ್ಸ್ ಓನ್ ಬುಕ್ ಡಿಪೊ, ಧಾರವಾಡ

Regd. No, B. 5375

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ
ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ೪ನೇ ಇಯತ್ತಿಗೆ — ಬೆಲೆ ೦-೧೪-೦
ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ೪ನೆಯ ಇಯತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ೫ನೆಯ ಇಯತ್ತಿಗೆ — **ಬೆಲೆ ೧ ೪-೦**
ಲೇಖಕರು :- ಶ್ರೀಯುತ ಎ ಜಿ ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತಿಗೆ — **ಬೆಲೆ ೧-೧೦-೦**
ಲೇಖಕರು :- ಸದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತಿಗೆ — **ಬೆಲೆ ೨-೨-೦**
ಲೇಖಕರು :- ಸದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ — ಬೆಲೆ ೦-೧೨-೦
ಲೇಖಕರು :- ಆದ್ಯ ರಂಗಾಚಾರ್ಯ ಎಂ. ಎ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತಿಗಳಿಗೆ — ಬೆಲೆ ೦-೪-೦
ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೯೫೪ರ ವರೆಗೆ **ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.**

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-ವಾಚನವೆಂದು ಮಂಜೂರಾಗಿದೆ. **ಬೆಲೆ ೦-೧೨-೦**
ಲೇಖಕರು:- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೪ನೆಯ ಇಯತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತಿಗೆ
೩. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೪. **ಮಾತಿನ ಮುನ್ನಡೆ.** ೭ನೆಯ ಇಯತ್ತಿಗೆ
೫. ಪತ್ರಗಳ ಪರಿಚಯ. ೬-೭ನೆಯ ಇಯತ್ತಿಗಳಿಗೆ.
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. sc. at Jai Hind Art Press, Javlipeth, Dharwar. Edited and Published by M. G. Handral B. M. Shintri, S. R. Tatti, & Y. D. Nadkarni Jointly at the

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು :

ಎಂ. ಜಿ. ಪಂದ್ಯಾಳ

ಯುಗಾದಿ

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಒರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ ೧

ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಲಿ
ಮತ್ತೆ ಕೇಳಬರುತಿದೆ ೨

ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ ೩

ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣನೊಲು ಕೋದಿದೆ ೪

—ದ. ರಾ. ಬೇಂದ್ರೆ

ಎಪ್ರಿಲ್ ೧೯೫೨

ಪ್ರತಿ ೬ ಆಣೆ] ★ [ವಾ. ಚಂದಾ ೪ ರೂ.

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ, ಎಂ. ಎ., ಬಿ. ಟಿ., ಡಿ. ಬಿ. ಈ.**

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾತ್ಮಾ ಜೀವನದ ಪುನರಾಣ ಗ್ರಂಥ.

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಬಿತ್ತರಿಸುವ ಮೊದಲನೆಯ ಗ್ರಂಥ.

ಪ್ರೊ. ಶಿ. ಶಿ. ಬಸವನಾಳ ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಇವರ ಅಭಿನಂದನೆಯೊಡನೆ ಮಿನುಗುವ ಗ್ರಂಥ.

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ೮. ಪು. ಪುಟ. ೧೮೪+೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೮—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸ:—

ಎಸ್. ವಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟೆ.**

೧—೨ ಪ್ರಾ. ಶಿ. ವಿದ್ಯಾರ್ಥಿಗಳಿಗಾಗಿ

ತಾತ್ಪರ್ಯ

ರಾಗಗೀತ ಪ್ರವೇಶಿಕಾ

ಬರೆದವರು:— ಗಾಯನ ಕಲಾಕೋವಿದ

ಶ್ರೀ. ಜಿ. ಎಸ್. ಜುಕ್ತಿಮಠ

ಪುಟ ೧೨೦ ಬೆಲೆ ೧—೦—೦

ಈ ಪುಸ್ತಕವು ಮುಂಬಯಿ ಸರಕಾರದ ವಿದ್ಯಾಖಾತೆಯವರಿಂದ ೧ ಮತ್ತು ೨ನೇ ವರ್ಷ ಟ್ರೇ. ಕಾ. ವಿದ್ಯಾರ್ಥಿಗಳಿಗಾಗಿ ವಿಶೇಷ ಪ್ರಾಜನಪಡೆದು ಮಂಜೂರಾಗಿದೆ. ಈ ಪುಸ್ತಕವು ಮುಂಬಯಿ ಪರೀಕ್ಷೆಯಲ್ಲಿ ಗಾಯನ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಒಳ್ಳೇ ಉಪಯುಕ್ತವಾಗಿದೆ. ಅಲ್ಲದೆ ಸರಿಗಮ ನಕಾಶ ಕೊಟ್ಟು, ಗಾಯನ ಅಭ್ಯಾಸಿಗಳಿಗೂ ಅನುಕೂಲವಾಗುವಂತೆ ತಯಾರಿಸಲಾಗಿದೆ.

ದೊರೆಯುವ ಸ್ಥಳ:—

ಮಹಾಂತೇಶ ಬುಕ್‌ಡಿಪೋ, ಬಾಗಲಕೋಟೆ

ಪ್ರಾಥಮಿಕ ಶಾಲಾಪ್ರವೇಶಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ

ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಚೊಕಿ ಮತ್ತು ಶ್ರೀ. ಜಿ. ಡಿ. ಮಾಲಿ

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತಿರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಏಪು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾರಕರು, ಳಳಿ, ಕಸಬಾ ಪೇಟೆ, ಪುಣೆ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ಪ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ. ಇ.
ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಜಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧ || ಎಪ್ರಿಲ್ ೧೯೫೨ || ಸಂಚಿಕೆ ೧೧

ವಿಷಯ — ಪರಿವಿಡಿ — ಪುಟ

೧. ಸಂಪಾದಕೀಯ ೨
೨. ಯುಗಾದಿಯ ಐತಿಹಾಸಿಕ ಹಿನ್ನೆಲೆ—ಶ್ರೀ. ಶಿವಶಂಕರ ಪು. ಹಿಳ್ಳಿ. ೪
೩. ಭೂಗೋಲವನ್ನು ಕಲಿಸುವ ಬಗೆಗಳು (ಲೇಖಾಂಕ ೪) ಶ್ರೀ. ಬ. ಮು. ಶಿಂತ್ರಿ ೫
೪. ನೂಲಿನ ಶಕ್ತಿಯ ಒಂದು ಶಾಸ್ತ್ರೀಯ ದೃಷ್ಟಿ-(ಅನುವಾದಕರು) ಶ್ರೀ. ಗಂ. ವಿ. ಅಣ್ಣಾನಾಯಕ ೯
೫. ಭಗವಾನ ಬುದ್ಧನ ಧರ್ಮಮಾರ್ಗ—ಶ್ರೀ. ತಟ್ಟಿ ಶ್ಯಾಮರಾಯರು ೧೫
೬. ರಾಷ್ಟ್ರೀಯ ಶಿಕ್ಷಣದಲ್ಲಿ ಸ್ತ್ರೀಯ ಬಹುಮುಖ ಪಾತ್ರ—ಶ್ರೀ. ಹೊ. ಶ. ತುಮ್ಮಿನಕಟ್ಟಿ ೧೭
೭. ಪ್ರಾ. ಶಾ. ಪ್ರ. ಪ. ಪರೀಕ್ಷೆ ಪ್ರಕಟನೆ ೧೮
೮. ಪುಸ್ತಕ ವಿಮರ್ಶೆ ೧೯
೯. ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ ೧೬

ಸಂಪಾದಕೀಯ

ಹೊಸ ವರುಷದ ಹಾರೈಕೆ :

"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ"---ಆಧುನಿಕ ಕನ್ನಡ ಕವಿಪುಂಗವನ ಈ ಮಾತು ನಮಗೆ ಹಲವಾರು ಸಂಗತಿಗಳನ್ನು ಜ್ಞಾಪಕಕ್ಕೆ ತರುತ್ತದೆ. ಕಾಲಚಕ್ರದ ಉರುಳಾಟವು ಹಾಗು ನಿಸರ್ಗದ ನಿಯಮಕ್ಕನುಸಾರವಾಗಿ ಜರುಗುವ ಬದಲಾವಣೆಗಳು ಅವ್ಯಾಹತವಾಗಿ, ಅವಿಶ್ರಾಂತವಾಗಿ ಸಾಗಿಯೇ ಸಾಗುವವು. ಶಾಶ್ವತನಾದ ಕಾಲಪಟಲದ ಮೇಲೆ ಕೆಲ ಜೊತ್ತು ಮೂಡಿ ಮಾಯವಾಗುವ ಅಶಾಶ್ವತ ಮಾನವನು ಋತುಮಾನಕ್ಕನುಸರಿಸಿ ನಿಸರ್ಗದಿಂದ ತನ್ನ ಜೀವನದಲ್ಲಿ ಮಾರ್ಪಡಿಸಿಕೊಳ್ಳಬೇಕಾದ ಅನೇಕ ಸಂಗತಿಗಳಿವೆ.

ಯುಗಾದಿಯು ಇಂತಹ ಕೆಲವು ಮಾರ್ಪಾಡುಗಳನ್ನು ಮಾನವನ ಜೀವನದಲ್ಲಿ ಮಾಡಬಲ್ಲುದು. ನಿಸರ್ಗದಲ್ಲಿ ಹಳೆಯದು ಹೋಗಿ ಹೊಸತು ಬರುವ ಸಮಯದಲ್ಲಿ ಯುಗಾದಿಯು ಬರುವದು. ಅದೇ ಆಗ ಆಗಮಿಸಿದ ವಸಂತನು ಗಿಡ-ಮರಗಳಿಗೆ ನವೀನವಹ ಹಚ್ಚ ಹಸುಲೆಗಳ ಹಸಿರುಡಿಗೆಯನ್ನು ಉಡಿಸುವನು; ಕೆಲವು ಗಿಡ-ಮರಗಳಲ್ಲಿ ಹೂಗಳಿದ್ದರೆ ಕೆಲವುಗಳಲ್ಲಿ ಕಾಯಿಗಳಾಗಿರುವವು. ಮೌನ ವ್ರತಾಚಾರಿಯಾದ ಕೋಗಿಲೆಯಂದು ಮೌನಂ ಬಿಟ್ಟು ಉಲಿಯತೊಡಗುವದು. ಹೀಗೆ ಯುಗಾದಿಯು ಅಚೇತನ ಹಾಗೂ ಸಚೇತನ ವಸ್ತುಗಳಲ್ಲಿ ಹೊಸತನವನ್ನೂ, ಹೆರುಷವನ್ನೂ, ಶೋಭೆಯನ್ನೂ, ಕಳೆಯನ್ನೂ, ಚೇತನವನ್ನೂ ತುಂಬಿ ನಲಿಯುತ್ತ ಬರುವದು.

ಯುಗಾದಿಯು ನಿಸರ್ಗದಲ್ಲಿ ತುಂಬುವ ಈ ಹೊಸ ಬೆಳಕನ್ನು, ನವೀನ ಚೈತನ್ಯವನ್ನು ಮಾನವನಾದರೂ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಈ ಮಾತು ವಿಶೇಷವಾಗಿ ಅನ್ವಯಿಸುವದು. ನಾಡ ಶಿಲ್ಪಿಗರಾದ ಶಿಕ್ಷಕರು ಹೊಸ ನಾಡನ್ನು ಕಟ್ಟಬೇಕಾದರೆ, ಆದರ್ಶ ನಾಗರಿಕರನ್ನು ನಿರ್ಮಿಸಬೇಕಾದರೆ, ಉಪಯೋಗಕ್ಕೆ ಬಾರದ ಹಳೆಯದನ್ನು ಕಳಚಿ ಹೊಸದನ್ನು ಅಳವಡಿಸಿಕೊಳ್ಳಲು ಸಿದ್ಧರಾಗಬೇಕು. ಯುಗಾದಿಯ ದಿನ ಬೇವು-ಬೆಲ್ಲದ ಸೇವನೆಯನ್ನು ಮಾಡುವ ಸಂಪ್ರದಾಯ ಬಂದಿದೆ. ಈ ಕಹಿ ಸಿಹಿ ಪದಾರ್ಥಗಳನ್ನು ಸೇವಿಸುವುದು ಬಾಳಿನಲ್ಲಿ ಬರುವ ದುಃಖ-ಸುಖ ಇವು ಸಮನಾಗಿ ಬರುತ್ತವೆಂಬುವನ್ನೂ ಎರಡನ್ನೂ ಅನುಭವಿಸಲು ಮಾನವನು ಸಿದ್ಧನಾಗಿರಬೇಕೆಂಬುದನ್ನೂ ಸೂಚಿಸುವುದು.

ಹೀಗೆ ಹುರುಳಿಲ್ಲದ ಹಳೆಯದನ್ನು ಕಳಚಿ, ಹೊಸ ಹುರುಷನ್ನು, ಹೊಸ ಚೇತನವನ್ನು, ಹೊಸ ದೃಷ್ಟಿಯನ್ನು ತುಂಬಿಕೊಂಡು ಹೊಸ ಬೆಳಕಿನಲ್ಲಿಹೊಸ ಹಾದಿ ಹಿಡಿದು ಕುಗ್ಗದೆ, ಬಗ್ಗದೆ ಮುಂದೆ ಸಾಗಿ ದ್ವೇಷ, ಅಸೂಯೆ, ಕಾಪಟ್ಯ, ಸ್ಪರ್ಧೆ, ವೈರಗಳಿಲ್ಲದ, ಸತ್ಯದ ಆಶ್ರಯದಲ್ಲಿರತಕ್ಕ, ನೀತಿಯ ನೆಲೆಗಟ್ಟಿನ ಮೇಲೆ ನಿಲ್ಲತಕ್ಕ, ಮಧುರ ಬಾಂಧವ್ಯವುಳ್ಳ ಶೋಷಣ ರಹಿತ ಸುಂದರ ಸಮಾಜವನ್ನು ಕಟ್ಟಲು ಅಣಿಯಾಗುವಾ. ಇದುವೇ ಯುಗಾದಿಯ ದಿವ್ಯ ಸಂದೇಶ! ಆದರ್ಶ ಆಶಯ!! ಮಹಾತ್ಮಾಜಿಯವರ ಮನೀಷೆ!!!

ಕಣ್ಣೀರು

(೧) ದಿವಂಗತ
ಟಿ. ಎಸ್. ಕೌಜಲಗಿಯವರು

ಶ್ರೀ. ಟಿ. ಎಸ್. ಕೌಜಲಗಿಯವರ ಆಕಾಲಿಕ, ಆಕಸ್ಮಿಕ ನಿಧನದ ಸುದ್ದಿಯನ್ನು ಕೇಳಿ ಕರ್ನಾಟಕದ ವಿಧಾಯಕ ಕಾರ್ಯಕರ್ತರಿಗೆ, ಸಮಾಜ ಸೇವಕರಿಗೆ ತುಂಬ ಖೇದವಾಗಿದೆ. ಶ್ರೀಯುತರು ವಿಜಾಪೂರ ಜಿಲ್ಲೆಯ ಸರ್ವೋದಯ ಸಂಸ್ಥೆಯ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದರು; ಇವರು ಮೊದಲಿನಿಂದಲೂ ನಿಷ್ಠಾವಂತ ಕಾರ್ಯಕರ್ತರು. ಕಳೆದ ನವ್ಹೆಂಬರ ತಿಂಗಳಲ್ಲಿ ಕಲಾದಗಿ ಹಾಗೂ ಅದರ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಸಾಮಾಜಿಕ ಶಿಕ್ಷಣ ಸಪ್ತಾಹವನ್ನು ಆಚರಿಸಿದಾಗ, ಆ ಕೆಲಸದಲ್ಲಿ ಅವರು ನೀಡಿದ ಸಾಹಾಯ್ಯ, ತೋರಿದ ಔದಾರ್ಯ, ಪ್ರತಿಬಿಂಬಿಸಿದ ಆದರ್ಶ ಇವೆಲ್ಲ ಕಣ್ಮುಂದೆ ಕಟ್ಟಿವೆ, ಹಿಂದುಳಿದ ಜನಾಂಗದ ಹಾಗೂ ಸ್ತ್ರೀಯರ ಶಿಕ್ಷಣದಲ್ಲಿಯ ಪ್ರಗತಿ ಮತ್ತು ಗಾಂಧೀಜಿಯವರು ಹಾಕಿ ಕೊಟ್ಟ ವಿಧಾಯಕ ಕಾರ್ಯಕ್ರಮಗಳಲ್ಲಿ ಅವರ ಆಸ್ಥೆ ಇವು ಅವರನ್ನು ಸತತೋದ್ಯಮಿಯನ್ನಾಗಿ ಮಾಡಿದ್ದವು. ಕರ್ನಾಟಕದಲ್ಲಿ ನಿಷ್ಠಾವಂತ, ವಿಧಾಯಕ ಕಾರ್ಯಕರ್ತರ ಕೊರತೆಯಿರುವ ಸಮಯದಲ್ಲಿ ಇವರು ಮರೆಯಾದುದು ಕನ್ನಡಿಗರಿಗೆ ತುಂಬಿ ಬಾರದಷ್ಟು ಹಾನಿಯಾಗಿದೆ. ವಿಧಿಲಿಪಿಯನ್ನು ತಡೆಯುವವರಾರು ? ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

(೨) ದಿವಂಗತ
ಬಸರೀಗಿಡದ ವೀರಪ್ಪನವರು

ಕನ್ನಡಿಗರು ಇನ್ನೊಬ್ಬ ದೀನ-ಬಂಧುವನ್ನು ಇತ್ತೀಚೆಗೆ ಕಳೆದುಕೊಂಡರೆಂದು ಅತಿ ವಿಷಾದದಿಂದ ಹೇಳಬೇಕಾಗಿದೆ. ಅವರೆಂದರೆ ದಾನಶೂರ ಶ್ರೀ. ಬಸರೀಗಿಡದ ವೀರಪ್ಪನವರು. ಬಡ ಮನೆತನದಲ್ಲಿ ಜನಿಸಿ, ಸತತೋದ್ಯಮ ಸಾಹಸಗಳಿಂದ ಧನಗಳಿಸಿ, ದೀನರಿಗೂ ದರಿದ್ರರಿಗೂ ಉಳಿಕೆಯಲ್ಲಿ ಋಣಬಡಿಸಿ, ನೀಡುವವರ ಮಾದರಿಯಾಗಿ, ಬೇಡುವನರ ಬಂಧುವಾಗಿ ಬಾಳಿ ಅಳಿದ ವೀರಪ್ಪನವರನ್ನು ಎಂದೂ ಮರೆಯುವಂತಿಲ್ಲ. ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ, ಶೈಕ್ಷಣಿಕ ಸಂಸ್ಥೆಗಳ ನಿರ್ಮಾಣಕ್ಕಾಗಿ, ಸಾಮಾಜಿಕ ಸಂಸ್ಥೆಗಳ ಅಭಿವೃದ್ಧಿಗಾಗಿ, ಬಡಬಗ್ಗರ ಉನ್ನತಿಗಾಗಿ ಅವರು ಮಾಡಿದ ದಾನ, ತೋರಿದ ಔದಾರ್ಯ, ಪಟ್ಟ ಕಷ್ಟ ಇವೆಲ್ಲವೂ ಪ್ರಶಂಸನೀಯವೂ, ಅನುಕರಣೀಯವೂ ಆಗಿವೆ. 'ಮನೆ ಕಿರಿದಾದರೇನು ವಾಸಿಸುವವನ ಮನ ಹಿರಿದಾಗಬೇಕು' ಎಂದು ಹೇಳಬೇಕಾದರೆ ವೀರಪ್ಪನವರ ಕಡೆಗೆ ಬೊಟ್ಟು ಮಾಡಿ ತೋರಿಸಬೇಕು. ದೇವಾಜ್ಞೆಗೆ ಮನ್ನಣೆ ! ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಪರಮಾತ್ಮನು ಕರುಣಿಸಲಿ.

ಯುಗಾದಿಯ ಐತಿಹಾಸಿಕ ಹಿನ್ನೆಲೆ

ಲೇಖಕರು:—ಶ್ರೀ ಶಿವಶಂಕರ ಮಲ್ಲಪ್ಪ ಹಿಳ್ಳಿ. ಪ್ರಧಾನ ಗುರೂಜಿ, ಶಾಲಾ ಬೋಳೆಗಾಂವ, ತಾ|| ಇಂಡಿ

ನಂದನ ನಾಮ ಸಂವತ್ಸರದ ಶಾಲಿವಾಹನ ಶಕೆ ೧೮೭೪ರ ಚೈತ್ರ ಶುದ್ಧ ಪ್ರತಿಪದೆಯೇ ಯುಗಾದಿಯು. ಇದು ಚಾಂದ್ರ ಮಾನದ ವರುಷಾರಂಭವು. ಈ ಎಣಿಕೆಗೆ ವಿಶೇಷ ಸ್ಥಾನಮಾನ ಹಾಗೂ ಮಹತಿಗಳಿವೆ. ಎಲ್ಲ ಹಿಂದುಗಳು ಇದೇ ಹೊಸ ವರುಷದ ಪ್ರಥಮ ದಿನವೆಂದು ಗಣಿಸುವದಿಲ್ಲವಾದರೂ ಈ ದಿನದ ಸವಿಯನ್ನು ಸವಿಯದೇ ಬಿಡುವವರಾರೂ ಇಲ್ಲ. ವಿಶೇಷತಃ ಕರ್ನಾಟಕ ತೆಲಗು ಹಾಗೂ ಕಾಶ್ಮೀರ ಪ್ರಾಂತಗಳಲ್ಲಿ ಇಂದಿನ ದಿನವನ್ನೇ ನೂತನ ದಿನವೆಂದು ತಿಳಿದು ಯುಗಾದಿಯನ್ನು ಆಚರಿಸುವರು.

ಚಾಂದ್ರಮಾನ ವರುಷ ಎಣಿಸುವ ಕ್ರಮ.

ಚಂದ್ರನು ಪ್ರತಿಪದೆಯ ಆದಿಯಾಗಿ ಪೌರ್ಣಿಮೆಯ ಪರಿಗೆ ದಿನಕ್ಕೊಂದು ಕಲೆಗಳಂತೆ ಅಭಿವೃದ್ಧಿ ಹೊಂದುತ್ತಾ ಪೌರ್ಣಿಮೆಯ ದಿನ (ಹದಿನೈದು ದಿವಸಕ್ಕೆ) ಪೂರ್ಣತ್ವಹೊಂದಿ ಪೂರ್ಣ ಪ್ರಕಾಶವುಳ್ಳವನಾಗುವನು. ಇದಕ್ಕೆ ಒಂದು ಪಕ್ಷವೆಂದೂ ಈ ಪಕ್ಷಕ್ಕೆ ಶುಕ್ಲ (ಶುದ್ಧ) ಪಕ್ಷವೆಂದೂ ಕರೆಯುತ್ತಾರೆ. ಮುಂದೆ ಹುಣ್ಣಿಮೆಯ ಮರುದಿನದಿಂದ ಪುನಃ ಪ್ರತಿಪದೆಯಾದಿಯಾಗಿ ಅಮಾವಾಸ್ಯೆಯ ವರೆಗೆ (ಮತ್ತೆ ಹದಿನೈದು ದಿವಸ) ದಿನಕ್ಕೊಂದು ಕಲೆಗಳಂತೆ ಅನಭಿವೃದ್ಧಿಹೊಂದುತ್ತಾ ಅಮಾವಾಸ್ಯೆಯ ದಿನ ಪೂರ್ಣ ಕಾಣದಂತಾಗುವನು. ಇದಕ್ಕೂ ಒಂದು ಪಕ್ಷವೆಂದೂ—ಈ ಪಕ್ಷಕ್ಕೆ ಕೃಷ್ಣ (ವದ್ಯ) ಪಕ್ಷವೆಂದೂ ಹೆಸರು. ಇಂಥ ಇಪ್ಪತ್ತಾಲ್ಕು ಪಕ್ಷ ಅಥವಾ ಎರಡು ಪಕ್ಷಗಳಿಂದ ಕೂಡಿದ ಹನ್ನೆರಡು ಮಾಸಗಳಿಗೆ ಒಂದು ವರುಷವೆಂದೂ, ಇದುವೇ ಚಾಂದ್ರಮಾನ ವರುಷವೆಂದೂ ಕರೆಯುತ್ತಾರೆ. ಈ ಚಾಂದ್ರಮಾನ ವರುಷಕ್ಕೆ ಚೈತ್ರಮಾಸಾದಿಯಾಗಿ ಫಾಲ್ಗುಣ ಪರ್ಯಂತ ಹನ್ನೆರಡು ತಿಂಗಳುಗಳು ಆಗುವವು.

ಚೈತ್ರಮಾಸ ಹಾಗೂ ಚೈತ್ರಶುದ್ಧ ಪ್ರತಿ-ಪದೆಯನ್ನೇ ಪ್ರಾರಂಭಿಕಮಾಸ ಹಾಗು ದಿನಗಳೆಂದು ಗ್ರಹಿಸಲು

ಕಾರಣಗಳು

ಶ್ರೀ. ರಾಮಚಂದ್ರನು ಹದಿನಾಲ್ಕು ವರುಷ ವನವಾಸ ಮುಗಿಸಿ ಆಯೋಧ್ಯೆಯನ್ನು ಪ್ರವೇಶಿಸಿದ ದಿನವೆಂದರೆ ಚೈತ್ರ ಶುದ್ಧ ಪ್ರತಿಪದೆ. ಬ್ರಹ್ಮದೇವನು ಸೃಷ್ಟಿಯನ್ನು ಸೃಷ್ಟಿಸಿದ ದಿನವೆಂದರೆ ಚೈತ್ರಶುದ್ಧ ಪ್ರತಿಪದೆ. ವಸುರಾಜನು ತಪಶ್ಚರ್ಯದ ಬಲದಿಂದ ಚಕ್ರವರ್ತಿಯಾಗಿ ದೇವತೆಗಳಿಂದ ಸತ್ಕಾರಹೊಂದಿದ ದಿನವೂ ಇದುವೆ. ಈ ಎಲ್ಲ ಕಾರಣಗಳಿಂದ ಈ ಮಾಸವೂ ಈ ದಿನವೂ ಪ್ರಾರಂಭಿಕ ದಿನವೆಂದು ಪೌರಾಣಿಕ ಭಾವನೆಯಿವೆ.

ಇವೇ ಮೊದಲಾದ ಕಾರಣಗಳಿಂದ ಚೈತ್ರಮಾಸ ಹಾಗೂ ಚೈತ್ರ ಶುದ್ಧ ಪ್ರತಿಪದೆಯನ್ನು ಹೊಸ ವರುಷದ ಹರುಷದ ಪ್ರಾರಂಭಿಕ ಮಾಸ ಹಾಗೂ ಸುದಿನಗಳೆಂದೂ ಬಗೆದು ಆಚರಿಸುವರು. ಈ ದಿನಕ್ಕೆ ಯುಗಾದಿಯೆಂದೂ, ಕೆಲವಡೆಗಳಲ್ಲಿ 'ಗುಡಿ ಪಾಡವಾ' ಎಂದೂ ಅನ್ನುವರು.

ಮಹಾಭಾರತದ ಆದಿ ಪರ್ವತ ೬ನೇ ಅಧ್ಯಾಯದಲ್ಲಿ ವಸುರಾಜನೆಂಬ ಓರ್ವನ ಕಥೆ ಈ ಕುರಿತೇ ಇದೆ. ಈ ಅರಸನ ದೇಶ ಚೇದಿದೇಶವೆಂದು ತಿಳಿದು ಬರುತ್ತಿದೆ. ಈ ಅರಸನು ಧರ್ಮಿಷ್ಟನೂ ಮಹಾತಪಸ್ವಿಯೂ ಇದ್ದನಂತೆ. ತಪದ ಫಲವಾಗಿ ಇಂದ್ರಪದವಿ ಪಡೆಯಬಹುದೆಂಬ ಭಯವಾಗಿ ಇಂದ್ರರು ದೇವತೆಗಳೊಂದಿಗೆ ಭೂಲೋಕಕ್ಕಿಳಿದು ವಸುರಾಜನನ್ನು ಕಂಡು ವಸುರಾಜನೇ ನಿನ್ನ ತಪಕ್ಕೆ ಮೆಚ್ಚಿದವರಾರು? ನಿನ್ನ ತಪದ ಫಲವಾಗಿ ಕೊಡಲಿರುವ ನನ್ನ ವರವನು ನೀನು ಸ್ವೀಕರಿಸು ಎಂದನು. ಬಳಿಕಃ—"ದೇವಾನ್ ಆಹಂಪಾಲಯಿತಾ। ಗಾಲಯತ್ವಂ ಹಿ ಮಾನುಷಾನ್"ವೆಂದು ರಾಜನಿಗೆ ಆಜ್ಞಾಪಿಸಿ ಒಂದು ವಿಮಾನವನ್ನೂ ವೈಜಯಂತಿ ಮಾಲೆ (ಇಂದ್ರ) ಮಾಲೆಯನ್ನು ಹಾಗೂ ತನ್ನ ಕುರುಹು ಒಂದು ದಂಡ (ಕೋಲು)ವನ್ನೂ ಕೊಟ್ಟನಂತೆ. ವಸುರಾಜನು ಇದನ್ನೆಲ್ಲಿ ಸ್ವೀಕರಿಸಿದ ಹಾಗೂ ದೇವತೆಗಳಿಂದ ಪೂಜೆಗೈದ ದಿನವೆಂದರೆ ಚೈತ್ರ ಶುದ್ಧ ಪ್ರತಿಪದೆಯೆಂದು ಇದೆ.

ಇನ್ನೊಂದು ಮಹತಿಯೆಂದರೆ ಬ್ರಹ್ಮನು ಹೊರಳಿ ಸೃಷ್ಟಿಯನ್ನು ನೋಡುವಾಗ ಪೃಥ್ವಿಯು ನೀರಿನಲ್ಲಿ ಮುಳುಗಿತ್ತೆಂದು ಎಲ್ಲೆಡೆಗೂ ನೀರೆ ಕಾಣುತ್ತಿತ್ತೆಂದೂ ಆ ಕಾಲದಲ್ಲಿ ಬ್ರಹ್ಮನ ಹೊರಳಿಯಿಂದ ವರಾಹನು ಅವತರಿಸಿ ನೀರಿನಲ್ಲಿ ಮುಳುಗಿ ತನ್ನ ಕೋರೆಯ ಬಲದಿಂದ ಪೃಥ್ವಿಯನೆತ್ತಿ ಮೇಲಕ್ಕೆ ತಂದ ದಿನವಾದರು ಚೈತ್ರಶುದ್ಧ ಪ್ರತಿಪದೆಯೇ ಎಂದು ಒಂದು ಕಥೆಯಿದೆ.

ಶ್ರೀ. ರಾಮಚಂದ್ರನು ಪಿತೃ ವಚನ ಪಾಲನೆಗಾಗಿ ೧೪ ಹದಿನಾಲ್ಕು ವರುಷ ವನವಾಸ ಭೋಗಿಸಿ ಅಯೋಧ್ಯೆಗೆ ಹಿಂದಿರುಗಿದ ದಿನವೂ ಇದು. ಅಂದಿನಿಂದಲೆ ತಳಿರು ತೋರಣಾದಿಗಳಿಂದ ವಾದನ-ಗಾಯನಾದಿಗಳಿಂದ ಉತ್ಸವವು ನಡೆಯುತ್ತ ಬಂದಿರ ಬಹುದೆಂದು ಕೆಲವ ಗ್ರಹಿಕೆ ಇದೆ.

ಭೂಗೋಲವನ್ನು ಕಲಿಸುವ ಬಗೆಗಳು

ಲೇಖಾಂಕ ೪

ಲೇಖಕರು:—ಶ್ರೀಯುತ ಬ. ಮು. ತಿಂತ್ರಿ. ಬಿ. ಎ. ಬಿ. ಟಿ
ನಿವೃತ್ತ ಆಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಉಪಕರಣಗಳು

ಇವು ಹೆಚ್ಚು ಇದ್ದಷ್ಟು ಪಾಠಕ್ಕೆ ಕಳೆಯೇರುತ್ತದೆಂಬ ಮಾತನ್ನು ಇಲ್ಲಿ ಹೇಳುವದು ಅನವಶ್ಯಕ. ಅವುಗಳಿಂದ ಮಕ್ಕಳಿಗೆ ಕಲಿಸಬೇಕಾಗಿರುವ ಸಂಗತಿಗಳ ಬಗೆಗೆ ಸ್ಪಷ್ಟ ಕಲ್ಪನೆಯಾಗುತ್ತದೆ; ಪಾಠವು ಮನೋರಂಜಕವಾಗಿ ಮಕ್ಕಳ ಅವಧಾನವು ವಿಷಯದತ್ತ ಎಳೆಯಲ್ಪಡುತ್ತದೆ. ಆದುದರಿಂದ ಶಿಕ್ಷಣದಲ್ಲಿ ಅವುಗಳ ಮಹತ್ವವು ಅಷ್ಟಿಷ್ಟಲ್ಲ. ಅವು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ವಸ್ತುಗಳೆಂದು ಎರಡು ತೆರನಾಗಿವೆ.

(ಅ) **ಪ್ರತ್ಯಕ್ಷ ವಸ್ತುಗಳು**:— ಹಳ್ಳಿಯ ನೆರೆಹೊರೆಯ ಗುಡ್ಡಗಳು, ಹೊಳೆ ಹಳ್ಳ–ಸರವುಗಳು,-ಕೆರೆ-ಕಾಲುವೆ–ಕೋದಿಗಳು, ಲೈನ ರಸ್ತೆಗಳು, ಲೋಕಮಾರ್ಗಗಳು, ಸೇತುಬೆಗಳು ತಾರಿಸಕಂಬಗಳು, ರೆಲ್ವೆ ಮತ್ತು ಮೋಟರ ನಿಲ್ದಾಣಗಳು, ಹೊಲಗಳು, ಬೇರೆ ಬೇರೆ ನಮೂನೆಯ ಮಣ್ಣು–ಕಲ್ಲುಗಳು, ಬೆಳೆಗಳು, ಗಿಡಗಳು, ಪಶು-ಪಕ್ಷಿಗಳು, ಜನರ ಉದ್ಯೋಗಗಳು, ಮುಂತಾದವುಗಳು ಪ್ರತ್ಯಕ್ಷ ವಸ್ತುಗಳು. ಸಮೀಪದಲ್ಲಿ ಶಹರವಿದ್ದರೆ, ಅದನ್ನು ಸಂದರ್ಶಿಸಲು ಚಿಕ್ಕದೊಂದು ಪ್ರವಾಸವನ್ನೇರ್ಪಡಿಸಲು ಶಕ್ಯವಿದೆ. ಆಲ್ಲಿಯ ಕೈಗಾರಿಕೆಗಳು, ಗಿರಣಿಗಳು, ನಳಗಳು, ಕಚೇರಿಗಳು, ವಿದ್ಯುದ್ದೀಪಗಳು, ವಿದ್ಯುತ್ಸಂಬಗಳು, ವಿದ್ಯುತ್ಕೇಂದ್ರವು, ಸಿನಿಮಾ–ನಾಟಕ–ಗೃಹಗಳು, ಇತ್ಯಾದಿ ಪ್ರತ್ಯಕ್ಷ ವಸ್ತುಗಳಲ್ಲವೇ? ಹಳ್ಳಿಯ ಮಕ್ಕಳಿಗೆ ಇವೆಲ್ಲ ಕೌತುಕದ ವಸ್ತುಗಳೇ. ಕೌತುಕದ ವಸ್ತುಗಳಲ್ಲಿ ಮಕ್ಕಳ ಆಭಿರುಚಿ ಆಸಕ್ತಿಗಳು ಹುಟ್ಟಿ ಹೆಚ್ಚುತ್ತ ಹೋಗುವದು ಸ್ವಾಭಾವಿಕ. ಪ್ರತ್ಯಕ್ಷ ವಸ್ತುಗಳನ್ನು ಕಣ್ಣಾರೆ ಕಂಡು ಪರೀಕ್ಷಿಸುವದರಿಂದ ಮಕ್ಕಳಿಗೆ ಪ್ರತ್ಯಕ್ಷ ಜ್ಞಾನವಾಗುತ್ತಿದೆ. ಇದುವೇ ಮಕ್ಕಳಿಗೆ ಆಗಬೇಕಾದ ನಿಜವಾದ ಜ್ಞಾನವು. ಇಂತಹ ಜ್ಞಾನವು ಮಕ್ಕಳ ಜ್ಞಾಪಕದಲ್ಲಿ ಶಾಶ್ವತವಾಗಿ ಉಳಿಯುವದು.

(ಆ) **ಅಪ್ರತ್ಯಕ್ಷ ವಸ್ತುಗಳು**:—ಭೂಗೋಲದಲ್ಲಿ ಎಲ್ಲ ವಸ್ತುಗಳನ್ನು ಇಲ್ಲವೆ ಸಂಗತಿಗಳನ್ನು ಪ್ರತ್ಯಕ್ಷವಾಗಿ ಮಕ್ಕಳಿಗೆ ತೋರಿಸುವದು ಎಂದಾದರೂ ಸಾಧ್ಯವೇ? ಬಹಳೆಂದರೆ, ಮೇಲೆ ಹೇಳಿದಂತೆ ನೆರೆಹೊರೆಯಲ್ಲಿರುವ ಪ್ರತ್ಯಕ್ಷ ವಸ್ತುಗಳನ್ನು ಮಾತ್ರ ತೋರಿಸಲು ಶಕ್ಯವಿದೆ. ಒಳನಾಡಿನ ಹಳ್ಳಿಯ ಮಕ್ಕಳಿಗೆ ಆಖಾತ, ಉಪಸಾಗರ, ಸಾಮುದ್ರಧುನಿ, ಸಮುದ್ರ, ಮಹಾಸಾಗರ, ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ತೋರಿಸಲು ಹೇಗೆ ಶಕ್ಯವು? ಅದರಂತೆಯೇ ಸಮುದ್ರತೀರದ ಮಕ್ಕಳಿಗೆ ಒಳದೇಶದಲ್ಲಿ ಬೆಳೆಯುವ ಜೋಳ—ಗೋದಿ—ಹತ್ತಿ ಬೆಳೆಗಳನ್ನು, ಅಲ್ಲಿಯ ಪಶು-ಪಕ್ಷಿಗಳನ್ನು, ಜನರ ಉದ್ಯೋಗಗಳನ್ನು, ದೊಡ್ಡ ದೊಡ್ಡ ಹೊಳೆಗಳನ್ನು, ಪಟ್ಟಣಗಳನ್ನು ತೋರಿಸಲು ಹೇಗೆ ತಾನೆ ಶಕ್ಯವು? ಆದುದರಿಂದ, ಇಂತಹವುಗಳ ಚಿತ್ರ, ನಕಾಶ, ಆಕೃತಿ, ಪಟ, ನಕ್ಷೆ, ಮಾದರಿ (Model), ಇತ್ಯಾದಿಗಳನ್ನು ತೋರಿಸಬೇಕಾಗುವದು. ಇವೆಲ್ಲ ಪ್ರತ್ಯಕ್ಷ ವಸ್ತುಗಳ ಕಲ್ಪನೆಯನ್ನು ಮಾಡಿಕೊಡುವ ಅಪ್ರತ್ಯಕ್ಷ ವಸ್ತುಗಳೇ, ಇವಾದರೂ ಪ್ರತ್ಯಕ್ಷ ವಸ್ತುಗಳ ಕೆಲಸವನ್ನೇ ಮಾಡುತ್ತಿವೆ. ಆದರೆ, ಇವು

ವಸ್ತುಗಳ ನಿಜವಾದ ಕಲ್ಪನೆಯನ್ನು ಮಾಡಿಕೊಡುವಂತಹವೂ ಅಂದಚಂದವಾದಂತಹವೂ ಮಾತ್ರ ಇರಬೇಕು. ಉದಾಹರಣಾರ್ಥವಾಗಿ, ಹಿಂದುಸ್ತಾನದ ಬಾಹ್ಯರೇಷೆಯ ನಕಾಶವು ಶುದ್ಧ ಹಿಂದುಸ್ತಾನದಂತೆಯೇ ಇರಬೇಕು, ಆಫ್ರಿಕದಂತೆ ಇರಕೂಡದು; ಮಕ್ಕಳು ನೋಡಿದೊಡನೆ ಹಿಂದುಸ್ತಾನದ ನಕಾಶವೆಂದೇ ಹೇಳಬೇಕು, ಆದರೆ ಆಫ್ರಿಕದ ನಕಾಶವೆಂದು ಹೇಳಬಾರದು.

ಉಪಕರಣಗಳ ಉಪಯೋಗ

ಪಾಠಕ್ಕೆ ಸಂಬಂಧವಿದ್ದ ಚಿತ್ರಗಳನ್ನಷ್ಟೇ ತೋರಿಸಬೇಕು ಮತ್ತು ತಕ್ಕ ಸಮಯಕ್ಕೆ ತೋರಿಸಬೇಕು. ಚಿತ್ರವನ್ನು ತೋರಿಸುವ ಮೊದಲೇ ಅದರ ಸಲುವಾಗಿ ಮಕ್ಕಳಲ್ಲಿ ಕುತೂಹಲ ಹುಟ್ಟುವಂತೆ ಅವರ ಮನಸ್ಸನ್ನು ಸಜ್ಜುಗೊಳಿಸಬೇಕು. ಚಿತ್ರವನ್ನು ಇಲ್ಲವೆ ಬೇರೆ ಯಾವದಾದರೊಂದು ಉಪಕರಣವನ್ನು ಎಲ್ಲರಿಗೂ ನಿರಾಯಾಸವಾಗಿಯೂ ಸ್ಪಷ್ಟವಾಗಿಯೂ ಕಾಣುವ ಹಾಗೆ ಇಡಬೇಕು ಇಲ್ಲವೆ ತೂಗ ಹಾಕಬೇಕು. ಅದರ ಬಗೆಗೆ ಕೆಲವು ಪ್ರಶ್ನೆಗಳನ್ನು ಕೇಳುವದಿದೆಯಾದುದರಿಂದ ಅದನ್ನು ಜನ್ನಾಗಿ ನಿರೀಕ್ಷಣ ಮಾಡಿರೆಂದು ಮಕ್ಕಳನ್ನು ಎಚ್ಚರಿಸಬೇಕು. ಇದರಿಂದ ಅವರಿಗೆ ಮಾನಸಿಕ ಚಟುವಟಿಕೆ ಸಿಕ್ಕಂತಾಗಿ ಅವರ ಅವಧಾನವು ಅತ್ತಿತ್ತ ಕದಲುವದಿಲ್ಲ. ಪಾಠವಲ್ಲಿ ಒಂದಕ್ಕಿಂತ ಹೆಚ್ಚು ಉಪಕರಣಗಳನ್ನು ತೋರಿಸುವದಿದ್ದಲ್ಲಿ, ಅವುಗಳ ಕ್ರಮವನ್ನು ಮೊದಲೇ ನಿರ್ಧರಿಸಿ ಆ ಕ್ರಮದಂತೆಯೇ ಅವುಗಳನ್ನು ಹೊಂದಿಸಿಟ್ಟುಕೊಳ್ಳಬೇಕು. ಪಾಠವು ನಡೆದಾಗ ಅವುಗಳನ್ನು ಕಿತ್ತಾಡುತ್ತಲೂ ಹುಡುಕುತ್ತಲೂ ಕೂಡ್ರಬಾರದು. ಒಂದು ವೇಳೆ ಹಾಗೆ ಮಾಡಿದರೆ, ವೇಳೆಯ ಅಪವ್ಯಯವಾಗುವದು ಮತ್ತು ಇದಕ್ಕೂ ಹೆಚ್ಚಿನ ಹಾನಿಯೆಂದರೆ ವಿಷಯದ ಮೇಲಿನ ಮಕ್ಕಳ ಅವಧಾನವು ಪೂರಾ ಹೋಗುವದು. ಒಮ್ಮೆ ಹಾರಿ ಹೋದ ಅವಧಾನವನ್ನು ಪುನಃ ಜಗ್ಗಿ ತರುವದು ಬಲು ಪ್ರಯಾಸದ ಕೆಲಸವು. ಕರೀ ಹಲಿಗೆಯೂ ಒಂದು ಉಪಕರಣವಲ್ಲವೇ? ಅದರ ಬಗೆಗೆ ನಾಲ್ಕು ಮಾತುಗಳನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದು:—(೧) ಅದರ ಮೇಲೆ ಜನ್ನಾಗಿ ಬೆಳಕು ಬೀಳುವಂತಹ ಸ್ಥಳದಲ್ಲಿಡಬೇಕು; ಆದರೆ, ಅದು ಮಿಂಚಬಾರದು. (೨) ಎಲ್ಲ ಮಕ್ಕಳಿಗೆ ಅದು ಸ್ಪಷ್ಟವಾಗಿ ಕಾಣಿಸಬೇಕು. (೩) ಶಿಕ್ಷಕ-ಶಿಕ್ಷಕಿಯರು ಅದನ್ನು ಯಾವಾಗಲೂ ತಮ್ಮ ಎಡಕ್ಕೆ ಮಾಡಿಕೊಂಡು ನಿಲ್ಲಬೇಕು. ಹೀಗೆ ಮಾಡಿದರೆ, ಅದರ ಮೇಲೆ ಬರೆಯುವದು ಮತ್ತು ಮಕ್ಕಳ ಮೇಲೆ ಕಣ್ಣಿಡುವದು, ಇವೆರಡೂ ಒಮ್ಮೆಲೇ ಸಾಧಿಸುತ್ತಿವೆ. (೪) ಬರಹವು ದುಂಡಗಿದ್ದು ಅಚ್ಚುಕಟ್ಟಾಗಿರಬೇಕು ಮತ್ತು ಕೆಳಗಿನ ಪಕ್ತಿಗಳಲ್ಲಿ ದೊಡ್ಡಕ್ಷರಗಳಿದ್ದಷ್ಟು ಒಳಿತು. (೫) ಪಾಠವು ನಡೆದಾಗ ಮಕ್ಕಳಿಗೆ ಗೊತ್ತಿಲ್ಲದ ಕೆಲ ಸಂಗತಿಗಳ ಬಗೆಗೆ ತಟ್ಟನೆ ನಾಲ್ಕು ಗೆರೆಗಳನ್ನೆಳೆದು ಆಕೃತಿಯ ಸಹಾಯದಿಂದ ತಿಳಿಸಲನುಕೂಲವಾಗುತ್ತಿದೆ. ಚಿತ್ರಕಲೆಯು ಗೊತ್ತಿದ್ದರಂತೂ ಕಬ್ಬಿನ ಮೇಲೆ ಜೇನಿಟ್ಟಂತೆ. ಕೊನೆಯ ಪಕ್ಷಕ್ಕೆ ಚೂರುಚಾರು ಚಿತ್ರಕಲೆಯು ಗೊತ್ತಿದ್ದರೂ ಸಾಕು. ವಿಶ್ವಾಮಿತ್ರನಂತೆ ಕರೀ ಹಲಿಗೆಯ ಮೇಲೆ ಪ್ರತಿಸೃಷ್ಟಿಯನ್ನೇ ನಿರ್ಮಿಸಬಹುದು. ಶಿಕ್ಷಕ-ಶಿಕ್ಷಕಿಯರಿಗಾಗುವ ಕರೀ ಹಲಿಗೆಯ ಉಪಯೋಗವನ್ನೆಷ್ಟು ಬಣ್ಣಿಸಿದರೂ ಕಡಿಮೆಯೇ. ಅದು ನಿಜವಾಗಿ ಸದಾಕಾಲವೂ ಅವರ ಮಿತ್ರನಂತಿರುತ್ತದೆ.

ಪ್ರಶ್ನೆಗಳು.

ಭೂಗೋಲದಲ್ಲಿ ಪ್ರಶ್ನೋತ್ತರ ಪದ್ಧತಿಯಿಂದಲೂ ಚರ್ಚಾತ್ಮಕ ಪದ್ಧತಿಯಿಂದಲೂ ಬಹಳಷ್ಟು ಕಲಿಸುವದಿರುವದರಿಂದ ಪ್ರಶ್ನೆಗಳ ಬಗೆಗೆ ಇಲ್ಲಿ ವಿವೇಚಿಸುವದು ಅಗತ್ಯವಿದೆ. ಶಿಕ್ಷಕ-ಶಿಕ್ಷಕಿಯರ ಯೋಗ್ಯತೆಯು ಅವರು ಪ್ರಶ್ನೆಗಳನ್ನು ಹಾಕುವ ಶೈಲಿಯ ಮೇಲಿಂದ ಕಂಡು ಹಿಡಿಯಲ್ಪಡುತ್ತಿದೆ. ಪ್ರಶ್ನೆಗಳನ್ನು ಹಾಕುವದೊಂದು ಕಲೆಯಿದೆ. ಆ ಕಲೆಯನ್ನು ಪ್ರತಿಯೊಬ್ಬ ಶಿಕ್ಷಕ-ಶಿಕ್ಷಕಿಯು ಸಾಧಿಸುವದೊಳಿತು. ಈ ಉದ್ದೇಶವನ್ನಿಟ್ಟುಕೊಂಡು ದಿನಾಲು ರೂಢಿಯನ್ನು ಮಾಡಿದರೆ, ಆ ಕಲೆಯು ಕೈವಶವಾಗುವದು ನಿಶ್ಚಿತ. ಅನುಮಾನದ ಪ್ರಶ್ನೆಗಳನ್ನು ಹಾಕಿ ಮಕ್ಕಳ ಮತಗಳನ್ನು ಇಲ್ಲವೆ ನಿರ್ಣಯಗಳನ್ನು ಹೊರಡಿಸಿಕೊಳ್ಳಲು, ಅವರ ವಿಚಾರ ಶಕ್ತಿಯನ್ನು ಕೆಣಕಿ ಮಾನಸಿಕ ಚಟುವಟಿಕೆಯನ್ನು ಹುಟ್ಟಿಸಲು ಮತ್ತು ವಿಷಯ

ದತ್ತ ಅವರ ಅವಧಾನವನ್ನೆಳೆಯಲು ಪ್ರಶ್ನೆಯಷ್ಟು ಉಪಯೋಗವಾಗುವ ಸಾಧನವು ಬೇರೊಂದಿಲ್ಲವೆಂದು ಧೈರ್ಯದಿಂದ ಹೇಳಬಹುದು. ಭೂಗೋಲದಲ್ಲಿಯಂತೂ ಅದರ ಪ್ರಯೋಜನವು ಅಷ್ಟಿಷ್ಟೆಂದು ಹೇಳಲಳವಲ್ಲ. ಆದುದರಿಂದ ಅದರ ಬಗೆಗೆ ನಾಲ್ಕು ಮಾತುಗಳನ್ನು ಹೇಳಬಯಸಲಾಗಿದೆ.

(ಅ) **ಪ್ರಶ್ನೆಗಳನ್ನು ಕೇಳುವಾಗ ಪಾಲಿಸಬೇಕಾದ ಸೂಚನೆಗಳು:**—(೧) ಪ್ರಶ್ನೆಯನ್ನು ಯಾವಾಗಲೂ ಇಡಿಯ ವರ್ಗಕ್ಕೆ ಹಾಕಬೇಕು ಮತ್ತು ವ್ಯಕ್ತಿಗತನಿರ್ದೇಶ ಕೂಡದು. ಇಡಿಯ ವರ್ಗಕ್ಕೆ ಹಾಕಿದರೆ, ಮಕ್ಕಳೆಲ್ಲರೂ ಶಿಕ್ಷಕ-ಶಿಕ್ಷಕಿಯರ ಪ್ರಶ್ನೆಗಳನ್ನು ಲಕ್ಷಗೊಟ್ಟು ಕೇಳುವರು ಮತ್ತು ಎಲ್ಲರ ಅವಧಾನವು ಶಿಕ್ಷಕ-ಶಿಕ್ಷಕಿಯರ ಕೈಯಲ್ಲಿ ಸಿಕ್ಕುತ್ತಿದೆ. ವ್ಯಕ್ತಿಗತವಾಗಿತ್ತೆಂದರೆ, ಉಳಿದ ಮಕ್ಕಳು ತಮಗೆ ಸಂಬಂಧವಿಲ್ಲೆಂದು ತಿಳಿದುಕೊಳ್ಳುವರು ಮತ್ತು ಅವರ ಅವಧಾನವು ಬೇರೆಡೆಗೆ ಹೊರಟಿದ್ದು ಹೋಗುತ್ತಿದೆ. ಒಮ್ಮೆ ಕೈಬಿಟ್ಟು ಹೋದ ಅವಧಾನವನ್ನು ಪುನಃ ಹಸ್ತಗತ ಮಾಡಿಕೊಳ್ಳುವದು ಬಲು ಕಷ್ಟ. (೨) ಪ್ರಶ್ನೆ ಹಾಕಿದ ಮೇಲೆ ಮಕ್ಕಳಿಗೆ ನಿಚಾರ ಮಾಡಲು ಸಾಕಷ್ಟು ವೇಳೆಯನ್ನು ಕೊಡಬೇಕು. ಒಂದು ವೇಳೆ ಸಾಕಷ್ಟು ವೇಳೆಯನ್ನು ಕೊಡದಿದ್ದರೆ, ಮಕ್ಕಳು ವಿಚಾರ ಮಾಡದೆ ಏನಾದರೊಂದು ಉತ್ತರವನ್ನು ಹೇಳುವ ಸಂಭವವಿರುತ್ತದೆ. (೩) ಉತ್ತರ ಹೇಳಲು ಯಾವದಾದರೊಂದು ಮಗುವನ್ನು ಆರಿಸಬೇಕು. ಆ ಮಗುವು ಒಂದು ವೇಳೆ ತಪ್ಪು ಮಾಡಿದ್ದರೆ, ತನ್ನ ತಪ್ಪನ್ನು ತಾನೇ ಸುಧಾರಿಸಿಕೊಳ್ಳುವದೋ ಹೇಗೋ ಎಂಬದನ್ನು ಕಂಡುಕೊಳ್ಳಬೇಕು. ಅದು ಶಕ್ಯವಿಲ್ಲದಿದ್ದರೆ, ಬೇರೆಯವರನ್ನು ಕೇಳಬೇಕು. (೪) ಯಾವದಾದರೊಂದು ಮಗುವು ಅಲಕ್ಷದಿಂದಿದ್ದುದು ಕಂಡು ಬಂದರೆ, ಆ ಮಗುವಿಗೆ ಕೂಡಲೆ ಒಂದು ಪ್ರಶ್ನೆಯನ್ನೊಗೆದು ಅದರ ಅವಧಾನವು ವಿಷಯದತ್ತ ಓಡಿ ಬರುವಂತೆ ಮಾಡಬೇಕು. (೫) ಪ್ರಶ್ನೆಗಳನ್ನು ವರ್ಗದೊಳಗಿನ ಮಕ್ಕಳಿಗೆಲ್ಲ ಶಕ್ಯವಿದ್ದ ಮಟ್ಟಿಗೆ ಸರಿಯಾಗಿ ಹಂಚಬೇಕು. ಧಡ್ಡರಿದ್ದ ಮಕ್ಕಳಿಗೆ ಕೇಳುವದನ್ನು ಬಿಟ್ಟರೆ, ಅವರು ಮತ್ತಷ್ಟು ಧಡ್ಡರಾಗುತ್ತಾರೆ. ಸರಿಯಾದ ಉತ್ತರಗಳನ್ನು ಅವರಿಗೆ ಮತ್ತೊಮ್ಮೆ ಅನ್ನಲು ಕೇಳಬೇಕು. (೬) ಪ್ರಸಂಗವೊದಗಿದಲ್ಲಿ ಪ್ರಶ್ನೆಗಳನ್ನು ನಿಂತ ಕಾಲ ಮೇಲೆಯೇ ಬದಲಿಸುವ ಚೈಚಲಕವು ಶಿಕ್ಷಕ-ಶಿಕ್ಷಕಿಯರಲ್ಲಿರಬೇಕು. ಇದು ವೇ ಅವರ ಯೋಗ್ಯತೆಯನ್ನು ಕಂಡು ಹಿಡಿಯುವ ಒರೆಗಲ್ಲು. (೭) ಪ್ರಶ್ನೆಗಳನ್ನು ಧೈರ್ಯದಿಂದಲೂ ಆತ್ಮವಿಶ್ವಾಸದಿಂದಲೂ ಶಾಂತತನದಿಂದಲೂ ಕೇಳಬೇಕು.

(ಆ) **ಪ್ರಶ್ನೆಗಳು ಎಂತಹವಿರಬೇಕು:**— (೧) ಅವು ಮಕ್ಕಳ ವಿಚಾರಶಕ್ತಿಯನ್ನು ಕೆರಳುವಂತಹವಿರಬೇಕು. ಇದರಿಂದ ಮಕ್ಕಳಲ್ಲಿ ಮಾನಸಿಕ ಚಟುವಟಿಕೆಯುಂಟಾಗಿ ವಿಷಯದತ್ತ ಅವರ ಅವಧಾನವು ಜಗ್ಗಲ್ಪಡುವದುಂಟು. (೨) ಅವು ಮಕ್ಕಳ ಅನುಭವಕ್ಕೂ ಬುದ್ಧಿಶಕ್ತಿಗೂ ನಿಲುಕುವಂತಹವುಗಳಿರಬೇಕು. ಅವರಿಗೆ ನಿಲುಕದ ಪ್ರಶ್ನೆಗಳನ್ನು ಕೇಳಿದರೆ, ಅವರ ಉತ್ಸಾಹವು ಹೊರಟಿದ್ದು ಹೋಗಬಹುದಲ್ಲವೇ ? (೩) ಅವು ಸ್ಪಷ್ಟವಾಗಿರಬೇಕು ಮಕ್ಕಳನ್ನು ವಿನಾಕಾರಣ ಗೊಂದಲದಲ್ಲಿ ಹಾಕುವಂತಹವುಗಳಿರಕೂಡದು. ಒಂದೇ ಉತ್ತರ ಹೊರಡುವಂತಹವುಗಳಿರಬೇಕು.

(ಇ) **ಪ್ರಶ್ನೆಗಳು ಎಂತಹವಿರಬಾರದು:**—(೧) ಪ್ರತಿಧ್ವನಿಯ ಪ್ರಶ್ನೆಗಳಿರಬಾರದು. ಒಂದು ಸಂಗತಿಯನ್ನು ಹೇಳಿದ ಕೂಡಲೆ ಅದರ ಬಗೆಗೊಂದು ಪ್ರಶ್ನೆಯನ್ನು ಕೇಳುವ ಚಟವು ಕೆಲವು ಶಿಕ್ಷಕ—ಶಿಕ್ಷಕಿಯರಲ್ಲಿದ್ದುದು ಕಂಡು ಬರುವದುಂಟು. ಉದಾಹರಣಾರ್ಥವಾಗಿ, "ಪೃಥ್ವಿಯು ದುಂಡಗಿದೆ" ಎಂದು ಹೇಳಿದ ಕೂಡಲೆ "ಪೃಥ್ವಿಯು ಹೇಗಿದೆ!" ಎಂದು ಕೇಳುವರು. ಮಕ್ಕಳು "ಪೃಥ್ವಿಯು ದುಂಡಗಿದೆ" ಎಂದು ಹೇಳುವರು. ಮೊದಲು ಹೇಳಿದುದರ ಪ್ರತಿಧ್ವನಿಯಾದಂತಾಯಿತು. ಇದರಲ್ಲಿ ವಿಚಾರಕ್ಕೆ ಅವಕಾಶವೇ ಉಳಿಯಲಿಲ್ಲ. ಆದುದರಿಂದ ಇಂತಹ ಪ್ರಶ್ನೆಗಳನ್ನು ಕೇಳಬಾರದು. (೨) ಅರ್ಧೋಕ್ತಿಗಳನ್ನು ಪೂರ್ಣ ಮಾಡುವ ಪ್ರಶ್ನೆಗಳಿರಬಾರದು. ಉದಾಹರಣಾರ್ಥವಾಗಿ, "ದಿಲ್ಲಿಯು ಭಾರತದ — ಏನಿದೆ ?" ಗಂಗೋತ್ರಿಯು ಗಂಗಾ ನದಿಯ —?" ಇಂತಹ ಪ್ರಶ್ನೆಗಳನ್ನು ಕೇಳುವ ಚಟವು ಕೆಲ ಶಿಕ್ಷಕ — ಶಿಕ್ಷಕಿಯರಿಗೆ ಅಂಟಿಕೊಂಡಿದುದು ಕಂಡು ಬರುತ್ತದೆ. ಇಲ್ಲಿಯ

ುಕ್ಕಳಿಗೆ ವಿಚಾರ ಮಾಡಲು ಸಾಕಷ್ಟು ಅವಕಾಶವಿಲ್ಲ. ಾದುದರಿಂದ ಇಂತಹವುಗಳನ್ನು ಕೇಳುವದರಿಂದೇನು ಲ? (೩)' ಹೌದು" ಅಥವಾ "ಅಲ್ಲ" ಎಂಬ ಉತ್ತರ ುರವ ಪ್ರಶ್ನಗಳನ್ನು ಕೇಳಕೂಡದು ಯಾಕಂದರೆ ಇಲ್ಲಿಯೂ ಮಕ್ಕಳ ವಿಚಾರಕ್ಕೆ ಅವಕಾಶವೇ ಇಲ್ಲ. ಒಂದು ೀಳಿ ಕೇಳುವ ಪ್ರಸಂಗ ಬಂದರೆ, ಆದರ ಮುಂದಿನ ಪ್ರಶ್ನವು "ಏಕೆ?" ಎಂದು ಇರಲೇಬೇಕು. ಉದಾ ಹರಣಾರ್ಥವಾಗಿ, "ಚೆರಾಪುಂಜಿಯಲ್ಲಿ ವರುಷಕ್ಕೆ ೫೦೦ ಇಂಚು ಮಳೆ ಬೀಳುವದಲ್ಲವೇ?" ಈ ಪ್ರಶ್ನಕ್ಕೆ "ಹೌದು" ಎಂದು ಉತ್ತರ ಬಂದ ಕೂಡಲೆ "ಏಕೆ?" ಎಂಬ ಪ್ರಶ್ನೆಯನ್ನು ಕೇಳಲಿಕ್ಕೇ ಬೇಕು. ಯಾಕಂದರೆ, ಈ ಪ್ರಶ್ನದಿಂದ ಮಕ್ಕಳಿಗೆ ಅಲ್ಲಿ ಅಷ್ಟು ಬಹಳ ಮಳೆ ಬೀಳುವದರ ಕಾರಣ ಗಳಿಲ್ಲ ಗೊತ್ತಾಗಿದ್ದುದು ಕಂಡು ಬರುತ್ತದೆ.

ಉತ್ತರಗಳು.

ಪ್ರಶ್ನಗಳ ಬಗೆಗೆ ಹೇಳಿದ ಮೇಲೆ, ಉತ್ತರಗಳ ುಗೆಗೂ ನಾಲ್ಕೂ ಮಾತುಗಳನ್ನು ಹೇಳಬೇಕಾಗುತ್ತಿದೆ- ುಲ್ಲವೇ ? ಯಾಕಂದರೆ, ಇವೆರಡೂ ಒಂದನ್ನು ಬಿಟ್ಟು ಂದು ಇರುವಹಾಗಿಲ್ಲ. ಪ್ರಶ್ನಗಳನ್ನು ಕೇಳುವದು ೀಗೆ ಒಂದು ಕಲೆಯಿದೆಯೋ ಹಾಗೆಯೇ ಮಕ್ಕಳ ಕಡೆಯಿಂದ ಸರಿಯಾದ ಉತ್ತರಗಳನ್ನು ಉತ್ತರಗಳನ್ನು ಕೊಳ್ಳುವದೂ ಸ್ವೀಕರಿಸುವದೂ ಒಂದು ಕಲೆಯಿದೆ. ಈ ಕಲೆಯನ್ನು ಸಾಧಿಸಿ ಹಸ್ತಗತ ಮಾಡಿಕೊಳ್ಳಲು ುಂದಿನ ಹಲವು ಸೂಚನೆಗಳು ಶಿಕ್ಷಕ-ಶಿಕ್ಷಕಿಯರಿಗೆ ಸಹಾಯಕವಾಗುವವೆಂದು ನಂಬಲಾಗಿದೆ. (೧) ಉತ್ತರವು ಪೂರ್ಣ ವಾಕ್ಯದಲ್ಲಿರಬೇಕು. ಕೆಳಗಿನ ವರ್ಗ ಗಳಲ್ಲಿ ಇದು ಅತ್ಯವಶ್ಯವು. (೨) ಅದು ಶುದ್ಧ ಭಾಷೆ- ಯಲ್ಲಿರಬೇಕು. ಗ್ರಾಮ್ಯ ಶಬ್ದಗಳನ್ನು ವಯೋಗಿಸಲು ಶಕ್ಯವಿದ್ದ ಮಟ್ಟಿಗೆ ಕೂಡಬಾರದು. (೩) ಒಮ್ಮೊಮ್ಮೆ ಶಿಕ್ಷಕ-ಶಿಕ್ಷಕಿಯರು ಮನಸಿನಲ್ಲಿ ಇಂತಹದೇ ಉತ್ತರ ಬರಬೇಕೆಂದು ಸಂಕಲ್ಪ ಮಾಡಿಕೊಂಡು ಪ್ರಶ್ನವನ್ನು ಕೇಳುತ್ತಾರೆ. ಆದರೆ, ಅವರ ಪ್ರಶ್ನಕ್ಕೆ ಎಷ್ಟೋ ಉತ್ತರಗಳು ಹೊರಡುತ್ತಿರುತ್ತಿವೆ. ಇವುಗಳ ಕಡೆಗೆ ಅವರ ಗಮನವಿರುವದಿಲ್ಲ. ತಮ್ಮ ಮನಸಿನಲ್ಲಿದ್ದ ಉತ್ತರವು ಬರದೆ ಬೇರೆ ಉತ್ತರಗಳು ಬಂದರೆ, ಅವು ಸರಿ ಇದ್ದರೂ ಕೂಡಾ ತಪ್ಪೆಂದು ನಿರ್ಣಯ ಕೊಟ್ಟು ಮಕ್ಕಳನ್ನು ಇಲ್ಲದ ಸಲ್ಲದ ಗೊಂದಲದಲ್ಲಿ ನೂಕಿಬಿಡುವ ದುಂಟು ! ಇದು ಶುದ್ಧ ತಪ್ಪು. ಸರಿ ಇದ್ದ ಉತ್ತರ- ಗಳನ್ನೆಲ್ಲ ಶಿಕ್ಷಕ-ಶಿಕ್ಷಕಿಯರು ಸ್ವೀಕರಿಸಲೇಬೇಕು. (೪) ಮಗುವಿನ ತಪ್ಪನ್ನು ಆದಷ್ಟು ಆ ಮಗುವಿನ ಕಡೆ- ಯಿಂದಲೇ ತಿದ್ದಿಸಬೇಕು. ಅದು ಶಕ್ಯವಾಗದಿದ್ದರೆ, ಬೇರೆ ಮಕ್ಕಳ ಕಡೆಯಿಂದ ತಿದ್ದಿಸಬೇಕು. ಅದೂ ಶಕ್ಯವಾಗದಿದ್ದರೆ, ಕೊನೆಗೆ ಶಿಕ್ಷಕ-ಶಿಕ್ಷಕಿಯರು ತಿದ್ದ- ಬೇಕು. ಶಿಕ್ಷಣ ಶಾಸ್ತ್ರದಲ್ಲಿ ಇದು ಸ್ವಾಭಾವಿಕ ಕ್ರಮವು. ಈ ಕ್ರಮವನ್ನು ಪಾಲಿಸದೆ, ಶಿಕ್ಷಕ-ಶಿಕ್ಷಕಿಯರು ಒಮ್ಮೆಲೆ ತಾವೇ ತಿದ್ದಲು ಆತುರರಾಗಿಬಾರದು. (೫) ಮಕ್ಕಳ ತಪ್ಪನ್ನು ಅವರ ಮನಸಿಗೆ ಹತ್ತದಂತೆ ಯುಕ್ತಿಯಿಂದ ತಿದ್ದಬೇಕು. ಮೇಲಿನ ವರ್ಗಗಳಲ್ಲಿ ಇದು ಅತ್ಯವಶ್ಯವು. ಒಮ್ಮೆ ಮನಸಿಗೆ ಹತ್ತಿತೆಂದರೆ, ನಿರುತ್ಸಾಹಕ್ಕಾಗಿ ಉತ್ತರಗಳನ್ನೇ ಕೊಡುವದಿಲ್ಲ. (೬) ಸಮರ್ಪಕ ಉತ್ತರಗಳನ್ನು ಕೊಟ್ಟ ಮಕ್ಕಳಿಗೆ ಪ್ರೋತ್ಸಾಹನ ಕೊಡ ಬೇಕು. ಇದರಿಂದ ಉಳಿದವರೂ ಯೋಗ್ಯ ಉತ್ತರ- ಗಳನ್ನು ಕೂಡಲು ಹವಣಿಸುವದುಂಟು. ಕೆಳಗಿನ ವರ್ಗಗಳಲ್ಲಿ ಚಪ್ಪಾಳೆ ಹಾಕಿಸುವ ರೂಢಿಯು ನೆಲಸಿದೆ. ಮೇಲಿನ ವರ್ಗಗಳಲ್ಲಿ 'ವಾಹವ್ವಾ' ಶಾಬಾಸ್ ಮುಂತಾದ ವ್ಯಂಜನಪರ ಉದ್ಗಾರಗಳನ್ನು ಹೊರಡಿಸುತ್ತಿರಬೇಕು. ಪಾಠದಲ್ಲಿ ಮಕ್ಕಳ ಸಹಕಾರವು ಅವಶ್ಯವಿದೆಯಲ್ಲವೇ? ಚಲೋ ಉತ್ತರಗಳನ್ನು ಹೊಗಳಿದರೆ, ಮಕ್ಕಳ ಸಹ- ಕಾರವು ದ್ವಿಗುಣಿತವಾಗುವದೆಂಬ ಮಾತನ್ನು ಹೇಳು- ವದೇ ಬೇಡ.

(ಮುಂದುವರಿಯುವದು.)

ನೂಲಿನ ಶಕ್ತಿಯ ಒಂದು ಶಾಸ್ತ್ರೀಯ ದೃಷ್ಟಿ

[ಮೈ! ಡೈರೆಕ್ಟರ ಆಫ್ ಎಜ್ಯುಕೇಶನ್ ಅವರ ನಂ. O. D. (ಬೇಸಿಕ್) ೧—೪—೧೯೩೭ ಆಜ್ಞೆಯ ಮೇರೆಗೆ ೧೯೩೭ ಮಾರ್ಚ್ ತಿಂಗಳದ ಮುಂತಾದ ಪ್ರಾಥಮಿಕ ಶಿಕ್ಷಣದಲ್ಲಿ ಶ್ರೀ ಎಸ್. ಎಂ. ಖುಂಬಾತ ಅವರು ಬರೆದ ಲೇಖನದ ಭಾಷಾಂತರವನ್ನು ಇಲ್ಲಿ ಕೊಡಲಾಗಿದೆ. ಮೂಲೋದ್ಯೋಗದ ಶಿಕ್ಷಕರೂ ಬೇಸಿಕ್ ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿ-ಶಿಕ್ಷಕರೂ ಬೇಸಿಕ್ ಶಾಲೆಗಳ ಶಿಕ್ಷಕರೂ ಈ ಲೇಖನದಲ್ಲಿ ಅಡಕವಾದ ತತ್ವಗಳನ್ನು ಮನಸಟ್ಟು ಮಾಡಿಕೊಂಡು ನೂಲುವ ಕ್ರಿಯೆಯನ್ನು ಸಶಾಸ್ತ್ರೀಯವಾಗಿ ನಡೆಸುವರೆಂದು ನಂಬಲಾಗಿದೆ. —ಪ್ರ. ಸಂ.]

ಅನುವಾದಕ:—**ಶ್ರೀ. ಗುಂ. ವಿ. ಅಣ್ಣಾನಾಯಕ**, ಧಾರವಾಡ.

೧೯೨೦ನೆಯ ಇಸವಿಯಿಂದ ಖಾದಿಯನ್ನು ಧರಿಸುವ ಕುರಿತು ಬಹಳೇ ಜನರು ನೂಲುವದಕ್ಕಾಗಿ ರಾಟೆಗಳನ್ನು ಕೊಂಡಿರುತ್ತಾರೆ ಮತ್ತು ತಮ್ಮ ಬೆಲೆಯುಳ್ಳ ವೇಳೆಯನ್ನು ಸಹ ವೆಚ್ಚಮಾಡುತ್ತಿರುತ್ತಾರೆ. ಆದರೆ ಕೈನೂಲಿನ ಶಕ್ತಿಯು ಗಿರಣಿಯ ನೂಲಿಗಿಂತ ಕಡಿಮೆ ಇರುವದೆಂದು ನೇಯಿಗೆಯ ಕೂಲಿಯನ್ನು ಹೆಚ್ಚಿಗೆ ಕೊಡಬೇಕಾದುದರಿಂದ ಖಾದಿಯು ತುಟ್ಟಿಯಾಗುವದು ಮತ್ತು ಬಹಳಷ್ಟು ಕೈನೂಲು ನೇಯಿಗೆಗೆ ನಿರುಪಯೋಗಿಯಾಗುವದು. ಹೀಗಾಗಿ ನೂಲುವವರು ನಿರುತ್ಸಾಹಗೊಂಡು ನೂಲುವದನ್ನೇ ಬಿಟ್ಟಿದ್ದಾರೆ.

"ಇಂತಹ ನೂಲನ್ನು ಆನಂದದಿಂದ ಸ್ವೀಕರಿಸುವೆವು"

ಆದರೆ ಕೆಲವರ ಕೈನೂಲನ್ನು ನೇಕಾರರು ಬಹಳೇ ಸಂತೋಷದಿಂದ ನೇಯುವರು ಏಕೆಂದರೆ ಗೃಹಸ್ಥನ ಕೈನೂಲು ಅವನ ಹತ್ತು ಕಾರ ಅರಿವೆಯ ನೇಯಿಗೆಯ ಅವಧಿಯಲ್ಲಿ ಕೇವಲ ನಾಲ್ಕೇ ಸಲ ಹರಿದಿರಬಹುದು ಆಗ ನೇಕಾರನು, "ಇಂತಹ ಉತ್ತಮವಾದ ಕೈನೂಲನ್ನು ನಾವು ಗಿರಣಿಯ ನೂಲಿನ ನರದಿಂದ ಆತ್ಯಾನಂದದಿಂದ ನೆಯ್ದು ಕೊಡುವೆವು" ಎಂದು ಹುರುಪಿನಿಂದ ಹೇಳಿದನು. ಈ ಮಾತು ಒಬ್ಬಿಬ್ಬರ ಕೈನೂಲಿನ ಬಗೆಗೆ ಶಕ್ಯವಾಗುವದು. ಆದರೆ ಅದರ ಕಾರಣಗಳನ್ನು ಹುಡುಕಿ ತೆಗೆದು ಶಾಸ್ತ್ರವನ್ನೇಕೆ ನಿರ್ಮಿಸಲು ಬರುವದಿಲ್ಲ?

ಈಗ ಎಷ್ಟೋ ಶಾಲೆ-ಕಾಲೇಜುಗಳಲ್ಲಿ ರಾಟೆಯ ರಾಜ್ಯವು ಸಾಗಿದೆ. ಸರಕಾರದ ವೆಚ್ಚದಿಂದ ರಾಶಿ ತಕಲಿಗಳು ಗರಗರ ತಿರುಗಹತ್ತಿವೆ. ಆದರೆ ನಮ್ಮಲ್ಲಿ ಇನ್ನೂ ಶಾಸ್ತ್ರೀಯ ದೃಷ್ಟಿಯು ಬಂದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಶಾಲೆ-ಕಾಲೇಜುಗಳಲ್ಲಿ ಎಷ್ಟು ಮಣ ಹತ್ತಿಯ ಖರೀದಿಯಾಯಿತು? ಅದರಿಂದ ಎಷ್ಟು ಮಣ ನೂಲು ಹೊರಟಿತು? ಆ ನೂಲಿನಿಂದ ಎಷ್ಟು ವಾರ ಅರಿವೆಯ ಹುಟ್ಟುವಳಿಯಾಯಿತು? ಹೀಗೆ ಕೇವಲ ಅಂಕಿ ಸಂಖ್ಯೆಗಳ ಕಡೆಗೆ ಎಲ್ಲರ ಲಕ್ಷ್ಯವಿದೆ. ಆದರೆ ಕೇವಲ ಅಂಕಿ ಸಂಖ್ಯೆಗಳಿಂದ ಖಾದಿಯ ಹುಟ್ಟುವಳಿಯ ಕೆಲಸವು ಪೂರ್ಣವಾಗಲಾರದು. ಶಾಲೆ-ಕಾಲೇಜುಗಳಲ್ಲಿ ನೂಲಿಸಿಕೊಳ್ಳುವವರಲ್ಲಿ ಕೈನೂಲಿನ ಬಟ್ಟೆಯ ವಿಶಾಲದೃಷ್ಟಿಯ ಜತೆಗೆ ಶಾಸ್ತ್ರೀಯ ದೃಷ್ಟಿಯೂ ಅತ್ಯವಶ್ಯವಾಗಿ ಬೇಕು. ಇದೆ ಇಂದು ನಮ್ಮಲ್ಲಿ ಕಂಡು ಬರುವ ದೊಡ್ಡ ದೋಷವು ಇದೇ ವಾಸ್ತವಿಕತೆಯಲ್ಲಿಯೂ ಮತ್ತು ನಮ್ಮಲ್ಲಿಯ ಇದ್ದ ದೊಡ್ಡ ಅಂತರವು ಈ ಮಾನವಸ್ತ್ರಸ್ವಾವಲಂಬಿಗಳಿಗೂ ಅನ್ವಯಿಸುವದು. ಈಗ ಸರಕಾರದವರು ಮನಸ್ವಾವಲಂಬಿಗಳಿಗೆ ನೇಯಿಗೆಯ ವೆಚ್ಚದ ಕೆಲ ಭಾಗವನ್ನು ಕೊಡಲು ಗೊತ್ತುಮಾಡಿದ್ದಾರೆ. ಆದರೆ ನೂಲುವವರಲ್ಲಿ ಶಾಸ್ತ್ರೀಯ ದೃಷ್ಟಿಯು ಬರದಿದ್ದರೆ ಮತ್ತು ಕೈನೂಲಿನಲ್ಲಿ ಸುಧಾರಣೆಯಾಗದಿದ್ದರೆ ಸರಕಾರ

ಸಹಾಯ ಧನವು ನಿಂತೊಡನೆ ಖಾದಿಯ ಹೆಸರು ಕೇವಲ ಇತಿಹಾಸದಲ್ಲಿ ಉಳಿಯುವದು. ಆದುದರಿಂದ ನೂಲುವವರೆಲ್ಲರೂ ಶಾಸ್ತ್ರೀಯ ದೃಷ್ಟಿಯ ಕಡೆಗೆ ವಿಶೇಷ ಗಮನ ಕೊಡಬೇಕು. ನಮ್ಮಲ್ಲಿ ರಾಷ್ಟ್ರೀಯ ಭಾವನೆಯು ತುಂಬಿ ತುಳಕುವದು; ಆದರೆ ಒಂದು ಕೆಲಸವನ್ನೂ ದೃಢನಿಶ್ಚಯದಿಂದಲೂ, ಶಿಸ್ತಿನಿಂದಲೂ ಮುಗಿಸುವದಿಲ್ಲ. ನಾವು ಕೇವಲ ಭಾವನಾಪ್ರಧಾನರಾಗಿ ಆರಂಭಶೂರರಾಗುತ್ತೇವೆ. ಆ ಕೈಕೊಂಡ ಕೆಲಸವನ್ನು ಉತ್ತಮ ರೀತಿಯಿಂದ ಮುಗಿಸುವ ಗುಣದ ಕೊರತೆಯು ಇದೆ. ಶಾಲೆ-ಕಾಲೇಜುಗಳಲ್ಲಿ ಖಾದಿಯ ಕೆಲಸವನ್ನು ತೆಗೆದುಕೊಳ್ಳಲು ಶಿಕ್ಷಕರೂ, ಅಧಿಕಾರಿಗಳೂ ಇದ್ದಾರೆ. ಅವರು ಇತ್ತ ಕಡೆಗೆ ಅವಶ್ಯವಾಗಿ ಗಮನ ಕೊಡಬೇಕು. ಎಲ್ಲರಿಗೂ ಸಹಾಯವಾಗಲೆಂದು ಆ ಶಾಸ್ತ್ರೀಯ ದೃಷ್ಟಿಯನ್ನು ಈ ಬರಿಹದಲ್ಲಿ ಕೊಡುವ ಪ್ರಯತ್ನ ಮಾಡಿದೆ.

ಉತ್ತಮ ನೂಲು ಅಂದರೇನು?

ಸಾಮಾನ್ಯವಾಗಿ ಉತ್ತಮ ನೂಲಿನ ಬಗ್ಗೆ ಇಂದಿನ ಕಲ್ಪನೆಯು:—ನೂಲು ಉತ್ತಮ ಹಾಗು ಜಿನಗು ಹೊರಡಬೇಕೆಂದು ಸಾವಕಾಶವಾಗಿ ಕೈಯಿಂದ ಎಳೆದು ಅದಕ್ಕೆ ಮೂಲಜಕ್ಕಿನ ಎರಡು, ಮೂರು ಸುತ್ತುಗಳ ಹುರಿಕೊಟ್ಟು ಅದನ್ನು ಗಟ್ಟಿ ಮಾಡುವರು ಇದೇ ಉತ್ತಮ ನೂಲಿನ ಬಗೆಗೆ ಇದ್ದ ಬಹುಜನರ ತಿಳವಳಿಕೆಯು. ಆದರೆ ಈ ಕಲ್ಪನೆಯು ಅಶಾಸ್ತ್ರೀಯವೆಂಬುದು ಹೇಗೆ, ನೋಡುವಾ. ನಂತರ ಹುರಿಕೊಟ್ಟ ನೂಲಿನಲ್ಲಿ ಎರಡು ಭೇದಗಳು ಒಡೆದು ಕಾಣುತ್ತವೆ. ನಂತರ ಸಂಪೂರ್ಣ ಹುರಿಹಾಕಿದ್ದು ಒಂದು; ನಂತರ ಸ್ವಲ್ಪ ಹುರಿ ಕೊಟ್ಟದ್ದು ಮತ್ತೊಂದು. ನಂತರ ಹುರಿಕೊಟ್ಟ ನೂಲಿನಲ್ಲಿ ಅಸಮಾನತೆ, ಹುರಬರಕುತನ ಪಿಸುಕುತನ ಇವುಗಳಲ್ಲಿಯ ಒಂದಾಗಲಿ ಅಥವಾ ಹಲವಾಗಲಿ ದೋಷಗಳು ಹುಟ್ಟುತ್ತವೆ. ನೂತ ಬಳಿಕ ಕೊಟ್ಟ ಹುರಿಯ ಮೂಲಕವೇ ಈ ದೋಷಗಳು ಆಗುವವು ಎಂಬುದನ್ನು ಮುಂದಿನ ಬರಿಹವನ್ನು ಓದಿದ ಬಳಿಕ ಲಕ್ಷಕ್ಕೆ ಬರುವದು.

ಸಾವಕಾಶವಾಗಿ ನೂಲು ತೆಗೆದು ಬಳಿಕ ಅದನ್ನು ಗಟ್ಟಿಮಾಡುವ ಕುರಿತು ಹುರಿ ಕೊಡುವಾಗ, ನೂಲುವನ ಎದುರಿಗೆ ಮುಂದಿನ ಕಲ್ಪನೆಯು ಇರುವದು:— ನೂಲು ಎಂದರೆ ತಂತುಗಳ ವಿಶಿಷ್ಟ ಗಾತ್ರ ಮತ್ತು ಆ ಗಾತ್ರಕ್ಕೆ ಗಟ್ಟಿತನಕ್ಕೆ ಹುರಿಕೊಡುವದು. ಆದುದರಿಂದ ನೂಲುವವನು ಒಳ್ಳೆಯ ಆಸ್ಥೆಯಿಂದ ತನ್ನ ನೂಲಿಗೆ ಹುರಿಕೊಡುವನು. ಆದರೆ ಇಷ್ಟರಿಂದಲೇ ನೂಲು ತಯಾರಾಗಲಾರದು. ನೂಲಿನ ಕಲ್ಪನೆಯಲ್ಲಿ ತಂತುಗಳ ಯೋಗ್ಯ ಹೊಂದಿಕೆಗೆ ಮಹತ್ವವುಂಟು.

ನೂಲಿನ ಶಕ್ತಿಯು ತಂತುವಿನ ಸ್ವಾಭಾವಿಕ ಹುರಿ, ಹುರಬರಕುತನ, ಜಿಗಟುತನ, ಉದ್ದಳತೆ ಮತ್ತು ಗಾತ್ರ ಈ ಎಲ್ಲ ಸಂಗತಿಗಳನ್ನು ಅವಲಂಬಿಸಿದೆ.

ಬಳಿಕ ಕೊಟ್ಟ ಹುರಿಯು ವ್ಯರ್ಥ.

ಪತ್ತಿಯು ತಯಾರಾಗುವಾಗ ಪತ್ತಿಯ ಗಿಡದಿಂದ ತಂತುವಿನ ಪೋಷಣೆಗಾಗಿ ದ್ರವರೂಪವಾದ ಪದಾರ್ಥವು ಪ್ರತಿಯೊಂದು ತಂತುವಿನೊಂದಿಗೆ ಹರಿದಾಡುತ್ತಿರುತ್ತದೆ. ಅದರ ಪ್ರಮಾಣಕ್ಕನುಸರಿಸಿ ತಂತುವಿನ ಕೊಳವೆಯು ಪೊಳ್ಳಾಗಿರುತ್ತದೆ. ಇದರಿಂದಲೇ ತಂತುವಿನಲ್ಲಿ ಕೇಶಾಕರ್ಷಣ ಶಕ್ತಿಯುಂಟು. ಪತ್ತಿಯು ಸಿದ್ಧವಾದ ಬಳಿಕ ಈ ದ್ರವ ಪದಾರ್ಥವು ಹೋಗುವ ದಾರಿಯು ಕಟ್ಟಾಗುವದರಿಂದ ತಂತುವಿಗೆ ಸಹಜವಾಗಿಯೇ ಸ್ಪ್ರಿಂಗಿನ ಒಲವು ಬರುವದು. ನೂಲುವಾಗ ಈ ಒಲವು ಒಂದಕ್ಕೊಂದು ತೊಡಕಿಕೊಳ್ಳುವ ಮತ್ತು ಎಷ್ಟು ತಂತುಗಳನ್ನು ಹೊಂದಿಸಬೇಕೆಂಬುವ ನಿಯಂತ್ರಣ ಮಾಡಲು ಅನುಕೂಲವಾಗುವದು.

ಹಂಜಿಯ ಮೇಲಿನ ಬೆರಳುಗಳು ಚಿಮಟಿಗೆಯಿಂದ ಇದೇ ವೇಳೆಗೆ ಅವಶ್ಯಕತೆಗೆ ಅನುಸರಿಸಿ ಹುರಿ ಕೊಡಬೇಕಾಗುವದು. ನೂಲು ಸಿದ್ಧವಾದ ಬಳಿಕ ಈ ಕ್ರಿಯೆಯಲ್ಲಿ ಮತ್ತೆ ಯಾವ ವಿಶೇಷ ಬದಲಾವಣೆಯಾಗುವದಿಲ್ಲ. ಆರಂಭಕ್ಕೆ ನೂಲು ಪೊಳ್ಳಾಗಿರುವದರಿಂದ ಅದು ಉಡುಗುವದು ಮತ್ತು ತುಂಬಿಕೊಳ್ಳುವದು ಅಂದರೆ ತಂತುವಿನ ಶಕ್ತಿಯ ಮೇಲೆ ಭಾರ ಬೀಳುವದು. ಈ ಎರಡೂ ಸಂಗತಿಗಳು ನೂಲಿಗೆ ಪೋಷಕವಿಲ್ಲ. ಆದುದರಿಂದ ಬಳಿಕ ಕೊಟ್ಟ ಹುರಿಯು ವ್ಯರ್ಥವಾದುದು. ಬಳಿಕ ಕೊಟ್ಟ ಹುರಿಯು ನೂಲನ್ನು ಹುರುಬರಕು ಮಾಡುತ್ತದೆ ಮತ್ತು ಆ ಹುರಿಯು ಎಳೆಯ ಮುಖಾಂತರ ಹಂಜಿಯಲ್ಲಿ ಪ್ರವೇಶಿಸುತ್ತದೆ. ಇಂತಹ

ಸಂದರ್ಭದಲ್ಲಿ ಹಂಜಿಯ ಹಿಡಿತವನ್ನು ಸಡಿಲಿಸಿ ನೂಲನ್ನು ಎಳೆಯಬೇಕಾಗುವದು. ಅರ್ಥಾತ್ ಹುರಿಯ ಪ್ರಮಾಣಕ್ಕನುಸರಿಸಿ ಆರಂಭಕ್ಕೆ ಗಡುತರ ನೂಲು ಹೊರಟು, ಬಳಿಕ ಅದನ್ನು ಜಿನಗು ಮಾಡುವದಕ್ಕಾಗಿ ಯತ್ನಿಸಬೇಕಾಗುವದು. ಈ ಪ್ರಯತ್ನದಿಂದ ನೂಲಿಗೆ ನೈಸರ್ಗಿಕ ದುಂಡುತನ ಬರುವದೇ ಸಾಧ್ಯವಿಲ್ಲ. ಕೈ ಎಳೆತಕ್ಕನುಸರಿಸಿ ಅದು ಗಡುತರ-ಜಿನಗು ಮತ್ತು ಹುಸಬರಕು ಆಗುತ್ತದೆ. ನೂಲಿನ ಶಕ್ತಿಯು ಮುಖ್ಯವಾಗಿ ಅದರ ದುಂಡುತನದ ಸಮಾನತೆಯನ್ನು ಅವಲಂಬಿಸಿರುತ್ತದೆ. ನೂಲಿನ ನಂಬರಿಗನುಸರಿಸಿ ಒಂದು ಇಂಚಿನಲ್ಲಿ ಯಾವ ಪ್ರಮಾಣದಿಂದ ಹುರಿಯು ಬೀಳಬೇಕಾಗಿದೆಯೋ ಆ ಮಾತೇ ಉಳಿಯುವದಿಲ್ಲ. ಯಾಕಂದರೆ ಪ್ರತಿ ಇಂಚಿಗೆ ನೂಲು ಉರಟು-ಜಿನಗು ಆಗುತ್ತ ಹೋದರೆ ನೂಲು ಅಶಕ್ತವಾಗುವದು. ನೇಯುವಾಗ ಇಂತಹ ಹುರಬರಕು ನೂಲಿನಿಂದ ಹಣಿಗೆಯಲ್ಲಿ ಬಹಳೇ ಘರ್ಷಣೆಯಾಗುವದು. ಇದರಿಂದ ನೇಕಾರನು ಬೇಜಾರಪಡುವನು, ನಿರುತ್ಸಾಹಿಯಾಗುವನು. ಈ ಎಲ್ಲ ದೋಷಗಳ ಮೂಲಕ ನೇಯಿಗೆಯ ಕೂಲಿಯನ್ನು ಬಹಳೇ ಕೊಡುವ ಪಂಡವು ನೂಲುವವನ ಮೇಲೆ ಬೀಳುವದು. ಇಂತಹ ಕೈನೂಲಿನಿಂದ ತಯಾರಿಸಿದ ಬಟ್ಟೆಯೂ ನಿರ್ಜೀವವಾಗುವದು.

ಉತ್ತಮ ನೂಲನ್ನು ತಯಾರಿಸುವದೆಂತು ?

ಈಗ ನಾವು ಉತ್ತಮ ನೂಲನ್ನು ಹೇಗೆ ತಯಾರಿಸಬೇಕೆಂಬುದನ್ನು ನೋಡುವಾ. ನೂಲು ಸಶಕ್ತವಾಗಿಯೂ, ವೇಗ ಪೂರ್ವಕವಾಗಿಯೂ ಹೊರಡಬೇಕಾದರೆ ನೂಲುವ ಸಾಧನವಾದ ರಾಟೆಯು ಸರಿಯಾದುದು ಇರಬೇಕು. ಈಗ ರೂಢಿಯಲ್ಲಿದ್ದ ಕೆಸಾನ ರಾಟೆ ಅಥವಾ ಯರವಡಾ ರಾಟೆಯನ್ನು ತೆಗೆದುಕೊಳ್ಳುವಾ. ಕೆಸಾನ ರಾಟೆಯಲ್ಲಿ ಮೂಲಚಕ್ರ ಹಾಗೂ ಗತಿಚಕ್ರಗಳಿಗೆ ಒಂದು ದೊಡ್ಡ ಮಾಲೆ, ಗತಿಚಕ್ರಗಳಿರುತ್ತವೆ. ಅದರಂತೆ ರಾಟೆಯಲ್ಲಿಯ ದೋಷಗಳನ್ನು ದೂರಮಾಡುವದಕ್ಕಾಗಿ ಗತಿಚಕ್ರದ ಕೆಳಭಾಗದಲ್ಲಿ ಒಂದು ಉರಟು ಸ್ಪ್ರಿಂಗು, ಮತ್ತು ಗೊಂಬೆಯ ಕೆಳಭಾಗದಲ್ಲಿ ಜಿನಗು ಸ್ಪ್ರಿಂಗು ಹೀಗೆ ಎರಡು ಸ್ಪ್ರಿಂಗುಗಳಿರುತ್ತವೆ. ಈ ಸ್ಪ್ರಿಂಗುಗಳು ಮಾಲೆಗಳ ಬಿಗಿತವನ್ನೂ ಮತ್ತು ರಾಟೆಯನ್ನು ಪ್ರಮಾಣಬದ್ಧವಾಗಿ ಸರಿಪಡಿಸಿಕೊಂಡ ಮೇಲೆ ನೂಲುವಾಗ ಆಗುವ ಹೆಚ್ಚು-ಕಡಿಮೆಗಳನ್ನೂ ದೂರಮಾಡುತ್ತವೆ. ಆದರೆ ಹಲವರಿಗೆ ಈ ಗುಟ್ಟು ಗೊತ್ತಾಗಿಲ್ಲ.

ಯಾವ ಮೇರೆಗೆ ಸಂಗೀತಗಾರನಿಗೆ ತನ್ನ ತಂತುವಾದ್ಯವನ್ನು ಸರಿಪಡಿಸಿಕೊಳ್ಳಲು ಬಂದರೆ ಮಾತ್ರ ಅವನ ಹಾಡು ಅದರೊಡನೆ ಕೂಡುವದೋ ಅದೇ ಮೇರೆಗೆ ನೂಲುವವನಿಗೆ ಈ ಮಾಲೆಗಳ ಮತ್ತು ಸ್ಪ್ರಿಂಗುಗಳ ಹೊಂದಿಕೆಯನ್ನು ಲಕ್ಷದಲ್ಲಿಟ್ಟು ರಾಟೆಯನ್ನು ಸರಿಪಡಿಸಿಕೊಳ್ಳಲಿಕ್ಕೆ ಬರಬೇಕು. ಅಲ್ಲದೆ ಗೊಂಬೆಯನ್ನೂ ತಿರುಗಿಸುವದಕ್ಕಾಗಿ ಉಪಯೋಗಿಸಿದ ಫ್ಲಾಯನಟ್ಟಿನ ಮರ್ಮವನ್ನೂ ತಿಳಿದಿರಬೇಕು. ಗೊಂಬೆಯನ್ನು ಅತ್ತಿತ್ತ ತಿರುಗಿಸುವದರಿಂದ ಅದರ ಎರಡೂ ಬದಿಗಳಿಗೆ ಕದಿರಿನ ಗಡಗಡೆಯ ಘರ್ಷಣೆಯು ತೀರ ಕಡಿಮೆಯಾಗುವದು. ಆದುದರಿಂದ ನೂಲುವಾಗ ಗಡಗಡೆಯು ಗೊಂಬೆಯ ಮಧ್ಯದಲ್ಲಿರುವಂತೆ ಗೊಂಬೆಯನ್ನು ಸರಿಪಡಿಸಿಕೊಳ್ಳಬೇಕು. ಜಿನಗು ಮಾಲೆಯನ್ನು ಬಿಗಿ ಮತ್ತು ಸಡಿಲು ಮಾಡುವಾಗ, ಗೊಂಬೆಯ ಕೋನವನ್ನು ಬದಲಿಸುವಾಗ ಗೊಂಬೆಯು ಎಡ ಅಥವಾ ಬಲಬದಿಗೆ ಗಡಗಡೆಯ ತಿಕ್ಕಾಟವಾಗದಂತೆ ಅದನ್ನು ತಿರುಗಿಸಬೇಕಾಗುವದು. ಜಿನಗು ಮಾಲೆಯ ಗಂಟಿನ ಪೆಟ್ಟು ಗಡಗಡೆಯ ಮೇಲೆ ಬೀಳಕೂಡದು.

ಹಂಜಿಯು ಒಂಪೇ ಗಾತ್ರದ್ದೂ, ಉಬ್ಬದೆ ಇದ್ದಂತಹದೂ, ಕೊಂಚವೂ ಕಸರು ಇಲ್ಲದೇ ಇದ್ದಂತಹದೂ ಇರಬೇಕು. ರಾಟೆಯು ಗತಿಯಲ್ಲಿದ್ದಾಗ ಎಳೆಯನ್ನು ಬೆರಳುಗಳ ಚಿಮಟಿಗೆಯಲ್ಲಿ ಸ್ವಲ್ಪ ಹತ್ತಿಕ್ಕಿ ಹಿಡಿದರೂ ರಾಟೆಯು ಗಡಗಡೆಯೊಡನೆ ಸರಿಯಾಗಿ ತಿರುಗುತ್ತ ಇದ್ದರೆ ಮಾತ್ರ ರಾಟೆಯನ್ನು ಸರಿಯಾಗಿ ಸಜ್ಜುಗೊಳಿಸಿದಂತೆ ಈ ಕ್ರಿಯೆಯಲ್ಲಿ ಕದಿರಿನ ಮೇಲೆ ಎಳೆಯ ಎಳೆತವು ಬರುವದು. ಅದಕ್ಕಿಂತಲೂ ಚಿಮಟಿಗೆಯಿಂದ ಹತ್ತಿಕ್ಕಿ ಹಿಡಿದರೂ ರಾಟೆಯು ಸರಾಗವಾಗಿ ತಿರುಗುವದೋ ಇಲ್ಲವೋ ಎಂಬುದನ್ನು ನಿರುಕಿಸಬೇಕು. ಆಗ ರಾಟೆಯು ಸರಿಯಾಗಿ ತಿರುಗದಿದ್ದರೆ ದೊಡ್ಡ ಮಾಲೆಯು ಸಡಿಲಾಗಿರುವದೆಂದು ತಿಳಿದು ಅದನ್ನು ಬಿಗಿಗೊಳಿಸಬೇಕು.

ಇದರ ಹೊರತು ಉತ್ತಮ ನೂಲು ಹೊರಡಬೇಕಾ-ನರೆ ಹಂಜಿಯ ಮೇಲೆ ವಿಶಿಷ್ಟ ಹಿಡಿತವು ಇರುವದು ಅವಶ್ಯವಿದೆ. ಈ ಹಂಜಿಯ ಹಿಡಿತವು ಸ್ವಾಭಾವಿಕ-ನಾಗಿರಬೇಕು. ಆದರಲ್ಲಿ ಮೇಲಿಂದ ಮೇಲೆ ಬದ-ಲಾವಣೆಯಾಗಕೂಡದು. ಯಾವ ಮೇರೆಗೆ ಕಬ್ಬಿನ ಗಾಣದಲ್ಲಿ ಒಂದು ಕಬ್ಬನ್ನು ಸೇರಿಸಿದ ಬಳಿಕ ಆ ಕಬ್ಬು ಮುಗಿಯುವವರೆಗೆ ಗಾಣದ ಹಿಡಿತದಲ್ಲಿ ಹೆಚ್ಚು-ಕಡಿಮೆ ಮಾಡಬೇಕಾಗುವದಿಲ್ಲ. ಅದರಂತೆಯೇ ಒಮ್ಮೆ ಚಿಮಟಿಗೆಯಲ್ಲಿ ಹಂಜಿಯನ್ನು ಹಿಡಿದರೆ ಅದು ತೀರುವ-ವರೆಗೆ ಹಂಜಿಯ ಹಿಡಿತದಲ್ಲಿ ಬದಲಾವಣೆಯಾಗದಂತೆ ನೂಲಬೇಕು. ಹಂಜಿಯ ಹಿಡಿತವನ್ನು ಹೆಚ್ಚು-ಕಡಿಮೆ ಮಾಡುವ ರೂಢಿಯಿಂದ ನೂಲು ಆಗಾಗ ಹರಿಯುತ್ತದೆ. ಆದುದರಿಂದ ಹಂಜಿಯನ್ನು ತೋರಬೆರಳಿನ ಮೇಲೆ ಅಡ್ಡವಾಗಿ ಹಿಡಿದು, ಅದರ ಮೇಲೆ ಹೆಬ್ಬೆರಳಿನ ಭಾರವು ಬೀಳುವಂತೆ ಚಿಮಟಿಗೆಯ ಹಿಡಿತವಿರಬೇಕು. ಉಳಿದ ಮೂರು ಬೆರಳುಗಳ ಸಹಾಯದಿಂದ ಹೆಬ್ಬೆರಳು ಹಂಜಿ-ಯನ್ನು ಮುಂದೆ ಸರಿಸಬೇಕು.

ನೂಲುವವನು ತೆಗೆದುಕೊಳ್ಳಬೇಕಾದ ಎಚ್ಚರಿಕೆ

ನೂಲುವಾಗ ತಂತುಗಳ ಜೋಡಣೆಯ ಕ್ರಿಯೆಯನ್ನು ಸಾಧಿಸುವ ಸಂಗತಿಯನ್ನು ಲಕ್ಷದಲ್ಲಿಟ್ಟು, ಸ್ವಲ್ಪ ಸ್ವಲ್ಪ ಹುರಿಕೊಟ್ಟು ನೂಲಿನ ವಿಶಿಷ್ಟ ಎಳೆತವು ಚಿಮಟಿಗೆಗೆ ಬರುವದು. ಈ ಹಿಡಿತದಿಂದ ತನ್ನ ನೂಲಿನ ನಂಬರವನ್ನು ಲಕ್ಷಕ್ಕೆ ತೆಗೆದುಕೊಂಡು, ಆಕಾರವು ಬದ-ಲಾಗದಂತೆ ನೂಲಬೇಕು. ಹೊಸಬರು ಪ್ರತಿಯೊಂದು ಎಳೆಯನ್ನು ತೆಗೆಯುವಾಗ ನೂಲಿನ ನಂಬರಕ್ಕನುಸರಿಸಿ ಪ್ರತಿಯೊಂದು ಹೊಸ ಎಳೆಗೆ ನೂಲಿನ ಶಕ್ತಿಯ ಪ್ರಮಾಣಕ್ಕನುಸರಿಸಿ ಮೂಲಜಕ್ರವನ್ನು ಎಷ್ಟು ಸಲ ತಿರುಗಿಸಬೇಕೆಂಬುದನ್ನು ಲೆಕ್ಕಮಾಡಿ ನಿಶ್ಚಿತಗೊಳಿಸಿದರೆ ನೂಲಿನ ಆಕಾರಮಾನವು ಬದಲಾಗುವದಿಲ್ಲ. ಬರ ಬರುತ್ತ ರೂಢಿಯಿಂದ ನೂಲು ಗಟ್ಟಿಯಾದುದೋ ಪಿಸಕಾದುದೋ ಎಂಬುದು ಹಂಜಿಯ ಹಿಡಿತಕ್ಕೆ ಸ್ಪರ್ಶದಿಂದ ತಿಳಿಯುವದು. ನೂಲು ದುಂಡಗಾಗಿಯೂ, ಸಮಾನತೆ, ಶಕ್ತಿಯುಳ್ಳದ್ದೂ ಸಹಜವಾಗಿ ಹೊರಡು-ವದು. ನೂಲುವಾಗ ಮೇಲಿನ ನೂಲಿನ ಎಳೆತವು ನೂಲುವವನ ಚಿಮಟಿಗೆಗೆ ಆಗುತ್ತ ಹೋದಂತೆ ಹೊರ-ಡುತ್ತಿರುವ ನೂಲು ಗಟ್ಟಿಯಾದುದೋ, ಪಿಸುಕಾ-ದುದೋ ಅಥವಾ ಗಡುತರ, ಜಿನುಗು ಆಗುತ್ತಿರು-ವದೋ ಎಂಬುದರ ತಿಳಿವಳಿಕೆಯು ಸ್ಪರ್ಶಜ್ಞಾನದಿಂದ ನೂಲುವವನಿಗೆ ತಪ್ಪದೆ ಆಗುವದು. ಹೊಸ ಎಳೆ-ಯನ್ನು ತೆಗೆದ ಬಳಿಕ ಹಂಜಿಯ ಹಿಡಿತದ ಚಿಮಟಿಗೆ-ಯಲ್ಲಿ ಹುರಿಯು ಸೇರದಂತೆ ಎಚ್ಚರಿಕೆಯನ್ನು ತೆಗೆದು-ಕೊಳ್ಳಬೇಕು. ಹೊಸ ಎಳೆಯನ್ನು ತೆಗೆಯುವದಾದೊ-ಡನೆ ಹಂಜಿಯ ಕೈಯನ್ನು ತಿರುಗಿ ಹಂಜಿಯ ಹಿಡಿತದ ಚಿಮಟಿಗೆಯನ್ನು ಬದಲು ಮಾಡದೆ ಕಿರಿಬೆರಳಿನ ಹಿಂಭಾ-ಗದ ಮೇಲೆ ನೂತ ನೂಲಿನ ತುದಿಯ ಸ್ಪರ್ಶವಾಗ-ಬೇಕು. ಇದರ ಅರ್ಥವು ಹೀಗೆ ನೂಲುವ ಎಳೆಯ ಹುರಿಯು ಕಿರಿಬೆರಳಿನೊಡನೆ ಮಾಡಿದ ಸ್ಪರ್ಶದಿಂದ ಕೋನ ಮಾಡಿ ಹಿಡಿಯಬೇಕು. ಅಂದರೆ ಹಂಜಿಯ ಹಿಡಿತದ ಚಿಮಟಿಗೆಯಲ್ಲಿ ಬಹಳಷ್ಟು ಹುರಿಯು ಹೋಗದೆ ಮುಂದಿನ ಎಳೆಯು ಚಿಮಟಿಗೆಯ ಹಿಡಿತ-ವನ್ನು ಬದಲಿಸದೆ ಸಮಾನ ಹೊರಡುವದಕ್ಕೆ ಸಹಾಯ-ಮಾಡುತ್ತದೆ. ನೂಲು ಸುತ್ತುವಾಗ ಮತ್ತೊಂದು ಸಂಗ-ತಿಯ ಕಡೆಗೆ ಗಮನ ಕೊಡಬೇಕಾಗುವದು. ಅದೆಂದರೆ ನೂತ ಪೂರ್ಣ ಎಳೆಯನ್ನು ಕದರಿನ ಮೇಲೆ ಗತಿ ಬಿಂದ-ವಿನಿಂದ ತೀರ ಕಡಿಮೆಯೆಂದರೆ ೯-೧೦" (ಇಂಚು) ಉದ್ದಳತೆಯ ಎಳೆಯನ್ನು ಸುತ್ತದೆ ಹೊರಗೆ ಉಳಿ-ಬೇಕು. ಈ ಕೈ ಎಳೆಯನ್ನು ಬಿಡುವದರಿಂದ ರಾಶಿ-ಯನ್ನು ಆರಂಭಿಸಿದ ನಂತರ ಹಂಜಿಯ ಹಿಡಿತದ ಚಿಮ-ಟಿಗೆಯಲ್ಲಿ ಹುರಿಯು ಕೂಡ್ರುವದಿಲ್ಲ. ಇದರಿಂದ ನೂ-ಲ್ಕಡುವ ಎಳೆಯ ಗಾತ್ರ ಅಥವಾ ನಂಬರು ಬದಲಾ-ಗಾರದು. ಕೈಎಳೆಯ ಮುಂದೆ ಹೊಸದಾಗಿ ಹೊರಡು-ವ ಎಳೆಗೆ ಹೊಸ ಎಳೆ ಎನ್ನುವರು. ಈ ರೀತಿಯಿಂ-ದ ಹೊರಟ ನೂಲಿನ ಒಂದೊಂದು ಇಂಚು ಎಳೆಯ-ವು ಹೊರಡುವದು. ಅದು ಪೂರ್ಣ ಶಕ್ತಿಯುಳ್ಳದ್ದಿರುವ-ರಿಂದ ಮತ್ತು ಅಸಮಾನವಿಲ್ಲವ ಮೂಲಕ ನಮ್ಮವೆ ಹ-ಯುವ ಸಂಭವವಿಲ್ಲ. ಈ ಮೇರೆಗೆ ಹೊಸ ಎಳೆಯನ್ನು ತೆಗೆಯುವದು ಮುಗಿದೊಡನೆ ಹುರಿಯಾಕುವವನ್ನು ತ-ಯಬೇಕು. ಹುರಿಯು ಹಂಜಿಯಲ್ಲಿ ಸೇರದಂ

ಮುಂಜಾಗ್ರತೆಯನ್ನು ವಹಿಸಬೇಕು; ಇದಕ್ಕಾಗಿ ಹೊಸ ಎಳೆಯ ಉದ್ದಳತೆಯು ಮುಗಿದೊಡನೆ ತೀರ ಸ್ವಲ್ಪ ವೇಳೆಯಲ್ಲಿ ಕೈಚಿಮಟಿಗೆಯನ್ನು ಬದಲಿಸದೆ ಪೂರ್ಣ ಕೈಯನ್ನೇ ತಿರಿಗಿಸುವ ಕ್ರಿಯೆ ಜರುಗಬೇಕು—ಈ ಕ್ರಿಯೆಗೆ ಎಷ್ಟು ವಿಲಂಬವಾಗುವದೋ ಅಷ್ಟೇ ಪ್ರಮಾಣದಲ್ಲಿ ಹಂಜಿ ಹಿಡಿದ ಕೈಚಿಮಟಿಗೆಯಲ್ಲಿಯ ಹಂಜಿಯಲ್ಲಿ ಹುರಿಯು ಪ್ರವೇಶಿಸುತ್ತದೆ. ಹಂಜಿಯಲ್ಲಿ ಹುರಿಯು ಏರುವದರಿಂದ ಚಿಮಟಿಗೆಯ ಹಿಡಿತವನ್ನು ಬದಲಿಸಬೇಕಾಗುವದು. ಈ ಅವಸ್ಥೆಯಲ್ಲಿ ಯಾವ ಪ್ರಮಾಣದಲ್ಲಿ ಹಂಜಿಯಲ್ಲಿ ಹುರಿಯು ಏರಿರುವದೋ ಅದೇ ಪ್ರಮಾಣದಲ್ಲಿ ತಂತುಗಳ ಗುಂಪು ಹೆಚ್ಚಾಗಿ ಹೊರಬರುತ್ತದೆ. ಅಲ್ಲಿ ವೇಲೆ ಹೇಳಿದ ತಂತುಗಳ ಜೋಡಣೆಯ ಕ್ರಿಯೆಯು ಉಳಿಯುವದು. ಅಲ್ಲಿಯೇ ಪ್ರತಿ ಸಾರಿ ನೂಲು ಪಿಸುಕಾಗಿ ಉಳಿಯುವದು, ಹೊಸ ಎಳೆಯು ನುಗಿದೊಡನೆ ಹುರಿಕೊಡುವದನ್ನು ಮುಗಿಸಿ ಎರಡನೆಯ ಕೈಯಿಂದ ರಾಟಿಗೆ ಸ್ವಲ್ಪ ವಿರುದ್ಧಗತಿಯನ್ನು ಕೊಡಬೇಕಾಗುವದು. ಅಂದರೆ ಕದರಿನ ಮೇಲೆ ಸುತ್ತಿದ ನೂಲು ಸ್ವಲ್ಪ ಬಿಚ್ಚಿ ಕುಕ್ಕಡಿಯ ಕೆಳದುಡಿಯಿಂದ ಮೇಲ್ಬದಿಗೆ ಸುತ್ತಬೇಕು. ಅಂದರೆ ಸ್ವಲ್ಪ ಅವಧಿಯಲ್ಲಿ ನೂಲು ಸುತ್ತುವದು ಮುಗಿಯುವದು. ನೂಲುವ ವೇಗವನ್ನು ಬೆಳೆಯಿಸುವದಕ್ಕೆ ಇದರ ಒಳ್ಳೆಯ ಸಹಾಯವಾಗುವದು.

ಹೊಸ ಎಳೆಯನ್ನು ತೆಗೆಯುವಾಗ ಹಂಜಿಯಲ್ಲಿ ಹುರಿಯು ಹೊಕ್ಕು ಎಲ್ಲಿ ನೂಲಿನ ಗಾತ್ರವು ಹೆಚ್ಚಾಗುವದೋ ಅಲ್ಲಿಯೇ ಪ್ರತ್ಯೇಕ ಸ್ಥಳದಲ್ಲಿ ನೂಲು ಪಿಸುಕಾಗಿ ಉಳಿಯುವದು- ಆ ಸ್ಥಳದಲ್ಲಿ ತಂತುಗಳ ಜೋಡಣೆಯ ಕ್ರಿಯೆಯು ಉಳಿಯುವದು. ನೂಲಿನ ಹುರಿಯು ನೀರಿನಂತೆ ಪ್ರವಾಹಿ ಆಗಿರುವದು. ಹೇಗೆ ತೋಟಕ್ಕೆ ಉಣ್ಣಿಸಿದ ನೀರು ಹೊರಬೀಳಲು ದಾರಿಯನ್ನು ಹುಡುಕಿ ತೆಗೆಯುವದೋ ಅದರಂತೆಯೇ ಯಾವ ಎಳೆಯಲ್ಲಿ ತಂತು ಸಮೂಹವು ಕಡಿಮೆ ಇರುವದೋ ಅಥವಾ ಎಲ್ಲ ನೂಲು ಜಿನುಗು ಇರುವದೋ ಅಲ್ಲಿಯೇ ಹುರಿಯು ತನ್ನ ಒಲವು ಹಿಡಿಯುವದು. ಎಲ್ಲ ಎಳೆಯಲ್ಲಿಯ ಹುರಿಯು ಅಲ್ಲಿಗೆ ಧಾವಿಸಿ ಬರುವದು. ತಂತು ಸಮೂಹದ ಮೇಲೆ ಬಹಳೀ ಹುರಿಯು ಬಂದು ಎಳೆಯು ಗಟ್ಟಿಯಾಗದೆ ಮಿತಿ ಮೀರಿದ ಹುರಿಯಿಂದ ಅದು ಕಟ್ಟುರಿಯಾಗುವದು.

—ಸಮಾನತೆಯೇ ಶಕ್ತಿಯ ತಾಯಿಯು—

ಸರಪಳಿಯ ಶಕ್ತಿಯು ಅದರ ಪ್ರತಿಯೊಂದು ಕಳಿಗೆಯ ಸಮಾನತೆಯನ್ನು ಹೇಗೆ ಅವಲಂಬಿಸಿರುವದೋ ಅದರಂತೆ ನೂಲಿನ ಶಕ್ತಿಯು ಅದರ ಸಮಾನತೆಯನ್ನು ಅವಲಂಬಿಸಿರುತ್ತದೆ. ಆದುದರಿಂದ ಮೇಲೆ ಹೇಳಿದ ಮೇರೆಗೆ ನೂಲಬೇಕಾಗುವದು. ಹೀಗೆ ಹೊರಡುವ ನೂಲು ಶಾಸ್ತ್ರೀಯವಾಗಿಯೇ ಹೊರಡುವದು ಮತ್ತು ಅದು ಹರಿಯದೆ ಹೊರಡುವದು. ಇದರಿಂದ ನೂಲುವುದರಲ್ಲಿಯೆ ಆನಂದವು ಪ್ರಾಪ್ತವಾಗುವದು. ನೂಲು ಹರಿಯದೆ ಹೊರಡುವದಕ್ಕಾಗಿ ಮತ್ತೊಂದು ಕಲ್ಪನೆಯ ಸಹಾಯವಾಗಬಹುದು. ನೂಲು ಜಿನುಗು-ಗಾತ್ರ ಪಿಸುಕು, ಗಟ್ಟಿ ಹೊರಡುತ್ತಿರುವದೆಂಬ ಕಲ್ಪನೆಯೂ ಸ್ಪರ್ಶದಿಂದ ಹಂಜಿಯನ್ನು ಹಿಡಿದ ಚಿಮಟಿಗೆಗೆ ಗೊತ್ತಾಗಬೇಕು. ಮನುಷ್ಯನಿಗೆ ಸ್ಪರ್ಶಜ್ಞಾನವು ಅತಿ ನಿಶ್ಚಿತ ಮತ್ತು ತಪ್ಪದೆ ಇದ್ದುದು ಇರುತ್ತದ. ನಾವು ವ್ಯವಹಾರದಲ್ಲಿ ಪ್ರತಿನಿತ್ಯ ನೋಡುತ್ತೇವೆ. ಕುರುಡನು ಎಡವುತ್ತಾನೆ. ಆಗ ಅವನ ಬೆರಳು ಒಡೆಯುವ ಸಂಭವ ಕಡಿಮೆ; ಆದರೆ ಕಣ್ಣಿದ್ದ ಮನುಷ್ಯನು ಎಡವಿದೊಡನೆ ಬೆರಳುಗಳು ಒಡೆಯುತ್ತವೆ. ಸ್ಪರ್ಶಜ್ಞಾನ ಸಹಾಯುದಿಂದ ಕುರುಡನು ಓದು ಬರೆಹವನ್ನು ವಿಶಿಷ್ಟ ಪದ್ಧತಿಯಿಂದ ಮಾಡಬಲ್ಲನು. ಇಂತಹ ಸೂಕ್ಷ್ಮಜ್ಞಾನವನ್ನು ಸ್ಪರ್ಶದಿಂದ ದೊರಕಿಸಲು ಬರುವದು. ಆದರೆ ಸ್ಪರ್ಶಜ್ಞಾನ-ಶಕ್ತಿಯ ಉಪಯೋಗವನ್ನು ಕಣ್ಣಿದ್ದ ಮನುಷ್ಯನು ಏಕೆ ಮಾಡಿಕೊಳ್ಳಬಾರದು? ಈ ರೀತಿಯಿಂದ ಚಿಮಟಿಗೆಯ ಸ್ಪರ್ಶಜ್ಞಾನವನ್ನು ಬೆಳೆಸಿಕೊಂಡಲ್ಲಿ ನೂಲು ಪಿಸುಕುಗಟ್ಟಿ ಹೊರಟು ಅದು ಹರಿಯುವ ಕಲ್ಪನೆಯು ಸ್ಪರ್ಶದಿಂದಲೇ ಚಿಮಟಿಗೆಗೆ ಗೊತ್ತಾಗುವದು. ಅದೇ ಎಳೆಯನ್ನು ಹರಿದು ಕೈಚಿಮಟಿಗೆಯಲ್ಲಿ ತೆಗೆದುಕೊಂಡರೆ ಎಳೆ ಹರಿದು ಆಗುವ ಹಾಳು ಕಡಿಮೆ ಆಗುವದು ಮತ್ತು ವೇಳೆಯ ಉಳಿತಾಯವಾಗುವದು. ಚಿಮಟಿಗೆಯಲ್ಲಿ ಕಸರು ಬಂದರೂ ಅದು ಸ್ಪರ್ಶಜ್ಞಾನದಿಂದ ಮೊದಲೇ ತಿಳಿಯುವದು. ನೂಲು ಹರಿದು ಅದರ ತೊಡಕಿನಲ್ಲಿ ವೇಳೆ ಕಳೆಯುವದಕ್ಕಿಂತ

ಮುಂಚಿತವಾಗಿಯೇ ಅದನ್ನು ಹರಿದು ಚಿಮಟಿಗೆಯಲ್ಲಿ ತೆಗೆದುಕೊಂಡರೆ ವೇಳೆಯ ಉಳಿತಾಯವಾಗುವದು. ಅಲ್ಲದೆ ಹತ್ತಿಯ ಉಳಿತಾಯವಾಗುವದು. ಇವೆಲ್ಲವುಗಳ ಕಡೆಗೆ ಗಮನಕೊಟ್ಟರೆ ಬೇಕಾದ ವೇಗದಿಂದ ನೂಲಲು ಬರುವದು.

ಸ್ಪರ್ಶಜ್ಞಾನದ ರೂಢಿಯಿಂದ ಇಂದಿಗೂ ವೃದ್ಧರು ಆಂಧ್ರ ಹೈದ್ರಾಬಾದ ಪಟ್ಟಣಗಳಲ್ಲಿ ನೂಲುವರು. ಅವರು ರಾತ್ರಿಯ ನಿದ್ರೆಯನ್ನು ಮುಗಿಸಿಕೊಂಡು ದೀಪದ ಸಹಾಯವಿಲ್ಲದೆ ರಾಟೆಯಿಂದ ನೂಲುವರು. ಇಂತಹ ಮುಪ್ಪಿನವರಿಗೆ ರಾಟೆಯು ವೆನ್ನನ್ ಇದ್ದ ಹಾಗೆ.

ರೂಢಿಯಿಂದ ರಾಗದ ಪೆಟ್ಟಿಗೆಯನ್ನು ಬಾರಿಸುವರು; ತಂತುವಾದ್ಯವನ್ನು ಬಾರಿಸುವದು ಅಥವಾ ಟಾಯಿಪ ರಾಯಿಟಿಂಗದ ಕೆಲಸವನ್ನು ತಪ್ಪುಮಾಡದೆ ಮಾಡಬಹುದು. ಕಣ್ಣಿಲ್ಲದೆ ಬೇಕಾದಷ್ಟು ವೇಗವನ್ನು ಸಂಪಾದಿಸಬಹುದು ಈ ಸಂಗತಿಯ ರೂಢಿಯನ್ನು ಹೆಚ್ಚಿಸಿಕೊಳ್ಳಲು ಕಣ್ಣಿದ್ದ ಮನುಷ್ಯನು ಕಣ್ಣು ಕಟ್ಟಿ ಕೊಂಡು ನೂಲಲು ಬರಬೇಕಾಗುವದು. ಪೂಜ್ಯ ವಿನೋಬಾ ಭಾವೆಯವರು ರಾಟೆಯಿಂದ ದಿನಾಲು ೮ ಘಂಟೆಗೆ ನೂಲುವದಕ್ಕಾಗಿ ಕೆಲವು ದಿವಸ ಒಂದೇ ಸವನೆ ಕೂಡ್ರುತ್ತಿದ್ದರು. ಆ ನಿರೀಕ್ಷಣೆಯ ಫಲವೆಂದರೆ ಇಡೀ ಒಂದು ವಾರದಲ್ಲಿ ಆವರ ನೂಲು ಕೇವಲ ನಾಲ್ಕು ಬಾರಿ ಸಹ ಹರಿಯಲಿಲ್ಲ. ನೂಲುವದು ಅತಿ ಸುಲಭವಾದ ಮತ್ತು ಸಹಜವಾದ ಕ್ರಿಯೆಯುಂಟು. ಆದರೆ ನೂಲುವದಕ್ಕೆ ಸ್ಪರ್ಶಜ್ಞಾನದ ಹೊಂದಿಕೆ ಕೊಡುವದು ಅತಿ ಅವಶ್ಯವಾದುದು. ಈ ಮಾತು ಸಹಜವಾಗಿಯೇ ಲಕ್ಷಕ್ಕೆ ಹೊಳೆಯುವದು. ಇದರಿಂದ ನೂಲುವದರಲ್ಲಿಯ ಆನಂದವನ್ನು ಸರ್ವರೂ ಸವಿಯಬಲ್ಲರು. ಈ ಪ್ರಕಾರ ನೂತ ನೂಲು ಮುಂಡಗಾಗಿಯೂ ಒಂದೇ ನಂಬರಿನದೂ ಯೋಗ್ಯ ಶಕ್ತಿಯುಳ್ಳದ್ದು ಹೊರಡುವದು.

ಆದುದರಿಂದ ಈ ಶಾಸ್ತ್ರೀಯ ದೃಷ್ಟಿಯನ್ನು ಲಕ್ಷ್ಯಕ್ಕೆ ತೆಗೆದುಕೊಂಡು ನೂಲಿನ ಅಭ್ಯಾಸವನ್ನು ತಿಳಿದುಕೊಳ್ಳಬೇಕು. ಈ ಕಲ್ಪನೆಯಿಂದ ನೂಲಿನಲ್ಲಿ ಆಮೂಲಾಗ್ರ ಬದಲಾಗುವದು. ಶಿಕ್ಷಕರೂ ಅಧಿಕಾರಿಗಳೂ ಈ ಸಂಗತಿಯ ಕಡೆಗೆ ವಿಶೇಷ ಗಮನ ಕೊಡಬೇಕು. ಇದರಿಂದ ವರ್ಧಾಯೋಜನೆಯಲ್ಲಿಯ ಒಂದು ಮುಖ್ಯ ಭಾಗವಾದ ಖಾದಿ ವಸ್ತ್ರ ವಿದ್ಯೆಯು ಯಶಸ್ವಿಯಾಗುವದು. ಈ ಮಾತೇ ವಸ್ತ್ರ ಸ್ವಾವಲಂಬಿಗಳಿಗೂ ಅನ್ವಯಿಸುವದು. ಪ್ರತಿ ಹತ್ತು ವರುಷಕ್ಕೊಮ್ಮೆ ಖಾದಿಯ ಬಗ್ಗೆ ಯಾವ ಅಂದೋಲನ ಮಾಡಬೇಕಾಗುವದೋ ಅದರ ಅರ್ಥವು ನೂಲನ್ನು ಹರಿಯದೆ ಮತ್ತು ಗಟ್ಟಿ–ಮುಟ್ಟಾಗಿ ತೆಗೆಯಬೇಕೆಂಬುದರ ಶಾಸ್ತ್ರವು ಲಕ್ಷದಲ್ಲಿ-ಬಾರದ ಮೂಲಕ ಮೇಲಿಂದ ಮೇಲೆ ಶಿಥಿಲತೆಯು ಬರುವದು. ನೂಲುವದರಲ್ಲಿಯ ಆನಂದವು ಹೇಗಿರುವದೆಂಬುದು ತಿಳಿಯುವದಿಲ್ಲ, ಆದುದರಿಂದ ನೂಲುವದು ಬಂದಾಗುವದು. ಪುನ: ಖಾದೀ ರಾಟೆಗಳ ಸಂದೇಶವನ್ನು ಮುಂದಾಳುಗಳು ಕೊಡಬೇಕಾಗುವದು ಖಾದಿಯ ತತ್ವಜ್ಞಾನವನ್ನು ತಿಳಿದರೂ ಅದರ ಹಿನ್ನೆಲೆಯಾದ ಶಾಸ್ತ್ರೀಯ ದೃಷ್ಟಿಯು ಇರದಿದ್ದರೆ ನೂಲುವನು ಬೇಸರಿಯುವನು. ನೂಲುವದರಲ್ಲಿಯ ಆನಂದದ ರುಚಿಯು ಎಲ್ಲರಿಗೂ ದೊರೆಯಲೆಂದು ಎಲ್ಲರ ಮುಂದೆ ಅದರಲ್ಲಿರುವ ಶಾಸ್ತ್ರೀಯ ದೃಷ್ಟಿಯನ್ನು ನಮ್ರಪೂರ್ವಕವಾಗಿ ಇಟ್ಟಿದ್ದೇನೆ.

ತಿದ್ದು ಪಡಿ

೧೯೫೦ ಆಕ್ಟೋಬರದ ಸಂಚಿಕೆಯಲ್ಲಿ 'ಪ್ರಗತಿ ಪತ್ರಿಕೆಗಳನ್ನು ತುಂಬಲು ಶಿಕ್ಷಕರಿಗೆ ಸೂಚನೆಗಳು' (ಪುಟ ೨೫) ಎಂಬುದರಲ್ಲಿ ೧ನೆಯ ಸೂಚನೆಯ ೨ನೆಯ ಸಾಲಿನಲ್ಲಿ 'ಮೊದಲನೆಯ' ಶಬ್ದದ ಬದಲು 'ಕಿನೆಯ' ಎಂದು ತಿದ್ದಿಕೊಂಡು ಓದಬೇಕಾಗಿ ವಿನ್ನಹ. ಮೂರನೆಯ ಹಾಗೂ ಅದರ ಮೇಲಿನ ವರ್ಗಗಳ ವಿದ್ಯಾರ್ಥಿಗಳ ಪ್ರಗತಿ ಪತ್ರಿಕೆಗಳನ್ನು ಪ್ರಯೋಗಾರ್ಥವಾಗಿ ಬಳಕೆಯಲ್ಲಿ ತರಬೇಕೆಂದು ಸರಕಾರವು ನಿರ್ಧರಿಸಿದೆ ಎಂಬುದೇ ತಿದ್ದುಪಡಿಯ ತಿರುಳು. ಪ್ರ- ಸಂಪಾದಕರು.

ಭಗವಾನ್ ಬುದ್ಧನ ಧರ್ಮಮಾರ್ಗ

(ಸರ್ ರಾಧಾಕೃಷ್ಣನ್‌ರವರ ಗ್ರಂಥದ ಆಧಾರದಿಂದ ಅನುವಾದಿತವಾದುದು.)

ಲೇಖಕರು:—**ಶ್ರೀಯುತ ತಟ್ಟಿ ಶ್ಯಾಮರಾಯರು** ಬಿ. ಎ. ಪ್ರಿನ್ಸಿಪಾಲ, ನವಲಗುಂದ ಟ್ರೇನಿಂಗ ಕಾಲೇಜ.

ಕ್ರಿ. ಪೂ. ಆರನೆಯ ಶತಮಾನದ ಭಾರತಕ್ಕೆ ಕಲ್ಪನೆಯಿಂದ ನಾವು ನಮ್ಮ ಲಕ್ಷ್ಯವನ್ನು ಹೊರಳಿಸಿದರೆ ಪ್ರಾಣಪೂಜಾ, ಮಾಂತ್ರಿಕತೆ, ತಾಂತ್ರಿಕತೆ ಇವೇ ಮೊದಲಾದ ವಿಚಾರ ಆಚಾರ ಶ್ರದ್ಧಾಸಂಪ್ರದಾಯಗಳ ಬೇರೆ ಬೇರೆ ಚಿಕ್ಕ ಪುಟ್ಟ ಝರಿಗಳು ಅತ್ಯಾದ್ಭೈತವೆಂಬ ದೊಡ್ಡ ಪ್ರವಾಹದಲ್ಲಿ ಕೂಡಿಹೋಗುತ್ತಿರುವಂತೆ ಕಂಡುಬರುವದು. ಸತ್ಯವನ್ನು ಶೋಧಿಸಿ ಅದರೊಡನೆ ತನ್ನ ಯೋಗ್ಯಸಂಬಂಧವನ್ನು ಕಲ್ಪಿಸಿಕೊಳ್ಳುವದಕ್ಕಾಗಿ ಮಾನವನು ಮಾಡಿದ ಪ್ರಯತ್ನಗಳು ದ್ವಿತತ್ವವಾದ, ಬಹುತತ್ವವಾದ ಮೊದಲಾದ ಸಂಭವನೀಯ ಈ ತತ್ವಜ್ಞಾನದ ರೂಪಗಳನ್ನು ತಿಳಿದರೂ ಹಲವು ಮೂಲಭೂತವಾದ ವಿಷಯಗಳಲ್ಲಿ ಅವುಗಳಲ್ಲಿ ಐಕ್ಯಮತ್ಯವಿದ್ದಿತು. ಜೀವನವು ಹುಟ್ಟಿನಿಂದ ಆರಂಭವಾಗಿ ಮರಣದಲ್ಲಿ ಮುಗಿಯುವದಲ್ಲ. ಅಸಂಖ್ಯ ಜೀವನಗಳಲ್ಲಿ ಅದು ಒಂದು ಕೊಂಡಿಯಾಗಿದ್ದು ಅವುಗಳಲ್ಲಿ ಪ್ರತಿಯೊಂದು ಜೀವನವು ಹಿಂದಿನ ಭಾವಗಳಲ್ಲಿ ಮಾಡಿದ ಕಾರ್ಯಗಳಿಂದ ಸಿದ್ಧವಾಗುವದು. ಪ್ರಾಣಿಗಳ, ಮನುಷ್ಯರ, ದೇವತೆಗಳ ರೂಪಗಳೆಲ್ಲ ಆ ಸರಪಣಿಯಯಲ್ಲಿಯ ಕೊಂಡಿಗಳು. ಸತ್ಕರ್ಮಗಳಿಂದ ನಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಂಡು ಸ್ವರ್ಗಕ್ಕೆ ಹೋಗಬಹುದು, ದುಷ್ಕರ್ಮಗಳಿಂದ ಆ ಯೋಗ್ಯತೆಯನ್ನು ಕೆಳಮಟ್ಟಕ್ಕೆ ತರುವೆವು. ಎಲ್ಲ ಜನ್ಮಗಳಿಗೂ ಕೊನೆಯಿರುವದರಿಂದ ನಿಜವಾದ ಸುಖವು ಸ್ವರ್ಗದಲ್ಲಿಯಾಗಲಿ ಭೂಮಿಯ ಮೇಲಾಗಲಿ ಜೊರೆಯುವಂತಿಲ್ಲ. ಈ ಸಂಸಾರ ಚಕ್ರದಿಂದ ಬಿಡುಗಡೆಯೂ, ಶಾಶ್ವತ ಜೀವನವೂ ಧಾರ್ಮಿಕ ಮನುಷ್ಯನ ಗುರಿಯಾಗಿರುವವು. ಈ ಗುರಿಯು ಮೋಕ್ಷ, ಬ್ರಹ್ಮೀಭಾವ, ನಿರ್ವಾಣ ಮುಂತಾದ ಶಬ್ದಗಳಿಂದ ಸೂಚ್ಯವಾಗಿದೆ.

ಮೋಕ್ಷಸಾಧನೆಯ ಮಾರ್ಗಗಳ ತತ್ವವೇತ್ತರು ಅನೇಕ ರೀತಿಯಾಗಿ ಭಾವಿಸಿದ್ದರು. ನಾಲ್ಕು ರೀತಿಗಳನ್ನು ಇಲ್ಲಿ ವಿಂಗಡಿಸಿ ಹೇಳಬಹುದು.

(೧) ವೇದದ ಸೂಕ್ತಗಳು ದೈವೀ ಅನುಗ್ರಹವನ್ನು ಪಡೆಯಲಿಕ್ಕೆ ಪ್ರಾರ್ಥನೆ ಮತ್ತು ಪೂಜೆಯ ಸತ್ಕಾರವನ್ನು ಹೇಳುತ್ತವೆ.

(೨) ಯಜ್ಞ ಯುಗಾದಿಗಳು ಉಪನಿಷತ್ತುಗಳು ಇವುಗಳ ಅಪರ್ಯಾಪ್ತತೆಯನ್ನು ಒಪ್ಪಿದ್ದರೂ ಲೌಕಿಕ ಭಾಗ್ಯವನ್ನು ಮತ್ತು ಅಮರತ್ವವನ್ನು ಸಹ ಪಡೆಯುವದಕ್ಕೆ ಸಾಧನವೆಂದು ಅದನ್ನು ನಿಷೇಧಿಸದೆ ಕಡೆಗಣಿಸಿವೆ.

(೩) ಸನ್ಯಾಸಮಾರ್ಗವು ಕೆಲವು ಸಾಂಪ್ರದಾಯಕರಿಗೆ ಪ್ರಿಯವಾಗಿದ್ದಿತು. ಯಜ್ಞಕ್ಕಿಂತ ತಪಸ್ಸು ಶಮ ದಮ, ಚಿತ್ತಶುದ್ಧಿ, ಧ್ಯಾನ ಇವು ಬ್ರಹ್ಮಜ್ಞಾನಕ್ಕೂ ಶ್ರೇಷ್ಠ ಸಾಧನವೆಂದು ಇವರ ಅಭಿಪ್ರಾಯವಾಗಿದ್ದಿತು.

(೪) ಉಪನಿಷತ್ತುಗಳು ಇಂದ್ರಿಯನಿಗ್ರಹ, ಐಹಿಕ ಭೋಗಗಳಲ್ಲಿ ಅನಾಸಕ್ತಿ ಇವುಗಳಿಂದ ಕೂಡಿದ ವಿದ್ಯೆ, ಜ್ಞಾನ ಅಥವಾ ಸತ್ಯದ ಅಂತರ್ದೃಷ್ಟಿ ಇವೇ ಸಾಧನವೆಂದು ಹೇಳುವವು.

ವಿದ್ಯೆಯಂದರೆ ಪಾಂಡಿತ್ಯವಲ್ಲ, ತನೇಕ ಧ್ಯಾನದಿಂದ ಲಭಿಸುವ ಅಂತರ್ಜ್ಞಾನ. ಪರಮಾತ್ಮನೊಡನೆ ನಮಗಿರುವ ಐಕ್ಯದ ಸಾಕ್ಷಾತ್ಕಾರ ಮತ್ತು ಅದರ ಬೆಳಕಿನಲ್ಲಿ

ಎಲ್ಲ ವೈಷಮಿಕ ಅನುರಾಗಗಳೂ ಬಂಧನಗಳೂ ಕಳಚಿ ಬೀಳುವವು. ಬುದ್ಧನು ಮಿತಿಮೀರಿದ ಭೋಗ ಮತ್ತು ದೇಹದಂಡನೆ ಇವುಗಳ ನಡುವಿನ ಮಧ್ಯ ಮಾರ್ಗವನ್ನು ಬೋಧಿಸುವನಾದ್ದರಿಂದ ಈ ಕೊನೆಯ ಸಾಧನದೃಷ್ಟಿ ಆತನ ಒಲವು ಇದ್ದಂತೆ ತೋರುವದು.

ನಾವು ಪರಬ್ರಹ್ಮವಸ್ತುವಿದ್ದೇವೆ ಎಂದು ಉಪನಿಷತ್ತುಗಳು ಸಾರುವದು ನಿಜವಿದ್ದರೆ ನಾವು ಪ್ರಯತ್ನದಿಂದ ಸಾಧಿಸುವ ಗುರಿಯೇ ಇಲ್ಲದಾಗುವದು. ಜೈನ ಮತ್ತು ಸಾಂಖ್ಯ ಮತಗಳು ಜಡದಲ್ಲಿ ತೊಡಕಿಕೊಂಡ ಅನಂತಾನಂತ ಆತ್ಮಗಳು ಇವೆ ಎಂದು ಹೇಳುವವು. ವ್ರತನಿಯಮ, ಕೃಚ್ಛ್ರ, ತಪಶ್ಚರ್ಯಗಳಿಂದ ಅವಿನಾಶಿಯಾದ ಆತ್ಮ ತತ್ವವನ್ನು ವಿಕಾರಿಯಾದ ಪ್ರಕೃತಿತತ್ವದಿಂದ ಬಿಡಿಸಿಕೊಳ್ಳುವದೇ ಈ ಮತಗಳ ಪ್ರಕಾರ ಮನುಷ್ಯನ ಕರ್ತವ್ಯವಾಗುವದು. ಉಪನಿಷತ್ತುಗಳು ಹೇಳುವಂತೆ ಒಂದೇ ಪರಮಾತ್ಮ ತತ್ವದಲ್ಲಿ ನಂಬಿದರೂ ಸರಿ, ನಿರೀಶ್ವರ ಹಾಗು ಸೇಶ್ವರ ಸಾಂಖ್ಯ-ಸಿದ್ಧಾಂತಗಳು ಹೇಳುವಂತೆ ಅಸಂಖ್ಯಾತ ಆತ್ಮತತ್ವಗಳಿವೆ ಎಂದು ನಂಬಿದರೂ ಸರಿ, ಆತ್ಮತತ್ವದ ಸ್ವಭಾವವು ಅವಿಕಾರಿ ಅವಿಕಾರ್ಯವಾದುದೆಂಬ ಮಾತು ಸ್ಪಷ್ಟವಷ್ಟೆ.

ಆದರೆ ಚಾರಿತ್ರ್ಯ ಶುದ್ಧಿ ಹಾಗು ಕರ್ತವ್ಯಸಾಧನೆಗೆ ಮಾನವನ ಪರಿವರ್ತನಶೀಲತೆಯು ಅತ್ಯವಶ್ಯವಾದುದು. ಮಾನವನು ದೈವಿಸಂಪದ್ಯುಕ್ತನಾಗಿಲ್ಲ ದೈವಿಸಂಪತ್ತನ್ನು ಪಡೆಯಬೇಕಾಗಿದೆ. ನುಡಿಯಿಂದಲೂ ಒಳ್ಳೆಯ ನಡೆಯಿಂದಲೂ ಅವನು ಆ ಸಂಪತ್ತನ್ನು ರಚಿಸಿಕೊಳ್ಳಬೇಕಾಗಿದೆ. ಅದು ದೇಹದ ಉಪಾಧಿಯಿಂದ ಕೂಡಿದ ಬದುಕಿ ಬಾಳುವ, ಶ್ರಮಿಸುವ ಜೀವಿಯು. ಈ ಜೀವವು ನಿಷ್ಕಲಂಕ ಚಾರಿತ್ರವನ್ನು ಪಡೆಯಬೇಕಾಗಿದೆ; ಅವಿಕಾರಿಯಾದ ಆತ್ಮತತ್ವವು ಅದನ್ನು ಪಡೆಯಬೇಕಾಗಿಲ್ಲ.

ವ್ಯಕ್ತಿಗಳಲ್ಲೆ ಆಗಲಿ ವಸ್ತುಗಳಲ್ಲೇ ಆಗಲಿ ಶಾಶ್ವತವಾದ ಅವಿಕಾರಿಯಾದ ಬೇರೆ ವಸ್ತುವೊಂದಿಲ್ಲ. 'ಸರ್ವಂ ಅನಾತ್ಮಂ' ಎಂಬ ಬುದ್ಧನ ಸಿದ್ಧಾಂತವು ಕೇವಲ ಒಂದು ವೈಚಾರಿಕ ಪ್ರಮೇಯನಾಗಿದೆ. ಅದು ಎಲ್ಲ ನೀತಿಮಾರ್ಗದ ತಳಹದಿಯಾಗಿದೆ ಎಂಬುದನ್ನು ನಾವು ಲಕ್ಷದಲ್ಲಿಡಬೇಕು.

'ಅಹಂ' ಎನ್ನುವ ವಸ್ತುವು ಶಾಶ್ವತವೂ ಅವಿಕಾರಿಯೂ ಎಂಬ ಮಾತನ್ನು ಬುದ್ಧನು ಒಪ್ಪುವದಿಲ್ಲ. ಹಾಗೆಯೇ ಮರಣದಿಂದ ಅದು ಸಂಪೂರ್ಣವಾಗಿ ನಷ್ಟವಾಗಿ ಹೋಗುವದು ಎಂಬ ಮಾತನ್ನೂ ಅವನು ಒಪ್ಪುವದಿಲ್ಲ. ಮರಣದಿಂದ ಎಲ್ಲದರ ಕೊನೆಯಾಗುತ್ತಿದ್ದರೆ ಜೀವನದಲ್ಲಿರುವ ಅಲ್ಪಸುಖದ ತ್ಯಾಗದಿಂದ ಈ ಜನ್ಮದ ಭಾರವನ್ನು ಮತ್ತಿಷ್ಟು ಹೆಚ್ಚಿಸಿಕೊಳ್ಳುವದರಲ್ಲಿ ಅರ್ಥವಿಲ್ಲವೆಂದು ಎನಿಸದೇ ಇರದು. ಅಸ್ತಿತ್ವವೂ ಪರಿವರ್ತನೆಯೂ ಇವೆರಡರಿಂದಲೂ ಕೂಡಿದ ಸಮಸ್ತವಸ್ತುವು 'ಅಹಂ' ಅಥವಾ 'ನಾನು' ಎಂಬ ವಸ್ತುವಾಗಿದೆ.

ಬುದ್ಧನ ಪ್ರಕಾರ ಧರ್ಮವೆಂಬ ತತ್ವವೇ ವಿಶ್ವದಪರಿವರ್ತನೆಗಳಿಗೆ ಮೂಲವಾಗಿದೆ. ಅದಕ್ಕೆ ವ್ಯಕ್ತಿತ್ವವನ್ನು ಉಂಟುಮಾಡುವದು ನಮ್ಮದಾಗಿದೆ. ಪ್ರತಿಯೊಂದು ನೈತಿಕ ಆದರ್ಶಕ್ಕೆ ಎರಡು ಲಕ್ಷಣಗಳಿರುವವು. ಅದು ಮನುಷ್ಯನಿಂದ ಪ್ರಾಪ್ಯವಾಗಿರುವದು ಹಾಗು ನಿಷ್ಪಾದಿಂದ ಎತ್ತಿಹಿಡಿಯಲ್ಪಡುವದು. ಅದನ್ನು ಅಸ್ತಿತ್ವದಲ್ಲಿ ತರುವದು ನಿಮಗೆ ಸಾಧ್ಯವಾಗಿರದಿದ್ದರೆ, ಅದಕ್ಕಾಗಿ ಕಷ್ಟಪಡು ಎಂದು ಹೇಳುವದರಲ್ಲಿ ಅರ್ಥವಿಲ್ಲ.

ಒಂದು ವಿಶ್ವವ್ಯಾಪಿಯಾದ ತತ್ವವು ನೈತಿಕ ಪೂರ್ಣತೆಯ ನಿಶೆಯಲ್ಲಿ ಹೆಣಗುತ್ತಿದೆ. ಆ ಆದರ್ಶಕ್ಕೆ ಪ್ರತಿಯೊಬ್ಬರೂ ತಮ್ಮ ತಮ್ಮ ಮರ್ಯಾದಿತವಾದ ಕಾರ್ಯಕ್ಷೇತ್ರದಲ್ಲಿ ಕಾಣಿಕೆಯನ್ನು ನೀಡಬಲ್ಲರು. ಬುದ್ಧನು ಈ ಆಶ್ವಾಸನವನ್ನಿತ್ತಿದ್ದಾನೆ. ನಾವು ಅವಲಂಬಿಸಬಹುದಾದ ಒಂದೇ ಒಂದು ಸತ್ಯವೆಂದರೆ ಧರ್ಮ ಅಥವಾ ಸಾತ್ವಿಕತೆ ಅಥವಾ ನ್ಯಾಯನಿಷ್ಠುರತೆ ಎಂದು ಆತನು ಹೇಳುತ್ತಾನೆ. ಉಪನಿಷತ್ತುಗಳು ಹೇಳುವ ಬ್ರಹ್ಮದ ಸತ್ಯತೆಯನ್ನು ಆತನು ಸೂಚಿಸಿದಂತೆಯೇ ಮಾಡಿದ್ದಾನೆ. ಅದಕ್ಕೆ ಆತನು ಧಮ್ಮ ಎಂಬ ಬೇರೆ ಹೆಸರನ್ನು ಕೊಡುವ ಸಾಹಸಮಾಡಿ ಇಹಲೋಕದಲ್ಲಿ ನಮಗಾಗಿ ಇರುವ ಅದರ ನೈತಿಕ ಮಹತಿಯ ಮೇಲೆ ಭಾರವಿತ್ತಿದ್ದಾನೆ.

(ಮುಂದುವರಿದುದು)

ರಾಷ್ಟ್ರೀಯ ಶಿಕ್ಷಣದಲ್ಲಿ
ಸ್ತ್ರೀಯ ಬಹುಮುಖ ಪಾತ್ರ

ಲೇಖಕರು:-ಶ್ರೀ. ಹೊ. ಫ. ತುಮ್ಮಿನಕಟ್ಟಿ.
ಎನೆಯ, ವ. ಬ.
ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,
ಧಾರವಾಡ

ಮಹತ್ಮಾ ಗಾಂಧೀಜಿಯವರ ತತ್ವದಂತೆ ಕೊಡಲ್ಪಡುವ ಜೀವನ ಶಿಕ್ಷಣ ಯೋಜನೆಯಲ್ಲಿ ಪುರುಷರಂತೆ ಸ್ತ್ರೀಯರಿಗೂ ಮಹತ್ವದ ಸ್ಥಾನವಿದೆ. ಆಹಾರಕ್ಕಾಗಿ ಒಕ್ಕಲುತನ, ವಿಚ್ಛಾದನಕ್ಕಾಗಿ ನೂಲುವ-ನೇಯುವ ಉದ್ಯೋಗ, ಆಶ್ರಯಕ್ಕಾಗಿ ಬಡಿಗತನ ಈ ಮೂಲ ಉದ್ಯೋಗಗಳಿಗೆ ಪುರುಷನು ಹೆಚ್ಚಿಗೆ ಗಮನ ಕೊಡುವನು. ಆದರೆ ಸ್ತ್ರೀಯು ಕೊಂದುವ ಈ ಜೀವನ ಶಿಕ್ಷಣದ ಹೆಜ್ಜೆ ಮುಂದಿದೆ. ಆಕೆಯು ಜೀವನದ ಮೂಲ ಬೇಡಿಕೆಗಳಿಗಾಗಿ ತುಸು-ನುಚ್ಚಿಗೆ ಕಲಿಯುವದಲ್ಲದೆ ಹೊಲಿಗೆ, ಕಸೂತಿ, ಆರೋಗ್ಯ ಶಾಸ್ತ್ರ, ಪಾಕಶಾಸ್ತ್ರ, ಶಿಶುಸಂಗೋಪನ ಶಾಸ್ತ್ರ ಮುಂತಾದ ಮಹತ್ವದ ವಿಷಯಗಳನ್ನು ಅಭ್ಯಸಿಸಬೇಕಾಗುವದು. ಹೀಗೆ ಸ್ತ್ರೀ ಶಿಕ್ಷಣವು ಜೀವನ ಶಿಕ್ಷಣದ ವೈಶಾಲ್ಯವನ್ನೂ, ಅರ್ಥಪೂರ್ಣತೆಯನ್ನೂ ತೋರಿಸುತ್ತದೆ.

ರಾಷ್ಟ್ರೀಯ ಶಿಕ್ಷಣ ಯೋಜನೆಯಲ್ಲಿ ಶಿಕ್ಷಕನ ಪಾತ್ರ-ಹಿರಿಯದಾಗಿದೆ. ರಾಷ್ಟ್ರದ ಆಧಾರಸ್ತಂಭರಾಗುವಂಥ ವ್ಯಕ್ತಿಗಳನ್ನು ಅವನು ತಯಾರಿಸುವನು ಅದರ ಇದಕ್ಕೂ ಪೂರ್ವದಲ್ಲಿ ಮಗುವನ್ನು ಹೆತ್ತು, ಹೊತ್ತು, ತನ್ನ ಆಹಾರ ನಿದ್ರೆ, ಸುಖ-ದುಃಖಗಳನ್ನು ಬದಿಗಿರಿಸಿ, ಹಗಲು ರಾತ್ರಿಯೆನ್ನದೆ ಜೋಕೆಮಾಡಿ, ಮಗುವನ್ನು ಶಿಕ್ಷಕನ ಕೈಗೆ ಒಪ್ಪಿಸುವಲ್ಲಿ ಉಂಟಾದ ಅವಿಶ್ರಾಂತ ಪರಿಶ್ರಮದ ಪೂರ್ಣ ಶ್ರೇಯಸ್ಸನ್ನು ಸ್ತ್ರೀಗೆ ಸಲ್ಲುವದಿಲ್ಲವೇ ! ಮಗು ತನ್ನಷ್ಟಕ್ಕೆ ತಾನೇ ಓಡಾಡಲು, ಮಾತನಾಡಲು ಸರ್ವ ಶಕ್ತವಾಗುವಂತೆ ಮಾಡುವ ಪೂರ್ಣ ಹೊಣೆ ಸ್ತ್ರೀಯಳದು. ಇಂಥ ಮಹತ್ವದ ಕರ್ತವ್ಯದ ನಂತರ ಶಿಕ್ಷಕನು ಮಗುವಿನಲ್ಲಿ ಸುಪ್ತವಾಗಿದ್ದ ಅನಂತ ಶಕ್ತಿಗಳಿಗೆ ಚಾಲನೆ ಕೊಟ್ಟು, ಜಾಗ್ರತೆಗೊಳಿಸಿ ರಾಷ್ಟ್ರೀಯ ಮಹಾಪುರುಷರನ್ನು ನಿರ್ಮಿಸುತ್ತಾನಲ್ಲವೇ! ಶಿಲ್ಪಕನು ಭಂಗಾರದ ಘಟ್ಟಿಗಳಿಂದ ಮೂರ್ತಿಯನ್ನು ತಯಾರಿಸುವ ಅಕ್ಕಸಾಲಿಗನಂತಿದ್ದರೆ ಸ್ತ್ರೀಯು ಮಣ್ಣಿನಲ್ಲಿ ಕೂಡಿದ ಬಂಗಾರದ ಅದುರು(ಕಣ)ಗಳನ್ನೆಲ್ಲ ಕೂಡಿಸಿ, ಬಂಗಾರವನ್ನು ತಯಾರಿಸುವ ಕಾರಖಾನೆಯಲ್ಲಿಯ ಕುಶಲ ಕೆಲಸಗಾರಳಂತೆ ಎಂದು ಹೇಳಬಹುದು. ತನ್ನ ಮಗುವಿನಲ್ಲಿ ಸ್ತ್ರೀಯು ತನ್ನಲ್ಲಿಯ ಗುಣ-ವಿಶೇಷಗಳನ್ನು, ಕಲೆಗಳ ಅಂಶವನ್ನೂ ಸುಪ್ತವಾಗಿರಿಸುತ್ತಾಳೆ. ಇವಕ್ಕೆ ಚಾಲನೆ ಕೊಡುವ ಹೊಣೆ ಮಾತ್ರ ಶಿಕ್ಷಕನದು.

ಹೀಗೆ ಮಗುವು ಗರ್ಭದಲ್ಲಿ ರೂಪುಗೊಂಡಾಗಿನಿಂದ ದೊಡ್ಡದಾಗುವ ವರೆಗೆ ಲಾಲನೆ-ಪಾಲನೆ ಮಾಡಬೇಕಾಗುವ ಶಿಶು-ಸಂಗೋಪನ ಶಾಸ್ತ್ರವನ್ನು ಆಕೆಯು ಅವಶ್ಯವಾಗಿ ತಿಳಿದಿರಬೇಕಾಗುತ್ತದೆ. ತನ್ನ ಜೊತೆಯಲ್ಲಿ ಮಗುವಿಗೆ ನಾಡಿನ ಭಾಷೆಯ ಜ್ಞಾನವನ್ನು ಮಾಡಿಕೊಡಬೇಕಾಗುತ್ತದೆ. ದೊಡ್ಡವನಾದಂತೆ ಮಗುವು ಸುತ್ತಲಿನ ವಸ್ತುಗಳನ್ನು ಮಾತನಾಡಿ ಗುರುತಿಸುತ್ತದೆ. ಬಂಧು-ಬಳಗದವರನ್ನು ಸಂಜ್ಞೋಧಿಸುತ್ತದೆ. ತನ್ನ ಬೇಕು-ಬೇಡಗಳೆಲ್ಲವನ್ನೂ ತನ್ನ ಅಭಿಪ್ರಾಯಗಳನ್ನೂ ಅನುಡಿಯಲ್ಲಿ ವ್ಯಕ್ತ ಪಡಿಸುತ್ತದೆ. ಅನುಡಿಯೇ ತಾಯ್ನುಡಿ; ಮಾತೃಭಾಷೆ! ಮಗುವಿಗೆ ತಾಯಿಯ ನಿಕಟ ಸಂಬಂಧವು

ಇಲ್ಲದೆ ಹೋಗಿದ್ದರೆ ತಾಯ್ನುಡಿಯನ್ನು ಕಲಿಸಲು ಬಹಳ ದಿನಸ ಬೇಕಾಗುತ್ತಿದ್ದವು. ಮಗುವಿನ ಶಿಕ್ಷಣ ಕೇಂದ್ರಗಳು ಮನೆ, ಶಾಲೆ; ಸಮಾಜ ಆದಾಗ್ಯೂ ಮನೆಯಲ್ಲಿ ಶಿಕ್ಷಣದ ಮೊದಲ ಗುರುವು ತಾಯಿಯೇ. ಆದುದರಿಂದ ತಾಯಿಯು ಸಾಹಿತ್ಯ, ಸಂಗೀತ, ಆರೋಗ್ಯಶಾಸ್ತ್ರ ಮುಂತಾದ ಎಲ್ಲ ವಿದ್ಯೆಗಳಲ್ಲಿ ಪಾರಂಗತಳಿರಬೇಕಾಗುತ್ತದೆ. ಇವೆಲ್ಲ ವಿದ್ಯೆಗಾಗಿ ಸ್ತ್ರೀಯರು ಶಿಕ್ಷಣ ಪಡೆಯಬೇಕಾಗುತ್ತದೆ. ಇಂಥ ತಾಯಂದಿರಿಂದಲೇ ತ್ರ ನಾಗರಿಕರು ಹಾಗೂ ರಾಷ್ಟ್ರಸೇವಕರು ತಯಾರಾಗುವರು.

ಸ್ತ್ರೀಯರು ಅಡಿಗೆ ಮನೆಯೊಡತಿಯರಾಗದೆ ಪೋಡವಿಯೊಡತಿಯರಾಗಿರುವದು ನಾಡಿನ ಪ್ರಗತಿಯ ದ್ಯೋತಕವು. ಆದರೆ ನೂರಕ್ಕೆ ಅಂ ಶಷ್ಟು ಸ್ತ್ರೀಯರು ನಿರಕ್ಷರಿಗಳಾಗಿ ಉಳಿದಿರುವರು. ಅವರಿಗೆ ಒಳ್ಳೆಯ ಆಹಾರದ ಕಲ್ಪನೆಯಾಗಬೇಕು. ಕಲೆ-ಕೈಗಾರಿಕೆಗಳ ಕಲ್ಪನೆಯಾಗಬೇಕು. ಹೊಸ ಶಿಕ್ಷಣ ಇವೆಲ್ಲವನ್ನೂ ಪೂರೈಸಬಲ್ಲದು. ಹೊಸ ಶಿಕ್ಷಣವು ಜೀವನದಿಂದ, ಜೀವನಕ್ಕಾಗಿ ಇರುವದರಿಂದ ಪುರುಷನಂತೆ ಸ್ತ್ರೀಯೂ ಪುರುಷನಿಗೆ ಪೂರಕವಾಗಿಯೇ ಇಲ್ಲವೇ ಸ್ವತಂತ್ರವಾಗಿಯೇ ಜೀವನ ಸಾಗಿಸಬೇಕಾಗುವದರಿಂದ ಹೊಸ ಶಿಕ್ಷಣವನ್ನು ಅವಳು ಪಡೆಯಬೇಕಾಗುತ್ತದೆ. ಹೀಗೆ ಜೀವನ ಶಿಕ್ಷಣ ಪಡೆದ ಸ್ತ್ರೀಯಳೂ ಪ್ರಪಂಚವೆಂಬ ರಥವನ್ನು ತನ್ನ ಪತಿಗೆ ಅನುಕೂಲವಾಗಿಯೇ ಸಾಗಿಸಿಕೊಂಡು ಹೋಗುವದರಲ್ಲಿ ಸಂದೇಹವಿಲ್ಲ.

ಹೀಗೆ ಮಾನವನ ನಿತ್ಯ ಜೀವನದಲ್ಲಿ ಸಹಕಾರಿಯಾಗಿದ್ದ ಸ್ತ್ರೀಗೆ ನಮ್ಮ ಪೂರ್ವಜರು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಸರಕಾರವು ಸ್ತ್ರೀಯರ ಶಿಕ್ಷಣಕ್ಕಾಗಿ ಅನೇಕ ಸತ್ಕಾರ್ಯಗಳನ್ನುಂಟು ಮಾಡಿದೆ. ಮಹಿಳೆಯರಿಗೆ ಉಚಿತ ಶಿಕ್ಷಣದ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿ ವೇತನವನ್ನೂ ಕೊಡುತ್ತಿದೆ. ಇದಲ್ಲದೆ ಕನ್ನಡ ಸಂಗೀತ, ಕಾವ್ಯಗಾಯನ, ವಾಕ್ಸ್ಪರ್ಧೆ, ಲೇಖನ ಸ್ಪರ್ಧೆಗಳನ್ನು ಏರ್ಪಡಿಸಿ, ಸ್ತ್ರೀಸಮಾಜವನ್ನು ಪ್ರೋತ್ಸಾಹಿಸಿ, ಅದನ್ನು ಪ್ರಗತಿ ಪಥದತ್ತ ಸಾಗಿಸುವಲ್ಲಿ ಜನತೆ ಸರಕಾರಗಳೆರಡು ಸಹಕರಿಸುತ್ತ ಬಂದಿವೆ.

ಜೀವನವೇ ಶಿಕ್ಷಣವೆಂಬ ಮಾತನ್ನು ಆಧಾರವಾಗಿಟ್ಟುಕೊಂಡು ಜೀವನದಿಂದ ಶಿಕ್ಷಣ ವೀಯುವ ಹೊಸ ಶಿಕ್ಷಣದ ಮುಖಾಂತರ ತಮಗನುಗುಣವಾದ ಉದ್ಯೋಗ, ಇಲ್ಲವೆ ಕಲೆಗಳಲ್ಲಿ ಪರಿಣತರಾಗಿ, ನೈಜ ಶಿಕ್ಷಣವನ್ನು ಹೊಂದಿ, ರಾಷ್ಟ್ರದ ಏಳಿಗೆಗೆ ಕಾರಣರಾಗಲು ಪುರುಷರಷ್ಟೇ ಸ್ತ್ರೀಯರಿಗೂ ಸಾಧ್ಯವಿದೆಯೆನ್ನುವದರಲ್ಲಿ ಸಂದೇಹವಿಲ್ಲ.

ಪ್ರಕಟನೆ

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೫೩

೫ನೆಯ ಸದರಿನಲ್ಲಿ ಹೊಲಿಗೆ

ಸದ್ಯಕ್ಕೆ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ೫ನೆಯ ಸದರಿನಲ್ಲಿ ಉನ್ನೇದವಾರರು ಆಯ್ದುಕೊಳ್ಳಬೇಕಾದ ಐಚ್ಛಿಕ ವಿಷಯಗಳು ನಾಲ್ಕು ಇವೆ:—(೧) ಸೂಜಿಗೆಲಸ, (೨) ಡ್ರಾಯಿಂಗ (೩) ಕಟ್ಟಿಗೆಯ ಕೆಲಸ (೪) ನೂಲುವದು—ನೇಯುವದು. ಹೊಲಿಗೆಯು ೪ನೆಯ ಸದರಿನಲ್ಲಿ ಹೆಚ್ಚಿನ ವಿಷಯವಾಗಿದೆ. ಆದರೆ ೧೯೫೩ರಲ್ಲಿ ಮತ್ತು ಮುಂದ ನಡೆಯುವ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗಾಗಿ ಹೊಲಿಗೆಯು ೫ನೆಯ ಸದರಿನಲ್ಲಿಯ ಐಚ್ಛಿಕ ವಿಷಯಗಳಲ್ಲಿ ಒಂದಾಗುವುದು, ಅಂದರೆ ನಾಲ್ಕು ವಿಷಯಗಳ ಬದಲು ೫ ಐಚ್ಛಿಕ ವಿಷಯಗಳಾಗುವವು. ೬ನೆಯ ಸದರಿನಲ್ಲಿ ಹೆಚ್ಚಿನ ವಿಷಯಗಳು ೫ ಮಾತ್ರ ಇರುವವು:—(೧) ಹಿಂದೀ (೨) ಸಂಗೀತ (೩) ಕಾಗದ ಮತ್ತು ಪೆಟ್ಟಿಗೆ ಕೆಲಸ (೪) ಬೆತ್ತದ ಕಲಸ (೫) ಚರ್ಮದ ಕೆಲಸ. ಈ ಮೊದಲೇ ಪ್ರಕಾಶಿತವಾದ ಅಭ್ಯಾಸಪತ್ರಿಕೆಯಲ್ಲಿ ಯಾವ ಬದಲಾವಣೆಯೂ ಇಲ್ಲ.

ಧಾರವಾಡ
೯—೩—೧೯೫೨

(ಸಹಿ) ಡಿ. ಸ್ಪಿ. ಚಕ್ಕರಮನೆ.
ಎಜ್ಯುಕೇಶನಲ್ ಇನಸ್ಪೆಕ್ಟರ,
ಧಾರವಾಡ ಭಾಗ, ಧಾರವಾಡ.

ಪುಸ್ತಕ-ವಿಮರ್ಶೆ

ಪ್ರಭುಲಿಂಗಲೀಲಾ. ಲೇಖಕರು:—"ಹನುಮಂತ" ಪ್ರಕಾಶಕರು:— ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಸ್ಥೆ ಹುನಗುಂದ. ಪುಟಗಳು :— ೪೬ ಬೆಲೆ :— ಆರು ಆಣೆ.

ಪ್ರಸ್ತುತ ಹೊತ್ತಿಗೆಯಲ್ಲಿ ವೀರಶೈವ ದೀಕ್ಷಾಚಾರ್ಯರಾದ ಪ್ರಭುದೇವರ ಜೀವನವು ಬಾಲದಿಂದ ಅಂತ್ಯದವರೆಗೆ ವರ್ಣಿಸಲ್ಪಟ್ಟಿದೆ. ಅವರು ತಮ್ಮ ತತ್ವಗಳನ್ನು, ಆಚರಣೆಯಿಂದ, ಆಗಿನ ಪ್ರಸಿದ್ಧ ಶರಣರಿಗೆ ಹೇಗೆ ತಿಳಿಸಿದರೆಂಬುದನ್ನು ಈ ಪುಸ್ತಕದಲ್ಲಿ ವಿವೇಚಿಸಿದೆ. ಇಲ್ಲಿ ಕೇವಲ ಪ್ರಭುದೇವರ ಚರಿತ್ರೆಯಲ್ಲದೆ, ಶ್ರೀ ಸಿದ್ಧರಾಮೇಶ, ಭಕ್ತಿಭಾಂಡಾರಿ ಬಸವಣ್ಣನವರು, ಅಕ್ಕಮಹಾದೇವಿ ಮೊದಲಾದವರ ಚರಿತ್ರೆಗಳೂ ಆನುಷಂಗಿಕವಾಗಿ ಬಂದಿವೆ. ಪ್ರಭುವಿನ ಮುಖ್ಯ ತತ್ವವಾದ "ಧ್ಯೇಯವು ನಿರ್ಮಲವಿರಬೇಕಲ್ಲದೆ ಅದರ ಸಾಧನೆಯ ಮಾರ್ಗ ಕೂಡ ಅತಿ ನಿರ್ಮಲವಿರಲೇಬೇಕು" ಎಂಬುದು ಇಲ್ಲಿ ಸೂಕ್ಷ್ಮವಾಗಿ ವಿವೇಚಿಸಲ್ಪಟ್ಟಿದೆ. ಈ ತತ್ವವು ಮಹತ್ಮಾಗಾಂಧೀಜಿಯವರ ತತ್ವಕ್ಕೆ ಅನುಗುಣವಾಗಿದೆ.

ಮುದ್ರಣವು ಇನ್ನಿಷ್ಟು, ಅಲ್ಲಲ್ಲಿ, ಸುಸ್ಪಷ್ಟವಾಗಿದ್ದರೆ ಚೆನ್ನಾಗಿತ್ತು.

ಪ್ರಧಾನ ಸಂಪಾದಕರು.

"ಪರೀಕ್ಷಾ ವಿಜಯ" ಲೇಖಕರು:— ಶ್ರೀ ನಾ.-ಲಿಂ. ಗುಡ್ಡಿಮಠ. ಪ್ರಕಾಶಕರು:- ಶ್ರೀ ಪುಲ್ಲನಗೌಡರ. ಪಾಟೀಲ, ಡಂ. ಸಂ. ಹಡಗಲಿ. ಪುಟಗಳು :— ೧೮ ಬೆಲೆ :— ನಾಲ್ಕಾಣೆ.

ಪುಸ್ತಕದ ಹೆಸರನ್ನು ಓದಿದ ಕೂಡಲೆ ಇದು ಪರೀಕ್ಷೆಯಲ್ಲಿ ವಿಜಯವನ್ನು ಸಂಪಾದಿಸಲು ನೆರವಾಗುವ ಗೈಡು ಎಂದು ಓದುಗರಿಗೆ ಎನಿಸಬಹುದು. ಆದರೆ ಇಲ್ಲಿ ಹಾಗಿರುವದಿಲ್ಲ. ಇದು ಪರೀಕ್ಷಾರ್ಥಿಗಳಿಗೆ ಪರೀಕ್ಷೆಯ ಸಮಯದಲ್ಲಿ ಅವರು ಹೇಗೆ ಇರಬೇಕು, ಪ್ರಶ್ನೆಗಳನ್ನು ಹೇಗೆ ಬಿಡಿಸಬೇಕು, ಪರೀಕ್ಷೆಯಲ್ಲಿ ವಿಜಯಿಗಳಾಗಬೇಕಾದರೆ ಯಾವ ನಿಯಮಗಳನ್ನು ಆಚರಿಸಬೇಕು ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ. ಇದು ಪರೀಕ್ಷಾರ್ಥಿಗಳಿಗೆ ಉಪಯೋಗವಾಗಬಹುದೆಂದು ಆಶಿಸಲಾಗಿದೆ

ಪ್ರಧಾನ ಸಂಪಾದಕರು

ಕೊರತೆಯ ಕೊಗು. ಲೇಖಕರು :— ಶ್ರೀ ನಾ.-ಲಿ ಗುಡ್ಡಿಮಠ ಪ್ರಕಾಶಕರು :— ಶ್ರೀ ಶಿವಮೂರ್ತಿಯ ವಿರಕ್ತಮಠ, ಚಿಕ್ಕಹಂದಿಗೋಳ. ಪುಟಗಳು:— ೨. ಬೆಲೆ :— ೪ ಆಣೆ.

ದೇಶದಲ್ಲಿಯ ಬಡತನದ ಬವಣೆಯನ್ನು ನೋಡಿ ಶೋಕ-ಮನಸ್ಕರಾಗಿ ಶ್ರೀ ಗುಡ್ಡಿಮಠ ಅವರು ಈ ಪುಸ್ತಕವನ್ನು ಬರೆದಂತೆ ತೋರುತ್ತದೆ; ಈ ಪುಸ್ತಕದಲ್ಲಿ ಕೆಲವು ವಿಚಾರಗಳನ್ನು ಮಂಡಿಸಿದ್ದಾರೆ; ದೇಶದಲ್ಲಿಯ ಕೊರತೆಗೆ ಎಲ್ಲೆಡೆಗೂ ವ್ಯಾಪಿಸಿರುವ ಚಹ, ಚುಟ್ಟ, ಸಿಗರೇಟ, ನೊವಲಾಡ ಕೆಲವು ಸಾವಾನ್ಯ ಚಟಗಳು ಸಹ ಮರೆಯಲಾಗದ ಕಾರಣಗಳೆಂಬುದನ್ನು ಮನವರಿಕೆಯಾಗುವಂತೆ ಚರ್ಚಿಸಿದ್ದಾರೆ. ಮನಮೆಚ್ಚಿಸುವ ಶೈಲಿಯಿಂದ, ಶಬ್ದಪ್ರಾಪ್ತ ಸರಳತೆಯಿಂದ ವಿಷಯ ವಿವೇಚನೆಯು ಸಾಮಾನ್ಯರ ಹೃದಯಕ್ಕೆ ಸಹ ಮುಟ್ಟುವದು. ಜನಸಾಮಾನ್ಯರಿಗೆ ಉಪಯುಕ್ತವಾಗಿದೆ ಈ ಚಿಕ್ಕಪುಸ್ತಕ

ಪ್ರಧಾನ ಸಂಪಾದಕರು

ಪ್ರಾರ್ಥನೆ. (ಗಾಂಧೀಜಿ ಅವರು ನಿತ್ಯ ಮಾಡುತ್ತಲಿದ್ದುದು.) ಪ್ರಕಾಶಕರು:— ಧಾರವಾಡ ಜಿಲ್ಲಾ

ಸರ್ವೋದ್ಧಯ ಕೇಂದ್ರ ಆರವಟಿಗೆ ಪುಟಗಳು :— ೨೦ ಬೆಲೆ :— ಎರಡು ಆಣೆ.

ಗಾಂಧಿಜಿಯವರು ದಿನಾಲು ಮುಂಜಾನೆ ಹಾಗೂ ಸಾಯಂಕಾಲ ಮಾಡುತ್ತಲಿದ್ದ ಪ್ರಾರ್ಥನೆಯ ಪದ್ಯಗಳ ಗದ್ಯರೂಪ ಕನ್ನಡ ಅನುವಾದವು ಇಲ್ಲಿ ಅದೆ; ಸಾಯಂಪ್ರಾರ್ಥನೆಯ ಅನುವಾದವು ಸಂಪೂರ್ಣ ಇರು. ವದಿಲ್ಲ. ಪೂಜ್ಯ ಮಹಾತ್ಮಾಜೀಯವರ ಪ್ರಾರ್ಥನೆಯ ಪದ್ಯಗಳನ್ನು ಜನತೆಗೆ ಪರಿಚಯ ಮಾಡಿಕೊಟ್ಟದ್ದು ಸಂತೋಷದ ಮಾತಾಗಿದೆ.

ಪ್ರಧಾನ ಸಂಪಾದಕರು.

ಸಂಸ್ಕಾರ ಸಾಧನೆ. ಲೇಖಕ ಮತ್ತು ಅನುವಾದಕ :— ಶ್ರೀ ಮಡಿವಾಳಪ್ಪ ಹನುಮಪ್ಪ ಕಲಹಾಳ. ಸಂಪಾದಕರು ಮತ್ತು ಪ್ರಕಾಶಕರು :— ಶ್ರೀ ನೀಲಕಂಠಯ್ಯ ಗೊಡಚಯ್ಯ ಗಣಾಚಾರಿ. ಪುಟಗಳು:—೯೫ ಬೆಲೆ:— ೮ ಆಣೆ.

ಈ ಗ್ರಂಥದಲ್ಲಿ ಪೂಜ್ಯ ಬಾಪೂಜಿಯವರ ಆಶ್ರಮದಲ್ಲಿ ಪ್ರತಿನಿತ್ಯವೂ ಜರಗುತ್ತಿರುವ ಮುಂಜಾನೆಯ ಹಾಗೂ ಸಾಯಂಕಾಲದ ಪ್ರಾರ್ಥನಾ ಪದ್ಯಗಳನ್ನು ಅವುಗಳ ಅರ್ಥಸಹಿತ ಕೊಡಲಾಗಿದೆ. ಇದಲ್ಲದೆ ಗಾಂಧೀಜಿಯವರ ತತ್ವಗಳನ್ನೂ ಸಹ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಕೆಲವು ಕನ್ನಡ ಪ್ರಾರ್ಥನಾ ಪದ್ಯಗಳೂ, ಶಿವಶರಣರ ವಚನಗಳೂ, ಅವರ ವಾಣಿಗಳೂ ಸಹ ಸ್ಥಾನವನ್ನು ಪಡೆದಿವೆ. ಕೊನೆಗೆ ಗಾಂಧೀಜಿಯವರ ಜೀವನದಲ್ಲಿಯ ಕೆಲವು ಮಹತ್ವದ ದಿನಗಳನ್ನೂ ಘಟನೆಗಳನ್ನೂ ಕೊಡಲಾಗಿದೆ. ಹೀಗೆ ಈ ಪುಸ್ತಕವು ವಿಧಾಯಕ ಕಾರ್ಯಕರ್ತರಿಗೆ ಉಪಯುಕ್ತವಾಗಿದೆ ಎಂದು ಹೇಳಬಹುದು

ಪ್ರಧಾನ ಸಂಪಾದಕರು.

ಗಾಂಧೀಜಿಯವರಿಗೆ ಶ್ರದ್ಧಾಂಜಲಿ. ಮೂಲ ಲೇಖಕರು:—ಪೂಜ್ಯ ವಿನೋಬಾ ಭಾವೆ. ಅನುವಾದಕರು:—ಶ್ರೀ. ತಿ. ಕೆಂ. ಹೆಬಸೂರ. ಮತ್ತು ಶ್ರೀ ಮಡಿವಾಳಪ್ಪ ಹ. ಕಲಹಾಳ. ಪ್ರಕಾಶಕರು:—ಶ್ರೀ ನೀಲಕಂಠಯ್ಯ ಗೊಡಚಯ್ಯ ಗಣಾಚಾರಿ. ಪುಟಗಳು:—೩೭ ಬೆಲೆ:— ಕಾಲ್ಕು ಆಣೆ

ಈ ಪುಸ್ತಕವು "ಗಾಂಧಿ ಪುಣ್ಯತಿಥಿ"ಯ ನಿಮಿತ್ತವಾಗಿ ಪೂಜ್ಯ ವಿನೋಬಾ ಅವರು ದಿನಾಂಕ ೩೧-೧-೧೯೪೮ಳಲರಿಂದ ದಿನಾಂಕ ೧೫-೨-೧೯೪೮ಳಲರ ವರೆಗೆ ನಿತ್ಯವೂ ಮಾಡಿದ ಕ್ರಮಬದ್ಧ ಪ್ರಾರ್ಥನಾ ಪ್ರವಚನಗಳಿಂದ ಕೂಡಿದ "गांधिजी की अक्षरांजलि" ಎಂಬ ಹಿಂದೀ ಪುಸ್ತಕದ ಅನುವಾದವು. ಪೂಜ್ಯ ವಿನೋಬಾಜಿಯವರು ಬಾಪೂಜಿಯವರ ಬಗೆಗೆ ತಮ್ಮಲ್ಲಿದ್ದ ಭಕ್ತಿ-ನಿಷ್ಠೆಯನ್ನು ಪ್ರದರ್ಶಿಸಿದ್ದಾರೆ. ಪ್ರಾರ್ಥನೆ, ಶಾಂತಿ, ಅಹಿಂಸೆ, ಒಕ್ಕಟ್ಟು, ಖಾದಿ, ರಾಮನಾಮ, ಧರ್ಮ, ಪರೋಪಕಾರ ಇವೆಲ್ಲವುಗಳ ಮಹತಿ-ಮಹತ್ವವನ್ನೂ ಗಾಂಧೀಜಿಯವರು ಇವುಗಳನ್ನು ತಮ್ಮ ಆಚರಣೆಯಲ್ಲಿ ತಂದು ಜನರಿಗೆ ಹೇಗೆ ಬೋಧಿಸಿದರೆಂಬುದನ್ನೂ ಹಾರ್ದಿಕವಾಗಿ ವರ್ಣಿಸಿದ್ದಾರೆ.

ಓದುಗರಲ್ಲಿ ಸಮಾಜ ಸೇವಾಬುದ್ಧಿ, ವಿಧಾಯಕ ಕಾರ್ಯತತ್ಪರತೆ ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸುವದರಲ್ಲಿ ಈ ಪುಸ್ತಕವು ಸಹಕಾರಿಯಾಗುವದರಲ್ಲಿ ಸಂದೇಹವಿಲ್ಲ.

ಧಾರವಾಡ
೨೫-೩-೧೯೪೮

ಪ್ರಧಾನ ಸಂಪಾದಕರು.

'ಬಾಲಕಿರಣ'

ಧಾರವಾಡ ಕನ್ನಡ ಗಂಡು ಮಕ್ಕಳ ಸೆಂಟ್ರಲ್ ಸ್ಕೂಲಿನ ಗುರು ಹಾಗು ಶಿಷ್ಯವೃಂದದವರು ಹೊರಡಿಸಿದ ದ್ವಿತೀಯ ಸಂಚಿಕೆಯು ಇದು. ಇಲ್ಲಿ ಸಂಗ್ರಹಿಸಲ್ಪಟ್ಟ ಕಥೆ, ಕವಿತೆ, ಸಂಭಾಷಣೆ, ನಿಬಂಧ, ಮೊದಲಾದವುಗಳು ಬಾಲಕರ ಬರೆಹ ಶಕ್ತಿಯ ಬೆಳಿಗೆಯ ಚಿಹ್ನೆಗಳಾಗಿವೆ ಶಾಲೆಯ ವಿವಿಧ ಚಟುವಟಿಕೆಗಳೂ ಬರೆಹಗಳೂ ಮಕ್ಕಳಲ್ಲಿ ಸ್ಫೂರ್ತಿಯನ್ನು ತುಂಬುವಂತಿವೆ. ಪ್ರಾಥಮಿಕ ಶಾಲೆಯಲ್ಲಿ ಅಚ್ಚುಹಾಕಿ ಹೊರಡಿಸುತ್ತಿರುವ ಈ ಸಾಹಸವು ಪ್ರಶಂಸನೀಯವೂ, ಅನುಕರಣೀಯವೂ ಆಗಿದೆ. ಕ್ರೇಂದ್ರ ಶಾಲೆಯು ಹೆಸರಿಗೆ ತಕ್ಕದಾಗಿದೆ ಎಂಬುದಕ್ಕೆ 'ಬಾಲಕಿರಣ'ವೇ ಸಾಕ್ಷಿ. ವಿಶಾಲ ಕಿರಣವಾಗಿ ಬೆಳಗಲಿ !

—ಪ್ರಧಾನ ಸಂಪಾದಕರು.

ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ

ಸುದ್ದಿ ಸಮಾಚಾರಗಳು

(೧) ಶ್ರೀಮತಿ ಎಲಿನಾರ ರೂಜವೆಲ್ಟ :—

ಭಾರತದಲ್ಲಿ ಸಂಚರಿಸುತ್ತಿರುವ ಅಮೇರಿಕೆಯ ಹಿಂದಿನ ಅಧ್ಯಕ್ಷರಾದ ದಿವಂಗತ ರೂಜವೆಲ್ಟರ ಪತ್ನಿ ಶ್ರೀಮತಿ ಎಲಿನಾರ ರೂಜವೆಲ್ಟರು ದಿನಾಂಕ ೨೨-೩-೫೪ ನೆಯ ದಿನ ಶಾಂತಿನಿಕೇತನ ವಿಶ್ವಭಾರತಿ ಸಂಸ್ಥೆಯನ್ನು ಸಂದರ್ಶಿಸಿದರು. ಆಗ ಆ ಸಂಸ್ಥೆಯವರು ಶ್ರೀಮತಿ ರೂಜವೆಲ್ಟರಿಗೆ ಡಾಕ್ಟರ ಆಫ್ ಲಿಟರೇಚರ ಎಂಬ (Doctor of Literature) ಗೌರವ ಪದವಿಯನ್ನು ಸಮರ್ಪಿಸಿದರು.

(೨) ಮಹರ್ಷಿ ಕರ್ವೆಯವರು :—

ಪುಣೆಯಲ್ಲಿ ಹೆಣ್ಣು ಮಕ್ಕಳ ವಿಶ್ವವಿದ್ಯಾಪೀಠವನ್ನು ಸ್ಥಾಪಿಸಿರುವ ಸ್ತ್ರೀಯರ ವಿದ್ಯಾಪ್ರಸಾರಕ್ಕಾಗಿ ಶ್ರಮಿಸುತ್ತಿರುವ ಮಹರ್ಷಿ ಕರ್ವೆಯವರು ಮಾರ್ಚ ತಿಂಗಳ ಕೊನೆಯ ವಾರದಲ್ಲಿ ಕರ್ನಾಟಕದ ಕೆಲವು ಸ್ಥಳಗಳಿಗೆ ಭೇಟ್ಟಿಯನ್ನಿತ್ತುದು ಸಂತೋಷದ ಸಂಗತಿಯಾಗಿದೆ. ಅವರು ದಿನಾಂಕ ೨೫-೩-೫೪ ಮಂಗಳವಾರ ಹುಬ್ಬಳ್ಳಿಯಲ್ಲಿ ಜರುಗಿದ ಶ್ರೀಮತಿ ಉಮಾಬಾಯಿ ಕುಂದಾಪುರ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಆ ಸಮಯದಲ್ಲಿ ಅವರು ಮಾಡಿದ ಭಾಷಣವು ನಮ್ಮ ಭಗಿನಿ ಸಮಾಜಕ್ಕೆ ಬೋಧಪ್ರದವಾಗಿದೆ: ಉತ್ತೇಜನದಾಯಕವಾಗಿದೆ.

ಮಹರ್ಷಿ ಕರ್ವೆಯವರು ಧಾರವಾಡದಲ್ಲಿಯು ಮರಾಠಿ ಮಂಡಳ ಸಂಸ್ಥೆಗೂ ಮತ್ತು ವನಿತಾ ಸೇವಾ ಸಮಾಜ ಸಂಸ್ಥೆಗೂ ಬೆಟ್ಟಿಯನ್ನಿತ್ತರು.

ದಿನಾಂಕ ೨೯-೩-೫೪ ಶನಿವಾರ ಅವರು ಹಂಸಭಾಂವಿಗೆ ಆಗಮಿಸಿ ಅಲ್ಲಿಯ ದುರ್ಗದ ಹಾಯಸ್ಕೂಲಿಗೂ, ಹೆಣ್ಣುಮಕ್ಕಳ ಅಥವಾ ವಿದ್ಯಾರ್ಥಿನಿಯರ 'ಅಸ್ತಮಹಾದೇವಿ'ಪ್ರಸಾದನಿಲಯಕ್ಕೂ ಸಂದರ್ಶನವಿತ್ತು ಶುಭಾಶಯಗಳನ್ನು ನೀಡಿದರು.

ಶೈಕ್ಷಣಿಕ ಸಮ್ಮೇಲನಗಳು

ನವಲಗುಂದ :—

ಎಡೆಯೂರು ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರ ಯಾತ್ರಾ ಸಮಾರಂಭದ ಅಂಗವಾಗಿ ದಿನಾಂಕ ೨೯-೩-೫೪ ನೆಯ ಶನಿವಾರ ನವಲಗುಂದದಲ್ಲಿ ಶಿಕ್ಷಣ ಪರಿಷತ್ತು ಒಳ್ಳೆಯ ಯಶಸ್ವಿಯಾಗಿ ಜರುಗಿತು. ಶ್ರೀ ಡಾ. ರು. ಕುಪ್ಪಸದ ಎ. ಓ. ಡಿ. ಎಸ್. ಬಿ. ಧಾರವಾಡ ಅವರು ಈ ಪರಿಷತ್ತಿನ ಅಧ್ಯಕ್ಷಸ್ಥಾನ ವಹಿಸಿದ್ದರು. ಧಾರವಾಡದ ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಮ. ಗು. ಹಂದ್ರಾಳ ಅವರು ವಿಶೇಷ ಶಿಕ್ಷಣ-ಶಿಕ್ಷಕ ವಿಷಯವನ್ನು ಕುರಿತು, ಶ್ರೀ ಎಫ್. ಸಿ. ಉಣಕಲ್ ಅವರು ಜೀವನ ಶಿಕ್ಷಣದ ಬಗ್ಗೆ ಶ್ರೀಮತಿ. ಶಾಂತಾದೇವಿ ಮಾಳವಾಡ ಅವರು ಸ್ತ್ರೀ ಶಿಕ್ಷಣದ ಬಗ್ಗೆ

ಉದ್ಬೋಧಕವಾಗಿ ಮಾತನಾಡಿದರು. ಅಧ್ಯಕ್ಷರ ಸಮಾರೋಪಣ ಭಾಷಣ ಹಾಗೂ ಶ್ರೀಮತಿ ಉಣಕಲ್ ಅವರ ವಚನಗಾಯನಗಳೊಂದಿಗೆ ಸಮ್ಮೇಲನವು ಮುಕ್ತಾಯವಾಯಿತು.

ಹಿರೇನರ್ತಿ ೩—

ದಿನಾಂಕ ೧೦-೩-೫೨ ನೇಯ ದಿನ ಇಲ್ಲಿ ಈ ಭಾಗದ ಗ್ರುಪ್ ಶಿಕ್ಷಕರ ಸಮ್ಮೇಲನವು ಯಶಸ್ವಿಯಾಗಿ ಜರುಗಿತು. ಶ್ರೀ ಆರ್. ಆರ್. ಕುಪ್ಪಸದ ಎ. ಓ. ಡಿ. ಎಸ್. ಬಿ ಧಾರವಾಡ ಇವರು ಅಧ್ಯಕ್ಷತೆ ವಹಿಸಿದ್ದರು. ಮಾದರಿಯ ಪಾಠಗಳು ಶೈಕ್ಷಣಿಕ ಚರ್ಚೆ— ಇವು ಆದನಂತರ ಅಧ್ಯಕ್ಷರ ಸಮಾರೋಪಭಾಷಣವಾಗಿ ಸಮ್ಮೇಲನವು ಕೊನೆಗಂಡಿತು. ಸಭೆಯಲ್ಲಿ ಊರ ಕೆಲ ಮಹನೀಯರು ಶಾಲಾ ಕಟ್ಟಡಕ್ಕೆ ೨-೨॥ ಸಾವಿರ ರೂಪಾಯಿ ಕೊಡುವದಾಗಿ ವಾಗ್ದಾನ ಮಾಡಿದರು. ರಾತ್ರಿ ಶಾಲೆಯ ಮಕ್ಕಳು "ವೀರಮಾತೆ ಬೆಳವಡಿ ಮಲ್ಲಮ್ಮ" ಹಾಗೂ "ಆತ್ಮೋದ್ಧಾರ" ಎಂಬ ಎರಡು ನಾಟಕಗಳನ್ನು ಅಭಿನಯಿಸಿದರು.

ದಿನಾಂಕ ೨೩-೧೨-೧೯೫೧ ರಂದು ವಿಜಾಪುರ ಜಿಲ್ಲೆಯ ತಂಗಡಿಗಿ ಗ್ರಾಮದಲ್ಲಿ ಶ್ರೀ. ಗ. ಜ. ಗುಂಜೀಕರ, ಎ. ಓ, ಅವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಜರುಗಿತು. ಶಾರೀರಿಕ ಚಟುವಟಿಕೆಗಳು, ಮಾದರಿ ಪಾಠಗಳು, ಶೈಕ್ಷಣಿಕ ವಿಷಯಗಳ ಚರ್ಚೆ, ಏಕಾಂಕ ನಾಟಕಗಳು ಮೊದಲಾದ ಕಾರ್ಯಕ್ರಮಗಳು ಒಳ್ಳೇ ಯಶಸ್ವಿಯಾಗಿ ಸಾಗಿದವು. ಸಮಾಜ ಶಿಕ್ಷಣದ ಒಂದು ಪಾಠ, ಬಹುವರ್ಗಗಳ ಪಾಠ ಮತ್ತು ಕಟ್ಟಿಗೆಯ ಕೆಲಸದ ಪಾಠ ಜೆನ್ನಾಗಿ ಸಾಗಿದವು. ಶೈಕ್ಷಣಿಕ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಡಿ. ಎ. ಇ. ರಾದ ಶ್ರೀ ಹಂದ್ರಾಳ ಹಾಗು ಬೀಟ ಆಫೀಸರರಾದ ಶ್ರೀ ಹಿಂಡೇಕರ, ವಿಜಾಪುರ ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಎಸ್. ಆರ್. ಜೋಶಿ ಹಾಗು ಇನ್ನುಳಿದ ಆ ಭಾಗದ ಉಪಶಿಕ್ಷಣಾಧಿಕಾರಿಗಳು, ಉಪಸ್ಥಿತರಿದ್ದರು. ಬಾಲಕರ ಉತ್ಸಾಹ, ಶಿಕ್ಷಕರ ಕರ್ತವ್ಯದಕ್ಷತೆ, ಊರ ಪ್ರಮುಖರ ಪ್ರೋತ್ಸಾಹ ಇವು ಮುಪ್ಪರಿಗೊಂಡು ಕಾರ್ಯಕ್ರಮಗಳಿಗೆ ಕಳೆಕಟ್ಟಿದವು.

ದಿನಾಂಕ ೨೩—೧೧—೧೯೫೧ರಂದು ವಿಜಾಪುರ ಜಿಲ್ಲೆಯ ಸೂಳಿಭಾವಿ ಗ್ರಾಮದಲ್ಲಿ ಡಿ ಎ. ಇ.ರಾದ ಶ್ರೀ. ಪು. ಗು. ಹಂದ್ರಾಳ ಇವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕರ ಸಮ್ಮೇಲನವು ಒಳ್ಳೇ ಯಶಸ್ವಿಯಾಗಿ ಸಾಂಗವಾಯಿತು. ಬಾಲಕರೂ, ಶಿಕ್ಷಕರೂ ಪಾಲಕರೂ ತುಂಬಾ ಆಸ್ಥೆಯನ್ನು ತೋರಿಸಿದರು. ಕಾರ್ಯಕ್ರಮಗಳೆಲ್ಲ ಅಚ್ಚುಕಟ್ಟಾಗಿ ಶಿಸ್ತಿನಿಂದ ಸಾಗಿದವು.

ಶೈಕ್ಷಣಿಕ ಸುದ್ದಿಗಳು

ಹೊಸಕೋಟೆ (ರಾಮದುರ್ಗ): ಪಾತುಗಾರಿಕೆಯ ಮಂಡಳದ ಮುಕ್ತಾಯ ಸಮಾರಂಭವು ಬೀಟ ಆಫೀಸರ ಶ್ರೀ. ಬಸವಪ್ರೇಷ್ಠಿ ರಾಚಪ್ಪ ಅವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. 'ಶಿಕ್ಷಣದ ಮಹತ್ವ'ವನ್ನು ಕುರಿತು ಚರ್ಚೆಯಾಯಿತು. ಳರಿಂದ ೭ನೆಯ ಇಯತ್ತೆಯ ವರೆಗಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಲಕ್ಕುಂಡಿ: ಸಮಾಜ ಶಿಕ್ಷಣ ವರ್ಗಗಳ ಒಂದನೆಯ ಪರೀಕ್ಷೆಯಾಯಿತು. ಸ್ಕೂಲ್ ಕಮಿಟಿ ಚೇರಮನ್ ಶ್ರೀ. ಬಣವಿ ಹಾಗು ಅಬ್ದುಲ್‌ಖಾದರ ಸಾಹೇಬರೂ ಎ. ಡಿ. ಇ. ಆಯ್ ಅವರಾದ ಶ್ರೀ. ಕ. ಬ. ಅಂಗಡಿಯವರೂ ಸಮಾಜ ಶಿಕ್ಷಣದ ಪ್ರಗತಿಯನ್ನು ಕಂಡು ಸಂತೋಷವ್ಯಕ್ತಪಡಿಸಿದರು. ಶ್ರೀ ಫಕೀರಗೌಡರು ಪಾಟೀಲ ಅವರು ತಮ್ಮ ತಂದೆಯವರ ಸ್ಮರಣಾರ್ಥವಾಗಿ ೧೫೦ ರೂಪಾಯಿಯ ಜಾಗಟೆಯನ್ನು ಕೊಡಿಸಿದ್ದಕ್ಕಾಗಿ ಸಂತೋಷವನ್ನು ವ್ಯಕ್ತ ಮಾಡಲಾಯಿತು.

ಬಾಸಗೋಡ: ೨೬-೩-೧೯೫೨ನೆಯ ದಿನ ಯುಗಾದಿಯ ಶುಭ ಮುಹೂರ್ತದಲ್ಲಿ ಶಾಲೆಯ ಹೊಸ ಕಟ್ಟಡದ ಉದ್ಘಾಟನ ಸಮಾರಂಭವು ಶ್ರೀ. ಯಾರಗಲ್ ವಾಯ್. ಬಿ. (ಡಿ. ಇ. ಆಯ್. ಕಾರವಾರ) ಅವರ ಅಮೃತ ಹಸ್ತದಿಂದ ನೆರವೇರಿತು.

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಪರಿಣಾಮ, ೧೯೫೨

ಕೆಳಗೆ ಕಾಣಿಸಿದ ಶಾಲೆಗಳ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯ ಪರಿಣಾಮವು ಸಮಾಧಾನಕಾರಕವಾಗಿದೆಯೆಂಬುದು ಕೆಳಗಿನ ಅಂಕಿ ಸಂಖ್ಯೆಗಳಿಂದ ತಿಳಿಯುವದು.

ಶಾಲೆಯ ಹೆಸರು ಮತ್ತು ಊರು.	ಪರೀಕ್ಷೆಗೆ ಕುಳಿತವರು	ಪಾಸಾದವರು
ಕ. ಗಂ. ಶಾಲೆ ಲೋಣಿ (ಇಂಡಿ)	೧೪	೧೨
,, ಹೊಸಕೋಟೆ (ರಾಮದುರ್ಗ)	೨೨	೧೪
,, ಆಳಗವಾಡಿ (ನವಲಗುಂದ)	೧೨	೮
,, ತೇಲಗಿ (ಖಾನಾಪುರ)	೭	೬
,, ಕಲಾದಗಿ (ವಿಜಾಪುರ)	೧೬	೧೨
,, ಕಾಖಂಡಕಿ (ವಿಜಾಪುರ)	೧೫	೧೩
,, ಕುರಬಗೊಂಡ (ಹಾವೇರಿ)	೨೫	೨೪

ವಿಶಿಷ್ಟ ಅರ್ಹತೆ ಪಡೆದವರು.

ಆಳಗವಾಡಿ : ಕುಮಾರ ಶಿ. ಮ. ಈರೇಶನವರ ಗದಗ ಕೇಂದ್ರಕ್ಕೆ ೨ನೆಯ ನಂಬರು.

ಕಾಖಂಡಕಿ : ಕುಮಾರ ಶಿ. ಮ. ಬಿದರಿ. ಶೇತಕಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ವಿಜಾಪುರ ಜಿಲ್ಲೆಗೆ ೧ನೆಯ ನಂಬರು.

ಹುಬ್ಬಳ್ಳಿ (೧೬ನೇ ನಂಬರ ಶಾಲೆ) ಕುಮಾರ ತೆವರಿ ನಿ. ತಿ ಮತ್ತು ಮಿರ್ಜಿ ಬ. ಗು. ಇವರು ಅನುಕ್ರಮವಾಗಿ ಹುಬ್ಬಳ್ಳಿ ಕೇಂದ್ರಕ್ಕೆ ೧ ಮತ್ತು ೨ನೆಯ ನಂಬರು ಬಂದಿರುವರು.

ಹುಬ್ಬಳ್ಳಿ ಕನ್ನಡ ಹೆಣ್ಣು ಮಕ್ಕಳ ಶಾಲೆ ನಂ. ೨. ಈ ಶಾಲೆಯ ಕುಮಾರಿ ಉಷಾತಾಯಿ ಮುತಾಲಿಕ ದೇಸಾಯಿ ಹೆಣ್ಣು ಮಕ್ಕಳಲ್ಲಿ ಇಡೀ ಕೇಂದ್ರಕ್ಕೆ ೧ನೆಯ ನಂಬರು ಬಂದಿರುವಳು.

ಕುರಬಗೊಂಡ : ಕುಮಾರ ಬ. ಹೊ. ಬೆಳಲದವರ ಹಾಗು ದ್ಯಾ. ಹ. ಕನಕಾಪೂರ ಕೇಂದ್ರಕ್ಕೆ ಅನುಕ್ರಮವಾಗಿ ೧ ಮತ್ತು ೩ನೆಯ ನಂಬರು ಬಂದಿದ್ದಾರೆ.

ಸ್ಕಾಲರಶಿಪ್ ಪರೀಕ್ಷೆಯ ಪರಿಣಾಮ, ೧೯೫೧

ಕಾಖಂಡಕಿ : ಹೈಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೆ ೪ ವಿದ್ಯಾರ್ಥಿಗಳು ಕುಳಿತರು. ಮೂವರು ಪಾಸಾದರು

ತೇಲಗಿ (ಖಾನಾಪುರ) : ೪ನೇ ಇಯತ್ತೆ ಸ್ಕಾಲರಶಿಪ್ ಪರೀಕ್ಷೆಗೆ ೩ ವಿದ್ಯಾರ್ಥಿಗಳು ಕುಳಿತರು ಮತ್ತು ಇರ್ವರು ಪಾಸಾದರು.

ಹುಬ್ಬಳ್ಳಿ (೧೬ನೇ ನಂಬರ ಶಾಲೆ) ಶ್ರೀ. ತೆವರಿ ಮತ್ತು ಶ್ರೀ. ಮಿರ್ಜಿ ಇವರು ಹೈಸ್ಕೂಲ್ ಸ್ಕಾಲರ ಶಿಪ್ ಪರೀಕ್ಷೆಯಲ್ಲಿ ಪಾಸಾಗಿರುವರು. ಕುಮಾರಿ ಉಷಾ (೨ನೇ ನಂಬರ ಶಾಲೆ) ಹೈಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಕೇಂದ್ರಕ್ಕೆ ೧ನೇ ನಂಬರ ಬಂದು ಪಾಸಾಗಿರುವಳು.

ಡ್ರಾಯಿಂಗ ಪರೀಕ್ಷೆಯ ಪರಿಣಾಮ, ೧೯೫೧

	ಎಲಿಮೆಂಟರಿ		ಇಂಟರಮೀಜಿಯಟ್	
	ಕುಳಿತವರು	ಪಾಸಾದವರು	ಕುಳಿತವರು	ಪಾಸಾದವರು
ಆಳಗವಾಡಿ :	೧೨	೫	೯	೪
ಧಾರವಾಡ (ಟಿ. ಸಿ. ಎಂ) :	೨೭	೨೦*	೨೦	೧೯*

[*ಇವರಲ್ಲಿ ಮೂವರು ೧ನೆಯ ತರಗತಿಯಲ್ಲಿ ಮತ್ತು ಮೂವರು ೨ನೆಯ ತರಗತಿಯಲ್ಲಿ ಉತ್ತೀರ್ಣರಾಗಿದ್ದಾರೆ.]

[*ಇವರಲ್ಲಿ ೮ ಶಿ. ವಿದ್ಯಾರ್ಥಿಗಳು ೨ನೆಯ ತರಗತಿಯಲ್ಲಿ ಪಾಸಾಗಿರುತ್ತಾರೆ.]

ಅಲ್ಪಾವಧಿಯ ಶಾರೀರಿಕ ಶಿಕ್ಷಣ ಶಿಬಿರ, ಸವಣೂರ (ಜಿ:—ಧಾರವಾಡ.)

ಧಾರವಾಡ ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಶಾರೀರಿಕ ಶಿಕ್ಷಣದ ಅಲ್ಪಾವಧಿಯ-ಅಂದರೆ ಎರಡು ತಿಂಗಳ—ತರಬೇತಿ ವರ್ಗವು ಸವಣೂರು ದಿನಾಂಕ ೩-೧೨-೫೧ ರಿಂದ ದಿನಾಂಕ ೨-೨-೧೯೫೨ ರ ವರೆಗೆ ಯಶಸ್ವಿಯಾಗಿ ನಡೆಯಿತು. ಜಿಲ್ಲೆಯ ಎಲ್ಲ ತಾಲೂಕಗಳಿಂದ ಹಾಗೂ ಧಾರವಾಡ, ಹುಬ್ಬಳ್ಳಿ, ಗದಗ, ಈ ಮೂರೂ ಶಹರಗಳಿಂದ ಒಟ್ಟು ೪೯ ಜನ ಪ್ರಾಥಮಿಕ ಶಿಕ್ಷಕರು ಈ ಶಿಬಿರದಲ್ಲಿ ತರಬೇತಿಯನ್ನು ಹೊಂದಿದರು.

ಸವಣೂರ ಭಾಗದ ಪ್ರಾಂತ ಆಫೀಸರರಾದ ಶ್ರೀ ಸಬನೀಸ ಅವರಿಂದ ದಿನಾಂಕ ೩-೧೨-೫೧ ನೆಯ ದಿನ ಶಿಬಿರದ ಪ್ರಾರಂಭೋತ್ಸವವು ಜರುಗಿತು. ಅಂದಿನಿಂದಲೇ ಶಿಬಿರದ ಕಲಸವು ಒತ್ತರದಿಂದ, ಬಿಡುವಿಲ್ಲದೆ ನಡೆಯಿತು. ಅಭ್ಯಾಸ ಪತ್ರಿಕೆಯಂತೆ ಆಗಬೇಕಾದ ಯಾವತ್ತೂ ವಿಷಯಾಂಗಗಳು ತರಬೇತಿಯನ್ನು ಹೊಂದಲಿಕ್ಕೆಬಂದ ಶಿಕ್ಷಕರಿಗೆ ಕಲಿಸಲ್ಪಟ್ಟವು.

ಶ್ರೀ ಬಿ. ಎ. ಬ್ಯಾಡದ ಹಾಗೂ ಅವರ ಸಂಗಡಿಗರು ಈ ತರಬೇತಿ ವರ್ಗದ ಸಂಚಾಲಕರಿದ್ದು ಒಳ್ಳೆಯ ಯಶಸ್ವಿಯಾಗಿ ತಮ್ಮ ವ್ಯವಸಾಯ ಬಂಧುಗಳಾದ ಪ್ರಾಥಮಿಕ ಶಿಕ್ಷಕರಿಗೆ, ಶಾರೀರಿಕ ಶಿಕ್ಷಣದ ವಿವಿಧ ಚಟುವಟಿಕೆಗಳನ್ನು ಕಲಿಸಿದರಲ್ಲದೆ, ತಾತ್ವಿಕ ಜ್ಞಾನವನ್ನು ಮಾಡಿಕೊಟ್ಟರು. ಇದೊಂದು ಈ ಶಿಬಿರದ ವೈಶಿಷ್ಟ್ಯ.

ಈ ಭಾಗದ ವಿದ್ಯಾಧಿಕಾರಿಗಳಾದ ಡಾ|| ಚಕ್ಕರಮನೆಯವರೂ ಎ. ಓ. ಆವರಾದ ಶ್ರೀ ಕುಪ್ಪಸದ ಅವರೂ ಈ ಶಿಬಿರಕ್ಕೆ ಸಂದರ್ಶನವಿತ್ತು ಸಂತೋಷ ವ್ಯಕ್ತಮಾಡಿದರು.

ಶಿಬಿರದಲ್ಲಿಯ ವಿದ್ಯಾರ್ಥಿ-ಶಿಕ್ಷಕರು ವಿಷ್ಣುತೀರ್ಥ, ಬಂಕಾಪುರ ಮೊದಲಾದ ಸ್ಥಳಗಳಿಗೆ ಚಿಕ್ಕ ಪ್ರವಾಸವನ್ನೂ ಕೈಕೊಂಡರು; ಮಹತ್ವದ ದಿನಾಚರಣೆಗಳನ್ನು ಆಚರಿಸಿದರು.

ಈ ತರಬೇತಿ ವರ್ಗದ ಮುಕ್ತಾಯ ಸಮಾರಂಭವು ಡಾ. ಪ್ಹಿ. ಜಿ. ಶಾನಭಾಗ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಹೀಗೆ ಈ ಅಲ್ಪಾವಧಿ ಶಾರೀರಿಕ ಶಿಕ್ಷಣ ತರಬೇತಿ ವರ್ಗವು ಈ ಜಿಲ್ಲೆಯ ಡೆ. ಎ. ಇ. ಆದ ಶ್ರೀ. ಎ. ಎಚ್. ದಳವಾಯಿ ಹಾಗೂ ಶಾರೀರಿಕ ಶಿಕ್ಷಣ ಅ. ಡೆ. ಎ. ಇ. ಆದ ಶ್ರೀ. ಆರ್. ಬಿ. ಹಾವೇರಿ ಇವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಕೊನೆಗೊಂಡಿತು.

ವಿದ್ಯಾರ್ಥಿಗಳೇ ಪರೀಕ್ಷೆಯಲ್ಲಿ ನಿಮ್ಮ ಯಶವನ್ನು ನಿಶ್ಚಿತಗೊಳಿಸಬೇಕೇ ?

ಹಾಗಿದ್ದರೆ

ಪ್ರಶ್ನೋತ್ತರ ದೀಪಿಕೆ

ಭೂಗೋಲ ಮತ್ತು ಇತಿಹಾಸ

ಇವುಗಳನ್ನು ತಪ್ಪದೇ ಓದಿರಿ !

ಈ ಪುಸ್ತಕಗಳು ಮುಲ್ಕೀ ಮತ್ತು ಸ್ಕಾಲರ್ ಶಿಪ್ ಪರೀಕ್ಷೆಯ, ಹೊಸ ಅಭ್ಯಾಸ ಪತ್ರಿಕೆಯ ಪೂರ್ಣ ವಿಷಯಗಳನ್ನೊಳಗೊಂಡಿದ್ದು, ಇತ್ತೀಚಿನ ಭೌಗೋಲಿಕ, ರಾಜಕೀಯ, ಹಾಗು ಐತಿಹಾಸಿಕ ಬದಲಾವಣೆಗಳನ್ನೆಲ್ಲಾ ಒಳಗೊಂಡಿವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇ ಬೇಕಾದ ಪುಸ್ತಕಗಳು.

ಬೆಲೆ ಪ್ರತಿಯೊಂದಕ್ಕೆ ೦—೧೨—೦. (ಅಂಚೇ ವೆಚ್ಚ ಪ್ರತ್ಯೇಕ).

ಇಂದೇ ನಿಮ್ಮಲ್ಲಿಯ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ. ಅಥವಾ ಕೆಳಗಿನ ಪತ್ತೆಗೆ ಬರೆಯಿರಿ—

ವೀಣಾ ಬುಕ್—ಡಿಪೋ.

ಮಾರುತೀ ಬೀದಿ, ಬೆಳಗಾವಿ

ತ್ವರೆ ಮಾಡಿರಿ ! ಇಂದೇ ಸಂಗ್ರಹಿಸಿರಿ !

ಹಬ್ಬ-ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು ?
ಅವುಗಳಿಗಿರತಕ್ಕ ಐತಿಹಾಸಿಕ ಒನ್ನೆಲೆ ಮತ್ತು ಮಹತ್ವ ಕುರಿತು
ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

——

ತ್ವರೆ ಮಾಡಿರಿ ! ಇದೀಗ ತಯಾರಾಗಿವೆ.

ಲಘುಪಾಠಮಾಲೆ-೧ ಇತಿಹಾಸ ಬೆಲೆ ೦—೬—೦

,, ೨ ಭೂಗೋಲ ಬೆಲೆ ೦—೬—೦

,, ೩ ಭೂಮಿತಿ-ಜಮಾಖರ್ಚು ೦—೬—೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿವೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಕನ್ನಡ ನಾಡಿನಲ್ಲಿಯೇ ಪ್ರ-ಪ್ರಥಮವಾಗಿ, ಪೂರ್ಣವಾಗಿ ಹೊರಟ ಗಣಿತಮಾಲೆ ಇದೊಂದೇ.!

ನೂತನ ಗಣಿತ

ಲೇಖಕರು: ಗಲಗಲಿ

(೧ರಿಂದ ೭ನೆಯ ವರೆಗಿನ ವರ್ಗಗಳಿಗಾಗಿ ಪ್ರತ್ಯೇಕ ಗಣಿತಗಳು)

ಸರಕಾರದವರಿಂದ ಮಾನ್ಯತೆ ಪಡೆದಿವೆ. ಕನ್ನಡ ನಾಡಿನ ಪ್ರತಿಯೊಂದು ಶಾಲೆಯಲ್ಲಿಯೂ ಉಪಯೋಗಿಸಲ್ಪಡುತ್ತಿವೆ. ಬೆಲೆಯಾದರೂ ಅತ್ಯಲ್ಪ. ಹೊಸ ಅಭ್ಯಾಸಪತ್ರಿಕೆಗಳನ್ನು ಅನುಸರಿಸಲಾಗಿದೆ. ವಿದ್ವಜ್ಜನರ ಮನ್ನಣೆಯನ್ನೂ ಪಡೆದಿವೆ. ಎಲ್ಲರ ಪ್ರೇಮಾದರಗಳನ್ನೂ ಗಳಿಸಿವೆ.

ಅಂತೇ ಇವು ಶ್ರೇಷ್ಠ ಗಣಿತಗಳು

ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ; ಸಾಕಷ್ಟು ಸಂಖ್ಯೆಯಲ್ಲಿ ಪೂರೈಸುವೆವು.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಸೂಚನೆ: ಮೊದಲನೆಯ ವರ್ಗದ ಗಣಿತ ಅಚ್ಚಿನಲ್ಲಿದೆ.

ಪುಟ ೨೬೦) ಮೂಲ ಶಿಕ್ಷಣ (ಬೆಲೆ: ೩-೦-೦

ಲೇಖಕರು:— ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.
(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಪತ್ಯ, ಅಹಿಂಸೆ, ಅಸ್ಪೃಶ್ಯತಾನಿವಾರಣೆ ಸ್ವದೇಶಪ್ರೇಮ ಇತ್ಯಾದಿ ರಾಷ್ಟ್ರೀಯ ಭಾವನೆಗಳ ವಿಶೇಷತಃ ಗಾಂಧೀಜಿಯ ವಿಧಾಯಕ ವಿಚಾರಗಳ

ಭಾರತೀಯರ ಕಥೆಗಳು

ಕನ್ನಡ ೩ನೆಯ ವರ್ಗಕ್ಕೆ

ಲೇಖಕ:—ಶ್ರೀ ಹಿರೇಮಠ ಬೆಲೆ ೮ ಆಣೆ

ಮ. ಬುದ್ಧನಿಂದ ದಾದಾಭಾಯಿ ನವರೋಜಿ. ತಥಾ ಮ. ಗಾಂಧೀಜಿಯವರೆಗಿನ ಕಥೆಗಳನ್ನು ಸುರಸ ಹಾಗು ಸರಳ ಶೈಲಿಯಲ್ಲಿ ರಚಿಸಿದೆ.

ಸಾಮಾನ್ಯ ಜ್ಞಾನ

ಮತ್ತು

ಧಾರವಾಡ ಜಿಲ್ಲೆಯ ಭೂಗೋಲ

ಪೌರನೀತಿ ಸಹಿತ ಬೆಲೆ ೧೦ ಆಣೆ.

೩ನೆಯ ವರ್ಗಕ್ಕೆ ಪಠ್ಯಪುಸ್ತಕದ ಜೊತೆಗೆ ಈ ಎರಡೇ ಪುಸ್ತಕಗಳು ಸಾಕು!

ಮಾರಾಟಗಾರರು:—ಆಕಳವಾಡಿ ಬುಕ್‌ಡಿಪೋ, ಧಾರವಾಡ.

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟುವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತೆ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣಿಳೆಸುವ ಸುಂದರ ಚಿತ್ರಗಳು!! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ: ಬೆಲೆ ೦–೫–೦

೨ನೆಯ ತರಗತಿಯ ಅಂಕಗಣಿತ: ಬೆಲೆ ೦–೭–೦

೩ನೆಯ ತರಗತಿಯ ಅಂಕಗಣಿತ: ಬೆಲೆ ೦–೧೦–೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು: ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಸಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟುದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶೆಗಳು! ಚಿತ್ರಪಟಗಳು! ಗಹನವಾದ ವಿಷಯವನ್ನು ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ: ೧—೦—೦ ಮಾತ್ರ

ಪ್ರಕಾಶಕರು:

ರಾಮಾಶ್ರಯ ಬುಕ್-ಡಿಪೊ, ಧಾರವಾಡ

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

" ಅನೇಕ ವರ್ಷಗಳಿಂದ ನನಗೆ ಚಿನ್ನಾಗಿ ಪರಿಚಿತರಾದ ಶ್ರೀಮಾನ್ ಅನಂತರಾವ ಬೋಕೆಯವರ " **ವ್ಯಾವಹಾರಿಕ ಗಣಿತ** "ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾದ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ ಪಿ. ಎಸ್. **ಮುಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ವ್ಹಿ. ಬೋಕೆ ಫುಲಬಾಗ ೨೨೪/೪೭ ಬೆಳಗಾವಿ

ಅಲ್ಪಾವಧಿಯಲ್ಲಿಯೇ ಪ್ರಖ್ಯಾತಿ ಪಡೆದು, ಕನ್ನಡ ನಾಡಿನಲ್ಲೆಲ್ಲ ಉಪಯೋಗಿಸಲಾಗುತ್ತಿರುವ ಶ್ರೀ. ಗಲಗಲಿಯವರ

ನೂತನ ಕಿಸೆಯ ಕೈಪಿಡಿ ಮಾಲೆ

[ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ]

(೧) ಆರೋಗ್ಯಶಾಸ್ತ್ರ	೦-೬-೦	(೨) ಪರೀಕ್ಷೆಯ ಗುಟ್ಟು	೦-೬-೦
(೩) ಶಾಸ್ತ್ರೀಯ ವಿಷಯ	೦-೬-೦	(೪) ಗಣಿತ ರಹಸ್ಯ	೦-೬-೦
(೫) ಭೂಮಿತಿ	೦-೬-೦	(೬) ಜನಾಖರ್ಚು	೦-೬-೦
(೭) ಪ್ರಬಂಧ ಲೇಖನ	೦-೬-೦	(೮) ವ್ಯಾಕರಣಚ್ಛಂದೋಲಂಕಾರ	೦-೬-೦

ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ವಿಷಯನಿರೂಪಣೆಯುಳ್ಳ ಇಂಥ ಪುಸ್ತಕಗಳು ಬೇರೆ ಇಲ್ಲ. ಕಾರಣ ವಿದ್ಯಾರ್ಥಿಗಳು ಶ್ರೀ. ಗಲಗಲಿಯವರ ಕೃತಿಗಳನ್ನು ಕೊಂಡು ಓದಿ ತೇರ್ಗಡೆಹೊಂದಲಡ್ಡಿಯಿಲ್ಲ. ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ !

ವ್ಯಾಪಾರಿಗಳಿಗೆ ಧಾರಳ ಕಮೀಶನ್ !!

ಆಕಳವಾಡಿ ಬುಕ್-ಡಿಪೋ, ಧಾರವಾಡ

ಬದುಕು-ಕಿರಿಯ

ಪೆಪ್ಪು ಬುಕ್ ಕಮಿಷನಿಯವರಿಂದಲೂ, ಜೇಲುಗಿಕಾಂ
ಗಳಿಂದಲೂ ಮನಸ್ಸಿಗೆ ಪಡೆದು, ಶಿಕ್ಷಣ ತಜ್ಞರಿಗೂ
ಶಿಕ್ಷಕ-ಶಿಕ್ಷಕಿಯರಿಗೂ ರಾಲಾ ಬಾಲಕರಿಗೂ
ಪ್ರೀತಿಗೆ ಪಾತ್ರವಾದ ಪುಸ್ತಕಮಾಲೆ

ಇದೊಂದೇ

ಪ್ರಗತಿ ಪೂರಕ ಜೀವನ

ಇದು ಧಾರವಾಡ, ವಿಜಾಪುರ ಜಿಲ್ಲೆಗಳ ಸ್ಕೂಲು
ಬೋರ್ಡುಗಳಲ್ಲಿಯೂ ಮ್ಯು. ಸ್ಕೂಲು ಬೋರ್ಡಿನ
ಲ್ಲಿಯೂ ಪ್ರಾಥಮಿಕ ಶಾಲೆಗಳ ೫-೬ನೆಯ ವರ್ಗಕ್ಕೆ ಪು
ಪಠ್ಯಪುಸ್ತಕವೆಂದು ಮಂಜೂರಾಗಿದೆ. ಈ ಪೊತ್ತಿಗೆಯು
ಚಿಕ್ಕಮಕ್ಕಳ ಬುದ್ಧಿಕ, ನೈತಿಕ, ಸೌಂದರ್ಯ ಶಕ್ತಿಗಳನ್ನು
ಬಲಪಡಿಸುವುದು. ಇಂದೇ ತರಿಸಿಕೊಳ್ಳಿರಿ.

ಬೆಲೆ: ೧-೪-೦

ಸಿಗುವ ಸ್ಥಳ: ಗ್ರಂಥಕರ್ತರಲ್ಲಿಯೂ, ಗದಗ ಮತ್ತು
ಹುಬ್ಬಳ್ಳಿ ಪೊಂಬುಳಿ ಬಾಧುಗಳಲ್ಲಿಯೂ

ಶರಭರಾಜ ಕೋಡಿಕೊಪ್ಪಮಠ. ಮಾಸ್ತರ

ಸರಕಾರಿ ಪ್ರ್ಯಾಕ್ಟಿಸಿಂಗ ಸ್ಕೂಲ, ವಿಜಾಪುರ.

ಒಸಗೆ ಇಯತ್ತಿಯ ಹೊಸ ಅಭ್ಯಾಸಪತ್ರಿಕೆ
ಯಂಕೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೨—೦

ಮಾನ್ಯರಾದ ಎಸ್.ಎಸ್. ಅಂಗಡಿ, ಪ್ರಿ ರೆಡ್ಡಿ,
ಪ್ರಿ. ಜೋಶಿ, ಪ್ರಿ. ಇಂಜಲ, ಪ್ರಿ. ವರ್ಟಿ, ಪ್ರಿ.
ಜಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು,
ಶ್ರೀ. ಶಾನಭೋಗ (ಡಿ.ಎನ್.ಪಿ.) ಮುಂತಾದವ
ರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ
ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: ನಿ. ವಿ. ನಂದಗಾಂವ
೬೧೯ ಮರಗಲ್ಲಿ, ಬೆಳಗಾಂವ

ಮನೆಮನೆಗೆ ಅವಶ್ಯ ಸಂಗ್ರಹಿಸಲೇ ಬೇಕಾದ
ಜಿ. ಶ್ರೀ. ಕುಲಕರ್ಣಿಯವರ ಪುಸ್ತಕಗಳು

ಚಿಕ್ಕ ಕಥೆಗಳು

	ರೂ.	ಆ.
ಪ್ರಲ್ಹಾದ	೦	೨
೧೦ ಹೆಣ್ಣಿನ ಮತ್ತು ಕರಗತಿಯ ಕತೆಗಳು	೦	೨
ಮಹಾತ್ಮಾ ಗಾಂಧಿ	೦	೪
ಅಕ್ಬರ-ಬೀರಬಲ್ ವಿನೋದ ಕತೆ	೦	೬
ಭಾರತೀಯ ಐತಿಹಾಸಿಕ ಕಥೆಗಳು	೦	೮
ರಾಮಕೃಷ್ಣ ಪರಮಹಂಸ ಕಥೆ	೦	೬

ಇತರ ಪುಸ್ತಕಗಳು

ಶ್ರೀ ಕಪಿಲೇಶ ಸ್ತೋತ್ರ	೦	೫
ಶ್ರೀ ಲಾವಣ್ಯಲಕ್ಷ್ಮಿ	೦	೫

ತ್ರಿರಂಗಿ ಚಿತ್ರದ ಪುಸ್ತಕಗಳು

ಶಕುಂತಲೆ	೦	೬
ರಾಷ್ಟ್ರೀಯ ಮಹಾಪುರುಷರು	೦	೧೦
ಭಗವಾನ್ ಶ್ರೀರಾಮ	೩	೦

ಅವುಗಳಲ್ಲದೆ ಬೇರೆ ಕಥೆಯ ಪುಸ್ತಕಗಳೂ
ದೊರೆಯುತ್ತವೆ.

ಸರಸ್ವತಿ ಪುಸ್ತಕ ಭಾಂಡಾರ
ಬಸವನ ಬೀದಿ, ಬೆಳಗಾಂವಿ

ಹೊಸದಿದೆ! ಹೊಗಳಿದೆ!

ಶಿಕ್ಷಣ ದರ್ಶನ

ಲೇಖಕರು: ಶ್ರೀ. ನಾ.ಲ. ಬಾಪಟ, ಬಿ. ಎ.
ಬಿ.ಟಿ. ಮುಖ್ಯಾಧ್ಯಾಪಕರು, ಕರ್ನಾಟಕಹೈಸ್ಕೂಲ್
ಮಾಳಮರಡಿ, ಧಾರವಾಡ ಬೆಲೆ: ೧—೮—೦.
ಟ್ರೇನಿಂಗ ಪಡೆಯುತ್ತಿರುವವರಿಗೂ ಶಿಕ್ಷಕರಿಗೂ
ಅತ್ಯುಪಯುಕ್ತವಾದುದು.

ಪ್ರಯೋಗಾತ್ಮಿ ಶಿಕ್ಷಕ

(ಅಚ್ಚಿನಲ್ಲಿ)

ಲೇಖಕರು: **ಗಜೇಂದ್ರಗಡಶಾಮರಾಯರು,**
ಬೇಸಿಕ್ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ
ಸುಂದರ ಶೈಲಿಯಲ್ಲಿ ಬರೆದಿದ್ದಾರೆ.

ಸ್ಟೂಡೆಂಟ್ಸ್ ಓನ್ ಬುಕ್‌ಡಿಪೋ, ಧಾರವಾಡ

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ
ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ೪ನೇ ಇಯತ್ತ್ತಿಗೆ — **ಬೆಲೆ ೦-೧೪ ೦**
ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂತ್ರಿ ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ೪ನೆಯ ಇಯತ್ತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಕೈ. ಶಿ ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ೫ನೆಯ ಇಯತ್ತ್ತಿಗೆ — **ಬೆಲೆ ೧ ೪-೦**
ಲೇಖಕರು :- ಶ್ರೀಯುತ ಎ ಜಿ ಕುಲಕರ್ಣಿ ಬಿ.ಎ.ಬಿ ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತ್ತಿಗೆ — **ಬೆಲೆ ೧-೧೦-೦**
ಲೇಖಕರು :- ಸದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತ್ತಿಗೆ — **ಬೆಲೆ ೨-೨-೦**
ಲೇಖಕರು :- ಸದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತ್ತಿಗೆ — **ಬೆಲೆ ೦-೧೨-೦**
ಲೇಖಕರು :- ಆದ್ಯ ರಂಗಾಚಾರ್ಯ ಎಂ. ಎ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತ್ತಿಗಳಿಗೆ — **ಬೆಲೆ ೦-೪-೦**
ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತ್ತಿಗಳಿಗೆ ೧೯೫೪ರ ವರೆಗೆ ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-ವಾಚನವೆಂದು ಮಂಜೂರಾಗಿದೆ. **ಬೆಲೆ ೦-೧೨-೦**
ಲೇಖಕರು:- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೪ನೆಯ ಇಯತ್ತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತ್ತಿಗೆ
೩. **ಮಾತಿನ ಮುನ್ನಡೆ.** ೬ನೆಯ ಇಯತ್ತ್ತಿಗೆ
೪. **ಮಾತಿನ ಮುನ್ನಡೆ.** ೭ನೆಯ ಇಯತ್ತ್ತಿಗೆ

೫. ಪತ್ರಗಳ ಪರಿಚಯ. ೬-೭ನೆಯ ಇಯತ್ತ್ತಿಗಳಿಗೆ.
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :
ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. sc. at Jai Hind Art Press, Javlipeth, Dharwar. Edited and Published by M. G. Handral B. M. Shintri, S. R. Tatti, & Y. D. Nadkarni Jointly at the Kannada Prathamik Shikshan Office, Govt. Training College for Men, Dharwar.

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು :
ಾ. ಎಂ. ಜಿ. ಹಂದ್ರಾಳ

★

ನೇ ೧೯೫೨

★

ತ್ಮಕ ಚಂದಾ ಳ ರೂ.

★

ಬಿಡಿ ಪ್ರತಿ ೬ ಆಣೆ

ಶಾಹಿಯಲ್ಲಿ ದೊರೆತ ಕತ್ತಿ, ಢಾಲು, ಹಿಡಿದ
ಧರ್ವನ ಮೂರ್ತಿ.
ಾಜ ಶಿವನ ನೃತ್ಯ.

ಗಳು ಕನ್ನಡ ಸಂಶೋಧನ ಸಂಸ್ಥೆ ಯ ಕೃಪೆಯಿಂದ)

ಮುಂಬಯಿ ವಿದ್ಯಾಖಾತೆಯ ಪಠ್ಯ ಪುಸ್ತಕ ಸಮಿತಿಯಿಂದ ಮಂಜೂರಾಗಿ, ಈಗಾಗಲೇ ವಿಜಾಪುರ ಜಿಲ್ಲೆಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಧಾರವಾಡ ಜಿಲ್ಲೆಯ ಪ್ರಾಥಮಿಕ ಶಾಲೆ ಗಳಲ್ಲಿಯೂ ಉಪಯೋಗದಲ್ಲಿರುವ ಹಾಗೂ **ಕರ್ನಾಟಕ ವಿದ್ಯಾವರ್ಧಕ ಸಂಘ** ಧಾರವಾಡ ಇವರಿಂದಪಾರಿತೋಷಕ ಪಡೆದ ಗ್ರಂಥ.

ಮಹಾತ್ಮಾ ಗಾಂಧಿ

(ಮಹಾತ್ಮರ ಜೀವನ ಚರಿತ್ರೆ ಹಾಗೂ ವಿಚಾರ ಸಂಗ್ರಹ)

ದ್ವಿತೀಯ ಮುದ್ರಣ.

ಲೇಖಕರು:—**ಸ. ವೀ. ಹಂಜಿ,** ಎಂ. ಎ., ಬಿ. ಟಿ., ಡಿ. ಬಿ. ಈ.

೭೯ ವರ್ಷಗಳ ತ್ಯಾಗಪೂರ್ಣ, ತಪಸ್ಸಿನ ಹಾಗೂ ಸೇವಾಮಯ ಮಹಾನ್ ಜೀವನದ ಪ್ರಮಾಣ ಗ್ರಂಥ.

ಮಹಾತ್ಮರ ಸಮಗ್ರ ಜೀವನವನ್ನು ಸರಳ ಶೈಲಿಯಲ್ಲಿ ಚಿತ್ರಿಸುವ ಮೊದಲನೆಯ ಗ್ರಂಥ.

ಪ್ರೊ. **ಶಿ. ತಿ. ಬಸವನಾಳ** ಅವರ ಮುನ್ನುಡಿ ಹಾಗೂ ಮಾನ್ಯ ಶ್ರೀ **ಆರ್. ಆರ್. ದಿವಾಕರ** ಅವರ ಅಭಿನಂದನೆಯೊಡನೆ ಮಿನುಗುವ ಗ್ರಂಥ.

ಪ್ರತಿಯೊಬ್ಬ ಕನ್ನಡಿಗನು ಅವಶ್ಯವಾಗಿ ಓದಬೇಕೆಂದು ಬಿನ್ನಹ.

ಕ್ರೌನ್ ಅ. ಪ. ಪುಟ. ೧೪+೨೦೦

ಬೆಲೆ, ಉತ್ತಮ ಪ್ರತಿ. ರೂ ೨—೦—೦

ಸಾದಾ ಪ್ರತಿ ರೂ ೧—೪—೦ (ವಿದ್ಯಾರ್ಥಿಗಳ ಸಲುವಾಗಿ)

ಗ್ರಂಥಗಳು ಸಿಗುವ ವಿಳಾಸಃ—

ಎಸ್. ವ್ಹಿ. ಹಂಜಿ.

ಬಸವೇಶ್ವರ ಟ್ರೇನಿಂಗ ಕಾಲೇಜ, **ಬಾಗಲಕೋಟ.**

೧–೨ ಪ್ರಾ. ಶಿ. ವಿದ್ಯಾರ್ಥಿಗಳಿಗಾಗಿ

ಶಾಸ್ತ್ರೀಯ

ರಾಗಗೀತ ಪ್ರವೇಶಿಕಾ

ಬರೆದವರು:— ಗಾಯನ ಕಲಾಕೋವಿದ

ಶ್ರೀ. ಜಿ. ಎಸ್. ಜುಕ್ತಿಮಠ

ಪುಟ ೧೨೦ **ಬೆಲೆ ೧—೦—೦**

ಈ ಪುಸ್ತಕವು ಮುಂಬಯಿ ಸರಕಾರದ ವಿದ್ಯಾಖಾತೆಯವರಿಂದ ೧ ಮತ್ತು ೨ನೇ ವರ್ಷ ಟ್ರೇ. ಕಾ. ವಿದ್ಯಾರ್ಥಿಗಳಿಗಾಗಿ ವಿಶೇಷ ವಾಚನವೆಂದು ಮಂಜೂರಾಗಿದೆ. ಈ ಪುಸ್ತಕವು ಮುಲ್ಕಿ ಪರೀಕ್ಷೆಯಲ್ಲಿ ಗಾಯನ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಒಳ್ಳೇ ಉಪಯುಕ್ತವಾಗಿದೆ. ಅಲ್ಲದೆ ಸರಿಗಮ ನಕಾಶ ಕೊಟ್ಟು, ಗಾಯನ ಅಭ್ಯಾಸಿಗಳಿಗೂ ಅನುಕೂಲವಾಗುವಂತೆ ತಯಾರಿಸಲಾಗಿದೆ.

ದೊರೆಯುವ ಸ್ಥಳ:—

ಮಹಾಂತೇಶ ಬುಕ್‌ಡಿಪೋ, ಬಾಗಲಕೋಟ

ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ

ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ ಮತ್ತು **ಶ್ರೀ. ಜಿ. ಡಿ. ಮಾಲಿ**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಿಗಳ ಹತ್ತರ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಜಿ. ವಾಯ್. ರಾಣೆ

ಪ್ರಕಾಶಕರು, ಸಿಳ್ಳಿ, ಕಸಬಾ ಪೇಟಿ, ಪುಣೆ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಡಿ. ವ್ಹಿ. ಚಿಕ್ಕರಮನೆ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ.
ಪ್ರಧಾನ ಸಂಪಾದಕರು : ಶ್ರೀ. ಎಂ. ಜಿ. ಹಂದ್ರಾಳ ಬಿ.ಎ.(ಆನರ್ಸ)ಬಿ. ಟಿ., ಡಿ. ಪಿ. ಇಡಿ;ಡಿ. ಬಿ. ಇ. ಪ್ರಿನ್ಸಿಪಾಲ್, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟಿಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೧	ನೋ ೧೯೫೨	ಸಂಚಿಕೆ ೧೨

ವಿಷಯ — ಪರಿವಿಡಿ — ಪುಟ

೧. ಸಂಪಾದಕೀಯ ೧
೨. ಭಗವಾನ ಬುದ್ಧನ ಧರ್ಮಮಾರ್ಗ—ಶ್ರೀ. ತಟ್ಟಿ ಶ್ಯಾಮರಾಯರು ೫
೩. ಹಬ್ಬಹುಣ್ಣಿವೆಗಳೂ ಅವುಗಳ ದಿನಾಚರಣೆಯೂ (ಲೇಖಾಂಕ ೪) ಶ್ರೀ. ಬ. ಮ. ಶಿಂತ್ರಿ ೭
೪. ಬಸವಣ್ಣನವರೂ ಜನತಾ ಶಿಕ್ಷಣವೂ—ಶ್ರೀ. ಈಶ್ವರ ಶಿ. ಬಿದರಿ ೧೨
೫. ಸಂಗೀತದ ಅಭ್ಯಾಸದೊಡನೆ ಗಣಿತದ ಸಮವಾಯ ಜ್ಞಾನ—ಶ್ರೀ. ತಟ್ಟಿ ಶ್ಯಾಮರಾಯರು, ೧೪
೬. ದೀಕ್ಷಾವಿಧಿ—ಸಂಗ್ರಾಹಕರು, ಶ್ರೀ. ಈಶ್ವರ ೧೬
೭. ಸಮಾಜ ಶಿಕ್ಷಣ—ಶ್ರೀ. ಡಿ. ಸಿ. ಪಾವಟೆ ೧೯
೮. ಜೀವನ ಶಿಕ್ಷಣ—ಶ್ರೀ. ಬ. ಮ. ಶಿಂತ್ರಿ ೨೦
೯. ಪ್ರಾಥಮಿಕ ಶಿಕ್ಷಣದ ಕ್ಷಿತಿಜದ ಮೇಲೆ ೨೧
೧೦. ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ—ಶ್ರೀ. ಎನ್. ಆರ್. ಹಿರೇಮಠ ೨೬

ಶ್ರೀ. ಡಿ. ಸಿ. ಪಾವಟೆ

ಡೈರೆಕ್ಟರ ಆಫ್ ಎಜ್ಯುಕೇಶನ್, ಮುಂಬಯಿ ರಾಜ್ಯ

[ಸಮಾಜ ಶಿಕ್ಷಣವನ್ನು ಕುರಿತು ಇವರ ವಿಚಾರಗಳನ್ನು ೧೯ನೆಯ ಪುಟದಲ್ಲಿ ನೋಡಿರಿ.]



ಶ್ರೀ. ಬಿ. ಎಂ. ಮೀಮಾಂಸಿ

ಡೈರೆಕ್ಟರ ಆಫ್ ಎಜ್ಯುಕೇಶನ್, ಮುಂಬಯಿ ರಾಜ್ಯ.

[ಜೀವನ ಶಿಕ್ಷಣದ ಬಗೆಗೆ ಇವರ ವಿಚಾರಗಳನ್ನು ೨೦ನೆಯ ಪುಟದಲ್ಲಿ ನೋಡಿರಿ.]

ಡಾ. ಡಿ. ವ್ಹಿ. ಚಿಕ್ಕರಮನೆ

ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ

[ಪ್ರಾಥಮಿಕ ಶಿಕ್ಷಕರಿಗೆ ಇವರು ಕೊಟ್ಟ ದೀಕ್ಷೆ ಮತ್ತು ಉಪದೇಶವನ್ನು ೧೬ನೆಯ ಪುಟದಲ್ಲಿ ನೋಡಿರಿ.]

ಸಂಪಾದಕೀಯ

ಾರತೀಯರ ಪ್ರಶಂಸೆ

ಭಾರತ ಸಂಚಾರವನ್ನು ಮುಗಿಸಿಕೊಂಡು ಮರಳಿ ್ದೇಶಕ್ಕೆ ಹೋದ ಶ್ರಿಮತಿ ಎಲಿನಾರ ರೂಜವೆಲ್ಟ ವರು ನ್ಯೂಯಾರ್ಕನಲ್ಲಿ ನೆರದ ಪ್ರಚಂಡ ಸಾರ್ವ-ನಿಕ ಸಭೆಯಲ್ಲಿ ಭಾರತ ಸಂಚಾರದ ತಮ್ಮ ಅನುಭವ ನ್ನು ವಿವರಿಸುತ್ತ —" ಭಾರತೀಯರು ಧರ್ಮದಿಂದ ುಜ್ವಲವಾದ ಪರಂಪರೆಯನ್ನು ಸಂವಾದಿಸಿ ತತ್ಪರಿಣಾ ವಾಗಿ ಅವರು ಉಚ್ಚ ಮನೋವೃತ್ತಿಯನ್ನು ಪಡೆದಿ-ದ್ದಾರೆ. ಆಧ್ಯಾತ್ಮ ಸಾಧನೆಗಾಗಿ ಐಹಿಕ ವಿಷಯ-ಳನ್ನು ತ್ಯಜಿಸುವ ಅವರ ಸಾಮರ್ಥ್ಯವೇ ಅವರಿಗೆ ಮಹತಿಯನ್ನು ತಂದು ಕೊಟ್ಟಿದೆ. ನಾವಿನ್ನೂ ಭಾರತ-ಂದ ಕಲಿಯಬೇಕಾಗುದುದು ಬಹಳವಿದೆ..... ..... ಹಿಕ. ವಿಷಯಗಳಲ್ಲಿಯೇ ಭಾರತೀಯರು ಆಧ್ಯಾತ್ಮಿಕ ್ರಗತಿಯನ್ನು ಸಾಧಿಸುತ್ತಾರೆ " ಇದು ಭಾರತೀಯರಿ-ಲ್ಲ ಅಭಿಮಾನದ ಸಂಗತಿ ' ಭಾತಿಕ ಸುಖ ಲೋಲು-ತೆ ' ಯಿಂದ ಜಗತ್ತಿಗೆ ಸುಖ ಲಭಿಸುವದು; ಆದರೆ ಷ್ಯಾಮ ಕರ್ಮ, ಜಗತ್ತಿನ ಎಲ್ಲ ಕಾರ್ಯಗಳನ್ನು ಡೆಯಿಸಬಲ್ಲ ಆ ಆಗೋಚರ ಶಕ್ತಿಯಲ್ಲಿ ಅಚಲವಾದ ಶ್ವಾಸ, ಅಸಾಹಾಯ್ಯರ, ದೀನ-ದಲಿತರ ಉದ್ಧಾ-ಕ್ಕಾಗಿ ಸಂಪತ್ತಿನ ಸದ್ವಿನಿಯೋಗ, ಸತ್ಯ, ಸರಳತೆ, ್ರಮಾಣಿಕತನದಿಂದ ಕೂಡಿದ ಸುಜೀವನತೆ—ಇವು ರಂಪರಾಗತವಾಗಿ ಅವಿಜ್ಞಾನವಾಗಿ ಭಾರತೀಯರ ೀವನದಲ್ಲಿ ಹಾಸು-ಹೊಕ್ಕಾಗಿ ಬಂದಿವೆ. ಈ ಉದಾತ್ತ ಪರಂಪರೆಯನ್ನು ಇನ್ನು ಮುಂದೆಯು ಕಾಯ್ದುಕೊಂಡು ಆದರ ಬೆಳಕಿನಲ್ಲಿಯೇ ಮುನ್ನಡೆದರೆ ಇಡೀ ಪ್ರಪಂಚಕ್ಕೆ ಮಾರ್ಗದರ್ಶನ ಮಾಡಬಲ್ಲ ಶಕ್ತಿ ಭಾರತದಲ್ಲಿ ತುಂಬ ಬಹುದು.

ನಿವೃತ್ತಿ ಹೊಂದಿದ ಮಂತ್ರಿಮಂಡಲ:—

ಕಳೆದ ಹತ್ತು ವರ್ಷಗಳ ಲೋಕ ಹಿತಕರವಾದ ಆಡ ಳಿತದಿಂದ ಮುಂಬಯಿ ರಾಜ್ಯದ ಹೆಸರನ್ನು ಭಾರತದ-ಲ್ಲೆಲ್ಲ ಸುವಿಖ್ಯಾತಗೊಳಿಸಿ ರಾಜ್ಯದ ಜನರ ಪ್ರೀತಿಗೆ-ಪಾತ್ರವಾಗಿ ಇದೀಗ ನಿವೃತ್ತಿಹೊಂದಿದ ಖೇರಮಂತ್ರಿ-ಮಂಡಲಕ್ಕೆ ನಮ್ಮ ಧನ್ಯವಾದಗಳು. ಸೌಜನ್ಯ ಹಾಗೂ ಸಂಸ್ಕೃತ ಜೀವನದಿಂದ ಕೂಡಿದ ಶ್ರೀ.ಬಾಳಾಸಾಹೇಬ ಖೇರ ಅವರು ತಮ್ಮ ವ್ಯಕ್ತಿತ್ವದಿಂದ ಕರ್ತೃತ್ವ ಶಕ್ತಿ-ಯಿಂದ ತಿಳಿಯಾದ ಮುನ್ನೋಟದಿಂದ ಮುಖ್ಯ ಮಂತ್ರಿಗಳಾಗಿ ರಾಜ್ಯದ ರಥವನ್ನು ದುರ್ಧರ ದಿನಗಳಲ್ಲಿ ಸಹ ಸುಗಮವಾಗಿ, ಪ್ರಗತಿಯ ದಾರಿಯಲ್ಲಿ ನಡೆಯಿಸಿ-ಕೊಂಡು ಹೋದುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಶಿಕ್ಷಣ ಮಂತ್ರಿಗಳಾಗಿ ಇವರು ಜೀವನ ಶಿಕ್ಷಣ, ಶಾರೀರಿಕ ಶಿಕ್ಷಣ, ಸಕ್ತಿ ಶಿಕ್ಷಣ, ಸಮಾಜ ಶಿಕ್ಷಣ ಮೊದಲಾದ ಹೊಸ ಹೊಸ ಪ್ರಯೋಗಳನ್ನು ರಾಜ್ಯದ ಶಿಕ್ಷಣ ಕ್ಷೇ-ದಲ್ಲಿ ಪ್ರಯೋಗಿಸಿ ಅವುಗಳ ಯಶಸ್ವಿಗಾಗಿ ಮನವಾರೆ ಯತ್ನಿಸಿದರು. ಎಲ್ಲ ಶಿಕ್ಷಣ ಕ್ರಮಗಳಿಂದ ರಾಜ್ಯದ ಎಲ್ಲ ಮಕ್ಕಳು, ಪ್ರೌಢರು ಜ್ಞಾನಮಾರ್ಗದಲ್ಲಿ ನಡೆಯ

ಹತ್ತಿದ ಶ್ರೇಯಸ್ಸು ಶ್ರೀ. ಬಾಳಾಸಾಹೇಬರಿಗೆ ಸಲ್ಲುವದೆಂದು ಹೇಳಬಹುದು. ಶ್ರೀ. ಖೇರ ಅವರು ಇನ್ನು ಮುಂದೆಯು ಕೈಕೊಳ್ಳಲಿರುವ ರಾಷ್ಟ್ರ ಸೇವೆಯಲ್ಲಿ ಕೀರ್ತಿಯುತರಾಗುವಂತೆ ಪರಮಾತ್ಮನು ಅವರಿಗೆ ದೀರ್ಘಾಯುಷ್ಯಾರೋಗ್ಯವನ್ನು ಕರುಣಿಸಲಿ.

ಮೂಡಿಬಂದಿರುವ ಮುರಾರಜಿ ಮಂತ್ರಿಮಂಡಲ

ಖೇರ ಮಂತ್ರಿ ಮಂಡಲದ ನಿವೃತ್ತಿಯೊಂದಿಗೆ ಶ್ರೀ. ಮುರಾರಜಿ ದೇಸಾಯಿ ಅವರ ಧುರೀಣತ್ವದಲ್ಲಿ ನಮ್ಮ ರಾಜ್ಯದ ಕ್ಷೇತಿಜದ ಮೇಲೆ ಹೊಸ ಮಂತ್ರಿ ಮಂಡಲವು ಮೂಡಿ ಬಂದಿದೆ. ಮುಖ್ಯ ಮಂತ್ರಿಗಳಾದ ಶ್ರೀ. ಮುರಾರಜಿಯವರಿಗೂ ಅವರ ಮಂತ್ರಿಮಂಡಲದಲ್ಲಿ ಇರುವ ಇತರ ಮಾನ್ಯ ಮಂತ್ರಿಗಳಿಗೂ ನಮ್ಮ ಹಾರ್ದಿಕ ಸ್ವಾಗತ. ರಾಜ್ಯದ ಸಾಮಾನ್ಯ ಪ್ರಗತಿಯೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾದ ಸುಧಾರಣೆಯಾಗಿ ಕಳೆದ ೧೦ ವರ್ಷಗಳಲ್ಲಿಯಂತೆ ರಾಜ್ಯದ ಆ ಬಾಲವೃದ್ಧರಿಗೆ ಶಿಕ್ಷಣವೀಯುವ ಕಾರ್ಯವು ಅಖಂಡವಾಗಿ ನಡೆಯುವದೆಂದು ಆಶಿಸುತೇವೆ. ಶ್ರೀ. ದಿನಕರ ರಾವ ದೇಸಾಯಿಯವರಂತಹ ಶಿಕ್ಷಣ ತಜ್ಞರು ಶಿಕ್ಷಣ ಮಂತ್ರಿಗಳಾಗಿ ದೊರೆತದ್ದು ಸುದೈವ. ರಾಜ್ಯವು ಸರ್ವತೋಮುಖ ಉನ್ನತ್ತಿಯ ದಾರಿಯಲ್ಲಿ ನಡೆಯುವದೆಂದು ಭಾವಿಸುವೆವು.

ಅಸ್ತಂಗತವಾಗಲಿರುವ ೯೧ ನೆಯ ವರುಷ:—

ನಮ್ಮ ' ಪ್ರಾಥಮಿಕ ಶಿಕ್ಷಣ ' ಕ್ಕೆ ಇಂದಿಗೆ ೯೧ ವರುಷಗಳು ತುಂಬಿದವು. ಬರುವ ತಿಂಗಳು ಅಂದರೆ ಅದಕ್ಕೆ ೯೨ ನೆಯ ವರ್ಷದ ಮೊದಲ ತಿಂಗಳು. ೯೧ ವರ್ಷಗಳವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಏಕಮೇವ ಪತ್ರಿಕೆಯಂದರೆ ಈ ನಮ್ಮ ' ಇಚ್ಛಾಮರಣಿ ' ಪಿತಾಮಹ ' ಪ್ರಾಥಮಿಕ ಶಿಕ್ಷಣ ' ವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ವ್ಯಕ್ತಿಯ ಜೀವನದಲ್ಲಿ ಅಡ್ಡಿಆಡಚಣಿಗಳು ಬರುವಂತೆ ಪತ್ರಿಕೆಯ ಜೀವನದಲ್ಲಿಯೂ ಅನೇಕ ತೊಡಕು ತೊಂದರೆಗಳು, ಆಪತ್ತು-ವಿಪತ್ತುಗಳು ಬರುವದು ಸಹಜ. ಆದರೆ ತನ್ನ ಉದಾತ್ತ ಧ್ಯೇಯಗಳಿಂದ, ಶಿಕ್ಷಣ ಕ್ಷೇತ್ರದಲ್ಲಿಯ ಸೇವೆಯಿಂದ ವಾಚಕರ ಮನುತೆಗೆ ಪಾತ್ರವಾಗಿ ಅವರ ವಿಶಾಲವಾದ ಮನೋಭಾವನೆಯಿಂದ, ಅಪರಿಮಿತ ವಾತ್ಸಲ್ಯದಿಂದ ' ಪ್ರಾಥಮಿಕ ಶಿಕ್ಷಣ ' ವು ತನ್ನ ಜೀವನದಲ್ಲಿಯ ವಿಘ್ನಗಳನ್ನು ತೊಡೆದು ಹಾಕಿ ೯೧ ನೆಯ ವರುಷವನ್ನು ಮುಗಿಸಲಿದೆ. ಈ ಸಮಯದಲ್ಲಿ ತನ್ನ ಎಲ್ಲ ಹಿತಚಿಂತಕರಿಗೆ, ಅಭಿಮಾನಿಗಳಿಗೆ, ವಾಚಕರಿಗೆ, ಚಂದಾದಾರರಿಗೆ ತನ್ನ ಅನಂತ ಅಭಿವಂದನೆಗಳನ್ನು ಸಲ್ಲಿಸುತ್ತದೆ. ಎಂದಿನಂತೆ ಮುಂದಿನ ದಿನಗಳಲ್ಲಿಯೂ ಪತ್ರಿಕೆಯು ವಾಚಕರ, ಕನ್ನಡಿಗರೆಲ್ಲರ ಸಹೃದತೆಯನ್ನು ಅಪೇಕ್ಷಿಸುತ್ತದೆ ಶಿಕ್ಷಣಸೇವೆಯನ್ನು ಹಲವು ಹಿಶೆಗಳಲ್ಲಿ ಹಲವು ಮುಖಗಳಿಂದ ಮಾಡಬೇಕೆಂದು ಹಾರೈಸುತ್ತದೆ.

ಕಂಬನಿ

ಹೊಸ ಶಿಕ್ಷಣ ಪುರಸ್ಕರ್ತರಲ್ಲೊಬ್ಬರಾದ, ಎಳೆಯ ಮಕ್ಕಳ ಶಿಕ್ಷಣ ಕ್ರಮದಲ್ಲಿ ತಮ್ಮದೇ ಆದ ಒಂದ ಪದ್ಧತಿಯನ್ನು ನಿರ್ಮಿಸಿ ಪ್ರಪಂಚದಲ್ಲಿ ಹೆಸರುಗಳಿಸಿದ ಮೇರಿಯಾ ಮಾಂಟಸರಿ ಅವರು ಮೊನ್ನೆ ದಿವಂಗತರಾದದರಿಂದ ಜನತೆಗೆ ತುಂಬಿಬಾರದ ಹಾನಿಯಾಗಿದೆ ಅವರು ಮಾಡಿದ ಪ್ರಯೋಗಗಳು, ನಿರೂಪಿಸಿದ ಕ್ರಮ ನೀಡಿದ ಶೈಕ್ಷಣಿಕ ವಿಚಾರಗಳು ಚಿರಕಾಲ ಉಳಿಯುವಂತಾಗಿವೆ. ಕೈ, ಮೈಗಳ ಮುಖಾಂತರ ಮಕ್ಕಳ ಶಿಕ್ಷಣ ಪಡೆಯಬೇಕು ಎಂಬ ಇವರ ಸೂತ್ರವು ಮೂಲ ಶಿಕ್ಷಣ ತತ್ವಕ್ಕೆ ಆಧಾರವಾಗಿ ನಿಂತಿದೆ. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನಿಯಲಿ.

ಭಗವಾನ್ ಬುದ್ಧನ ಧರ್ಮ ಮಾರ್ಗ

(ಸರ್ ರಾಧಾಕೃಷ್ಣನ್‌ರವರ ಗ್ರಂಥದ ಆಧಾರದಿಂದ ಅನುವಾದಿತವಾದುದು.)

ಲೇಖಕರು:— ಶ್ರೀಯುತ ತಟ್ಟೆ ಶ್ಯಾಮರಾಯರು ಬಿ. ಎ. ಪ್ರಿನ್ಸಿಪಾಲ್, ಸವಲಗುಂದ ಟ್ರೈನಿಂಗ ಕಾಲೇಜ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಧರ್ಮದ ಪಥವೇ ಬ್ರಹ್ಮದ ಪಥವು. ಧರ್ಮದಲ್ಲಿ ವಾಸಿಸುವುದೆಂದರೆ ಬ್ರಹ್ಮದಲ್ಲಿ ವಾಸಿಸುವದು. ಬುದ್ಧನ ಮಾರ್ಗಕ್ಕೆ ಧರ್ಮಯಾನ ಅಥವಾ ಬ್ರಹ್ಮಯಾನ ಎಂಬ ಹೆಸರು ತಾರತಮ್ಯವಿಲ್ಲದೆ ಉಪಯೋಗಿಸಲ್ಪಡುವದು.

ಬುದ್ಧನ ಉಪದೇಶದಲ್ಲಿ ನಾಸ್ತಿಕವಾದವನ್ನಾಗಲಿ ಅಜ್ಞೇಯವಾದವನ್ನಾಗಲಿ ಕಾಣುವದು ತಪ್ಪು. ಬುದ್ಧನ ವಿಚಾರಗಳಿಗೂ ಆ ಕಾಲದ ಜನರ ಸಾಮಾನ್ಯ ತಾತ್ವಿಕ ದೃಷ್ಟಿಗೂ ಹೆಚ್ಚು ಹೊಂದುವಂಥ ಒಂದು ಅರ್ಥವು ಅವನ ಉಪದೇಶಕ್ಕೆ ಸಾಧ್ಯವಿದೆ. ಅವಿಕಾರಿಯೂ ಆದ ಕಲ್ಯಾಣವಾದ ಒಂದು ಪರಮಸತ್ಯದ ಅನುಭವವಾಗದೆ ಬುದ್ಧನಿಗೆ ಒಂದ ಕ್ಷಣಕ್ಷಣಕ್ಕು ಬದಲಾಗುವ ಜಡ ಸೃಷ್ಟಿಯ ಹಾಗು ಇಂಥ ಸೃಷ್ಟಿಯಲ್ಲಿ ಮಗ್ನವಾಗಿರುವ ಮಾನವ ಜೀವಿತದ ಅಪರ್ಯಾಪ್ತತೆಯ ಮೂಲಭೂತವಾದ ಅನುಭವವು ಯಾರಿಗೂ ಬರುವದು ಸಾಧ್ಯವಿಲ್ಲ.

ಅಂತಹ ಅನುಭವದ ಹಿನ್ನೆಲೆಯಲ್ಲಿಯೇ ನಿತ್ಯವೂ ಬದಲಾಗುತ್ತಿರುವ ಪ್ರಪಂಚದ ಪ್ರತೀತಿಯುಂಟಾಗುವದು. ಈ ಪರಮಸತ್ಯದ ಸ್ವರೂಪವನ್ನು ಸ್ಪಷ್ಟ ಮಾಡಲಿಕ್ಕು ಬುದ್ಧನು ಒಪ್ಪದಿದ್ದಕ್ಕು ಅಥವಾ ಕೇವಲ ನಿಷೇಧ ರೂಪ ಲಕ್ಷಣಗಳಿಂದಲೇ ಅತನು ಸಂತುಷ್ಟನಾದುದಕ್ಕೆ ಆ ಪರಸತ್ಯವು ಅನಿರ್ವಚನೀಯವೂ ನಿರ್ವಿಶೇಷವೂ ಆಗಿರುವದೇ ಕಾರಣವು. ಡಾಯೊನಿಶಿಯಸ್ ಎಂಬ ಸುಳ್ಳು ಹೆಸರನ್ನಿಟ್ಟುಕೊಂಡಾತನ ಗ್ರಂಥಗಳಲ್ಲಿ ಪ್ರತಿಪಾದಿತವಾದ ಕ್ರೈಸ್ತ ಅನುಭಾವ ಮಾರ್ಗದ ಅತಿದೇವನಿಂದಾಗಲಿ ಉಪನಿಷತ್ತಿನ ವೇದಾಂತದ ನಿರ್ಗುಣ ಬ್ರಹ್ಮನಿಂದಾಗಲಿ ಈ ಪರಸತ್ಯವನ್ನು ವಿಂಗಡಿಸುವದೇ ಕಠಿಣ. ಈ ಅದ್ವೈತ ಸತ್ಯದ ಅನುಭವದಿಂದಲೇ ಬುದ್ಧನು ಪ್ರತೀಯಮಾನ ಪ್ರಪಂಚಕ್ಕೆ ಕಾರಣ ಜೀವಿಗಳನ್ನು ಕೊಟ್ಟನು. ಆದರೆ ಅದನ್ನು ತರ್ಕದಿಂದ ಸಿದ್ಧಮಾಡುವದು ಸಾಧ್ಯವಿಲ್ಲದ್ದರಿಂದ ಅದೇ ತನ್ನ ಉಪದೇಶಕ್ಕೆ ಕಾರಣವೆಂದು ಹೇಳಲಿಕ್ಕೆ ಒಪ್ಪಲಿಲ್ಲ. ಪರವಸ್ತುವಿನ ಸ್ವರೂಪದ ನಿರ್ವಚನ ಮಾಡುವದಕ್ಕೆ ಸಂದೇಹಪಡುವದೂ ಅಧೈರ್ಯಪಡುವದೂ ಭಾರತೀಯನ ಮನಸ್ಸಿಗೆ ಯೋಗ್ಯವೂ ಸ್ವಾಭಾವಿಕವೂ ಆಗಿದ್ದವು. ಉಪನಿಷತ್ತುಗಳನ್ನು ನೋಡಿದರೆ ಈ ಮಾತಿನ ಸತ್ಯತೆಯು ಕಂಡು ಬರುವದು. ದೈವತವನ್ನು ಅವು ಎಂದೂ ತಾರ್ಕಿಕ ನಿರ್ವಚನಗಳಿಂದಾಗಲಿ ಕಟ್ಟುನಿಟ್ಟಿನ ವ್ಯಾಖ್ಯೆಗಳಿಂದಾಗಲಿ ಸಂಕುಚಿತಗೊಳಿಸುವದಿಲ್ಲ. ಈ ಅವಜ್ಞೇದಕ ವಿಶೇಷಗಳನ್ನೂ ಸಂಪೂರ್ಣವಾಗಿ ತ್ಯಜಿಸಿದ ಬುದ್ಧನ ಇದೊಂದು ತುದಿಯಾದರೆ ಬೇರೆ ಕೆಲವು ಉಪದೇಶಕರು ಅನುಸರಿಸಿದ ವಿವರಣೆಯ ಸ್ಪಷ್ಟತೆಯು ಇನ್ನೊಂದು ತುದಿ. ಭಾಷೆಯು ಸ್ವರೂಪಜ್ಞಾನವನ್ನು ತಾತ್ಸಾರ ಮಾಡಿ ಪ್ರಕಾಶದ ಸಾಮರ್ಥ್ಯವನ್ನು ಮುಂದಿಟ್ಟ ಉದಾಹರಣೆಯದು ಎಂದು ಹೇಳಬಹುದು. ಗೌತಮ ಬುದ್ಧನ ಮೌನದ ಕಾರಣಗಳು ಸುಸ್ಪಷ್ಟವಾಗಿವೆ.

ಕ್ರಿ. ಪೂ. ಆರನೆಯ ಶತಮಾನದ ಭರತ ಖಂಡದಲ್ಲಿ ಮಾನವ ಇತಿಹಾಸದ ಯಾವ ಅವಧಿಯಲ್ಲಾಗಲಿ ಪ್ರಪಂಚದ ಯಾವ ಅವಧಿಯಲ್ಲಾಗಲಿ ಇದ್ದಿರಬಹುದಾದ ಧಾರ್ಮಿಕ ಅನುಭವಗಳ ಬಹುಮುಖತೆ ಅತ್ಯುತ್ಕೃಷ್ಟ ವಿಚಾರಗಳ ಶೋಧನೆಯ ಧಾರ್ಷ್ಟ್ಯ, ಉಕ್ತಿಗಳ ತೀವ್ರತೆ, ಇವೆಲ್ಲವೂ ಇದ್ದವು. ಜನರು ಅನೇಕ ಮೂಢ-

ಭಾವನೆಗಳಿಗೆ ವಶರಾಗಿದ್ದರಲ್ಲದೆ ವಿಚಾರಗಳ ಕೃತ್ರಿಮತೆ ಮತ್ತು ಶುಷ್ಕಪಾಂಡಿತ್ಯಕ್ಕೆ ಮೆಚ್ಚಿದ್ದರು. ಅಜ್ಞಜನರ ಮೂಢಭಾವನೆಗಳನ್ನೂ, ಪಂಡಿತರ ಕೃತಕವಾದಗಳನ್ನೂ ಬೇರ್ಪಡಿಸುವದು ಕಷ್ಟವಾಗಿತ್ತು. ಈ ಗೊಂದಲದಲ್ಲಿ ಗೌತಮ ಬುದ್ಧನು ಮಾನವ ಸ್ವಭಾವದ ಮತ್ತು ಅನುಭವದ ಸತ್ಯ ಸಂಗತಿಗಳನ್ನು ತಿಳಿದುಕೊಳ್ಳುವ ವಿಷಯದಲ್ಲಿಯೂ ಕೇವಲ ಶುಷ್ಕವಾದವನ್ನು ಮತ್ತು ಅಧಿಕೃತ ಪ್ರಮಾಣವೆಂದು ನಂಬಿಗೆಯಿಡುವದನ್ನು ಬಿಟ್ಟುಬಿಡುವವರ ವಿಷಯದಲ್ಲಿಯೂ ಆಗ್ರಹ ಹಿಡಿದನು. ಮಾನವನ ಬುದ್ಧಿಗೆ ಮತ್ತು ಅಂತರ್ದೃಷ್ಟಿಗೆ ಸೂಕ್ತವೆಂದು ತೋರುವ ಕಾರಣದಿಂದ ಮಾನವನು ಪ್ರಾಮಾಣಿಕ ವಚನವನ್ನು ಅಥವಾ ಆಪ್ತ ವಾಕ್ಯವನ್ನು ನಂಬುತ್ತಾನೆ. ಚಾಣಾಕ್ಷತನ, ಆದರೆ, ಭಯುಗಳು ಕೆಲ ಕೆಲ ಪ್ರಸಂಗಗಳಲ್ಲಿ ಇಂತಹ ಪ್ರಮಾಣಗಳಿಗೆ ನಮ್ಮ ಒಪ್ಪಿಗೆಯನ್ನು ಪಡೆಯಬಹುದು. ಆದರೆ ಇವೇ ಮುಖ್ಯ ಕಾರಣಗಳಾದರೆ ಪ್ರಮಾಣಗಳಿಗೆ ನಿಜವಾದ ಮಾನ್ಯತೆ ಬರಲಾರದು.

ನಮ್ಮ ಸ್ವಂತ ತಿಳುವಳಿಕೆಯನ್ನು ಉಪಯೋಗಿಸುವ ಮತ್ತು ಅದರ ಸಹಾಯದಿಂದ ಕೇವಲ ತಾತ್ವಿಕ ಸಿದ್ಧಾಂತಗಳನ್ನು ಮೀರಿ ಸ್ವಂತದ ಸತ್ಯಸಾಕ್ಷಾತ್ಕಾರಕ್ಕೆ ಹೋಗುವ ಧೈರ್ಯವನ್ನೂ ದೃಢನಿಶ್ಚಯವನ್ನೂ ಮಾಡಲು ಅತನು ನನಗೆ ಉಪದೇಶಿಸುತ್ತಾನೆ, ಅತನ ಕಾರ್ಯವು ಸಾಮಾನ್ಯ ಜನರನ್ನು ಉದಾತ್ತ ವಿಚಾರಗಳಿಂದ ಮೇಲ್ಮಟ್ಟಕ್ಕೊಯ್ಯುವದಾಗಿತ್ತೇ ವಿನಾ ಕೇವಲ ವಿದ್ವಾಂಸರನ್ನಲ್ಲ.

ದೇವರು ಪುರುಷೋತ್ತಮನು, ಸೃಷ್ಟಿಕರ್ತನು, ತಂದೆ ಮುಂತಾದ ವ್ಯಕ್ತಿನಿಷ್ಠ ಕಲ್ಪನೆಗಳನ್ನು ಬುದ್ಧನು ನಿರಾಕರಿಸಿದನು. ಕೊನೆಯದಾಗಿ ಪರಮ ಸತ್ಯವು ತರ್ಕವನ್ನು ಮೀರಿರುವದು. ಆದರ ತಾರ್ಕಿಕ ನಿರ್ವಚನ ಮಾಡಹೋಗುವದು ವ್ಯರ್ಥವಾದುದು. ಈ ನಿರ್ಭಂಧಗಳಿಗೆ ಒಳಪಟ್ಟು ಬುದ್ಧನು ನಿರ್ವಾಣದ ಸತ್ಯತೆಯನ್ನು ಸಾಧಿಸಿದ್ದಾನೆ. ಆದಕ್ಕೇ ಅತನು ಧರ್ಮವೆಂಬ ಹೆಸರನ್ನಿತ್ತಿದ್ದಾನೆ.

ಇನ್ನು ಬುದ್ಧನ ವಿಚಾರದಲ್ಲಿ ಕಂಡುಬರುವ ಹಲವು ಸಮಾಧಾನವನ್ನುಂಟುಮಾಡದ ಅಂಶಗಳಿರುವದು ನಿಜವೆಂದು ನಾವು ಒಪ್ಪಬೇಕಾಗುವದು. ಮನುಷ್ಯನ ಜಿಜ್ಞಾಸ-ವೃತ್ತಿಗೆ ಕೊನೆಯಿಲ್ಲ. ಅದು ಹೇಗೆ, ಇದು ಹೇಗೆ ಮುಂಬೇನು ಎಂಬ ಪ್ರಶ್ನೆಗಳಿಗೆ ಕೊನೆಯೇ ಇಲ್ಲ. ಕಟ್ಟ ಕಡೆಗೆ ಉಳಿಯುವ ಸಂಶಯಗಳನ್ನು ಕೇಳಬೇಕೆಂಬ ಕುತೂಹಲವನ್ನು ಬಿಡಿರಿ ಎಂಬ ಬುದ್ಧನ ಉಪದೇಶವು ಇವುಗಳಲ್ಲಿ ಒಂದಾಗಿದೆ. ವ್ಯಕ್ತಿ-ನಿಷ್ಠ ದೇವರನ್ನು ಅವನು ನಿರಾಕರಿಸಿದ್ದರಿಂದ ಮತ್ತು ಧರ್ಮವೆಂಬ ಅತಿ ಅಮೂರ್ತ ತತ್ವಕ್ಕೆ ಪ್ರಾಧಾನ್ಯ ಕೊಟ್ಟದ್ದರಿಂದ ಸಾಮಾನ್ಯ ಜನರ ಕಲ್ಪನೆಗೆ ನಿಲುಕದಿರುವ ಒಂದಿಷ್ಟು ಅವ್ಯವಹಾರ್ಯತೆಯು ಎರಡನೆಯ ಲೋಪವು. ಮೂರನೆಯದಾದ ಆಶ್ರಮ ಧರ್ಮಗಳನ್ನು ಜನ್ಮಾಗಿ ಕ್ರಮದಿಂದ ಪಾಲಿಸಿ ಭಿಕ್ಷುವಾಗುವವರ ಬದಲಾಗಿ ಬೇಕಾದವರು ಭಿಕ್ಷುವಾಗಬಹುದು ಎಂದು ಆಶ್ರಮಗಳ ಅಗತ್ಯವನ್ನು ಮೂದಲಿಸಿದುದು. ಆದರೆ ಆ ಕಾಲದಲ್ಲಿ ಬುದ್ಧನು ಎದುರಿಸಬೇಕಾದ ಮೂರು ಶತ್ರುಗಳು ವೈದಿಕವಾದಿಗಳು, ಯಜ್ಞಯಾಗಾದಿಗಳ ಸಾಂಪ್ರದಾಯಿಕರು ಮತ್ತು ಲೌಕಿಕ ವಿಷಯರತರು ಹೀಗಿದ್ದುದರಿಂದ ಅತನ ಈ ಮೂರು ಅತ್ಯುಕ್ತಿಗಳು ನಮಗೆ ಸುಲಭವಾಗಿ ಅರ್ಥವಾಗುವವು.

ಹಬ್ಬ ಹುಂಣಿವೆಗಳೂ ಅವುಗಳ ದಿನಾಚರಣೆಯೂ

ಲೇಖಕರು:— ಶ್ರೀಯುತ ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸಪೆಕ್ಟರ, ದಕ್ಷಿಣಭಾಗ, ಧಾರವಾಡ.

ಲೇಖಾಂಕ (೪)

ಶೀಗಿಹುಣ್ಣಿವೆ

ವಿಜಯಾದಶಮಿಯ ದಿವಸ ಪ್ರತಿಷ್ಠಾಪನೆಯಿಂದ ಶೀಗವ್ವನನ್ನು ಹೆಂಣು ಮಕ್ಕಳು ದಿನಾಲು ಪೂಜಿಸಿ ಆರತಿಯನ್ನು ಬೆಳಗುತ್ತಾರೆ. ಕೆಲವು ಊರುಗಳಲ್ಲಿ ಎಂಬತ್ತು ದಿನಗಳ ವರೆಗೆ ಕೆಲವು ಕಡೆ ಹನ್ನೊಂದು ದಿನಗಳ ವರೆಗೆ ಇಟ್ಟು ಪೂಜಿಸುವ ವಾಡಿಕೆಯಿದೆ. ಸೋನೆಯ ದಿನ ರಾತ್ರಿ ಶೀಗವ್ವನನ್ನು ಬೀಳ್ಕೊಡುವರು. ಬೀಳ್ಕೊಡಲು ಹೋಗುವಾಗ ಹುಡಿಗಯರೆಲ್ಲ ಶೀಗವ್ವನ ಮೇಲಿನ ಹಾಡುಗಳನ್ನು ಹಾಡುವರು ಈ ಹುಣ್ಣಿಮೆಯಲ್ಲಿ ಶೀಗವ್ವನು ಇರುವದರಿಂದ ಇದಕ್ಕೆ ಶೀಗಿ ಹುಂಣಿವೆಂಬ ಹೆಸರು ಬಂದಿದೆ. ಈ ಹುಂಣಿವರು ವೈಶಿಷ್ಟ್ಯವೆಂದರೆ ಜೋಲದಲ್ಲಿ ನಾಲ್ಕು ಕಡೆಗೆ ಚರು ವನ್ನು ಚಲ್ಲುವದು. ಮಲೆನಾಡು-ಗಡಿನಾಡುಗಳಲ್ಲಿ ಇದನ್ನು ಎಳ್ಳೀ ಹುರುಪಿನಿಂದ ಆಚರಿಸುವರು. ಇದೊಂದು ಪಸ ಸೋಜನ ಹಬ್ಬವು. ಬೈಲುಸೀಮೆಯ ಜನರು ಚರಗ ಚಲ್ಲುವದನ್ನು ಎಳ್ಳ ಅಮವಾಸ್ಯೆಯ ದಿನ ಆಚರಿಸುವರು. ಯಾಕಂದರೆ, ಅಲ್ಲಿಯ ಬೆಳೆಗಳು ಆಗ ಹೂಡಿ ಹಿರಿಯುವದರಲ್ಲಿರುತ್ತಿವೆ. ಮಲೆನಾಡು-ಗಡಿನಾಡುಗಳಲ್ಲಿ ಈ ಹುಂಣಿವೆಯ ಸಮಯಕ್ಕೆ ಬೆಳೆಗಳಿಲ್ಲ ಹೂಡಿ ಹಾಕುವದರಲ್ಲಿರುತ್ತಿವೆ. ತಮಗೆ ಇಷ್ಟವಾದ ಪಕ್ವಾನ್ನಗಳನ್ನು ತಯಾರ ಮಾಡಿಕೊಂಡು ಶೀಗಿ ಹುಂಣಿವೆಯ ಬುಟ್ಟಿಯಲ್ಲಿಟ್ಟುಕೊಂಡು ಅದನ್ನು ತಲೆಯ ಮೇಲೆ ಹೊತ್ತುಕೊಂಡು ಹೊಲಕ್ಕೆ ಹೋಗುವರು. ಶೀಗಿ ಹುಂಣಿವೆಯ ಬುಟ್ಟಿಯ ಬಗೆಗೆ ಇಲ್ಲಿ ಒಂದೆರಡು ಮಾತುಗಳನ್ನು ಸ್ಪಷ್ಟೀಕರಿಸಲು ಹೇಳುವದು ಅವಶ್ಯವೆಂದು ತೋರುತ್ತದೆ. ಮನೆಮಂದಿಗೆಲ್ಲ ಸಾಕಾಗುವಷ್ಟು ಊಟದೊಡವೆಗಳನ್ನು ಹಿಡಿಯುವಂತಹದೊಂದು ದೊಡ್ಡ ಬುಟ್ಟಿಯನ್ನು ಒಳಗೂ ಹೊರಗೂ ಅಕಳ ಇಲ್ಲವೆ ಎತ್ತಿನ ಶಗಣಿಯಿಂದ ಸಾರಿಸುವರು ಅದು ಒಣಗಿದ ನಂತರ ಸುಂಣದಲ್ಲಿ ಎದ್ದಿದ ಜೋಡು ತುದಿ ಬೆರಳುಗಳನ್ನು ಬುಟ್ಟಿಯ ಹೊರ ಮುಗ್ಗಲು ಮೂಡಿಸುತ್ತ ಕೆಳಗೂ ಮೇಲೂ ಅಂಚ (border) ನ್ನು ಕಟ್ಟಿಕೊಳ್ಳುವರು. ನಡುವಿನ ಸ್ಥಳದಲ್ಲೆಲ್ಲ ಪಾಂಡವರ ಚಿತ್ರಗಳನ್ನು ಸುಂಣದ ಬಟ್ಟುಗಳನ್ನಿಟ್ಟೇ ತಯಾರಿಸುವರು. ಇಂತಹ ಬುಟ್ಟಿಗೆ ಶೀಗಿ ಹುಂಣಿವೆ ಬುಟ್ಟಿಯೆಂದು ಕರೆಯುತ್ತಾರೆ. ಈ ಬುಟ್ಟಿಯಲ್ಲಿ ಪಕ್ವಾನಗಳನ್ನೆಲ್ಲ ಇಟ್ಟುಕೊಂಡು ಅದನ್ನು ತಲೆಯ ಮೇಲೆ ಹೊತ್ತುಕೊಂಡು ಹೊಲಕ್ಕೆ ಹೋಗುವರು. ಹೊಲಹೊಳಗಿನ ದೇವರಿಗೆ ನೈವೇದ್ಯ ತೋರಿಸಿ ಆ ನೈವೇದ್ಯವನ್ನು ಹೊಲದ ನಾಲ್ಕು ಮೂಲೆಗಳಲ್ಲಿ ಚಲ್ಲಿ ದಿಗ್ಬಂಧನವನ್ನು ಮಾಡುವರು. ಹೀಗೆ ಮಾಡುವದರಿಂದ ಹೊಲದೊಳಗಿನ ಬೆಳೆಗೆ ದೃಷ್ಟಿದೋಷ ಹೋಗಿ-ರುಜಿ, ಕಾಡು ಮಿಕಗಳ ಕಾಟ, ಕಳ್ಳರ ಹಾವಳಿ, ಮೊದಲಾದವುಗಳು ಸೋಂಕದೆ ಕಾಳುಗಳು ಹುಲುಸು ಬಾಗುವದೆಂದು ಹಳ್ಳಿಗರ ಭಾವನೆ. ಚರಗ ಚಲ್ಲಿದ ತರುವಾಯ ಎಲ್ಲರೂ ಅಲ್ಲಿಯೇ ನೆರಳಿದ್ದ ಪ್ರಶಸ್ತವಾದ ಸ್ಥಳದಲ್ಲಿ ಕುಳಿತು ಊಟಮಾಡುವರು. ಊಟವಾದ ಮೇಲೆ ತಾಸೆರಡು ತಾಸು ವಿಶ್ರಾಂತಿಯನ್ನು ಪೊಂದಿ ಮನೆಯ ಹಾದಿ ಹಿಡಿಯುವರು. ಅರಲಿನಿಂದ ಶೀಗ ವ್ವನನ್ನು ತಯಾರಿಸುವ ಇಲ್ಲವೆ ಶೀಗಿ ಹುಂಣಿವೆ ಬುಟ್ಟಿಯನ್ನು ರೂಪಗೊಳಿಸುವ ಚಟುವಟಿಕೆಯೊಂದನ್ನಿಟ್ಟುಕೊಂಡು ಈ ಹಬ್ಬದ ಬಗೆಗೆ ಮತ್ತು ಇದಕ್ಕೆ ಸಂಬಂಧಿಸಿ ಬಹುದಾದ ಬೇರೆ ವಿಷಯಗಳ ಬಗೆಗೆ ತಲಿಸುವದಕ್ಕೆ ಬರುವಂತಿದೆ. ಯಾವದಾದರೊಂದು ಹೊಲಕ್ಕೆ ಆ ದಿನ

ಮಕ್ಕಳನ್ನು ವನಭೋಜನಕ್ಕೆ ಕರೆದುಕೊಂಡು ಹೋಗಿ ಮಕ್ಕಳ ಕಡೆಯಿಂದ ಚರಗವನ್ನು ಚಲ್ಲಿಸುವದೊಳಿತು. ಈ ಸಂದರ್ಭದಲ್ಲಿ ಉದ್ಭವಿಸಬಹುದಾದ ವಿವರಗಳನ್ನೆಲ್ಲ ಮಕ್ಕಳಿಗೆ ಮನವರಿಕೆಯಾಗುವಂತೆ ಹೇಳಿಕೊಡಬೇಕು ಮತ್ತು ಅವರು ಪಡೆದ ಅನುಭವಗಳನ್ನೆಲ್ಲ ಬರೆಯಿಸಿ ಇಡಬೇಕು.

ದೀಪಳಿಗಿ (ದೀಪಾವಳಿ; ಹಟ್ಟಿ) ಹಬ್ಬವು ಆಶ್ವಿನ ಬಹುಳ ತ್ರಯೋದಶಿಯಿಂದ ಕಾರ್ತಿಕ ಶುದ್ಧ ಪ್ರತಿಪದೆಯ ವರೆಗೆ ನಾಲ್ಕು ದಿನಗಳ ಹಬ್ಬವು. ವಿಚಾರಿಸಿ ನೋಡಿದರೆ, ಈ ಹಬ್ಬವು ನಿಜವಾಗಿ ಕಾರ್ತಿಕ ಶುದ್ಧ ದ್ವಾದಶಿಯ (ತುಳಸಿ ವಿವಾಹದ) ವರೆಗೆ ಒಂದೇ ಸವನೆ ನಡೆಯುವದು. ಆಶ್ವಿನ ಬಹುಳ ತ್ರಯೋದಶಿಗೆ ಧನತ್ರಯೋದಶಿಯೆಂದೂ ನೀರು ತುಂಬುವ ಹಬ್ಬವೆಂದೂ ಕರೆಯುತ್ತಾರೆ. ಮರುದಿನ ನಸುಕಿನಲ್ಲಿ ಎಲ್ಲರೂ ಅಭ್ಯಂಗ ಸ್ನಾನ (ಎರಕೊಳ್ಳುವದು.) ಮಾಡುವದಿರುತ್ತದೆಯಾದುದರಿಂದ ಈ ದಿನ ಸಂಜೆಯಲ್ಲಿ ಮನೆಯಲ್ಲಿದ್ದ ನೀರಿನ ಹೌದು, ಪೀಪಾಯಿ, ಹಂಡೆ, ರಾಂಜನಿಗಿ ಮೊದಲಾದವುಗಳನ್ನೆಲ್ಲ ನೀರಿನಿಂದತುಂಬಿ ಇಡುವದುಂಟು. ಮರದಿನ ಎರಕೊಂಡ ಮೇಲೆ ಫರಾಳ ಮಾಡುವದಿರುತ್ತದೆಯಾದುದರಿಂದ ಈ ದಿನವೇ ಕರ್ಚಿಕಾಯಿ, ಸುರಳಿ ಹೋಳಿಗೆ, ಚಕ್ಕುಲಿ, ಚಿವುಡಾ, ಭಜಿ, ಮೊದಲಾದ ರುಚಿಕರವಾದ ಫರಾಳದ ಸಾಮಾನುಗಳನ್ನು ಮಾಡಿಡುವ ಪರಿಪಾಠವಿದೆ. ಮರುದಿನವೇ ನರಕಚತುರ್ದಶಿಯು. ಇದಕ್ಕೆ ಹಳ್ಳಿಗಾಡಿನಲ್ಲಿ ಶಾವಿಗೆ ಉಣ್ಣುವ ಹಬ್ಬವೆಂದು ಕರೆಯುತ್ತಾರೆ. ಯಾಕಂದರೆ ಶಹರದ ನಿವಾಸಿಗಳ ಹಾಗೆ ತರತರದ ಫರಾಳದ ಸಾವಾನುಗಳನ್ನು ತಯಾರಮಾಡುವದು ಅವರಿಗೆ ಗೊತ್ತಿರುವದಿಲ್ಲ. ಒಂದು ವೇಳೆ ಗೊತ್ತಿದ್ದರೂ ವೇಳೆಯ ಅಭಾವವೊಂದು ಅವರಿಗೆ ಆತಂಕವನ್ನು ಒಡ್ಡುತ್ತಿದೆ. ಆದುದರಿಂದ ಹಳ್ಳಿಗತಿಲ್ಲರೂ ಈ ದಿನ ಶಾವಿಗೆ ಪಾಯಸವನ್ನು ಮಾಡಿ ಉಣ್ಣುತ್ತಾರೆ. ಚತುರ್ದಶಿಗೆ ನರಕಚತುರ್ದಶಿಯೆಂಬ ಹೆಸರು ಏಕೆ ಬಂದಿತೆಂಬುದನ್ನಷ್ಟು ವಿಚಾರಿಸೋಣ. ನರಕಾಸುರನ ಕಾಟವು ದೇವದೇವತೆಗಳಿಗೆಲ್ಲ ಅತಿಯಾಗಿತ್ತಾದುದರಿಂದ ಅವರೆಲ್ಲರೂ ವಿಷ್ಣುವಿನಲ್ಲಿಗೆ ಹೋಗಿ ಮೊರೆಯಿಟ್ಟರು. ವಿಷ್ಣುವು ವರಾಹಾವತಾರವನ್ನು ತಾಳಿ ನರಕಾಸುರನ ನರಕದ ಕೋಟೆಯಲ್ಲಿ ಹೊಕ್ಕು ಅವನನ್ನು ಸಂಹಾರ ಮಾಡಲು ತ್ರಯೋದಶಿಯ ರಾತ್ರಿ ಹೊರಟನು. ಇತ್ತ ದೇವ-ದೇವತೆಗಳೆಲ್ಲರು ಶ್ರೀ ವಿಷ್ಣುವಿನ ಬರುವಿಕೆಯೊಳಗಾಗಿ ಅವನ ಜಳಕದ ಸಲುವಾಗಿ ಇದ್ದ ಹಂಡೆಗಳೆನ್ನೆಲ್ಲ ನೀರಿನಿಂದ ತುಂಬಿ ಕಾಸಿ ಇಟ್ಟಿದ್ದರು. ಯಾಕಂದರೆ, ನರಕಾಸುರಸಗೂಡ ನರಕದ ಕೋಟೆಯಲ್ಲಿ ಯುದ್ಧ ಮಾಡಬೇಕಾಗಿತ್ತಾದುದರಿಂದ ವಿಷ್ಣುವಿನ ಮೈಯೆಲ್ಲ ನರಕದಿಂದ ಹೊಲಸಾಗಿರುವ ಸಂಭವವಿತ್ತು. ಶ್ರೀವಿಷ್ಣುವು ನರಕಾಸುರನನ್ನು ಸಂಹಾರ ಮಾಡಿ ನರಕಚತುರ್ದಶಿಯ ದಿನ ಕೋಳಿ ಕೂಗುವ ಮುಂಚೆ ಬಂದನು. ಅವನ ಮೈಯೆಲ್ಲ ನರಕದಿಂದ ಹೊಲಸಾಗಿತ್ತು. ದೇವತೆಗಳೆಲ್ಲ ಅವನ ಮೈಗೆ ಎಣ್ಣೆ-ಶೀಗಿಕಾಯಿ ಹಚ್ಚಿ ಬಿಸಿನೀರಿನಿಂದ ಸ್ವಚ್ಛವಾಗಿ ತೊಳೆದು ಅಭ್ಯಂಗ ಸ್ನಾನ ಮಾಡಿಸಿ ಆರತಿಯನ್ನು ಬೆಳಗಿ ಹಣೆಯ ಮೇಲೆ ತಿಲಕವನ್ನಿಟ್ಟರು ಮತ್ತು ಮನೆಯ ಸುತ್ತಲೂ ಕಾರ್ತಿಕವನ್ನು ಹಚ್ಚಿದರು. ಯುದ್ಧ ಮಾಡಿ ದಣಿದಿದ್ದನಾದುರಿಂದ ಮುನ್ನಾ ದಿನವೇ ತಯಾರ ಮಾಡಿಟ್ಟ ಫರಾಳದ ಸಾಮಾನುಗಳನ್ನು ತಿಂದನೆಂದು ಪೌರಾಣಿಕ ಕಥೆಯಿದೆ. ಇವರ ಅನುಕರಣವನ್ನೇ ಈಗ ನಾವೆಲ್ಲರೂ ಮಾಡುತ್ತಿದ್ದೇವೆ. ತಾತ್ವಿಕ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ, ಕಾಮ-ಕ್ರೋಧ ಮದ-ಮತ್ಸರ-ಮೋಹ ಲೋಭವೆಂಬ ಆರು ಮಂದಿ ನರಕಾಸುರರು ನಮ್ಮಲ್ಲಿಯೇ ಇದ್ದಾರೆ. ಅವರನ್ನು ನಾವು ಸಂಹಾರ ಮಾಡಿ ನರಕ ಚತುರ್ದಶಿಯ ದಿವಸ ಎರಕೊಂಡು, ಆರತಿ ಬೆಳಗಿಸಿಕೊಂಡು, ಹಣೆಗೆ ತಿಲಕವನ್ನಿಡಿಸಿಕೊಂಡು, ಫರಾಳವನ್ನು ತಿನ್ನಬೇಕು. ಹೀಗೆ ಮಾಡಿದರೆ ಶ್ರೀ ವಿಷ್ಣುವು ಹಾಕಿ ಕೊಟ್ಟ ಕಿತ್ತೆಯನ್ನು ನಾವು ತೀಡಿದಂತಾಗುಗುತ್ತಿದೆ. ನರಕ ಚತುರ್ದಶಿಯ ದಿವಸ ಎಲ್ಲರೂ ಕೋಳಿ ಕೂಗುವ ಮೊದಲೇ ಎದ್ದು ಕಾರ್ತಿಕ ಹಚ್ಚಿ, ಎರಕೊಂಡು ಆರತಿ ಬೆಳಗಿಸಿಕೊಂಡು, ಹಣೆಗೆ ತಿಲಕವನ್ನಿಡಿಸಿಕೊಂಡು ಫರಾಳ ಮಾಡುವರು. ಫರಾಳವಾದ ಮೇಲೆ (ಹಳ್ಳಿಗಾಡಿನಲ್ಲಿ ಶಾವಿಗೆ ಉಂಡ ಮೇಲೆ) ಪಗಡಿಯ ಆಟವನ್ನು ಹೂಡುತ್ತಾರೆ. ಯಾಕಂದರೆ, ಕೌರವರೂ ಪಾಂಡವರೂ, ಆ ದಿನ ಪಗಡಿಯ ಜೂಜಾಟವನ್ನು ಆಡಿದರು. ಈ ಜೂಜಾಟದಲ್ಲಿ ಧರ್ಮರಾಜನು ಎಲ್ಲವನ್ನೂ ಸೋತು ಹನ್ನೆರಡು

ವರುಷ ವನವಾಸ ಒಂದು ವರುಷ ಅಜ್ಞಾತ ವಾಸವನ್ನು ಅನುಭೋಗಿಸಬೇಕಾಯಿತು ಅಜ್ಞಾತವಾಸದಲ್ಲಿದ್ದಾಗ ಅವರ ಇರುವಿಕೆಯು ಕೌರವಂಗೆ ಗೊತ್ತಾದರೆ ಪುನಃ ಹನ್ನೆರಡು ವರುಷ ವನವಾಸ ಒಂದು ವರುಷ ಅಜ್ಞಾತವಾಸವನ್ನನುಭೋಗಿಸಬೇಕೆಂಬ ಕರಾರಾಗಿತ್ತೆಂದು ಪೌರಾಣಿಕ ಕಥೆಯಿದೆ. ಈ ದಿನ ಫರಾಳವಾದ ಮೇಲೆ ಕೌರವರೂ ಪಾಂಡವರೂ ಪಗಡಿಯ ಜೂಜಾಟವನ್ನಾಡಿದರೆಂದೂ ತಿಳಿದು ಜನರೆಲ್ಲರೂ ಮನರಂಜನೆಯ ಸಲುವಾಗಿ ಪಗಡಿಯ ಆಟವನ್ನಾಡುವದುಂಟು. ಇಂದಿನಿಂದ ಒಂದೊಂದು ಓಣಿಯ ಹುಡುಗೆಯರೆಲ್ಲ ಕೂಡಿಕೊಂಡು ಕೋಟೆಕಟ್ಟಿಕೊಂಡು ನಟ್ಟನಡುವೆ ಶ್ರೀ ಕೃಷ್ಣನ ಸೋಗನ್ನು ಹಾಕಿದ ಬಾಲಕಯನ್ನು ನಿಲ್ಲಿಸಿ ಕೋಲಿನ ಪದಗಳನ್ನು ಹಾಡುತ್ತ ಊರಲ್ಲೆಲ್ಲ ಸುತ್ತಾಡುವದುಂಟು ಈ ಆಟವು ದೀವಳಿಗಿ ಹಬ್ಬವು ಮುಗಿದ ಬಳಿಕ ಕೆಲ ದಿನಗಳ ವರೆಗೆ ನಡೆಯುವದುಂಟು. ಕೆಲವು ಕಡೆ ತುಳಸಿ ಲಗ್ನದ ವರೆಗೂ ನಡೆಯುವದುಂಟು ನರಕ ಚತುರ್ದಶಿಯ ಮರುದಿನವೇ ಅಮವಾಸ್ಯೆಯು. ಮಹಾಲಕ್ಷ್ಮಿಯ ಪೂಜೆಯ ದಿವವು. ಇದು ವಿಕ್ರಮ ಶಕದ ಪ್ರಕಾರ ವರುಷದ ಕಡೆಯ ದಿನವು. ಕಾರ್ತಿಕ ಶುದ್ಧ ಪ್ರತಿಪದವೇ ವಿಕ್ರಮ ಸಂವತ್ಸರದ ಪ್ರಾರಂಭವು. ಈ ಶಕವು ಉತ್ತರ ಹಿಂದುಸ್ತಾನದಲ್ಲಿ ಬಳಕೆಯಲ್ಲಿದೆ. ಮುಂಬಯಿಯೊಳಗಿನ ವ್ಯಾಪಾರಸ್ಥರಿಲ್ಲ ವಿಕ್ರಮ ಶಕವನ್ನು ಪಾಲಿಸುವವರು. ಅವರ ಸಂಪರ್ಕದಿಂದ ನಮ್ಮ ವ್ಯಾಪಾರಸ್ಥರೂ ಈ ದಿನ ಮಹಾಲಕ್ಷ್ಮಿಯ ಪೂಜೆಯನ್ನೂ ಪ್ರತಿಪದದ ದಿನ ಸರಸ್ವತಿಯ (ಹೊಸ ಖಾತೆ ಕಿರ್ದಿಯ ಪುಸ್ತಕಗಳ) ಪೂಜೆಯನ್ನೂ ಮಾಡುವರು. ಇವೆರಡೂ ಪೂಜೆಗಳಿಗೆ ವ್ಯಾಪಾರಸ್ಥರು ತಮ್ಮ ಗಿರಾಕಿಗಳನ್ನು ಆಪ್ತೇಷ್ಟರನ್ನೂ ಬರಮಾಡಿಕೊಂಡು ಪ್ರಸಾದವನ್ನು ಕೊಟ್ಟು ಬಡಬಗ್ಗರಿಗೆ ದಾನಧರ್ಮ ಮಾಡುವದುಂಟು. ಕಾರ್ತಿಕ ಶುದ್ಧ ಪ್ರತಿಪದಕ್ಕೆ ಬಲಿಪಾಡ್ಯಮಿಯೆಂದು ಹೆಸರಿದೆ. ಇದು ಬಲಿಚಕ್ರವರ್ತಿಯು ವಾಮನಾವತಾರವನ್ನು ತಾಳಿದ ಶ್ರೀವಿಷ್ಣುವಿಗೆ ಭೂದಾನ ಮಾಡಿದ ಸುಮುಹೂರ್ತವು. ಇದಾದರೂ ಯುಗಾದಿ ಹಬ್ಬದಂತೆ ಸಾಡೇತೀನ (ಮೂರುವರಿ) ಮುಹೂರ್ತಗಳಲ್ಲೊಂದಾಗಿದೆ. ನೂತನ ಕಾರ್ಯಾರಂಭಗಳಿಗೆಲ್ಲ ಇದು ಸುಮುಹೂರ್ತವು. ಯುಗಾದಿ ಹಬ್ಬದ ಬಗೆಗೆ ಹೇಳಿದ ಸಂಗತಿಗಳೆಲ್ಲ ಇಲ್ಲಿಯೂ ಅನ್ವಯಿಸುತ್ತವೆ ಇವತ್ತಿನ ದಿವಸ ಜನರು ಎತ್ತು ಆಕಳುಗಳ ಶಗಣಿಯಿಂದ ಪಾಂಡವರನ್ನಿಟ್ಟು ಮನೆತುಂಬ ಎತ್ತು ಆಕಳುಗಳ ಕಜ್ಜೆಗಳನ್ನು ಸುಂಣದಿಂದ ಗುರುತಿಸುತ್ತಾರೆ. ಇದಕ್ಕೂ ಒಂದು ಪೌರಾಣಿಕ ಕಥೆಯಿದೆ. ಧರ್ಮರಾಜನು ವಿನಾಲು ಆಕಳಿಗೆ ನೈವೇದ್ಯವನ್ನು ತಿನ್ನಿಸದೇ ಊಟ ಮಾಡುತ್ತಿರಲಿಲ್ಲ. ಈ ಸಂಗತಿಯು ಕೌರವರಿಗೆ ಗೊತ್ತಿತ್ತು. ಆದುದರಿಂದ ದೇಶದಲ್ಲೆಲ್ಲ ಸೈನಿಕರ ಹಂಡಗಳನ್ನೆಲ್ಲ ಹುರಿಜಟ್ಟು ಹೋದಲ್ಲೆಲ್ಲ ಆಯಾ ಊರಿನ ದನಕರುಗಳನ್ನೆಲ್ಲ ತಮ್ಮ ತಮ್ಮ ಠಾಣ್ಯಾದಲ್ಲಿ ಕಟ್ಟಿಹಾಕಬೇಕೆಂದು ತಂಡಗಳ ನಾಯಕರಿಗೆ ಕಟ್ಟಪ್ಪಣೆ ಮಾಡಿದ್ದರು. ಇದರಿಂದ ಯಾವ ಊರಲ್ಲಿ ಪಾಂಡವರು ಇರವರೆಂಬುದು ಕೌರವರಿಗೆ ಲಟ್ಟನೆ ಗೊತ್ತಾಗುತ್ತಿತ್ತು. ಯಾಕೆಂದರೆ, ಧರ್ಮರಾಜನು ಊಟವಿಲ್ಲದೆ ಕೂಡಬೇಕಾಗುತ್ತಿತ್ತು. ಇದನ್ನು ಭೀಮಾರ್ಜುನರು ಸಹಿಸುವ ಬಗೆ ಹೇಗೆ? ಕೂಡಲೆ ಅವರು ಹೋಗಿ ದನಕರುಗಳನ್ನು ಕಟ್ಟಿ ಹಾಕಿದವರನ್ನು ಸೋಲಿಸಿ ಅವುಗಳನ್ನು ಬಿಡಿಸಿಕೊಂಡು ಬಂದೇತೀರುತ್ತಿದ್ದರು. ಇದರಿಂದ ಪಾಂಡವರ ಇರುವಿಕೆಯ ಒಂದು ವರುಷದ ಅಜ್ಞಾತವಾಸವು ಮುಗಿಯುವ ಮುನ್ನ ಕೌರವರಿಗೆ ಗೊತ್ತಾಗಿ, ಅವರು ಪುನಃ ಹನ್ನೆರಡು ವರುಷ ವನವಾಸ ಒಂದು ವರುಷ ಅಜ್ಞಾತವಾಸವನ್ನನುಭೋಗಿಸಬೇಕಾಗುತ್ತಿತ್ತು. ಇಂತಹದೊಂದು ತಂಡವು ಈ ಸಮಯಕ್ಕೆ ವಿರಾಟನಗರಕ್ಕೆ ಬಂದು ಆ ಊರಿನ ದನಕರುಗಳನ್ನೆಲ್ಲ ಕಟ್ಟಿಹಾಕಿತು. ಧರ್ಮರಾಜನು ಊಟವಿಲ್ಲದೆ ಕುಳಿತನು. ಭೀಮಾರ್ಜುನರು ಜಡಪಡಿನಲಿಕ್ಕೆ ಪತ್ತಿದರು. ಧರ್ಮರಾಜನು ತನ್ನ ಪಂಚಾಂಗವನ್ನು ತೆಗೆದು ಕೊಂಡು ಲೆಕ್ಕ ಹಾಕಿ ನೋಡಿ ಆ ದಿವಸಕ್ಕೆ (ಅಮವಾಸ್ಯೆಗೆ) ಅಜ್ಞಾತವಾಸವು ಮುಕ್ತಾಯವಾಯಿತೆಂದು ತೀರ್ಪನ್ನು ಕೊಟ್ಟನು. ಕೂಡಲೆ ಅರ್ಜುನನು ವಿರಾಟ ರಾಜನ ಮಗನಾದ ಉತ್ತರಕುಮಾರನ ಸಾರಥಿಯಾಗಿ ಹೋಗಿ ಕೌರವರ ತಂಡವನ್ನು ಸೋಲಿಸಿ ದನಕರುಗಳನ್ನು ಬಿಡಿಸಿಕೊಂಡು ಈ ಪ್ರತಿಪದದ ಸುಮುಹೂರ್ತದಲ್ಲಿ

ವಿರಾಟನಗರವನ್ನು ನೈಭವದಿಂದ ಪ್ರವೇಶಿಸಿದನು. ಧರ್ಮರಾಜನು ಆಕಳವನ್ನು ಪೂಜೆ ಮಾಡಿ ನೈವೇದ್ಯವನ್ನು ತಿನ್ನಿಸಿ ಆ ಮೇಲೆ ತಾನು ಊಟ ಮಾಡಿದನು. ಆ ನಗರದ ನಿವಾಸಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ಅಂದಿನಿಂದ ನಮ್ಮ ಎಲ್ಲರಿಗೆ ಇದೊಂದು ದೊಡ್ಡ ಹಬ್ಬವಾಗಿದೆ. ಈ ಪೌರಾಣಿಕ ಸಂಗತಿಯ ಸ್ಮರಣಾರ್ಥವಾಗಿ ಬಲಿಪಾಡ್ಯಮಿಯ ದಿನ ಎಲ್ಲರೂ ಪಾಂಡವರನ್ನಿಟ್ಟು ಮನೆತುಂಬ ಎತ್ತು ಆಕಳುಗಳ ಹೆಜ್ಜೆಗಳನ್ನು ಸುಂಣದಿಂದಿಡುವದುಂಟು. ಈ ದಿನ ದನಕರುಗಳ ಮೈಯ್ಯನ್ನು ಸ್ವಚ್ಛವಾಗಿ ತೊಳೆದು ಕೋಡುಗಳಿಗೆ ಹುರಮುಂಜವನ್ನು ಹಚ್ಚಿ ಕೊಡಬಳೆಗಳನ್ನು ಹಾಕುತ್ತಾರೆ. ಆಕಳಗಳಿಗೆ ಪೂಜೆಮಾಡಿ ಅವುಗಳಿಗೆ ನೈವೇದ್ಯವನ್ನು ತಿನ್ನಿಸಿ ಆ ಮೇಲೆ ಊಟಮಾಡುತ್ತಾರೆ. ಊಟವಾದಮೇಲೆ ಎತ್ತುಗಳನ್ನು ಸಿಂಗರಿಸಿ ಮೆರೆಯಿಸುತ್ತ ಬಸವಂಣನ ಗುಡಿಗೆ ಹೋಗಿ ಕಾಯಿ ಒಡೆಯಿಸಿಕೊಂಡು ಬರುವದುಂಟು. ದನಕಾಯುವ ಹುಡುಗರು ಕಾರ್ತಿಕ ಬಹುಳ ದ್ವಾದಶಿಯಿಂದ ಐದು ದನಗಳ ವರೆಗೆ ದಿನಾಲು ರಾತ್ರಿ ಆಣಿಪಿಣಿ (ದನಗಳಿಗೆ ಬೆಳಗುವ ಆರುತಿ)ಯನ್ನು ದನಗಳಿಗೆಲ್ಲ ಬೆಳಿಗುವರು. ಅರ್ಜುನನು ಕೌರವರ ಸೇನೆಯನ್ನು ಸೋಲಿಸಿ ದನಕರುಗಳನ್ನು ಬಿಡಿಸಿಕೊಂಡು ಬಂದದ್ದರಿಂದ ನೆನಪಿಗಾಗಿ ಮಾಡುವ ಮಂಗಲಕಾರ್ಯವು ಇದಾಗಿರಲು ಸಾಕು. ಈ ದಿನ ಸಂಜೆಯಲ್ಲಿ ಎಲ್ಲರೂ ತಮ್ಮ ತಮ್ಮ ಬಾಗಿಲ ಮುಂದೆ ಒಣ ದಂಟಿನ ಸಿಪುಡುಗಳನ್ನು ಹರವಿ ಅವುಗಳಲ್ಲಿ ಅಲ್ಲೊಂದು ಇಲ್ಲೊಂದು ಎಳ್ಳು ಕಟ್ಟಿಗೆಯನ್ನು ಸೇರಿಸಿಡುವದುಂಟು. ದನಗಳು ಬಂದಕೂಡಲೆ ಆ ಸಿವುಡುಗಳಿಗೆ ಬೆಂಕಿ ಕೊಟ್ಟು ದನಕರುಗಳನ್ನು ಉರಿಯುವ ಬೆಂಕಿಯ ಮೇಲೆ ದಾಟಿಸಿ ಕರಿಹರಿಯುವದುಂಟು. ಹೀಗೆ ಮಾಡಿದರೆ ದನಗಳ ಮೈಮೇಲಿನ ಪೀಡೆಯು ಹೊರಟಿದ್ದು ಹೋಗುವದೆಂದು ಜನರ ಭಾವನೆ. ಬಲಿಪಾಡ್ಯಮಿಯ ಮರುದಿನದಿಂದ ಅಲ್ಲೀಕೇರಿಯನ್ನು ಮಾಡುವರು. ಅಲ್ಲೀಕೇರಿಯೆಂದರೆ ಇದೊಂದು ವನಭೋಜನದ ಹಬ್ಬವು. ಊರಹೊರಗೆ ನೀರು-ನೆರಳುಗಳ ಅನುಕೂಲತೆಯಿದ್ದ ಪ್ರಶಸ್ತವಾದೊಂದು ಸ್ಥಳದಲ್ಲಿ ಅಲ್ಲಿಕೇರಿಯನ್ನು ಸ್ಥಾಪಿಸುವರು. ನಟ್ಟನಡುವೆ ಬಸವಂಣನ ಮೂರ್ತಿಯನ್ನಿಟ್ಟು ಅದರ ಸುತ್ತಲು ಏಳು ಸುತ್ತಿನದೊಂದು ಸಂಣ ಕೋಟೆಯನ್ನು ಅರಲಿನಿಂಡ ಕಟ್ಟುವರು. ಇದಕ್ಕೆ ಅಲ್ಲಿಕೇರಿಯೆಂಬ ಹೆಸರು. ಊರರೆವಲ್ಲರೂ ದಿನಾಲು ತಮಗೆ ಇಷ್ಟವಾದ ಅಡಿಗೆಯನ್ನು ಮಾಡಿಕೊಂಡು ಅಲ್ಲೀಕೇರಿಗೆ ಹೋಗಿ ಬಸವಂಣನಿಗೆ ನೈವೇದ್ಯ ಕೊಟ್ಟು ಅದರ ಸುತ್ತಲು ನೆರಳಿದ್ದಲ್ಲಿ ಕುಳಿತು ಊಟ ಮಾಡುವರು. ಹೀಗೆ ಅಲ್ಲೀಕೇರಿಯನ್ನು ಹೂಡಲು ಅನುಕೂಲತೆಯಿಲ್ಲದ ಊರಿನವರು ತಮ್ಮ ಊರ ಸಮೀಪದಲ್ಲಿರುವ ರಮ್ಯವಾದ ಸ್ಥಳಗಳಿಗೆ ಇಲ್ಲವೆ ದೇವಸ್ಥಾನಗಳಿಗೆ ಹೋಗಿ ಅಲ್ಲೀಕೇರಿಯನ್ನು ತೀರಿಸಿಕೊಂಡು ಬರುವ ವಾಡಿಕೆಯಿದೆ. ಕೆಲವು ಊರುಗಳಲ್ಲಿ ಅದು ಐದು ದಿನಗಳ ವರೆಗೆ, ಕೆಲವು ಊರುಗಳಲ್ಲಿ ಏಳು ದಿನಗಳ ವರೆಗೆ, ಕೆಲವು ಕಡೆ ತುಳಸಿ ಲಗ್ನದ ವರೆಗೆ ಸಾಗುವದುಂಟು. ತುಳಸಿ ಲಗ್ನದ ದಿನವು (ಕಾರ್ತಿಕ ಶುದ್ಧ ದ್ವಾದಶಿಯು) ಶುಭ ಕಾರ್ಯಗಳನ್ನು ಮಾಡಲು ಸುಮುಹೂರ್ತವು. ಇಲ್ಲಿಗೆ ದೀಪಾವಳಿ (ಹಟ್ಟಿ) ಹಬ್ಬವು ಮುಗಿದಂತಾಯಿತು. ಇದು ಚಾತುರ್ಮಾಸದ ಕೊನೆಯ ಹಬ್ಬವು ಇಷ್ಟರಲ್ಲಿ ಹೊಲದೊಳಗಿನ ಭತ್ತ, ಜೋಳ, ಮೊದಲಾದ ಮುಂಗಾರಿ ಬೆಳೆಗಳು ಮಾಗಿರುತ್ತವೆ ಸುಗ್ಗಿಯ ಸಲುವಾಗಿ ಎಲ್ಲರೂ ದನಕರುಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ಹೊಲಗಳಲ್ಲಿಯೇ ವಾಸಿಸಲು ಹೋಗುವರು. ಇನ್ನು ಮೇಲೆ ಹಬ್ಬಗಳು ಕಡಿಮೆ. ಅಪ್ಪಿ ತಪ್ಪಿ ಆಗೊಂದು ಈಗೊಂದು ಹಬ್ಬವು ಬರುವದುಂಟು; ಈ ಅವಧಿಯಲ್ಲಿ ಒಂದು ವೇಳೆ ಹಬ್ಬವು ಬಂದರೂ ಹಳ್ಳಿಗರಿಗೆ ಸ್ವಲ್ಪು ಬಿಡುವಿನ ಸಂಧಿಯನ್ನು ನೋಡಿ ಬರುವದುಂಬು.

ಅಲ್ಲೀಕೇರಿಗೆ ಶೈಕ್ಷಣಿಕ ಮಹತ್ವವಿದೆ. ಶಿಕ್ಷಕ- ಶಿಕ್ಷಕಿಯರು ತಮ್ಮ ಊರ ಸಮೀಪದಲ್ಲಿರುವ ಮನೋಹರವಾದ ಸ್ಥಳಗಳಿಗೆ ಇಲ್ಲವೆ ದೇವಸ್ಥಾನಗಳಿಗೆ ಅಲ್ಲಿಕೇರಿಯ ಸಲುವಾಗಿ ಚಿಕ್ಕ ಪ್ರವಾಸಗಳನ್ನೇರ್ಪಡಿಸಿ ಮಕ್ಕಳನ್ನು ಕರೆದುಕೊಂಡು ಹೋಗುವದೊಳಿತು. ಈಗ ಮಳೆಮಾರಿನ ಅಂಜಿಕೆಯು ತಿಲಮಾತ್ರವೂ ಇರುವದಿಲ್ಲ. ಮೂಡ (ಮೂಡಣಿ) ಗಾಳಿಯ ಉಗ್ರತೆಯೂ ಇರುವದಿಲ್ಲ. ಚಿಕ್ಕ ಪ್ರವಾಸಗಳಿಗೆ ಇದು ಒಳ್ಳೇ ಸಮಯವು.

ದಿನಾಲು ಒಂದೊಂದರಂತೆ ತಮ್ಮ ಹಳ್ಳಿಯ ಸಮೀಪವಿರುವಎಲ್ಲ ರಮ್ಯ ಸ್ಥಳಗಳಿಗೆ ಸಂದರ್ಶನವನ್ನೇರ್ಪಡಿಸಬೇಕು ಮತ್ತು ಮಕ್ಕಳು ಪಡೆದ ಅನುಭವಗಳನ್ನೆಲ್ಲ ಅವರ ಕಡೆಯಿಂದ ಬರೆಯಿಸಿ ಇಡಬೇಕು. ಈ ಪ್ರಕಾರ ಬರೆಯಿಸಿಟ್ಟ ಹೊತ್ತಿಗೆಗಳನ್ನು ತಪಾಸಿಸುವ ಅಧಿಕಾರಿಗಳು ಬಂದಾಗ ಅವರಿಗೆ ತೋರಿಸಬೇಕು. ಇಂತಹ ಸಂದರ್ಭಗಳಲ್ಲಿ ಅಭ್ಯಾಸ ಪತ್ರಿಕೆಯೊಳಗಿನ ಶಾಸ್ತ್ರೀಯ ವಿಷಯ ಭೂಗೋಲ, ಸಾಮಾನ್ಯವಿಜ್ಞಾನ ಮೊದಲಾದ ವಿಷಯಗಳೊಳಗಿನ ಎಷ್ಟೋ ಸಂಗತಿಗಳನ್ನು ಕಲಿಸಲು ಶಕ್ಯವಿದೆ. ಉದಾಹರಣಾರ್ಥವಾಗಿ ಊರಸುತ್ತಲಿರುವ ಗುಡ್ಡ ದಿನ್ನೆಗಳು, ಹೊಳೆ- ಹಳ್ಳ- ಸರುವುಗಳು- ಕೆರೆ- ಕಾಲುವೆ ಕೋಡಿಗಳು, ಲೋಹ ಮಾರ್ಗ- ಲೈನರಸ್ತೆಗಳು, ಗಿಡ, ಬಳ್ಳಿಗಳು, ಬೆಳೆಗಳು, ಮೊದಲಾದವುಗಳನ್ನು ತೋರಿಸಿ ಅವುಗಳ ಬಗೆಗೆ ಅಭ್ಯಾಸಪತ್ರಿಕೆಯಲ್ಲಿ ಹೇಳಿದ ವಿವರಗಳನ್ನೆಲ್ಲ ತಿಳಿಸಿ ಕೊಡಲು ಬರುವಂತಿದೆ. ಮಕ್ಕಳು ಪ್ರತ್ಯಕ್ಷ ವಸ್ತುಗಳನ್ನು ನೋಡಿ ಸ್ವಂತ ಅನುಭವದಿಂದ ಜ್ಞಾನವನ್ನು ಪಡೆಯುವವರು. ಇಂತಹ ಜ್ಞಾನವನ್ನು ಮಕ್ಕಳು ತಮ್ಮ ಜೀವಮಾನದಲ್ಲಿ ಎಂದೂ ಮರೆಯುವದಿಲ್ಲ. ಅದು ಶಾಶ್ವತವಾದದು. ಸಾಲೆಯಲ್ಲಿ ಮಹಾಲಕ್ಷ್ಮಿಯ ಮತ್ತು ಸರಸ್ವತಿಯ ಪೂಜೆಯ ಚಚ್ಚುವಟಿಕೆಯೊಂದನ್ನಿಟ್ಟುಕೊಂಡು ವ್ಯಾಪಾರಸ್ಥರು ಆಚರಿಸುವ ಮಂಗಲಕಾರ್ಯಗಳನ್ನೆಲ್ಲ ಮಕ್ಕಳ ಕಡೆಯಿಂದ ಮಾಡಿಸಿ ಆಯಾದಿನಗಳ ಮಹತ್ವವು ಅವರಿಗೆ ಮನನವಾಗುವಂತೆ ಮಾಡಬೇಕು. ಪಾಂಡವರನ್ನಿಟ್ಟು ಪೂಜಿಸುವ ಚಟುವಟಿಕೆಯೊಂದನ್ನಿಟ್ಟುಕೊಂಡು ಈ ಹಬ್ಬದ ಬಗೆಗಿರುವ ಸಂಗತಿಗಳನ್ನೆಲ್ಲ ಈ ಸಂದರ್ಭದಲ್ಲಿ ಮಕ್ಕಳಿಗೆ ಚಿತ್ತಾಕರ್ಷಕವಾಗಿಯೂ ಮನಂಬುಗುವಂತೆಯೂ ಹೇಳಬೇಕು. ಅಕ್ಷೀಕೇರಿಯನ್ನು ಇಲ್ಲವೆ ಅಣಿಸಿಣಿಯನ್ನು ರಚಿಸುವ ಚಟುವಟಿಕೆಯನ್ನಿಟ್ಟುಕೊಂಡು ಈ ಹಬ್ಬದ ಬಗೆಗೆ ವಿವರಗಳನ್ನೂ ಮತ್ತು ಅದಕ್ಕೆ ಸಂಬಂಧಿಸಬಹುದಾದ ಬೇರೆ ವಿಷಯಗಳನ್ನೂ ಕಲಿಸಲು ಬರುವಂತಿದೆ. ಹೆಂಣು ಸಾಲೆಗಳ ಶಿಕ್ಷಕಿಯರು ದೀಪಾವಳಿ ಫರಾಳದ ಸಾಮಾನುಗಳನ್ನು ತಯಾರಿಸುವ ಚಟುವಟಿಕೆಯನ್ನಿಟ್ಟುಕೊಂಡು ಈ ಹಬ್ಬದ ಬಗೆಗಿನ ವಿವರಗಳನ್ನು ಪಾಕಶಾಸ್ತ್ರದ ವಿವರಗಳನ್ನೂ ಅವುಗಳಿಗೆ ಸಂಬಂಧಿಸಬಹುದಾದ ಬೇರೆ ವಿಷಯಗಳನ್ನು ಕಲಿಸಲು ಶಕ್ಯವಿದೆ. ಕೋಟ ಕಟ್ಟಿಕೊಂಡು ಕೋಲು ಹಾಕುತ್ತ ಕೋಲಿನ ಪದಗಳನ್ನು ಹಾಡುವ ಚಟುವಟಿಕೆಯನ್ನಿಟುಕೊಂಡು ಈ ಹಬ್ಬದ ಬಗೆಗೆ ಮತ್ತು ಚಟುವಟಿಕೆಯಿಂದ ತಮ್ಮಷ್ಟಕ್ಕೆ ತಾವೇ ಹೊರಹೊಮ್ಮುವ ಬೇರೆ ವಿಷಯಗಳನ್ನು ಸಮನಾಯ ಪದ್ಧತಿಯಿಂದ ಕಲಿಸುವದು ಲೇಸು.

(ಮುಂದುವರಿಯುವದು)

ಪ್ರಕಟನೆ

ಅಭ್ಯಾಸಪತ್ರಿಕೆಗಳು

ನಮ್ಮ ಕಛೇರಿಗೆ ಅಭ್ಯಾಸಪತ್ರಿಕೆಗಳು ಕಳಿಸಬೇಕೆಂದು ಅನೇಕ ಶಿಕ್ಷಕರು ಪತ್ರ ಬರೆಯುತ್ತಿದ್ದಾರೆ. ನಮ್ಮ ಬಳಿಯಲ್ಲಿ ಯಾವ ೧೯೦೯ ಒನೆಯ ಇಯತ್ತೆಯ ಅಭ್ಯಾಸ ಪತ್ರಿಕೆಗಳೂ ಇರುವದಿಲ್ಲ. ಮುಲ್ಕೀ ಪರಿಕ್ಷೆಯ ಹೊಸ ಅಭ್ಯಾಸಪತ್ರಿಕೆಯ ಕೆಲವೇ ಪತ್ರಿಕೆಗಳು ಮಾರಾಟಕ್ಕಿವೆ. ಬೆಲೆ ೦—೩—೦ ಅಂಚೆವೆಚ್ಚ ಪ್ರತ್ಯೇಕ ಬುಕ್‌ಪೋಸ್ಟಿಗಾಗಿ ೩ ಬಿಲ್ಲಿ ಮುಂಗಡ ಕಳುಹಿದಲ್ಲಿ ಕಳುಹಲಾಗುವುದು. ಶಿಕ್ಷಕ ಬಂಧುಗಳು ಇತ್ತ ಗಮನ ಕೊಡಬೇಕಾಗಿ ಬಿನ್ನಹ.

—ಪ್ರಧಾನ ಸಂಪಾದಕರು

ಬಸವಣ್ಣನವರೂ ಜನತಾ ಶಿಕ್ಷಣವೂ

ಲೇಖಕರು:— ಶ್ರೀ. ಈಶ್ವರ ಶಿ. ಬಿದರಿ, ಧಾರವಾಡ

ಜನತಾ ಶಿಕ್ಷಣ

ಜನತಾ ಶಿಕ್ಷಣವೆಂದರೆ ಜನಸಾಮಾನ್ಯರ ಶಿಕ್ಷಣ. ಯಾವುದೊಂದು ದೇಶದ ಎಲ್ಲ ಜನರು ಅಕ್ಷರಾಭ್ಯಾಸ ದೊಂದಿಗೆ ಆದಕ್ಕೂ ಹೆಚ್ಚಿನದಾದ ಧಾರ್ಮಿಕ, ನೈತಿಕ, ವ್ಯಾವಹಾರಿಕ ಹಾಗೂ ಸಾಮಾಜಿಕ ಜೀವನವನ್ನು ಸಾಗಿಸಿಕೊಂಡು ಹೋಗಲು ಶಕ್ತರಾಗುವಂತೆ ಮಾಡುವ ಅನುಪಮ ಶಿಕ್ಷಣವೇ ಜನತಾ ಶಿಕ್ಷಣವೆಂದು ಕರೆಯಿಸಿ ಕೊಳ್ಳುವದು. ಇದಕ್ಕೆ ಸಮಾಜ ಶಿಕ್ಷಣವೆಂದರೂ ಸಲ್ಲುವದು. ವ್ಯಕ್ತಿಯು ತನ್ನ ವಿಕಾಸವನ್ನು–ಬೌದ್ಧಿಕ, ಮಾನಸಿಕ, ನೈತಿಕ, ಸಾಮಾಜಿಕ ಮಾಡಿಕೊಳ್ಳುವದಲ್ಲದೆ ತನ್ನ ಸುತ್ತಲಿನ ಸಮಾಜದ ವಿಕಾಸವನ್ನು ಮಾಡಲು ಸಮರ್ಥನಾಗುವನು ಈ ಶಿಕ್ಷಣದ ಬಲದಿಂದ. ಹೀಗೆ ವ್ಯಕ್ತಿಯಿಂದ ಆ ವ್ಯಕ್ತಿಯ ಹಿತವಷ್ಟೇ ಅಲ್ಲದೆ ಜೊತೆಗೆ ಸಮಾಜದ ಹಿತವನ್ನು ಸಾಧಿಸತಕ್ಕ ಬುದ್ಧಿಯನ್ನು ಆ ವ್ಯಕ್ತಿಯಲ್ಲಿ ಹುಟ್ಟಿಸತಕ್ಕ ಶಿಕ್ಷಣವೇ ನೈಜ ಸಮಾಜ ಶಿಕ್ಷಣ ಇಲ್ಲವೆ ಜನತಾ ಶಿಕ್ಷಣವೆಂದು ಕರೆಯಿಸಿಕೊಳ್ಳುವದು.

ಪ್ರಾಚೀನ ಕಾಲ

ಪುರಾತನ ಕಾಲದಲ್ಲಿ ಭರತ ಭೂಮಿಯಲ್ಲಿ ಜನತಾ ಶಿಕ್ಷಣವು ರೂಢಿಯಲ್ಲಿತ್ತೆಂದು ತಿಳಿಯುತ್ತದೆ. ಆಗ ಶಿಕ್ಷಣವೀಯುವ ಕೇಂದ್ರಗಳೆಂದರೆ ಋಷಿಗಳ ಆಶ್ರಮ ಗಳು, ಮಠಗಳು, ಗುಡಿಗಳು, ಹಾಗೂ ಇತರ ಧಾರ್ಮಿಕ ಸ್ಥಳಗಳು. ಅಲ್ಲಿ ನಡೆಯುವ ಶಿಕ್ಷಣ ಕ್ರಮವೆಂದರೆ ದೈಹಿಕ ಶ್ರಮದಿಂದ ಕೂಡಿದ ಕಾರ್ಮಿಕ ಕೆಲಸಗಳು, ಕಲಿಯುವನಲ್ಲಿ ಸೇವಾಬುದ್ಧಿಯನ್ನು ಬೆಳೆಯಿಸತಕ್ಕ ಕೆಲಸಗಳು, ಧಾರ್ಮಿಕ, ಜೀವನದ ತಿರುಳನ್ನು ತಿಳಿಯಿಸ ತಕ್ಕ ಬೋಧೆಗಳು ಇವೇ ಮೊದಲಾದುವು. ಇದರಿಂದ ಶಿಷ್ಯನು ಸ್ವಾವಲಂಬಿ, ಧಾರ್ಮಿಕ, ನೈತಿಕ, ಸೇವಾನ್ವಿತ ಜೀವನದ ಪ್ರಥಮ ಪಾಠಗಳನ್ನು ಕಲಿಯುತ್ತಿದ್ದನು. ಮಠಗಳು, ಗುಡಿಗಳು ಹಾಗು ಇತರ ಧಾರ್ಮಿಕ ಸ್ಥಳ ಗಳಲ್ಲಿ ಪುರಾಣ ಪ್ರವಚನ, ಕೀರ್ತನೆ, ಭಜನೆ ಮೊದ ಲಾದ ಕಾರ್ಯಕ್ರಮಗಳು ಆಗಾಗ ಜರುಗುವ ಪರಿಪಾಠ ವಿದ್ದು ಇವುಗಳ ಮುಖಾಂತರ ಜನಸಾಮಾನ್ಯರಿಗೆ ತಮ್ಮ ಜೀವನವನ್ನು ಸುಖಮಯವಾಗಿ ಸಾಗಿಸಿಕೊಂಡು ಹೋಗತಕ್ಕ ಶಿಕ್ಷಣವು ತಾನಾಗಿಯೇ ಲಭಿಸುತ್ತಿತ್ತು.

ಬಸವಣ್ಣನವರ ಕಾರ್ಯ

ಇತರ ರಂಗಗಳಲ್ಲಿ ಉಪಯುಕ್ತ ಕಾರ್ಯವನ್ನು ಎಸಗಿ ಕೀರ್ತಿಯುತರಾದಂತೆ ಬಸವಣ್ಣನವರು ಜನತಾ ಶಿಕ್ಷಣ ಕಾರ್ಯವನ್ನು ಕೈಕೊಂಡು ಅದರಲ್ಲಿಯೂ ಯಶಸ್ಸನ್ನು ಪಡೆದರೆಂದು ಹೇಳಬಹುದು. ತಮ್ಮ ತಿಳಿಯಾದ ವಚನಗಳಿಂದ ಅವರು ತಮ್ಮ ಸಂದೇಶವನ್ನು ತೀರ ಸಾಮಾನ್ಯ ಮನುಷ್ಯನ ಹೃದಯಕ್ಕೆ ಸಹಜವಾಗಿ ಮುಟ್ಟಿಸುತ್ತಿದ್ದರು. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ....' 'ಅಯ್ಯಾ ಎಂದಡೆ ಸ್ವರ್ಗ....' ಇವೇ ಮೊದಲಾದ ವಚನಗಳು ಜನರು ಹೇಗೆ ಇರ ಬೇಕು ಎಂಬುದನ್ನು ಸೂಚಿಸುತ್ತವೆ. ಬಸವಣ್ಣನವರು ಜಾತಿ, ಮತ, ಪಂಥಗಳನ್ನು ಅಳಿಸಲು ಯತ್ನಿಸಿದರು. ಅವರ ಹೊಸ ಸಮಾಜದಲ್ಲಿ ಎಲ್ಲ ಜಾತಿಯವರು ಸೇರ್ಪಡೆಯಾಗಿದ್ದರು. ಮಾದಿಗರ ಹರಳಯ್ಯ, ಅಂಬಿ ಗರ ಚೌಡಯ್ಯ, ಢೋರ ಕಕ್ಕಯ್ಯ..... ಇವರೇ

ಮೊದಲಾದವರು ಅವರ ಶಿಷ್ಯರಲ್ಲಿ ಅಗ್ರಗಣ್ಯರಾಗಿದ್ದರು. ಜನ್ಮದಿಂದಾಗಲಿ, ಕಾಯಕದಿಂದಾಗಲಿ ಜಾತಿಯನ್ನು ಎಣಿಸಕೂಡದು; ಆದರೆ ಆಚಾರವರು ಆಚರಿಸುವ ಪಾಪ-ಪುಣ್ಯದ ಕೃತಿಗಳಿಂದ ಜಾತಿಯನ್ನು ಎಣಿಸಬೇಕು ಎಂದು ಬಸವಣ್ಣನವರು ಸಾರಿದರು. ಅವರು ಧರ್ಮಕ್ಕೆ ಒಂದು ವಿಶಾಲವಾದ ಅರ್ಥವನ್ನು ಕಲ್ಪಿಸಿದರು. 'ದಯವಿಲ್ಲದ ಧರ್ಮವಾವುದಯ್ಯಾ ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ.....' ಎಂಬ ವಚನದಂತೆ ಅವರು ಮೂಕ ಪ್ರಾಣಿಗಳನ್ನು ಸಹ ದಯೆಯಿಂದ ಕಾಣಬೇಕು; ಅವರೇ ನೈಜ ಧರ್ಮಿಷ್ಠರು ಎಂದು ಬಿತ್ತರಿಸಿದರು.

ಜಗತ್ತಿನಲ್ಲಿ ಕಾಣುವ ಎಲ್ಲ ಜನರೂ ತನ್ನ ಬಾಂಧವರು ಎಂಬುದನ್ನು 'ಇವನಾರಿವ ಇವನಾರಿವ ಎಂದು ಕೇಳ್ದಡೆ ಇವ ನನ್ನವ, ಇವ ನನ್ನವ ಎಂದೆನ್ನುವೆ' ಎಂಬ ವಚನದಿಂದ ಪ್ರಸಾರಗೊಳಿಸಿದರಲ್ಲದೆ ಅದರಂತೆ ಎಲ್ಲರನ್ನೂ ತನ್ನ ಬಂಧುಗಳಂತೆ ಭಾವಿಸಿ ಆಚರಿಸಿ ತೋರಿಸಿದರು.

'ಕಾಯಕವೇ ಕೈಲಾಸ' ಎಂಬ ತತ್ವವನ್ನು ಬೋಧಿಸಿ ತಮ್ಮ ನಿತ್ಯ ಜೀವನದಲ್ಲಿ ಆಚರಿಸಿ ತೋರಿಸಿದರು. ದುಡಿದು ಭುಂಜಿಸಬೇಕು; ಪ್ರಾಮಾಣಿಕತನದಿಂದ ಜೀವನ ಸಾಗಿಸಬೇಕು; ಸ್ವಾವಲಂಬಿ ಜೀವನ ಸಾಗಿಸಲು ಕಲಿಯಬೇಕು;ಕೆಲಸದಲ್ಲಿ ಅಥವಾ ಉದ್ಯೋಗದಲ್ಲಿ ಮೇಲು-ಕೀಳುಗಳನ್ನು ಎಣಿಸಕೂಡದು— ಇವೇ ಮೊದಲಾದ ಉದಾತ್ತ ಆದರ್ಶಗಳನ್ನು ಅವರು ಜನ ಸಾಮಾನ್ಯರಿಗೆ ತಮ್ಮ ಆಚರಣೆಯಿಂದ ತಿಳಿಸಿದರ 'ನನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಮಾತಿನಲ್ಲಿ ಅವರು ಇಟ್ಟಿರುವ ನಿರಭಿಮಾನತೆ, ನಿರಹಂಕಾರ ಗುಣ ಇವು ಸ್ಪಷ್ಟವಾಗಿ ಕಾಣುತ್ತದೆ.

ಹೀಗೆ ಬಸವಣ್ಣನವರು ಜನಸಾಮಾನ್ಯರ ಸಾಮಾನ್ಯ, ಸರ್ವತೋಮುಖ ಉನ್ನತಿಗಾಗಿ ಮನವಾರೆ ಯತ್ನಿಸಿದರು; ಮತ್ತು ಅದರಲ್ಲಿ ಅವರು ಯಶಸ್ವಿಗಳಾದರು. ಈ ಜನತಾ ಶಿಕ್ಷಣದ ಪ್ರಸಾರಕ್ಕಾಗಿ ಅವರು ತಮ್ಮ ವಚನಗಳಲ್ಲಿ ತೀರ ಸುಲಭ ಭಾಷೆಯನ್ನು ಬಳಸಿದರು; ಅಲ್ಪದರಲ್ಲಿಯೇ ಎಲ್ಲರಿಗೆ ತಿಳಿಯುವಂತಹ ಅರ್ಥವತ್ತಾದ ವಚನಗಳನ್ನು ರಚಿಸಿದರು; ಪುರಾಣ, ಕೀರ್ತನ, ಪ್ರವಚನಗಳನ್ನು ಏರ್ಪಡಿಸಿದರು; ನೈಜ ಧರ್ಮ, ಜಾತಿ ಯಾವುದೆಂಬುದನ್ನೂ, ಕಾಯಕದ ಮಹತ್ವವನ್ನೂ ತಿಳಿಸಿದರು; ಹೆಜ್ಜಾಗಿ ನುಡಿದಂತೆ ನಡೆದು ತೋರಿಸಿದರು.

ಇದುವೇ ಬಸವಣ್ಣನವರು ನೀಡಿದ ಜನತಾ ಶಿಕ್ಷಣದ ರೀತಿ-ನೀತಿ! ಇದುವೇ ಅವರು ಸಮಾಜದ ಉತ್ಕರ್ಷೆಗಾಗಿ ಹೆಣಗುತ್ತಿದ್ದ ಸಾಧನ!! ಇದುವೇ ಇಂದು ರೂಪುಗೊಳ್ಳುತ್ತಿರುವ ಸಮಾಜ ಶಿಕ್ಷಣದ ಹೊಸ ಹಾದಿ.

★

" ಕಳಬೇಡ, ಕೊಲಬೇಡ; ಹುಸಿಯು ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯ ಬಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರ ಸೊಲಿಸುವ ಪರಿ!"

—ಬಸವಣ್ಣನವರು

★

ಶ್ರೀ. ಬಸವಣ್ಣನವರು

ಸಂಗೀತದ ಅಭ್ಯಾಸದೊಡನೆ ಗಣಿತದ ಸಮವಾಯಜ್ಞಾನ

ಲೇಖಕರು : ಶ್ರೀಯುತ ಶ್ಯಾಮರಾವ ತಟ್ಟಿ, ನಿವೃತ್ತ ಮುಖ್ಯಾಧ್ಯಾಪಕರು.

ಭರ್ತೃಹರಿಯೂ ಷೇಕ್ಸ್ಪಿಯರನೂ ಸಂಗೀತದಿಂದ ಮುಗ್ಧರಾಗದ ಜನರನ್ನು ಅನ್ಯಾಯವಾಗಿ ಬಯ್ದಿದ್ದಾರೆ. ಭರ್ತೃಹರಿಯು ಮಾತ್ರ ಸಂಗೀತಕ್ಕೊಂದೇ ಇಲ್ಲದ ಪ್ರತಿಷ್ಠೆಯನ್ನು ಕೊಡದೆ ಸಾಹಿತ್ಯಕ್ಕೂ ಸಾಮಾನ್ಯವಾಗಿ ಕಲೆಗೂ ಆ ಮಾನವನ್ನು ಕಾಯ್ದಿಟ್ಟಿದ್ದಾನೆ. ಸಾಹಿತ್ಯವು ಶಬ್ದಗಳ ಮುಖಾಂತರ ಪ್ರಕೃತಿಯ ಹಾಗೂ ಮಾನವ ಜೀವನದ ಸೌಂದರ್ಯವನ್ನು ಎತ್ತಿ ಹಿಡಿಯುವದು. ಸಂಗೀತವು ಮಧುರ ಸ್ವರಗಳ ಮಾಧ್ಯಮದಿಂದ ಅದೇ ಸೌಂದರ್ಯದ ಪ್ರಭೆಯನ್ನು ನಮ್ಮ ಅತಃಕರಣದಲ್ಲಿ ಮೂಡಿಸುತ್ತದೆ. ಇತರ ಕಲೆಗಳೂ ಕಲ್ಲು ಕಟ್ಟಿಗೆ ಲೋಹ ಗಳ ಶರೀರದಿಂದಲೋ ರೂಪ ಬಣ್ಣ ಮೊದಲಾದ ಸಾಧನಗಳಿಂದಲೋ, ನಾಟ್ಯ, ಅಭಿನಯ, ವೇಷ, ಭೂಷಣ, ನೇಪಥ್ಯ, ಮಾತು ಇವುಗಳ ಸಮ್ಮಿಳಿತ ಸಾಮಗ್ರಿಯ ಸಹಾಯದಿಂದಲೊ ತಮ್ಮ ತಮ್ಮ ಕಾರ್ಯವನ್ನು ನೆರವೇರಿಸುವವು.

ನಿಸರ್ಗದಲ್ಲಿ ಮಧುರ ಸ್ವರಗಳು ನಾನಾಬಗೆಯವಿವೆ. ನಮ್ಮ ಮಾತಿನಲ್ಲಿ ಏರಿಳಿತದ ಧ್ವನಿಗಳಿದ್ದೇ ಇರುವವು. "ಹೂಂ ಮಾಡುವೆಯೊ ಇಲ್ಲವೋ ಈ ಕೆಲಸವನ್ನು ?" ಎಂದು ಕೇಳುವಾಗಲೂ ಕೇಳಿದ ಪ್ರಶ್ನೆಗೆ "ಹೂಂ, ಎಂದು ಗತ್ಯಂತರವಿಲ್ಲದೆ ಒಪ್ಪಿಕೊಳ್ಳುವಾಗಲೂ "ಹೂಂ ಹೀಗೋ ಅವನ ಮನಸ್ಸಿನ ಯೋಚನೆ ? ಎಂದು ಆಶ್ಚರ್ಯವನ್ನು ವ್ಯಕ್ತ ಮಾಡುವಾಗಲೂ 'ಹೂಂ ಎಂಬ ಧ್ವನಿಯ ಏರಿಳಿತಗಳನ್ನು ಲಕ್ಷಿಸಿದರೆ ನನ್ನ ಮಾತಿನ ಅರ್ಥವಾಗುವದು. ಸಾರಿಗಮ ಪಧನಿಸಾ ಎಂಬ ಎಂಟು ಸ್ವರಗಳಲ್ಲಿ ನಡುವಿನ ರಿಗಮಪಧನಿ ಎಂಬ ಸ್ವರಗಳು ಹಾಡುವಾಗ ನಿಲ್ಲುವ ವಿಶ್ರಾಂತಿ ಸ್ಥಾನಗಳು ಮಾತ್ರ. ಹಾಗೆ ನೋಡಿದರೆ ಸ ಮತ್ತು ಸ (ಮೇಲಿನ ನಿ) ಗಳ ನಡುವೆ ಲೆಕ್ಕವಿಲ್ಲದಷ್ಟು ಧ್ವನಿಗಳನ್ನು ಹುಟ್ಟಿಸಬಹುದು.

ಆದರೆ ಅವುಗಳ ನಡುವೆ ರಿಗನು ಪಧನಿ ಎಂಬ ಸ್ವರಗಳಿಗೂ ಸ ಎಂಬ ಸ್ವರಕ್ಕೂ ಇರುವ ಮಧುರ ಬಾಂಧವ್ಯವು ಇರಲಾರದು. ಈ ಅಸಂಖ್ಯಸ್ವರಗಳಲ್ಲಿ ಸಂಗೀತ ಕಲೆಯು ಪರಸ್ಪರ ಸಾಮರಸ್ಯದ ಒಂದು ಕಟ್ಟು ಪಾಟಿಗೆ ಒಳಪಡುವ ಪೆಲವನ್ನು ಆಯ್ದುಕೊಂಡು ಕೆಲಸ ಮಾಡುತ್ತದೆ. ಅಷ್ಟರಮಟ್ಟಿಗೆ ಕಲೆಯು ಮಾನವನಿರ್ಮಿತವಾದುದು, ಸಂಕೇತಿಕವಾದುದು. ಹೀಗೆ ಕೃತ್ರಿಮವಾದರೂ ನಿಯಮಿತವಾದ ಕಂಪನಗಳಿಂದ ಹುಟ್ಟುವ ಮಧುರ ಸ್ವರಗಳು ನಿಸರ್ಗರಮಣೀಯವಾಗಿರುವದರಿಂದ ಸ್ವಾಭಾವಿಕ ತಿಕ ಹಿನ್ನೆಲೆಯ ಆಧಾರವು ಸಂಗೀತಕ್ಕೆ ಎಲ್ಲ ಕಲೆಗಳಿಗಿರುವಂತೆ ಇದ್ದೇ ಇದೆ.

ಇಂದ್ರಿಯಗ್ರಾಹ್ಯವಾದ ಪ್ರತಿಯೊಂದು ವಸ್ತುವಿನಲ್ಲಿರುವ ಗುಣವೂ ಕಂಪನಗಳಿಂದಲೇ ನಮ್ಮ ಇಂದ್ರಿಯಕ್ಕೆ ವೇದ್ಯವಾಗುತ್ತದೆ. ವಾಸನೆಯು ನಮ್ಮ ಮೂಗಿನಲ್ಲಿಯ ನರವನ್ನು ಕಂಪಿಸುತ್ತದೆ. ರುಚಿಯು ನಾಲಿಗೆಯ ನರವನ್ನು ಕಂಪನ ಹೊಂದಿಸುತ್ತದೆ. ಧ್ವನಿಯು ಕಿವಿಯ ನರಗಳನ್ನು ಹಿಡಿಯುತ್ತದೆ. ಬೆಳಕು ಕಣ್ಣಿನ ನರವನ್ನು ತಟ್ಟುತ್ತದೆ. ಧ್ವನಿ, ಬೆಳಕು, ಎಂಬ ಗುಣಗಳೇ ಮೂಲತಃ ಕಂಪನಗಳು ಕಂಪನದಿಂದ ಹುಟ್ಟುವ ಧ್ವನಿಯು ವಾಯುವಿನಲ್ಲಿ ಕಂಪನಗಳ ಪರಂಪರೆಯನ್ನು ಉಂಟು ಮಾಡುತ್ತಾ ಕಿವಿಯ ನರದಲ್ಲಿ ತತ್ಸದೃಶ ಕಂಪನಕ್ಕೆ ಕಾರಣವಾಗುವದು.

ಒಂದು ತಂತಿಯನ್ನು ಮೀಟಲಾಗಿ ಆದರಿಂದ ಒಂದು ಸ್ವರವು ನಮಗೆ ಕೇಳುವದು. ಭೌತಶಾಸ್ತ್ರವು ಹೇಳುವುದೇನಂದರೆ ಅದು ಒಂದೇ ಒಂದು ಧ್ವನಿಯಾಗಿರದೆ, ಸೂಕ್ಷ್ಮವಾಗಿ ಸಮರಸವಾಗಿ ಇನ್ನೂ ಮೂರುನಾಲ್ಕಂತೂ ಧ್ವನಿಗಳು ಸ್ಪಷ್ಟವಾಗಿ ಬೆರೆತು ಒಂದೇ ಒಂದು ಸ್ವರದಂತೆ, ಕೇಳಿಸುತ್ತದೆ. ಮೊದಲಿನ ಸ್ವರವೂ ಅದರೊಡನೆ ಐಕ್ಯಹೊಂದಿದ ಇನ್ನು ನಾಲ್ಕು ಸ್ವರಗಳೂ ೧ : ೨ : ೩ : ೪ : ೫ ಈ ಸ್ವಾಭಾವಿಕವಾದ ಅನುಕ್ರಮದಿಂದಿರುವ ಸಂಖ್ಯೆಗಳ ಪ್ರಮಾಣದಲ್ಲಿರುವವೆಂದು ಪದಾರ್ಥವಿಜ್ಞಾನವು ಹೇಳುವುದು. ಆಧಾರ ಸ್ವರವು (ಮೊದಲಿನ ಸ್ವರವು) ಸೆಕೆಂದಿಗೆ ೨೪೦ ಕಂಪನಗಳಿಂದ ಹೊರಡುತ್ತಿದ್ದರೆ ಮುಂದಿನ ಸ್ವರಗಳು ಅನುಕ್ರಮವಾಗಿ ೪೮೦, ೭೨೦, ೯೬೦, ೧೨೦೦ ಕಂಪನಗಳಿಂದ ಹೊರಡುವವೆಂದು ತಿಳಿಯುವದು.

ಕಂಪನಗಳು ೧ : ೨ ಈ ಪ್ರಮಾಣದಲ್ಲಿರುವಂತಹ ಸ್ವರಗಳು ಸುಂದರವಾದ, ಸ್ನಿಗ್ಧವಾದ ಮಿಲನವನ್ನು ಸೂಚಿಸುತ್ತವೆ, ಅವು ಯಾವವೆಂದರೆ ಸ ಮತ್ತು ಸ

೨ : ೩ ಈ ಪ್ರಮಾಣದ ಸ್ವರಗಳು ಈಷನ್ಮ್ಯೂನ ಸ್ನೇಹವನ್ನು ವ್ಯಕ್ತಮಾಡುತ್ತವೆ. ಸ ಮತ್ತು ಪ

೩ : ೪ ಈ ಪ್ರಮಾಣದ ಸ್ವರಗಳು ಅದಕ್ಕೂ ಕೆಂಚಿನ್ಮ್ಯೂನವಾದ ಸಾಮರಸ್ಯವನ್ನು ಸೂಚಿಸುತ್ತವೆ ಸ ಮತ್ತು ಮ.

೪ : ೫ ಈ ಪ್ರಮಾಣವು ಇನ್ನು ಕಡಿಮೆಯಾದ ಆದರೂ ಕರ್ಣಾಮಧುರವಾದ ಬಾಂಧವ್ಯವನ್ನು ವ್ಯಕ್ತಪಡಿಸುತ್ತದೆ. ಸ ಮತ್ತು ಗ

ಸ ರಿ ಗ ಮ ಪ ಧ ನಿ ಎಂಬ ಅಕ್ಷರಗಳು ಅನುಕ್ರಮವಾಗಿ ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಎಂಬ ಸ್ವರಗಳ ಹೆಸರುಗಳ (ಸ್ವಲ್ಪ ಬದಲಾವಣೆಯಿಂದ) ಆದ್ಯಕ್ಷರಗಳಾಗಿವೆ.

ಸ ಎಂಬ (ಮೇಲಿನ ಸ) ಸ್ವರವು ಸ (ಕೆಳಗಿನ ಸ) ದೊಲವೆ ೧ : ೨ ಈ ಪ್ರಮಾಣದಲ್ಲಿರುವದರಿಂದ 'ಸ'ದ ಕಂಪನಗಳು ೨೪೦ ಎಂದು ಹಿಡಿದರೆ ಮೇಲಿನ ಸ ವು ೪೮೦ ಕಂಪನಗಳಿಂದ ಉಂಟಾಗುವದೆಂದು ತಿಳಿಯುವದು.

ಸ : ಪ = ೨ : ೩ = ೨೪೦ : ೩೬೦; ಆದ್ದರಿಂದ ಪಂಚಮದ ಆಂದೋಲನ ಸಂಖ್ಯೆ ೩೬೦.
ಸ : ಮ = ೩ : ೪ = ೨೪೦ : ೩೨೦; ∴ ಮಧ್ಯಮದ ಆಂದೋಲನ ಸಂಖ್ಯೆ ೩೨೦.
ಸ : ಗ = ೪ : ೫ = ೨೪೦ : ೩೦೦; ∴ ಗಾಂಧಾರದ ಆಂದೋಲನ ಸಂಖ್ಯೆ ೩೦೦.

ಪಂಚಮವು ಹಡ್ಜಕ್ಕಿಂತ ಏರು ಇದ್ದು ಷಡ್ಜಕ್ಕೆ ಹೇಗೆ ಸಂಬಂಧಪಟ್ಟಿರುವದೋ ಹಾಗೆಯೇ ಪಂಚಮಕ್ಕಿಂತ ಅಷ್ಟೇ ಏರು ಇದ್ದು ಅದೇ ಪ್ರಮಾಣದಲ್ಲಿರುವ ಸ್ವರವೆಂದರೆ 'ರಿ'.

ಸ ರಿ ಗ ಮ ಪ ಧ ನಿ ಸ ರಿ ಗ ಮ ಪ ಧ ನಿ ಈ ಶ್ರೇಣಿಯಲ್ಲಿ ಸ ದಿಂದ ಐದನೆಯದು 'ಪ', 'ಪ'ದಿಂದ ಐದನೆಯದು 'ರಿ', 'ರಿ' ದಿಂದ ಐದನೆಯದು 'ಧ', 'ಗ' ದಿಂದ ಐದನೆಯದು 'ನಿ'.

'ಪ' ದ ಆಂದೋಲನ ಸಂಖ್ಯೆ ೩೬೦; ಆದ್ದರಿಂದ ಪ : ರಿ = ೨ : ೩ = ೩೬೦ : ೫೪೦.
ಮತ್ತು ∴ ರಿ : ಧ = ೨ : ೧ = ೫೪೦ : ೨೭೦.
ಹೀಗೆಯೇ ∴ ಧ : ನಿ = ೨ : ೩ = ೨೭೦ : ೪೦೫.
ಮತ್ತು ∴ ಗ : ನಿ = ೨ : ೩ = ೩೦೦ : ೪೦೫.

ಈಗ ಸ ರಿ ಗ ಮ ಪ ಧ ನಿ ಸ ಈ ಎಲ್ಲ ಸ್ವರಗಳ ಅನುಕ್ರಮವಾದ ಆಂದೋಲನ ಸಂಖ್ಯೆಗಳು ನಮಗೆ ಸಿಕ್ಕವು. ಅವು ಹೀಗಿವೆ: ೨೪೦, ೨೭೦, ೩೦೦, ೩೨೦, ೩೬೦, ೪೦೫, ೪೮೦, ೫೪೦. ಸಣ್ಣ ಸಂಖ್ಯೆಗಳಿಂದ ಈ ಆಂದೋಲನಗಳನ್ನು ನೆನಪಿಡಬೇಕಾದರೆ ಅವುಗಳ ಹತ್ತನೆಯ ಪಾಲನ್ನು ಮಾಡಿಬಿಡಿರಿ. ಹೀಗಾಗುವವು: ೨೪, ೨೭, ೩೦, ೩೨, ೩೬, ೪೦೫, ೪೮, ೫೪. ಈ ಸಂಖ್ಯೆಗಳನ್ನು ನೆನಪಿಡುವದು ಇನ್ನು ಸುಲಭವಾಗಲಿಕ್ಕೆ ಇನ್ನೊಂದು ಸಂಬಂಧವನ್ನು ನಿಮ್ಮ ಲಕ್ಷಕ್ಕೆ ತರುವೆನು.

'ಸ' ದಿಂದ ಐದನೆಯದು 'ಪ'
'ರಿ' ದಿಂದ ಐದನೆಯದು 'ಧ'
'ಗ' ದಿಂದ ಐದನೆಯದು 'ನಿ'
'ಮ' ದಿಂದ ಐದನೆಯದು 'ಸ'

ಆದ್ದರಿಂದ ಪ ದ ನಿ ಸ ಈ ಸ್ವರಗಳ ಆಂದೋಲನಗಳು ಅನುಕ್ರಮವಾಗಿ ಸರಿಗಮ ಇವುಗಳ ೧೪ ಪಟ್ಟು ಇರುವವು. (೧ : ೧೪ = ೨ : ೩)

ಸ ಕ್ಕೆ ೨೪; ಆದ್ದರಿಂದ 'ಪ' ಕ್ಕೆ ೨೪ × ೩/೨ = ೩೬
ರಿ ಕ್ಕೆ ೨೭; ∴ 'ಧ' ಕ್ಕೆ ೨೭ × ೩/೨ = ೪೦೫
ಗ ಕ್ಕೆ ೩೦; ∴ 'ನಿ' ಕ್ಕೆ ೩೦ × ೩/೨ = ೪೫
ಮ ಕ್ಕೆ ೩೨; ∴ 'ಸ' ಕ್ಕೆ ೩೨ × ೩/೨ = ೪೮

ಸ ರಿ ಗ ಮ ಈ ನಾಲ್ಕು ಸ್ವರಗಳ ಆಂದೋಲನ ಸಂಖ್ಯೆಗಳನ್ನು ನೆನಪಿಡುವದು ಸುಲಭ; ೨೪; ೨೭; (=೨೪ + ೩); ೩೦ (=೨೭ + ೩); ೩೨ (=೩೦ + ೨).

(ಮುಂದುವರಿಯುವದು)

ದೀಕ್ಷಾವಿಧಿ

[ದಿನಾಂಕ ೨೯—೪—೧೯೫೫ ನೆಯ ದಿನ ಈ ಸಲ ಹೊರಬೀಳಲಿರುವ ೨೨ನೆಯ ವರ್ಷದ ಶಿಕ್ಷಕ-ವಿದ್ಯಾರ್ಥಿಗಳಿಗೆ ಬೀಳ್ಕೊಡುವ ಸಮಾರಂಭವನ್ನು ಧಾರವಾಡ ವಿದ್ಯಾಧಿಕಾರಿಗಳಾದ ಡಾ. ಚಿಕ್ಕರಮನೆಯವರ ಹಿರಿಯತನದಲ್ಲಿ ಏರ್ಪಡಿಸಲಾಗಿತ್ತು. ಬೀಳ್ಕೊಡುವ ಈ ಸಮಾರಂಭದಲ್ಲಿ ದೀಕ್ಷಾವಿಧಿಯೆಂಬ ಕಾರ್ಯಕ್ರಮವನ್ನಿಟ್ಟುಕೊಂಡು, ತರಬೇತಿ ಹೊಂದಿ ಶಿಕ್ಷಣ ಕ್ಷೇತ್ರದಲ್ಲಿ ದುಡಿಯಲಿರುವ ಶಿಕ್ಷಕರು ಜ್ಞಾನ ದೀವಿಗೆಯನ್ನು ಸಾಡಿನ ಮೂಲೆ ಮೂಲೆಗೆ ಮುಟ್ಟಿಸುವೆವೆಂಬ ಪ್ರತಿಜ್ಞೆಯನ್ನು ಸ್ವೀಕರಿಸಿದರು.

—ಪ್ರಧಾನ ಸಂಪಾದಕರು.]

ಕಳೆದ ಎರಡು ವರ್ಷಗಳಿಂದ ಜೀವನ ಶಿಕ್ಷಣದಲ್ಲಿ ತರಬೇತಿ ಹೊಂದಿ ಕಾಲೇಜದಿಂದ ಹೊರಬೀಳಲಿದ್ದ ೨೨ನೆಯ ವರ್ಷದ ಶಿಕ್ಷಕ-ವಿದ್ಯಾರ್ಥಿಗಳಿಗೆ ಪ್ರತಿವರ್ಷದ ನಿಯಮದಂತೆ ಈ ಸಲವಾದರೂ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಆದರೆ ಕೇವಲ ಕೆಲವು ಉಪದೇಶಪರ ಮಾತುಗಳನ್ನು ಹೇಳಿ ಕಳಿಸಿ ಕೊಡಬೆ ಒಂದು ಪ್ರಕಾರದ ಮಹತ್ವ ಪೂರ್ಣವಾದ, ಹೊಸ ಉಪಕ್ರಮವೊಂದನ್ನು ಈ ಸಲ ಬೀಳ್ಕೊಡುವ ಸಮಾರಂಭದಲ್ಲಿ ಸೇರಿಸಲಾಗಿತ್ತು; ಅದುವೇ 'ದೀಕ್ಷಾವಿಧಿ' ಅಥವಾ 'ಸಂಸ್ಕರಣ್ಯವಿಧಿ' ತರಬೇತಿ ಹೊಂದಿ ವ್ಯಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯಲು ಕಾಲಿಡುವ ಈ ಸಂಕ್ರಾಂತಿ ಸಮಯದಲ್ಲಿ ಶಿಕ್ಷಕ-ವಿದ್ಯಾರ್ಥಿಗಳಿಗೆ ತಮ್ಮ ಗುರುತಮವಾದ ಹೊಣೆಯ ಅರಿವನ್ನು ಅವರ ಹೃದಯಕ್ಕೆ ತಟ್ಟುವಂತೆ, ಮನಕ್ಕೆ ಮುಟ್ಟುವಂತೆ ಜ್ಞಾನ ಜ್ಯೋತಿಯನ್ನು ಹೊತ್ತಿಸಿ ಅಮರ ಮಹಾತ್ಮಾಜಿಯವರ ಸಮ್ಮುಖದಲ್ಲಿ ಮಾಡಿಕೊಡಲಾಯಿತು.

ಈ ಸಮಾರಂಭದ ಆಧ್ಯಕ್ಷಸ್ಥಾನವನ್ನು ಧಾರವಾಡ ವಿಭಾಗದ ವಿದ್ಯಾಧಿಕಾರಿಗಳಾದ ಡಾ. ಚಿಕ್ಕರಮನೆಯವರು ಅಲಂಕರಿಸಿದ್ದರು. ಜಿ. ಬಿ. ಟಿ. ಸಿ. ಪ್ರಿನ್ಸಿಪಾಲರಾದ ಶ್ರೀ. ತೇರಗಾಂವಕರ ಅವರು, ಏ. ಓ. ರವರಾದ ಶ್ರೀ. ಕುಪ್ಪಸದ ಅವರೂ, ಅಸಿ. ಎ. ಇ. ರಾದ ಶ್ರೀ. ಕೊಪ್ಪಿಕರ ಅವರು ಈ ಸಮಾರಂಭಕ್ಕೆ ಆಗಮಿಸಿ ಶೋಭೆಯನ್ನು ತಂದುಕೊಟ್ಟರು. ಮೊದಲು ಸಾಮೂಹಿಕ ಪ್ರಾರ್ಥನೆಯಾಯಿತು. ಬಳಿಕ ಶಿಕ್ಷಕ-ವಿದ್ಯಾರ್ಥಿಗಳ ಬಳಗದ ಮುಖ್ಯ ಮಂತ್ರಿಗಳಾದ ಶ್ರೀ ಬಣಕಾರ ಅವರು ಈ ಸಂಸ್ಥೆಯಲ್ಲಿ ತಾವು ಹಾಗೂ ತಮ್ಮ ಸಹೋದ್ಯೋಗಿಗಳು ಕಳೆದ ಎರಡು ವರ್ಷಗಳ ತಮ್ಮ ಅನುಭವದ ವರದಿಯನ್ನು ಓದಿದರು. ಅದರಲ್ಲಿ ಅವರು ಈ ಸಂಸ್ಥೆಯಲ್ಲಿ ಪಡೆದ ಹಲವು ವಿಷಯಗಳ ಜ್ಞಾನ, ವಿವಿಧ ಚಟುವಟಿಕೆಗಳ, ಹಾಗೂ ಸಾವಜನಿಕ ಮೂಲ ಸಾಂಘಿಕ ಜೀವನದ ಮಹತ್ವ, ಮೂಲೋದ್ಯೋಗಗಳ ಪಡೆದ ಪರಿಣತಿ ಇವೇ ಮೊದಲಾದುವನ್ನು ವಿವರಿಸಿ ಒಟ್ಟಿನಲ್ಲಿ ಕಾಲೇಜದ ಜೀವನವು ಸುಖಮಯವಾಗಿ, ಜ್ಞಾನಮಯವಾಗಿ ಸಾಗಿತೆಂದು ತಿಳಿಸಿದರು.

ಬಳಿಕ ಕಾಲೇಜದ ಮುಖ್ಯಾಧ್ಯಾಪಕರಾದ ಶ್ರೀ. ಹಂದ್ರಾಳರವರು ಈ ಇಂದಿನ ಸಮಾರಂಭದ ವೈಶಿಷ್ಟಣಿಕ ಮಹತ್ವವನ್ನು ವಿವರಿಸಿ ಮುಖ್ಯ ಅತಿಥಿಗಳಾಗಿ ಬಂದ ಡಾ. ಚಿಕ್ಕರಮನೆಯವರನ್ನು ಅಭಿನಂದಿಸಿದರು; ಈ ಸಮಯದಲ್ಲಿ ಜೀವನ ಶಿಕ್ಷಣವನ್ನು ಕುರಿತು ಶ್ರೀ. ತೇರಗಾಂವಕರ ಅವರು ಕೆಳಗಿನ ಆಶಯದ ಕೆಲವು ಮಾತುಗಳನ್ನು ಹೇಳಿದರು.

'ಇದು ನಿಮ್ಮನ್ನು ಬೀಳ್ಕೊಡುವ ಸಮಯವಾಗಿರದೆ ಬರಮಾಡಿಕೊಳ್ಳುವ ಸಮಯವೆಂದು ತಿಳಿಯಬಹುದು; ಯಾಕಂದರೆ ಜೀವನ ಶಿಕ್ಷಣದಲ್ಲಿ ಶ್ರಮಿಸುತ್ತಿರುವವರ

ಗುಂಪಿನೊಳಗೆ ನೀವು ಹೊಸದಾಗಿ ಬಂದು ಸೇರಲಿರುವಿರಿ. ಅಂದು ಆ ಮುದುಕನ ಹುಚ್ಚು ಎಂದು ಕೆಲವರಿಂದ ಕರೆಯಲ್ಪಡುತ್ತಿದ್ದ ಹೊಸ ಶಿಕ್ಷಣವು ಇಂದು ಆದರ್ಶ ಹಾಗೂ ನಾಡಿನ ಏಕಮೇವ ಉಪಯುಕ್ತ ಶಿಕ್ಷಣಕ್ರಮವೆಂಬ ಹೆಸರನ್ನು ಪಡೆದಿದೆ. ಈ ಶಿಕ್ಷಣವು ಯಾವಾಗಲೂ ನಡೆಯುವಂತಹದು, ಆದ್ದರಿಂದ ಇಡಿಯಾಗಿ, ಅಖಂಡವಾಗಿ, ಸಾಸ್ಪ್ರಕವಾಗಿ ಈ ಶಿಕ್ಷಣದ ಪ್ರಚಾರ ನಾಡುವ ವಿಚಾರವಿದೆ. ಉತ್ಪಾದನೆಯ ಹೆಚ್ಚಳದಿಂದ ಈ ಶಿಕ್ಷಣದ ಸ್ವಾರ್ಥಕತೆಯನ್ನು ಅಳೆಯಬಹುದು; ಜೊತೆಗೆ ಮಗುವಿಲ್ಲಿ ಕೆಲಸ ಮಾಡುವ ಹುಮ್ಮಸ್ಸು, ಕೆಲಸದ ಕಸೋಟಿ, ಶೀಲ ಹಾಗೂ ಸಾಮೂಹಿಕ ಪ್ರವೃತ್ತಿಗಳು ಬೆಳೆದು ಬರುವದನ್ನೂ ಗಮನಿಸಬೇಕು. ಮಗು ಧರ್ಮಜೀವಿಯಾಗಬೇಕು; ಬುದ್ಧಿ ಜೀವಿಯಾಗಬೇಕು; ಆತನಲ್ಲಿ ಭಾವ-ಭಾವನೆಗಳು ಬೆಳೆದು ಬರಬೇಕು; ಆತ್ಮವಿಕಾಸದ ಜೊತೆಗೆ ಸಮಾಜದ ವಿಕಾಸವನ್ನು ಆತನು ಮಾಡಬೇಕು; ಇವೆಲ್ಲ ಹೊಣೆ ನಿಮ್ಮ ಮೇಲಿದೆ; ಆದ್ದರಿಂದ ಆತ್ಮ ವಿಶ್ವಾಸದಿಂದ ಕಾರ್ಯದಲ್ಲಿ ಧುಮುಕಿರಿ; ಯಶವು ಲಭಿಸುವದರಲ್ಲಿ ಸಂದೇಹವಿಲ್ಲ.

ಮುಖ್ಯ ಅಥಿತಿಗಳಾದ ಡಾ। ಚಿಕ್ಕರಮನೆಯವರು ಬೀಳ್ಕೊಡುವ ಸಮಾರಂಭದಲ್ಲಿ ದೀಕ್ಷಾವಿಧಿಯನ್ನು ಆರಂಭಿಸಿದ್ದು ಈ ಪ್ರಿನ್ಸಿಪಾಲರೂ ಬಂದ ಬಳಿಕ ಒಂದು ಹೊಸ ಉಪಕ್ರಮವೆಂದು ತಿಳಿಸಿ ಶಿಕ್ಷಕರ ಹೊಣೆಯಲ್ಲಿ ತ್ರಿವಿಧವಿರುವದೆಂದು ಅಭಿಪ್ರಾಯಪಟ್ಟು ಕೆಳಗಿನ ವಿಚಾರಗಳನ್ನೊಳಗೊಂಡ ಕೆಲವು ಮಾತುಗಳನ್ನು ಹೇಳಿದರು—

ಶಿಕ್ಷಕರ ಕೆಲಸವು ಕೇವಲ ಸಾಲೆಗೆ ಬರುವ ಮಕ್ಕಳಿಗೆ ಕಲಿಸುವದಲ್ಲ; ಅದಕ್ಕೂ ಪೆಚ್ಚಾಗಿ ಶಾಲೆ ತಪ್ಪಿಸುವ ಮಕ್ಕಳು ಸಾಲೆಗೆ ಬರುವಂತೆ ಪ್ರೋತ್ಸಾಯಿಸುವದು; ಅವರು ಶಾಲೆಗೆ ಬರುವಂತೆ ಮಾಡುವರು; ಅಥವಾ ಸಕ್ತಿ ಶಿಕ್ಷಣವನ್ನು ಯಶಸ್ವಿಯಾಗಿ ಮಾಡಿ ತೋರಿಸಲಿಕ್ಕೆಯತ್ನಿಸುವದು—ಇದೂ ಸಹ ಶಿಕ್ಷಕರ ಕಾರ್ಯರಂಗದಲ್ಲಿ ಬರುವದು. ಇದಕ್ಕಾಗಿ ಅವರು ಬಹಳ ಶ್ರಮಿಸಬೇಕಾಗಿಲ್ಲ; ಸಾಲೆ ತಪ್ಪಿಸುವ ಮಕ್ಕಳ ಪಾಲಕರು ಶಿಕ್ಷಕರಿಗೆ ಅಕಸ್ಮಾತ್ತಾಗಿ ದಾರಿಯಲ್ಲಿ ಭೆಟ್ಟಿಯಾಗುವದುಂಟು; ಅಥವಾ ಅವರ ಮನೆಗಳು ಸಾಲೆಯ ದಾರಿಯಲ್ಲಿ ಇರುವದುಂಟು; ಹೀಗೆ ದಿನಾಲು ಒಮ್ಮೆಯಾದರೂ ಪಾಲಕರನ್ನು ಭೆಟ್ಟಿಯಾಗಿ ಮಕ್ಕಳನ್ನು ಸಾಲೆಗೆ ಕಳಿಸಿರಿ ಎಂದು ಹೇಳಬೇಕು. ಇದು ಪ್ರಥಮ ಹೊಣೆ; ಎರಡನೆಯದಾಗಿ ಮೂಲೋದ್ಯೋಗದ ಉತ್ಪಾದನೆಯನ್ನು ಹೆಚ್ಚಿಸುವದು. ತಮಗೆ ಪೂರೈಸಿದ ಉಪಕರಣಗಳಿಂದ, ಸಾಧನ-ಸಲಕರಣೆಗಳಿಂದ ತಮ್ಮ ಬುದ್ಧಿಯನ್ನು ಯುಕ್ತಿಯನ್ನು ಉಪಯೋಗಿಸಿ ಮೂಲೋದ್ಯೋಗವನ್ನು ಸಾಗಿಸಬೇಕು; ಉತ್ಪಾದನೆಯನ್ನು ಹೆಚ್ಚಿಸಬೇಕು. ಸಮಾಜ ಶಿಕ್ಷಣದ ಹೊಣೆಯನ್ನು ಹೊರುವದು ಶಿಕ್ಷಕರ ತೃತೀಯ ಹೊಣೆ. ಸಾಲೆಯು ಸಮಾಜದ ದೀವಟಿಗೆಯಿದ್ದಂತೆ, ಸಾಲೆಗೆ ಹೊಂದಿ ಒಂದಾದರೂ ಸಮಾಜ ಶಿಕ್ಷಣ ಕೇಂದ್ರವನ್ನು ತೆರೆಯಬೇಕು. ಎಲ್ಲ ಶಿಕ್ಷಕರು ಕೂಡಿ ಈ ಕೇಂದ್ರವನ್ನು ನಡೆಯಿಸಬೇಕು; ಪ್ರತಿಯೊಬ್ಬ ಶಿಕ್ಷಕರು ಒಂದೊಂದು ಇಂತಹ ಕೇಂದ್ರವನ್ನು ನಡೆಯಿಸಿದರಂತೂ ಬಹಳ ಒಳ್ಳೆಯದು. ಅಕ್ಷರಾಭ್ಯಾಸದ ಜೊತೆಗೆ ಸುದ್ದಿ ವಿತರಣ, ರೋಗರುಜಿನಗಳ ಕಲ್ಪನೆ, ಉದ್ಯೋಗದ ಕಲ್ಪನೆ, ಮನರಂಜನೆಯ ಕಾರ್ಯ ಇವೆಲ್ಲ ನಡೆಯಬೇಕು. ಹೀಗೆ ಶಿಕ್ಷಕರು ತಾವು ಇರುವ ಹಳ್ಳಿಯ ಸಮಾಜದ ಸಾಮಾನ್ಯ ಉನ್ನತಿಗಾಗಿ ಹೆಣಗಬೇಕು

ದೀಕ್ಷಾವಿಧಿ

ಹೀಗೆ ಸಭೆಯ ಕೆಲಸದನಂತರ ಸಂಸ್ಮರಣೆವೀಯುವ ಸಮಾರಂಭವು ಆರಂಭವಾಯಿತು. ವಿದ್ಯುದ್ದೀಪಗಳಿಂದ ಬೆಳಗುತ್ತಿದ್ದ ಪ್ರಾರ್ಥನಾ ಮಂದಿರವು ಕತ್ತಲೆಯಿಂದ ಆವೃತ್ತವಾಗಿ ಬಾಪುವಿನ ಸಮ್ಮುಖವಲ್ಲಿಯ ನಂದಾದೀವಿಗೆಯೊಂದರಿಂದ ಮಾತ್ರ ಬೆಳಗಹತ್ತಿತು. ಪೂಜ್ಯ ಮಹಾತ್ಮಾಜಿಯವರ ಹೃದಯದಿಂದ ಚಿಮ್ಮಿ ಬಂದ ಈ ಜ್ಯೋತಿಯು ಪ್ರಶಾಂತತೆಯೇ ಬೇರೆ! ಪ್ರಖರತೆಯೇ ಬೇರೆ; ನಾವಿನ್ಯತೆಯೇ ಬೇರೆ! ಮಾನವ ಕೋಟಿಯ ಹೃದಯದ ಶಾಂತಮಯ, ಅಹಿಂಸಾಮಯ, ಸತ್ಯಮಯ ಜ್ಞಾನ ಜ್ಯೋತಿಯನ್ನು ಹೊತ್ತಿಸಬಲ್ಲ ಈ ನಂದಾದೀವಿಗೆಯ ಮಹತಿಯೆಲ್ಲಿ! ಮಾನವ ನಿರ್ಮಿತವಾವ ಈ ವಿದ್ಯುದ್ದೀಪವೆಲ್ಲಿ. ಇರಲಿ; ಈ ದೀವಿಗೆಯೆಂತಹದು ಎಂಬುದನ್ನು ಡಾ। ಚಿಕ್ಕರಮನೆಯವರು ಕೆಳಗಿನಂತೆ ಓದಿ ಹೇಳಿದರು.— ಪ್ರಶಾಂತಮಯ ವಾತಾವರಣದಲ್ಲಿ—

'ನಾಡ ಶಿಲ್ಪಿಗರಾಗಿ ಹೊರಬೀಳಲಿರುವ ಯುವಕ ಶಿಕ್ಷಕ-ಬಾಂಧವರೆ, ನೀವು ಇನ್ನು ಕೆಲ ನಿಮಿಷಗಳಲ್ಲಿ ಜ್ಞಾನದೀಪವನ್ನು ಪಡೆಯಲಿರುವಿರಿ. ಈ ಜ್ಞಾನ ದೀವಿಗೆಯು ನಂದದ ನಂದಾ ದೀವಿಗೆಯು. ಮಾನವ ಕೋಟಿಯ ಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸಿ ಕಣ್ಮರೆಯಾದ ಅಮರ ಬಾಪುವಿನ ಹೃದಯಾಂತರಾಳದಿಂದ ಹೊರಹೊಮ್ಮಿ ಬಂದ ಜ್ಞಾನದೀವಿಗೆಯಿದು; ಜೀವಗಳ ಜೀವನದಲ್ಲಿ ಬರುವ ಆಡೆ-ತಡೆಗಳನ್ನು, ಕುಂದು-ಕೊರತೆಗಳನ್ನು, ತೊಡಕು-ತೊಂದರೆಗಳನ್ನು ತೊಡೆದು ಹಾಕಿ ಜೀವನವನ್ನು ಸುಖಮಯವನ್ನಾಗಿ ಮಾಡಬಲ್ಲ, ವಿಶ್ವ ಭ್ರಾಂಧವ್ಯವನ್ನು ನಿರ್ಮಿಸಬಲ್ಲ ಅಮರ ಶಿಕ್ಷಣದ ದೀವಿಗೆಯಿದು.

"ಕಳೆದ ಎರಡು ವರುಷಗಳಿಂದ ಇಂತಹ ಶಿಕ್ಷಣದಲ್ಲಿ ತರಬೇತಿ ಹೊಂದಿದ ನೀವು ಇಂದು ನಿಮ್ಮ ಹೃದಯದಲ್ಲಿ ಈ ಅಮರ ಬಾಪುವಿನ ಸಮ್ಮುಖದಲ್ಲಿ ಈ ಜ್ಯೋತಿಯನ್ನು ಹೊತ್ತಿಸಿಕೊಳ್ಳಿರಿ. ಕತ್ತಲೆಯಲ್ಲಿ ದಾರಿ ಕಾಣದೆ ತೊಳಲುತ್ತಿರುವ ಭಾರತದ ಭ್ರಾಂಧವರಿಗೆ, ಎಳೆಮಕ್ಕಳಿಗೆ ಈ ದೀವಿಗೆಯ ಕಿಡಿಯೊಂದನ್ನು ಕೊಡಿರಿ. ಅವರೆಲ್ಲರ ಹೃದಯದಲ್ಲಿ ಈ ಜ್ಞಾನ ಜ್ಯೋತಿಯನ್ನು ಹೊತ್ತಿಸಿರಿ. ಭಾರತದ ಆ ಬಾಲಪೃಥ್ವಿರನ್ನು ಜ್ಞಾನಿಗಳನ್ನಾಗಿ, ಸುಖಿಗಳನ್ನಾಗಿ ಮಾಡುವ ಈ ಅದ್ವಿತೀಯ ಜ್ಯೋತಿಯನ್ನು ಈ ಗುರುಕುಲದಿಂದ ಪಡೆಯಿರಿ; ಇಕ್ಕೋ ಈ ದೀವಿಗೆ–"

ಹೀಗೆ ಹೇಳುತ್ತ ಆ ನಂದಾ ದೀವಿಗೆಯಿಂದ ಜ್ಯೋತಿಯನ್ನು ಪಡೆದು ಡಾ|| ಚಿಕ್ಕರಮನೆಯವರು ಕಾಲೇಜಿನ ಮುಖ್ಯಾಧ್ಯಾಪಕರಿಗೆ ಅದನ್ನು ಒಪ್ಪಿಸಿದರು. ಬಳಿಕ ಅದು ಅಧ್ಯಾಪಕ ವರ್ಗದವರಿಗೂ ಅವರಿಂದ ಕಾಲೇಜಿನ ಮಂತ್ರಿಮಂಡಲದವರಿಗೂ, ಮುಂಬೆ ಎಲ್ಲ ಶಿಕ್ಷಕ-ವಿದ್ಯಾರ್ಥಿಗಳಿಗೂ ಸಾಗಿ ಎಲ್ಲರನ್ನು ಜ್ಞಾನದ ಪ್ರಕಾಶದಲ್ಲಿ ಬೆಳಗಿಸಿತು. ಈ ಸಮಯದಲ್ಲಿ ಎಲ್ಲರೂ ಮಾನ್ಯ ಅತಿಥಿಗಳ ಮಂಗರ್ದರ್ಶನದಲ್ಲಿ ಕೆಳಗಿನಂತೆ ಪ್ರತಿಜ್ಞೆಯನ್ನು ಸ್ವೀಕರಿಸಿದರು:—

ಪ್ರತಿಜ್ಞೆ

"ಸ್ವತಂತ್ರ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಹೆಜ್ಜೆಯಿಡುವ ದೀಕ್ಷೆಯನ್ನು ಪಡೆಯುತ್ತಿರುವ ನಾವು ಈ ಶುಭ ಸಮಯದಲ್ಲಿ ನಮ್ಮ ನಾಡ ಮಕ್ಕಳ ಶಿಕ್ಷಣಕ್ಕಾಗಿ, ಹಳ್ಳಿಯ ಅಜ್ಞಾನಿ ಜನರ ಕಲ್ಯಾಣಕ್ಕಾಗಿ, ಹಳ್ಳಿಯ ಸರ್ವತೋಮುಖ ಉನ್ನತಿಗಾಗಿ, ನಮ್ಮ ಶಾಲೆಯ ಘನತೆಗಾಗಿ, ಭಾರತದ ಉಜ್ವಲ ಭವಿಷ್ಯತ್ತಿಗಾಗಿ ದೃಢ ನಿರ್ಧಾರದಿಂದ, ಆತ್ಮ ಸ್ಥಿರತೆಯಿಂದ, ಅಚಲ ವಿಶ್ವಾಸದಿಂದ ಶ್ರಮಿಸುವೆವೆಂದು ಪ್ರತಿಜ್ಞೆಗೈಯುವೆವು. ಸತ್ಯದ ನೆಲೆಯನ್ನು ಸಾಕ್ಷಾತ್ಕರಿಸಲು ಶ್ರಮಿಸಿ ವಿಶ್ವ ವಿಚರಣದಲ್ಲಿ ವಿಲೀನನಾದ ಆ ಅಮರ ಬಾಪುವಿನ ಹರಕೆಯ ದೀವಿಗೆಯು ಚಿರಂತನವಾಗಿ, ಚಿರನೂತನವಾಗಿ ನಮ್ಮ ದಾರಿಯನ್ನು ಬೆಳಗಲಿ; ಆ ದಾರಿಯಲ್ಲಿ ನಡೆಯುವ ಶಕ್ತಿಯು ಕೊನೆಯ ಗಳಿಗೆಯವರೆಗೂ ನಮ್ಮಲ್ಲಿ ಉಳಿಯುವಂತೆ ದಯಾಘನನಾದ ಪರಮಾತ್ಮನು ಕರುಣಿಸಿಲಿ."

ಹೀಗೆ ಪ್ರತಿಜ್ಞೆಯನ್ನು ಸ್ವೀಕರಿಸಿದನಂತರ 'ಜಯ ಹಿಂದ" ದೊಂದಿಗೆ ಸಮಾರಂಭವನ್ನು ಸಮಾಪ್ತಿಯಾಯಿತು.

—ಸಂಗ್ರಾಹಕರು: ಶ್ರೀ. ಈಶ್ವರ

ಸಮಾಜ ಶಿಕ್ಷಣ

[ದಿನಾಂಕ ೧೦—೫—೫೩ನೆಯ ದಿನ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡೈರೆಕ್ಟರರಾದ ಶ್ರೀ. ಡಿ. ಸಿ. ಪಾವಟೆ ಸಾಹೇಬರು ನಮ್ಮ ಟ್ರೇನಿಂಗ ಕಾಲೇಜದಲ್ಲಿ ನಡೆದಿರುವ ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿ ವರ್ಗಕ್ಕೆ ಸಂದರ್ಶನವಿತ್ತಾಗ ಮಾಡಿದ ಭಾಷಣದ ತಿರುಳನ್ನು ಇಲ್ಲಿ ಕೊಡಲಾಗಿದೆ.

—ಪ್ರಧಾನ ಸಂಪಾದಕರು]

ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡೈರೆಕ್ಟರರು ದಿನಾಂಕ ೧೦-೫-೫೩ನೆಯ ದಿನ ಸಂಜೆಯ ೬-೩೦ ಗಂಟೆಯ ಸಮಯಕ್ಕೆ ಸ. ಶಿ. ಕಾರ್ಯಕರ್ತರ ತರಬೇತಿ ವರ್ಗಕ್ಕೆ ಭೇಟ್ಟಿಯನ್ನಿತ್ತರು. ಮೊದಲು ಪ್ರಿನ್ಸಿಪಾಲರಾದ ಶ್ರೀ. ಪಂದಾಳೆ ಅವರು ಬಿಡುವಿಲ್ಲದ ಸಮಯದಲ್ಲಿಯೂ ಬಿಡುವನ್ನು ಕಲ್ಪಿಸಿಕ್ಕೊಂಡು ಈ ವರ್ಗಕ್ಕೆ ಭೇಟ್ಟಿಯನ್ನಿತ್ತದ್ದಕ್ಕಾಗಿ ಡೈರೆಕ್ಟರರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸಿದರು. ಬಳಿಕ ಮುಖ್ಯ ಅತಿಥಿಗಳು ಕೆಳಗಿನ ಆಶಯದ ಕೆಲವು ಮಾತುಗಳನ್ನು ಜೋಡಿದರು.

ಸಮಾಜ ಶಿಕ್ಷಣವೆಂದರೆ ಕೇವಲ ರ, ಶ, ಈ ಕ ಆಗಲಿ ಇಲ್ಲವೆ ಅ, ಆ ಅಗಲಿ ಕಲಿಸುವದಲ್ಲ. ಆದರೆ ಹಳ್ಳಿಯ ಪ್ರಬುದ್ಧರ ಮನೋಭೂಮಿಕೆಯನ್ನು ತಯಾರಿಸುವದು. ಅವರ ಉದ್ಯೋಗಕ್ಕೆ ಸಾಹಾಯ್ಯಕಾರಿಯಾಗುವಂತಹ, ಅವರ ಆರೋಗ್ಯದ ಬೆಳವಣಿಗೆಯಾಗುವಂತಹ, ಅವರಲ್ಲಿ ರಾಷ್ಟ್ರೀಯ ಭಾವನೆಯು ಜಾಗ್ರತವಾಗುವಂತಹ, ಅವರಲ್ಲಿ ಸ್ವಚ್ಛತೆಯ ಕಲ್ಪನೆಯು ಬರುವಂತಹ, ಒಟ್ಟಿನಲ್ಲಿ ಅವರ ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ನೈತಿಕ ಉನ್ನತಿಯಾಗುವಂತಹ ಶಿಕ್ಷಣಕ್ಕೆ ಸಾಮಾಜಿಕ ಶಿಕ್ಷಣವೆನ್ನುವರು. ಸ. ಶಿ, ಕಾರ್ಯಕರ್ತರು ಮೊದಲು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು, ಸೇವಾಬುದ್ಧಿ ಹಾಗೂ ಸಮಾಜ ಶಿಕ್ಷಣದ ವ್ಯಾಪ್ತಿಯ ನೈಜ ಕಲ್ಪನೆಯನ್ನು ಮಾಡಿಕೊಳ್ಳಬೇಕು. ಒಬ್ಬ ವಿದ್ಯಾರ್ಥಿಗೆ ನಾಲ್ಕು ಇಲ್ಲವೆ ಐದು ರೂಪಾಯಿಗಳೆಂದು ಹಣದ ಎಣಿಕೆ ಹಾಕದೆ ಹಳ್ಳಿಯ ಸಮಾಜದ ಉದ್ಧಾರ, ಉನ್ನತಿಯಲ್ಲಿ ಸಿಗುವ ಚಿತ್ತ ಆನಂದದತ್ತ ಲಕ್ಷ್ಯವಿತ್ತರೆ ಹೆಜ್ಜು. ಶ್ರೇಯಸ್ಸರ ತಾನೊಬ್ಬನು ಸ್ವಚ್ಛನಿದ್ದರೆ ತೀರಿತು, ತನ್ನಷ್ಟಕ್ಕೆ ತಾನು ಎಂಬ ಭಾವನೆಯು ಇಲ್ಲದಂತಾಗಬೇಕು ತಮ್ಮ ಮನೆಯ ಮುಂದಿನ ಕಸವನ್ನು ಇನ್ನೊಬ್ಬರ ಮನೆಯ ಮುಂದೆ, ಅವರು ಮತ್ತೊಬ್ಬರ ಮನೆಯ ಮುಂದೆ ಚೆಲ್ಲುವದನ್ನು ನಾವು ನೋಡುತ್ತೇವೆ. ಹೀಗೆ ಹಳ್ಳಿಯು ಮಲಿನತೆಯ ಮನೆಯಾಗುತ್ತದೆ. ಹಳ್ಳಿಯ ಬಾಂಧವರೆಲ್ಲರು ನಮ್ಮ ಬಾಂಧವರು, ಹಳ್ಳಿಯಲ್ಲಿಯ ಎಲ್ಲ ಜನರು ಪರಸ್ಪರ ಬಾಂಧವರು ಎಂಬ ಭಾವನೆಯು ಎಲ್ಲರಲ್ಲಿ ಒಡಮೂಡಬೇಕು. ಹಳ್ಳಿಗರಲ್ಲಿ ಹಳ್ಳಿಗಾಗಿ ತಾನು; ತನಗಾಗಿ ಹಳ್ಳಿ ಎಂಬ ಭಾವ-ಭಾವನೆಗಳು ಪ್ರತಿಯೊಬ್ಬನಲ್ಲಿ ಬೇರೂರಬೇಕು.

ಹಳ್ಳಿಗಳಲ್ಲಿ ಮೂರು ರೂಪಾಯಿಗಾಗಿ ಮುನ್ನೂರು ರೂಪಾಯಿ ಕಳೆದುಕೊಳ್ಳುವ, ಜಗಳವಾಡುವ ಸಂದರ್ಭಗಳನ್ನು ನೋಡುತ್ತೇವೆ. ಇದಕ್ಕೆ ಅವರ ಅಜ್ಞಾನವೇ ಕಾರಣ. ಇಂತಹ ಜಗಳಗಳನ್ನು ಬೇರು ಸಹಿತ ಕಿತ್ತೊಗೆದು ಅವರಲ್ಲಿ ಸಹನೆ, ಸಹಕಾರ, ಸಮತೆಗಳು ಉಳ್ಳವಿಸಿ ಸ್ಥಿರವಾಗುಳಿಯುವಂತೆ ನೋಡಿಕೊಳ್ಳಬೇಕು.

ಕೆಲವು ಹಳ್ಳಿಗಳಲ್ಲಿ ಶಿಕ್ಷಣಕ್ಕೆ ಸಹಾಯ ಸಿಗುವಂತೆ ನೋಡಿಕೊಳ್ಳುವದೂ ಸ. ಶಿ. ಕಾರ್ಯಕರ್ತರ ಇನ್ನೊಂದು ಹೊಣೆ. ಕೆಲವು ಹಳ್ಳಿಗಳು ಅನುಕೂಲವಿದ್ದರೆ ಕೆಲವು ಪ್ರತಿಕೂಲ ಇರುವದು ಸಹಜ. ಪ್ರತಿಕೂಲವಿದ್ದ ಹಳ್ಳಿಗರಿಗೆ ಸ. ಶಿ. ಕಾರ್ಯಕರ್ತರು ಶಿಕ್ಷಣದ ಲಾಭ, ಗೌರವಗಳನ್ನು ತಿಳಿಸಿ ಹೇಳಬೇಕು. ತಮ್ಮ ಮುಡಿಮೆಯಿಂದ ಶಿಕ್ಷಣದ ಬಗ್ಗೆ ಹಳ್ಳಿಗರಲ್ಲಿ

ಆದರೆ, ಅಂತಃಕರಣಗಳು ಹುಟ್ಟುವಂತೆ ಯತ್ನಿಸುವದು ವಿಹಿತ. ಹೀಗೆ ಅವರಲ್ಲಿ ಒಮ್ಮೆ ಅಭಿರುಚಿಯು ಹುಟ್ಟಿತೆಂದರೆ ತಮ್ಮ ಮಕ್ಕಳ ಶಿಕ್ಷಣಕ್ಕೆ ಬೇಕಾಗುವ ಅವಶ್ಯಕತೆಗಳನ್ನು ಪೂರೈಸಲು ಮತ್ತು ತಮ್ಮಿಂದಾದಷ್ಟು ಸಹಾಯ ನೀಡಲು ಸಿದ್ಧರಾಗುವರು.

ನಮ್ಮ ಕೈಯಲ್ಲಿ ಕಲಿತು ಹೋದ ವಿದ್ಯಾರ್ಥಿಗಳು ಕೊನೆಯ ಗಳಿಗೆಯವರೆಗೆ ಸ್ಮರಿಸುವಂತಾದರೆ ಸಾಕು; ಶಿಕ್ಷಕರಾದ ನಮ್ಮ ಕೆಲಸ ಸಾರ್ಥಕವಾಯಿತೆಂದೂ ನಮ್ಮ ಶ್ರೇಯಸ್ಸು ಅದರಲ್ಲಿ ಅಡಗಿದೆಯೆಂದೂ ನಾವು ತಿಳಿಯಬೇಕು. ನಮಗೆ ಕಲಿಸಿದ ಕೆಲವು ಶಿಕ್ಷಕರನ್ನು ಅನೇಕ ವರ್ಷಗಳಾದರೂ ಜ್ಞಾಪಿಸುತ್ತೇವೆ. ಏಕೆ? ಅವರು ನಮ್ಮಲ್ಲಿ ಚಿಕ್ಕಂದಿನಲ್ಲಿಯೇ ಜ್ಞಾನದೀಪ್ತಿಯನ್ನು ಹೊತ್ತಿಸಿದರೆಂದು ತಿಳಿದು ಅವರನ್ನು ಈಗಲೂ ಸ್ಮರಿಸುತ್ತೇವೆ. ನೈಜ ಶಿಕ್ಷಕನಿಗೆ ಇದು ಅಳಿಯಲಾರದ, ಲೆಕ್ಕಕ್ಕೆ ನೀರಿದ ಗೌರವ ಹಾಗೂ ಮರ್ಯಾದೆ. ಆದುದರಿಂದ ಎಲ್ಲರೂ ದಕ್ಷತೆಯಿಂದ, ಕರ್ತವ್ಯ ತತ್ಪರತೆಯಿಂದ ಸಮಾಜ ಶಿಕ್ಷಣದ ಕಾರ್ಯವನ್ನು ಮಾಡಬೇಕು.

ಮುಖ್ಯ ಅತಿಥಿಗಳ ಆಭಾರಮನ್ನಣೆಯೊಂದಿಗೆ ಈ ಕಾರ್ಯಕ್ರಮವು ಕೊನೆಗಂಡಿತು.

ಜೀವನ ಶಿಕ್ಷಣ

ಶಿಕ್ಷಣ ಖಾತೆಯ ಡೆಪ್ಯುಟಿ ಡೈರೆಕ್ಟರರಾದ ಶ್ರೀ. ಬಿ. ಎಮ್. ಮೀಮಾಂಸಿಯವರು ಬಿಹಾರ, ಮಧ್ಯಪ್ರಾಂತ, ಮದ್ರಾಸ ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿ ಅಲ್ಲಲ್ಲಿ ನಡೆದ ಮೂಲಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ, ಮೂಲಶಿಕ್ಷಣದ ಪ್ರಯೋಗಗಳನ್ನು ನಿರೀಕ್ಷಿಸಿ ಕಳೆದ ಎಪ್ರೀಲ ತಿಂಗಲ್ಲಿ ಧಾರವಾಡ ಪ್ರಾಯೋಗಿಕ ಕ್ಷೇತ್ರವನ್ನು ಹಾಗೂ ಸ್ಥಳಿಕ ಟ್ರೇನಿಂಗ ಕಾಲೇಜುಗಳನ್ನು ಸಂದರ್ಶಿಸಿದರು. ಬಳಿಕ ಸ್ಥಳಿಕ ಶಿಕ್ಷಣಾಧಿಕಾರಿಗಳಿಗೆ ಉಪದೇಶಪರ ಭಾಷಣ ಮಾಡಿ ಕೆಳಗಿನಂತೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

(೧) ಮೂಲೋದ್ಯೋಗದ ಉತ್ಪನ್ನವು ಬಿಹಾರದಲ್ಲಿ ಹೆಚ್ಚಿಗಿದ್ದು ಅದರಂತೆ ಉಳಿದ ಕ್ಷೇತ್ರಗಳಲ್ಲಿ ಸಹ ಅದು ಹೆಚ್ಚಾಗುವಂತೆ ನೋಡಿಕೊಳ್ಳುವದು ವಿಹಿತ.

(೨) ನೂಲುವ-ನೇಯುವ ಉದ್ಯೋಗವಿದ್ದ ಮೂಲ ಶಿಕ್ಷಣ ಸಾಲೆಯಲ್ಲಿ ಪ್ರತಿ ಮಗುವಿಗೆ ೧೦ ಚೌರಸ ಫೂಟು ಕ್ಷೇತ್ರವು ಇರಬೇಕು; ಈ ಸಾಲೆಗಳಲ್ಲಿ ಕೈ ತೋಟಕ್ಕೆ ೧ ರಿಂದ ೨ ಎಕರೆ ಭೂಮಿಯು ಇರಬೇಕು.

೩ ಒಕ್ಕಲತನವು ಮೂಲೋದ್ಯೋಗವಿದ್ದ ಮೂಲ ಶಿಕ್ಷಣ ಸಾಲೆಗಳಲ್ಲಿ ೧೦ ರಿಂದ ೧೫ ಎಕರೆ ಹೊಲವು ಇರುವದು ಅವಶ್ಯ

(೪) ಒಬ್ಬ ಮೇಲ್ವಿಚಾರಕನಿಗೆ ೩೦ ಕ್ಕಿಂತ ಹೆಚ್ಚು ಮೂಲಶಿಕ್ಷಣ ಸಾಲೆಗಳಿರಕೂಡದು. ಈ ಮೇಲ್ವಿಚಾರಕನಿಗೂ ಮತ್ತು ಎಲ್ಲ ಶಿಕ್ಷಣಾಧಿಕಾರಿಗಳಿಗೂ ಮೂಲ ಶಿಕ್ಷಣದಲ್ಲಿ ನಂಬಿಕೆ, ಆಸ್ಥೆ ಇರಬೇಕು. ಈ ಹೊಸ ಶಿಕ್ಷಣವು ಉಪಯುಕ್ತ ಹಾಗೂ ಯೋಗ್ಯ ಶಿಕ್ಷಣ ಕ್ರಮವೆಂಬ ದೃಢವಾದ, ಪ್ರಬಲವಾದ ವಿಶ್ವಾಸ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಲ್ಲಿ ಇರತಕ್ಕದ್ದು.

(೫) ಶಿಕ್ಷಣಾಧಿಕಾರಿಗಳು ಸಾಲೆಗೆ ಸಂದರ್ಶನ-ವಿತ್ತಾಗ ಮಕ್ಕಳ ಕೈಕೆಲಸ, ಮೂಲೋದ್ಯೋಗದ ಕೆಲಸ, ಮತ್ತು ಇತರ ಚಟುವಟಿಕಗಳನ್ನು ನಿರೀಕ್ಷಿಸಬೇಕು. ಇದರಿಂದ ಮಕ್ಕಳಿಗೆ ಒಂದು ತರಹದ ಪ್ರೋತ್ಸಾಹನೆಯು ದೊರೆಯುವದು

(೬) ಮಕ್ಕಳು ಮೂಲೋದ್ಯೋಗವನ್ನು ಕಲಿಯುವದರಿಂದ ಕಾರ್ಮಿಕ ದುಡಿತದ ಬಗ್ಗೆ ಅವರಲ್ಲಿ ಪ್ರೇಮ, ಆದರಗಳು ಹುಟ್ಟಿ ಬಿಡುವಿನ ದಿನಗಳಲ್ಲಿ ತಮ್ಮ ತಂದೆ-ತಾಯಿಗಳಿಗೆ ನೆರವಾಗುವರು. ಸಾಲೆಯು ಹಳ್ಳಿಯ ಸಾಮಾಜಿಕ ಚಟುವಟಿಕೆಗಳಿಗೆ ಕೇಂದ್ರವಾಗುವಂತೆ ಹೆಚ್ಚಾಗಿ ಶಿಕ್ಷಕರು ಶ್ರಮಿಸುವಂತೆ ನೋಡಿಕೊಳ್ಳಬೇಕು. ಹೀಗಾಗುವದರಿಂದ ಪಾಲಕರಲ್ಲಿ ಸಾಲೆಯ ಬಗ್ಗೆ ಆಸ್ಥೆ, ಅಭಿಮಾನಗಳು ಹುಟ್ಟುವವು. ಆಗಾಗ್ಗೆ ಪಾಲಕರ ದಿನಾಚರಣೆ, ಸಮ್ಮೇಲನ, ಮಕ್ಕಳ ದಿನ, ಪ್ರದರ್ಶನ ಮೊದಲಾದ ಸಂದರ್ಭಗಳನ್ನು ನಿರ್ಮಿಸಿ ಪಾಲಕರ ಸಹಕಾರವನ್ನು ಕೋರಬೇಕು.

(೭) ಮೂಲ ಶಿಕ್ಷಣ ಸಾಲೆಗಳಲ್ಲಿಯ ವಿವಿಧ ಚಟುವಟಿಕೆಗಳು, ಸಾಲೆ-ಸಮಾಜ-ಹಳ್ಳಿ ಇವುಗಳನ್ನು ಸ್ನೇಹಮಯವಾಗಿ ಕೂಡಿಸಲು ನೆರವಾಗುವವು. ಪಾಲಕರ ಈ ಆಸ್ಥೆಯು ತಮ್ಮ ಮಕ್ಕಳನ್ನು ತಾವಾಗಿಯೇ ಸಾಲೆಗೆ ಕಳಿಸುವಂತೆ ಮಾಡುವದು. ಇದರಿಂದ ಒತ್ತಾಯದ ಶಿಕ್ಷಣಕ್ರಮವು ತಾನಾಗಿಯೇ ಯಶಸ್ವಿಯಾಗಲು ಅನುವು ದೊರೆಯುವದು.

ಪ್ರಾಥಮಿಕ ಶಿಕ್ಷಣದ ಕ್ಷೇತ್ರದ ಮೇಲೆ

ಪ್ರಾಥಮಿಕ ಶಿಕ್ಷಕರ ವಿಶ್ರಾಂತಿ ದಿನ ಶಿಬಿರ

ಧಾರವಾಡ ಭಾಗದ ಪ್ರಾಥಮಿಕ ಶಿಕ್ಷಕರ ವಿಶ್ರಾಂತಿ ದಿನ ಶಿಬಿರವು ನೊದಲನೆಯ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಜೇವೂರ ಅವರ ನೇತೃತ್ವದಲ್ಲಿ ಬೆಳಗಾಂವಿಯಿಂದ ಸುಮಾರು ೮ ಮೈಲು ಮತ್ತು ಸೂಳೇಭಾವಿ ಸ್ಟೇಶನದಿಂದ ೪ ಮೈಲು ದೂರದಲ್ಲಿರುವ ತಂಪಾದ, ಶಾಂತ ವಾತಾವರಣವಿರುವ ಸುಂದರ ಸೃಷ್ಟಿಯ ಸೊಬಗಿನ ದೃಶ್ಯವಿರುವ ಅನೇಕ ದೃಷ್ಟಿಯಿಂದ ಅನುಕೂಲತೆಯುಳ್ಳ ಅನುರಾಯಿ (ಬಾಳೇಕುಂದ್ರಿ) ಯಲ್ಲಿ ಇದೇ ಮೇ ೧೯ ರಿಂದ ೩೦ ರವರೆಗೆ ಹತ್ತು ದಿನ ನಡೆಯುವದು. ಈ ಶಿಬಿರದಲ್ಲಿ ಬೆಳಗಾಂವ, ಧಾರವಾಡ, ವಿಜಾಪುರ, ಕಾರವಾರ, ಹುಬ್ಬಳ್ಳಿ, ಗದಗ, ಜಿಲ್ಲಾ ಹಾಗೂ ಮುನ್ಸಿಪಲ್ ಸ್ಕೂಲ್ ಬೋರ್ಡಗಳಿಂದ ಆರಿಸಲ್ಪಟ್ಟ ಶಿಕ್ಷಕರು ಭಾಗವಹಿಸುವರು ಮತ್ತು ಶಿಬಿರದ ಕಾಲಾವಧಿಯಲ್ಲಿ ವೈಕ್ಷಣಿಕ ಸಮಸ್ಯೆಗಳ ಚರ್ಚೆಯಾಗುವುದಲ್ಲದೆ ವೈಕ್ಷಣಿಕ ಹಾಗು ಐತಿಹಾಸಿಕ ಸ್ಥಳಗಳ ಪ್ರವಾಸವನ್ನೂ ಕೈಕೊಳ್ಳಲಾಗುವದು.

ಸಮಾಜ ಶಿಕ್ಷಣ

ಪ್ರಾದೇಶಿಕ ಸಮಾಜ ಶಿಕ್ಷಣ ಸೆಕ್ರೆಟ್ರಿಗಳಾದ ಶ್ರೀ. ಮೆಣಸಗಿ ಅವರು ಶಿಕ್ಷಕರನ್ನು ಕುರಿತು ಕೊಟ್ಟ ಸಂದೇಶವು ಉತ್ಪ್ರೇಕವಾಗಿದೆ. ಅವರು ಸಂದೇಶವನ್ನು ಕೊಡುವಾಗ 'ಸಮಾಜ ಶಿಕ್ಷಣಕ್ಕೆ ಮೀಸಲಾಗಿರುವ ಕಾರ್ಯಕರ್ತರ ಅಭಾವವು ಇದ್ದರೂ ಅಭಾವವನ್ನು ಪ್ರಾಥಮಿಕ-ಶಿಕ್ಷಕರು ತುಂಬ ಬಹುದಾಗಿದೆ; ಕೆಲವು ಊರುಗಳಲ್ಲಿ ಗೌಡರು, ಕುಲಕರ್ಣಿಯರು ಸಮಾಜ ಶಿಕ್ಷಣದ ಕಾರ್ಯವನ್ನು ಮಾಡುತ್ತಿದ್ದಾರೆ, ಅವರ ನೆರವನ್ನೂ ಕೋರಬೇಕು, ಈ ಕಾರ್ಯದಲ್ಲಿ ಹಣದ ಕಡೆಗೆ ನೋಡದೆ ರಾಷ್ಟ್ರದ ಹಿತದ ದೃಷ್ಟಿಯಿಂದ ನನಾಜ ಶಿಕ್ಷಣದ ಕಾರ್ಯವನ್ನು ಮಾಡಿ ನಮ್ಮ ಪಾಲಿನ ಕರ್ತವ್ಯವನ್ನು ನಾವು ಮಾಡಬೇಕು; ದೇವರು ಈ ಕಾರ್ಯಕ್ಕಾಗಿ ನಿಮಗೆ ಶಕ್ತಿಯನ್ನೀಯಲಿ' ಎಂದು ಸಂದೇಶ ವಿತ್ತರು.

ಮಕ್ಕಳ ಮಂದಿರ, ಗೋಕಾಕ

೧೨ – ೪ – ೫೨ ರಂದು ಗೋಕಾಕ ಫಾಲ್ಸ್ ಶಾಲೆಯಲ್ಲಿ ಗೋಕಾಕದ 'ಮಕ್ಕಳ ಮಂದಿರ'ದ ಮುಖಾಂತರ ವಾಕ್‌ಸ್ಪರ್ಧೆಯು ನಡೆಯಿತು. ಅದರ ಅಧ್ಯಕ್ಷತೆಯನ್ನು ಶ್ರೀ. ಎಸ್. ಆಯ್. ಪಾಟೀಲ, ಚೇರಮನ್, ಡಿ. ಎಸ್. ಬಿ. ಬೆಳಗಾಂವ ಇವರು ವಹಿಸಿದ್ದರು. ಮೆ || ಎ. ಓ. ಅವರು ಸಭೆಯನ್ನು ಉದ್ಘಾಟಿಸಿದರು. ಡಾ|| ಕರ್ಕಿ, ಪ್ರಿ. ಇಂಚಲ ಶ್ರೀ. ಬಿ. ಬಿ. ಕುಲಕರ್ಣಿ ನಿರ್ಣಾಯಕರಾಗಿದ್ದರು. ೨ನೇ ಇಯತ್ತೆಯಿಂದ ೭ ನೆಯ ಇಯತ್ತೆಯ ವರೆಗೆ ೦೦ ಬಾಲಕರು ಭಾಗವಹಿಸಿದ್ದರು ಡಾ|| ಕರ್ಕಿಯವರು 'ಮಕ್ಕಳ ಮನೋವಿಕಾಸ' ಪ್ರಿ. ಇಂಚಲರು ಪದ್ಯ ಶಿಕ್ಷಣವನ್ನು ಕುರಿತು ಭಾಷಣಮಾಡಿದರು. ಮೇಲು ನಂಬರು ಬಂದ ೧೨ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಿಕೆಗಳನ್ನು ಹಂಚಲಾಯಿತು. ಅಧ್ಯಕ್ಷರ ಸಮಾರೋಪ ಭಾಷಣವಾದ ಬಳಿಕ ಸಭೆಯು ಮುಕ್ತಾಯಗೊಂಡಿತು. ೧ನೆಯ ನಂಬರಿನ ಎಲ್ಲ ಬಹುಮಾನಗಳು ಮತ್ತು ಪ್ರಶಸ್ತಿ ಪತ್ರಗಳು ನಂದಗಾವಖಾನಾಪೂರಶಾಲೆಯ ಮಕ್ಕಳಿಗೆ ದೊರೆತವು.

ಗ್ರುಪ್ ಶಿಕ್ಷಕರ ಸಮ್ಮೇಲನ

೨೦—೪—೫೨ ರಂದು ಬಿದರಿಯಲ್ಲಿ ಮೇ। ಎ. ಓ. ಡಿ. ಎಸ್. ಬಿ. ವಿಜಾಪುರ ಶ್ರೀ. ಗುಂಜೀಕರರ ನೇತೃತ್ವದಲ್ಲಿ ಗ್ರುಪ್ ಶಿಕ್ಷಕರ ಸಮ್ಮೆಲನವು ಜರುಗಿತು. ಶ್ರೀ. ಅಂಬಲಿ, ಎಂ.ಎಲ್.ಎ. ಅವರು ಧ್ವಜಾರೋಹಣ ಮಾಡಿದರು. ಸಾಮಾಜಿಕ ಕವಾಯಿತು, ಚಟವಟಿಕೆಗಳು ನಡೆದವು. ಶ್ರೀ. ಆರ್. ಬಿ. ಬಿದರಿ ದಿಲ್ಲಿ ಶಾಸನ ಸಭೆಯನ ಸದಸ್ಯರು, ಅವರಿಂದ ಸ್ವಾಗತ ಭಾಷಣವಾಯಿತು. ಶ್ರೀ. ಬಿ. ಟಿ. ಮುರನಾಳರು ಸಮ್ಮೇಲನವನ್ನು ಉಘ್ಘಾಟಿಸಿದರು. ಶ್ರೀ. ಚ. ಬ. ಪಾವಟೆ, ಶ್ರೀ ಹಿರೇಮಠ (ಬನಹಟ್ಟಿ) ಅವರ ಭಾಷಣ, ಶ್ರೀ. ನಿಡೋಣಿ (ಗುಣದಾಳ) ಅವರ ಮಾದರಿಯ ಭಾಷಾ ಪಾಠ, ಸಾಲೆಯಲ್ಲಿ ಸಿದ್ಧವಾದ ವಸ್ತುಗಳ ಪ್ರದರ್ಶನ, ಮನರಂಜನೆಯ ಕಾರ್ಯಕ್ರಮ ಮುಂತಾದವು ನಡೆದವು.

ಪ್ರಾಥಮಿಕ ಸಮಾಜ ಶಿಕ್ಷಣ ಮೇಳಾ, ಲಚ್ಯಾಣ

೧೬ – ೪ – ೫೨ ರಂದು ಲಚ್ಯಾಣ ಜಾತ್ರೆಯ ಅಂಗವಾಗಿ ಶ್ರೀ. ಬಂಥನಾಳ ಶಿವಯೋಗಿಗಳ ಸಾನ್ನಿಧ್ಯದಲ್ಲಿ ಶ್ರೀ. ಹಿರೇಮಠ, ವಾಮಲೇದಾರ, ಡಾ॥ ಇಂಡಿ ಇವರು ಹಿರಿಯತನದಲ್ಲಿ 'ಪ್ರಾಥಮಿಕ ಸಮಾಜ ಶಿಕ್ಷಣ ಮೇಳಾ' ಒಳ್ಳೇ ವೈಶಿಷ್ಟ್ಯಪೂರ್ಣವಾಗಿ ಜರುಗಿತು. ೩೦–೪೦ ಸಾವಿರ ಜನರು ಸೇರಿದ್ದರು. ಶಿಕ್ಷಣ ತಜ್ಞರ ಭಾಷಣಗಳಾದವು. ಮುಖ್ಯಮಂತ್ರಿ ಶ್ರೀ. ಬಿ. ಜಿ. ಖೇರ, ಡೈರಕ್ಟರ ಆಫ್ ಎಜ್ಯುಕೇಶನ್ ಶ್ರೀ. ಡಿ. ಸಿ. ಪಾವಟೆ, ಶ್ರೀ ಜಯದೇವಿಬಾಯಿ ಲಿಗಾಡೆ, ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಜತ್ತಿ, ಡಾ॥ ಡಿ. ವ್ಹಿ. ಚಿಕ್ಕರಮನೆ (ಇ. ಆಯ್ ಡಿ. ಡಿ.)ಅವರು ಉತ್ಸಾಹವರ್ಧಕ ಸಂದೆಶಗಳನ್ನು ಕಳುಹಿಸಿದ್ದರು. ಶ್ರೀ. ಚೆನ್ನಮಲ್ಲಪ್ಪ ಹಲಸಂಗಿ ಅವರು 'ಶೈಕ್ಷಣಿಕ ಆಶ್ರಮಗಳು' ಶ್ರೀ. ಭಬ್ಬಿ (ಆ. ಡಿ ಎ. ಇ.) ಅವರು 'ಹಳೆಯ ಹೊಸ ಶಿಕ್ಷಣ' ಶ್ರೀ. ಕೊಂಡಗುಳಿಯವರು 'ಮೂಲಶಿಕ್ಷಣ' ಶ್ರೀ. ಮೆಂಚಡು 'ತರಬೇತಿ ಕೇಂದ್ರಗಳ ಗೊತ್ತುಗುರಿಗಳು' ಶ್ರೀ ಗೋಗೇರಿಯವರು 'ಅನುಭವದ ಮಾತುಗಳು' ಮುಂತಾದ ವಿಷಯಗಳನ್ನು ಕುರಿತು ಭಾಷಣಮಾಡಿದರು. "ಇಂದಿನ ಶಾಲೆಗಳ ಪರಿಸ್ಥಿತಿ" ಯನ್ನು ಕುರಿತು ಬರೆದ ಶ್ರೀ. ರೊಹಿಂಜೇಕರರ ಭಾಷಣವನ್ನು ಓದಲಾಯಿತು. ಶ್ರೀ. ಕಾರಜಗಾಧರು ಮುಂಬರುವ ನಾಗರಿಕ -- ವಿದ್ಯಾರ್ಥಿಯ ವ್ಯಂಗ್ಯಚಿತ್ರ ತೋರಿಸಿದರು. ಶ್ರೀ. ಸಿಂಪಿ ಲಿಂಗಣ್ಣನವರು ಸಮಾಜ ಶಿಕ್ಷಣದ ಮಾಹಿತಿ, ಶ್ರೀ. ದೇಶಪಾಂಡೆ (ಸ್ಪೇಶನ್ ಮಾಸ್ತರ) 'ಪಾಲಕರ ಕರ್ತವ್ಯ' ಎಂಬ ವಿಷಯಪಳನ್ನು ಕುರಿತು ಮಾತನಾಡಿದರು. ಅಧ್ಯಕ್ಷರ ಸಮಾರೋಪ ಭಾಷಣ ಮತ್ತು ಶ್ರೀ. ಕೋಡಿಕೊಪ್ಪಮಠ ಅವರು ಆಭಾರಮನ್ನಣೆ ಮಾಡಿದ ಬಳಿಕ ಮೇಳಾದ ಮುಕ್ತಾಯವಾಯಿತು.

ವಿವಿಧ ಉತ್ಸವ ಜಾಗು ಚಟುವಟಿಕೆಗಳು

ಕಾಖಂಡಿಕಿ: ಶೇತಗಿ ಖಾತೆಯಿಂದ ಹೈಸ್ಕೂಲ್ ಸ್ಕಾಲರಶಿಪ್ ಪರಿಕ್ಷೆಗೆ ಕುಳಿತ ನಾಲ್ವರು ವಿಧ್ಯಾರ್ಥಿಗಳಲ್ಲಿ ಶ್ರೀ. ಶಿ. ಮ. ಬಡರಿ, ಸ. ರಾ. ಗಾಣಗೇರ ಮತ್ತು ಸು. ಗು. ದೇಶಪಾಂಡೆಯವರು ಉತ್ತಮ ಧೀತಿಯಿಂದ ಪಾಸಾಗಿದ್ದಾರೆ.

ಹಳಿಯಾಳ: ೨೧–೩–೫೨ರಂದು ಹಳಿಯಾಳಗ್ರುಪ್ ಪ್ರಾಥಮಿಕ ಶಾಲೆಗಳ ಶಿಬಿರಾಗ್ನಿ ಕಾರ್ಯಕ್ರಮವು ಸಾಂಗವಾಯಿತು. ಶ್ರಿ ಆರ್. ಜಿ. ಕಾಮತ ಎಂ.ಎಲ್. ಎ. ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಎಲ್. ಬಿ. ಜಾಲಿಸತ್ತಿ (ಶಾ. ಶಿ. ಅಧಿಕಾರಿ) ಅವರು ಈ ಕಾರ್ಯಕ್ರಮದ ಹಿರಿಯರಾಗಿದ್ದರು.

ಗದಗ: (ಕ. ಗಂ. ನಂ. ೧) ೨೭–೪-೫೨ ರಂದು ಪ್ರಸಿದ್ಧವ್ಯಾಪಾರಿಗಳಾದ ಶ್ರೀ ನಾಗಪ್ಪನವರು ಗುಗ್ಗರಿ ಅವರ ಅಧ್ಯಕ್ಷತೆಯಲ್ಲಿ ಬಸವಜಯಂತಿಯ ಉತ್ಸವವು ನೇರವೇರಿತು. ಶ್ರೀ. ಅರಬಟ್ಟಿ (ಎ. ಓ ಎಂ. ಎಸ್. ಬಿ. ಗದಗ) ಅವರು 'ಶಿಕ್ಷಣಪ್ರಪಂಚದಲ್ಲಿ ಜಯಂತಿಗಳ ಮಹತ್ವ' ಪಂ. ನಾಗಭೂಷಣ ಶಾಸ್ತ್ರಿಗಳ 'ಅನುಭವವೇ ಶಿಕ್ಷಣ' ಎಂಬ ವಿಷಯಗಳನ್ನು ಕುರಿತು ಮಾತನಾಡಿದರು.

ಸನದತ್ತಿ : ಶ್ರೀ. ಸಿದ್ಧಲಿಂಗವ್ವ ಅಡಗಿ ಅವರು ಪರಾಕ್ರಮದಿಂದ ಹೆಣ್ಣುಮಕ್ಕಳ ಶಾಲೆಯಲ್ಲಿ ಶ್ರೀಮತಿ ಥಿಟ (ಅ.ಎ.ಇ.) ಅವರ ಅಧ್ಯಕ್ಷತೆಯಲ್ಲಿ ಹೆಣ್ಣುಮಕ್ಕಳ ಪ್ರಾಥಮಿಕ ಶಿಕ್ಷಣ ಶಾಲೆಯು ಸ್ಥಾಪಿತವಾಯಿತು. ಅಂದು ೧೦-೪-೫೨ ಅಕ್ಕನ ಜಯಂತಿ ಇತ್ತು. ಮೆ|| ಡೆಪ್ಯೂಟಿ ಡೈರೆಕ್ಟರ ಆಫ್ ಎಜ್ಯುಕೇಶನಲ್, ಮೆ|| ಎ. ಇ.ಡಿ.ಡಿ.' ಮೇ| ಸೆಕ್ರೆಟರಿ ಸಮಾಜ ಶಿಕ್ಷಣ ಸಮಿತಿ, ಮೂಲೋದ್ಯೋಗದ ಹಾಗೂ ಬೇಟಿ ಅಧಿಕಾರಿಗಳು ಈ ಸ್ತ್ರೀಯರ ಪ್ರಾಥಶಾಲೆಗೆ ಸಂದರ್ಶನವಿತ್ತು ಅದಕ್ಕೆ ಉನ್ನತಿಯನ್ನು ಕೋರಿದರು.

ಅಳಗವಾಡಿ : ಅಳಗವಾಡಿ ಶಾಲೆಯ ಡ್ರಾಯಿಂಗ ಪರಿಣಾಮವು ಇಂತಿದೆ:— ಎಲಿಮೆಂಟರಿ ಪರೀಕ್ಷೆಗೆ ಕುಳಿತವರು ೧೨, ಪಾಸಾದವರು ೯. ಇಂಟರ ಮಿಜಿಯಟ್ ಪರೀಕ್ಷೆಗೆ ಕುಳಿತವರು ೫, ಪಾಸಾದವರು ೪.

ಧಾರವಾಡ : ೨೬-೪-೫೨ ರಂದು ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಬಸವಜಯಂತಿಯು ಪ್ರೊ. ಪ ದ್ರಾಳ ಅವರ ಹಿರಿಯತನದಲ್ಲಿ ಜರುಗಿತು. ಬಸವಣ್ಣನವರು ಮಾಡಿದ ಕ್ರಾಂತಿಯ ವಿವಿಧಾಂಗ ಗಳನ್ನು ಕುರಿತು ಶ್ರೀ. ಹ. ಗ. ಜೋಶಿ, ಶ್ರೀ. ಶಿಲವಂತ ಅಧ್ಯಾಪಕರೂ, ಶ್ರೀ. ಪಮ್ಮಸಾಲಿ, ಶ್ರೀ. ಹುಲೆಪ್ಪನವರು ಮುಂತಾದ ಶಿಕ್ಷಕ ವಿದ್ಯಾರ್ಥಿಗಳೂ ಮಾತನಾಡಿದ ನಂತರ ಮೇ| ಪ್ರಿನ್ಸಿಪಾಲರು ಬಸವಣ್ಣನವರ ಮಾನವತೆ ಯನ್ನು ಕುರಿತು ಉದ್ಬೋಧಕ ಭಾಷಣ ಮಾಡಿದರು.

ಭಟಕಳ ಬೀಟಿನ ಶಿಕ್ಷಕರ ಸಮ್ಮೇಳನ

೨೭-೪-೫೨ ರಂದು ಬಳ್ಳಾರಿ ಕನ್ನಡ ಶಾಲೆಯಲ್ಲಿ ಶ್ರೀ. ಜೆ. ಅಬ್ರಹೆಮ್ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಸಮ್ಮೇಳನವು ಜರುಗಿ ಮಾದರಿ ಪಾಠಗಳು, ವಿವಿಧ ವಿನೋದಾವಳಿ, ನಾಟಕ, ಶಾರೀರಿಕ ಚಟುವಟಿಕೆಗಳು, ಪ್ರದರ್ಶನ ಮುಂತಾದ ಕಾರ್ಯಗಳು ಜರುಗಿದವು.

ಪ್ರಾಥಮಿಕ ಶಿಕ್ಷಕರ ಶಿಕ್ಷಣ ಸಮ್ಮೇಲನ, ಮಂಕಿ

೩೦-೪-೫೨ ರಂದು ಮಂಕಿ ಗಂಡುಮಕ್ಕಳ ಶಾಲೆ-ಯಲ್ಲಿ ರೈಟ್‌ರೆವರಂಡ ಕೋಶ ಅವರ ಅಧ್ಯಕ್ಷತೆಯಲ್ಲಿ ಈ ಸಮ್ಮೇಲನವು ಜರುಗಿತು. ಪ್ರದರ್ಶನ, ಮಾದರಿ ಪಾಠ ವಿವಿಧವಿನೋದಾವಳಿ, ಶಾರೀರಿಕ ಚಟುವಟಿಕೆ ಕಾರ್ಯಕ್ರಮಗಳು ಏರ್ಪಟ್ಟು ಸಾಂಗವಾದವು.

ಪಾರಿತೋಷಕ ವಿತರಣ ಸಮಾರಂಭ

ದಿನಾಂಕ ೩೦-೪-೫೨ ಧಾರವಾಡ ಸರಕಾರಿ ಗಂಡು ಮಕ್ಕಳ ಟ್ರೇನಿಂಗಕಾಲೇಜದ ಪ್ರಾಕ್ಟೀಸಿಂಗ ಸ್ಕೂಲಿನಲ್ಲಿ ಶ್ರೀಮಾನ್ ಎ. ಎಚ್. ದಳವಾಯಿ, ಜೆ. ಎ. ಇ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಪಾರಿತೋಷಕ ವಿತರಣ ಸಮಾರಂಭವು ಜರುಗಿತು. ಪ್ರತಿಯೊಂದು ವರ್ಗದಲ್ಲಿ ೧ನೆಯ ನಂಬರು ಪಡೆದ ವಿದ್ಯಾರ್ಥಿಗಳಿಗೆ ಮೆಚ್ಚುಗೆ ಕೊಡಲಾಯಿತು. ಬೆಸಿಕ್ ಪಿ. ಎಸ್. ಸಿ ಪರೀಕ್ಷೆಯಲ್ಲಿ ಕೆಂದ್ರಗಳಲ್ಲಿ೧ನೇ ನಂಬರಪಡೆದ ಕುಮಾರ ರಾಮಕೃಷ್ಣ ಕಾರ್ಜಳ ಈತನಿಗೆ ಶ್ರೀ. ದೇಶಪಾಂಡೆ ನಿಗದಿ ಅವರು ಕೊಟ್ಟ ಮೆಡಲ್‌ನ್ನು ಕೊಡಲಾಯಿತು. ಶ್ರೀ. ಪಳವಾಯಿ ಅವರು ಮಕ್ಕಳಿಗೆ ಉತ್ತಮ ಅಭ್ಯಾಸ ಮಾಡಿ ಮುಂದುವರಿಯಲು ತಕ್ಕ ಪ್ರೋತ್ಸಾಹವನ್ನು ಕೊಟ್ಟು, ಉಪದೇಶ ಪರ ಭಾಷಣವನ್ನು ಮಾಡಿದರು.

ಇದೇ ಸಮಯದಲ್ಲಿ ಮುಂಬರುವ ವರ್ಷದಲ್ಲಿ ಬೆಸಿಕ್ ಪಿ. ಎಸ್. ಸಿ. ಪರೀಕ್ಷೆಯಲ್ಲಿ ಸೆಂಟರಿಗೆ ೧ನೇ ನಂಬರ ಬರುವ ವಿದ್ಯಾರ್ಥಿಗೆ ೫ ರೂ ಬೆಲೆಯ ಬಹುಮಾನ ವನ್ನು ತಾವು ಸ್ವತಃ ಕೊಡುವುದಾಗಿ ಶ್ರೀ. ಬಂಗಾರಿ ಅವರು ಆಶ್ವಾಸನ ಕೊಟ್ಟರು. ಆಭಾರಮನ್ನಣೆ ಯಾಗಿ, ರಾಷ್ಟ್ರಗೀತೆಯೊಂದಿಗೆ-ಸಮಾರಂಭವು ಕೊನೆ-ಗೊಂಡಿತು.

ಟ್ರೇನಿಂಗ ಕಾಲೇಜುಗಳ ಸ್ನೇಹ ಸಮ್ಮೇಲನಗಳು

ಧಾರವಾಡ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಸ್ನೇಹ ಸಮ್ಮೇಲನವು ೨೯-೪-೫೨ ರಂದು ಮೆ|| ಡಾಕ್ಟರ ಚಿಕ್ಕೇರೂರನೆ ಎಜ್ಯುಕೇಶನಲ್ ಇನಫೆಕ್ಟರ, ಧಾರವಾಡ ಭಾಗ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಡಾ|| ಚಿಕ್ಕೇರೂರನೆಯವರು ಮಹಾತ್ಮಾಜಿ ಯವರಿಂದ ಜೀವನ ಶಿಕ್ಷಣದ ಜ್ಯೋತಿಯನ್ನು ಪಡೆದು ಪ್ರಿನ್ಸಿಪಾಲ ಹುದ್ದಾಳ ಅವರ ಮುಖಾಂತರ ಅದನ್ನು ಎರಡನೆಯ ವರುಷದ ಶಿಕ್ಷಕ ವಿದ್ಯಾರ್ಥಿಗಳಿಗೆ

ಕೊಟ್ಟರು. ಪ್ರಾರ್ಥನಾ ಮಂದಿರವು ಜೀವನ ಶಿಕ್ಷಣ ಜ್ಯೋತಿಯಿಂದ ಪ್ರಕಾಶಮಾನವಾಗಿತ್ತು. ಈ ಸಮಾರಂಭಕ್ಕೆ ಶ್ರೀ. ರಾ. ರು. ಕುಬಸದ, ಎ. ಓ, ಶ್ರೀ. ಎಲಿ ಶ್ರೀ. ತೇರಗಾಂಕರ, ಶ್ರೀ. ಕೊಪ್ಪಿಕರ ಅ. ಇ. ಆಯ್. ಮುಂತಾದ ಅತಿಥಿಗಳು ಆಗಮಿಸಿದ್ದರು.

ಜಮಖಂಡಿ ಸರಕಾರಿ ಟ್ರೇನಿಂಗ ಕಾಲೇಜದ ವಾರ್ಷಿಕ ಸ್ನೇಹ ಸಮ್ಮೇಲನವು ಮತ್ತು ಹೊಸ ವಸತಿ ಗೃಹದ ಉದ್ಘಾಟನೆಯ ಸಮಾರಂಭಗಳು ಮುಂಬಯಿ ರಾಜ್ಯದ ಉಪಮಂತ್ರಿಗಳಾದ ಶ್ರೀ. ಬಿ. ಡಿ. ಜತ್ತಿ ಅವರ ನೇತೃತ್ವದಲ್ಲಿ ೨೭–೪–೫೨ ರಂದು ಜರುಗಿದವು.

ವಿಜಾಪುರ ಸರಕಾರಿ ಟ್ರೇನಿಂಗ ಕಾಲೇಜದ ವಾರ್ಷಿಕ ಸ್ನೇಹ ಸಮ್ಮೇಲನವು ೨೯–೪-೫೨ ರಂದು ಶ್ರೀ. ಉರವಕೊಂಡ ಜಗದ್ಗುರು ಶ್ರೀ. ಕರಿಬಸವರಾಜ ಜೇಂದ್ರ ಮಹಾಸ್ವಾಮಿಗಳು ಹಾಗೂ ಶ್ರೀಮತಿ ಜಯದೇವಿಬಾಯಿ ಲಿಗಾಡೆ ಈ ಮುಖ್ಯ ಅಥಿತಿಗಳ ಹಿರಿಯತನದಲ್ಲಿ ಜರುಗಿತು.

ವಿಜಾಪುರ ಶಿ. ಸ. ಪ್ರಾ. ಶಿ. ಟ್ರೇನಿಂಗ ಕಾಲೇಜದ ದ್ವಿತೀಯ ಸ್ನೇಹ ಸಮ್ಮೇಲನ ೩೦–೪–೫೨ ರಂದು ಪಾರ್ಲಿಮೆಂಟ ಸದಸ್ಯರಾದ ಶ್ರೀ. ರಾಜರಾಮ ದುಬೆ ಅವರ ಹಿರಿಯತನದಲ್ಲಿ ಸಾಂಗವಾಯಿತು.

ಶೈಕ್ಷಣಿಕ ಸಮ್ಮೇಲನಗಳು

ಕರಜಗಿಯಲ್ಲಿ ಎ.ಎಚ್. ದಳವಾಯಿ ಡಿ.ಇ.ಆಯ್. ಅವರ ಹಿರಿಯತನದಲ್ಲಿ ೨೮–೪–೫೨ ರಂದು ತಾಲೂಕ ಪ್ರಾ. ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಸಮ್ಮೇಲನವು ಜರುಗಿತು. ಶ್ರೀ. ಎಫ್. ಸಿ. ಉಣಕಲ್, ಅ. ಏ. ಓ. ಅವರು ಶೈಕ್ಷಣಿಕ ಪ್ರದರ್ಶನದ ಉದ್ಘಾಟನೆಮಾಡಿದರು. ಶ್ರೀ. ಎ. ಎಚ್. ದಳವಾಯಿ ಡಿ. ಇ. ಆಯ್ ಅವರು ಅವರು ' ಆನಂದ ' ದಿ ಪತ್ರಿಕೆಯ ಪ್ರಾರಂಭೋತ್ಸವವನ್ನು ನೇರವೇರಿಸಿದರು.

ಭಟಕಳ ಬೀಟಿನ ಶಾಲೆಗಳ ಶಿಕ್ಷಕರ ಶೈಕ್ಷಣಿಕ ಸಮ್ಮೇಲನವು.

ಬಳ್ಳಾರಿಲ್ಲಿ ೨೭–೪–೫೨ ರಂದು ಶ್ರೀ. ಜೆ. ಅಬ್ರಹಾಮ್ ಅವರು ಹಿರಿಯತನದಲ್ಲಿ. ಜರುಗಿತು. ಅನೇಕ ಮಹನಿಯರ ಭಾಷಣ, ವಿವಿಧ ವಿನೋದಾವಳಿಗಳು ಜರುಗಿದವು. ಪ್ರದರ್ಶನವು ಶ್ರೀ. ಬಿ. ಆರ್. ಕುಲಕರ್ಣಿ ಅವರಿಂದ ಉದ್ಘಾಟಿತವಾಯಿತು.

ಹಾನಗಲ್ ದಲ್ಲಿ ಶ್ರೀ. ರಾ. ರು. ಕುಪ್ಪಸದ ಏ.ಓ. ಅವರ ಹಿರಿಯತನದಲ್ಲಿ ಭಲಭೀಮ ವ್ಯಾಯಾಮ ಶಾಲೆಯ ವಾರ್ಷಿಕೋತ್ಸವವು ೧೦, ೧೧, ಮೇ ೫೨ ರಂದು ಜರುಗಿತು. ಶ್ರೀ. ಆರ್. ಎಸ್. ಕರಡಿಯವರ ಭಾಷಣ, ' ಶೈದಿವಿಯ ಪ್ರಕಾಶನ, ಆಟಪಾಟ ' ಮುಂತಾದ ಕಾರ್ಯಕ್ರಮಗಳು ಜರುಗಿದ್ದವು.

ಬೆಲ್ಲದಬಾಗೇವಾಡಿ ೪–೫–೫೨ರಂದು ಶ್ರೀ. ಆರ್. ಎಸ್. ಹೆಗಡೆ, ಏ. ಓ. ಅವರ ಹಿರಿಯತನದಲ್ಲಿ ಮಕ್ಕಳ ಸ್ನೇಹಸಮ್ಮೇಲನ ಹಾಗು ಪಾಲಕರ ದಿಪಾಚರಣೆಯ ಕಾರ್ಯಕ್ರಮಗಳು ಚೆನ್ನಾಗಿ ಸಾಂಗವಾದವು.

ಧಾರವಾಡ ತಾಲೂಕ ಬೇಸಿಕ್ ಶಿಕ್ಷಕ-ಶಿಕ್ಷಕಿಯರು ವರ್ಗವಾದ ಶ್ರೀ. ಆಯ್. ಎಸ್. ಬಿದರಿ, ಬೆಸಿಕ್ ಸುಪರವಾಯಿಜರ; ಶ್ರೀ. ಅಳಗವಾಡಿ ಹಾಗು ನಾಡಗೀರ ಕ್ಯಾಪ್ಟನ್ಸುಪರವಾಯಿಜರ ಅವರನ್ನು ಶ್ರೀ. ರಾ. ರು. ಕುಪ್ಪಸದ ಪ. ಓ. ಅವರ ಹಿರಿಯತನದಲ್ಲಿ ಸನ್ಮಾನಿಸಿದರು.

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿಯ ವರ್ಗ —

[ದಿನಾಂಕ ೫–೫-೫೨ನೆಯ ಸೋಮವಾರ ಸ. ಶಿ. ಕಾರ್ಯಕರ್ತರ ತರಬೇತಿ ವರ್ಗದ ಆರಂಭೋತ್ಸವದ ಕಾಲಕ್ಕೆ ಮುಖ್ಯ ಅತಿಥಿಗಳಾದ ದಾ. ಚಿಕ್ಕರಮನೆಯವರು ಮಾಡಿದ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.—ಪ್ರ. ಸಂಪಾದಕರು.]

ಧಾರವಾಡ ಜಿಲ್ಲೆಯಲ್ಲಿ ಸಮಾಜ ಶಿಕ್ಷಣ ವರ್ಗವು ದಿನಾಂಕ ೫–೫–೫೨ನೆಯ ಸೋಮವಾರ ನಡೆಸುತ್ತಿರುವ ಕಾರ್ಯಕ್ರಮದಲ್ಲಿ ತರಬೇತಿ ಮೊದಲೇ ನಿಶ್ಚಯಿಸಿದಂತೆ ಆರಂಭವಾಯಿತು. ವರ್ಗದ

ಆರಂಭೋತ್ಸವವು ಧಾರವಾಡ ಭಾಗದ ವಿದ್ಯಾಧಿಕಾರಿಗಳಾದ ಡಾ|| ಚಿಕ್ಕರಮನೆಯವರ ಅಧ್ಯಕ್ಷತೆಯಲ್ಲಿ ನೇರವೇರಿತು. ಈ ಸಮಾರಂಭಕ್ಕೆ ಸ್ಥಳಿಕ ಶಿಕ್ಷಣಾಧಿಕಾರಿಗಳೆಲ್ಲರೂ ಆಗಮಿಸಿದ್ದರು.

ಮೊದಲು ಪ್ರಿನ್ಸಿಪಾಲರಾದ ಶ್ರೀ. ಹಂದ್ರಾಳ ಅವರು ಸ, ಶಿಕ್ಷಣದ ಮಹತ್ವದ ಬಗ್ಗೆ ಹಾಗೂ ಈ ತರಬೇತಿ ವರ್ಗದ ಉದ್ದೇಶದ ಬಗ್ಗೆ ಕೆಲವು ಮಾತುಗಳನ್ನು ಹೇಳಿ ಅಧ್ಯಕ್ಷರಾದ ಡಾ|| ಚಿಕ್ಕರಮನೆಯವರಿಗೆ ಕಾರ್ಯಕರ್ತರಿಗೆ ಕೆಲವು ಉಪದೇಶಪರ ಮಾತುಗಳನ್ನುಹೇಳಲು ಬಿನ್ನವಿಸಿಕೊಂಡರು.

ಡಾ|| ಚಿಕ್ಕರಮನೆಯವರ ಭಾಷಣದ ತಿರುಳು:-

ನೀವು ನಡೆಯಿಸುವ ವರ್ಗಗಳು ಪ್ರೌಢರಿಗಾಗಿ ಇರುವದರಿಂದ ಅವರ ಮನೋವಿಶ್ಲೇಷಣವನ್ನು ಅರಿತು ಕೊಂಡು ತಕ್ಕ ಪದ್ಧತಿಯನ್ನು ಅನುಸರಿಸಬೇಕು. ಪ್ರೌಢರು ತಡವಾಗಿ ಬಂದರೆ ವರ್ಗದಲ್ಲಿಯ ಮಕ್ಕಳಂತೆ ಹೊರಗೆ ನಿಲ್ಲಿಸುವದನ್ನಾಗಲಿ ಅಥವಾ ಬೇರೆ ಯಾವದೇ ಕ್ರಮ ಕೈಕೊಳ್ಳುವದನ್ನಾಗಲಿ ಮಾಡಕೂಡದು. ಇದಲ್ಲದೆ, ಅವರು ಅನಿಯಮಿತವಾಗಿ ವರ್ಗಕ್ಕೆ ಬರುವದರಿಂದ ಅವರಲ್ಲಿ ಪ್ರಗತಿಯ ಸಮಾನತೆ ಇರುವದಿಲ್ಲ. ಆದುದರಿಂದ ಪ್ರೌಢರಿಗೆ ವೈಯಕ್ತಿಕ ಪದ್ಧತಿಯನ್ನು ಅನುಸರಿಸಬೇಕು.

ಎರಡನೆಯದಾಗಿ ಪ್ರತಿಯೊಂದು ಪ್ರೌಢ ವರ್ಗಕ್ಕೆ ಹೊಂದಿ ಒಂದು ವಾಚನಾಲಯವು ಇರಬೇಕು. ಸಾಕ್ಷರಿಗಳಾಗಿ ಹೊರಬೀಳುವ ಪ್ರೌಢರಿಗೆ ಪುನಃ ನಿರಕ್ಷರತೆಯಲ್ಲಿ ಸರಿಯದಂತೆ ನೋಡಿಕೊಳ್ಳುವದಕ್ಕಾಗಿ ಇಂತಹ ವಾಚನಾಲಯಗಳು ಅವಶ್ಯ. ಪ್ರೌಢರ ನಿತ್ಯ ಉದ್ಯೋಗ, ಹಳ್ಳಿಯಲ್ಲಿಯ ಸಾಮಾನ್ಯ ರೋಗ ಮೊದಲಾದ ಸಂಗತಿಗಳಿಗೆ ಸಂಬಂಧಿಸಿದ ಸುಲಭ ಭಾಷೆಯಲ್ಲಿ ಬರೆದ ಪುಸ್ತಕಗಳಿರಬೇಕು.

ಮೂರನೆಯದಾಗಿ, ಕಲಿಸುವಾಗ ಸಾಧನೆ–ಸಲಕರಣೆಗಳನ್ನು ತಯಾರಿಸಿ, ಕಲಿಸುವಾಗ ಉಪಯೋಗಿಸಬೇಕು. ನಾಲ್ಕನೆಯದಾಗಿ ಯಾವದೊಂದು ಕೆಲಸಕ್ಕೆ ಒಂದು ಪ್ರೇರಣೆಯು ಅವಶ್ಯವಿರುವಂತೆ ನಿರಕ್ಷರಿ ಪ್ರೌಢರ ಶಿಕ್ಷಣದಲ್ಲಿಯೂ ಒಂದು ಉದ್ದೇಶ ಇಲ್ಲವೆ ಪ್ರೇರಣೆ ಇರುವದು ಅವಶ್ಯ. ಸಮಾಜ ಶಿಕ್ಷಣದಿಂದ ತಮ್ಮ ಸ್ವಾಭಾವಿಕ ಹಸಿವುಗಳು ಹಿಂಗುವವೆಂಬ ಭಾವನೆಯು ಪ್ರೌಢರಲ್ಲಿ ಒಡಮೂಡಬೇಕು. ಸ್ವಾಭಾವಿಕ ಹಸಿವುಗಳೆಂದರೆ ಎರಡು-ಒಂದು ಉದರ ಪೋಷಣೆ, ಇನ್ನೊಂದು ಮನರಂಜನೆ. ಸಮಾಜ ಶಿಕ್ಷಣ ಕ್ರಮದಲ್ಲಿ ಪ್ರೌಢರ ಉದರ ಪೋಷಣೆಯ ಉದ್ಯೋಗಕ್ಕೆ ಪರಿಪೋಷಕವಾಗುವಂಥ ಸಂಗತಿಗಳನ್ನು ಸೇರಿಸಬೇಕು. ಭಜನೆ, ಆಟ, ಬಯಲಾಟ ಪ್ರಹಸನ ಮೊದಲಾದವುಗಳಿಂದ ಅವರಿಗೆ ಮನರಂಜನೆಯಾಗುವ ಏರ್ಪಾಟಿರಬೇಕು. ಹೀಗೆ ನೀವು ನಿಮ್ಮ ಪದ್ಧತಿಯಲ್ಲಿ ಬದಲಾವಣೆಯು ನ್ನುಂಟು ಮಾಡಿ, ಪ್ರೌಢರ ಸ್ವಾಭಾವಿಕ ಹಸಿವುಗಳನ್ನು ನೀಗಿಸುವಂತಹ ಕಾರ್ಯಕ್ರಮವನ್ನಿಟ್ಟುಕೊಂಡು, ಸಾಲೆಯ ಶಿಕ್ಷಕರೆಲ್ಲರು ಮೇಲಿನ ವರ್ಗಗಳ ಬಾಲಕರ ಸಹಾಯ ತೆಗೆದುಕೊಂಡು ಸ. ಶಿ. ವರ್ಗಗಳನ್ನು ಸಾಗಿಸಿದರೆ ಸ. ಶಿ. ವರ್ಗಗಳು ಯಶಸ್ವಿಯಾಗಿ ನಡೆಯುವರಲ್ಲಿ ಸಂದೇಹವಿಲ್ಲ.

ಈ ತರಬೇತಿ ವರ್ಗದಲ್ಲಿ ಇಪ್ಪೆಲ್ಲವನ್ನು ಪ್ರತ್ಯಕ್ಷ ಪ್ರಯೋಗದಿಂದ ಸ. ಶಿ. ವರ್ಗವನ್ನು ಹೇಗೆ ನಡೆಯಿಸಬೇಕೆಂಬದನ್ನು ಕಲಿಯುವಿರಿ. ಸ. ಶಿಕ್ಷಣದ ಬಗೆ ಉಪಯುಕ್ತ ಜ್ಞಾನವು ಲಭಿಸುವದರಲ್ಲಿ ಸಂದೇಹವಿಲ್ಲ.

ಇಷ್ಟಾದ ಬಳಿಕ ಆಭಾರ ಮನ್ನಣೆಯಾಗಿ ಕಾರ್ಯಕ್ರಮವು ಕೊನೆಗಂಡಿತು.

ಶಿಕ್ಷಣದಲ್ಲಿ ಕೌಟುಂಬಿಕ ಜೀವನದ ಸ್ಥಾನ

(ತಾತ್ವಿಕ ವಿವೇಚನೆ)

ಲೇಖಕರು:— ಶ್ರೀ. ನೀ. ರೇ. ಹಿರೇಮಠ, ಪ್ರಾಧ್ಯಾಪಕ, ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

ಪ್ರಸ್ತಾವನೆ:— ಭಾರತೀಯ ಆಧುನಿಕ ಶಿಕ್ಷಣ ಪ್ರಪಂಚದಲ್ಲಿ "ಕೌಟುಂಬಿಕ ಜೀವನದ" ಶಿಕ್ಷಣವೊಂದು ಹೊಸ ಉಪಕ್ರಮ. ಹೊಸದೆಂದ ಕೂಡಲೇ, ಹುದುಗಿಕೊಳ್ಳುವುದು ಮತ್ತು ಸಂಶಯ ದೃಷ್ಟಿಯಿಂದ ನೋಡುವದು, ಪ್ರತಿಪ್ರಾಣಿಯ ಸಹಜ ಸ್ವಭಾವವಾಗಿದೆ. ವಿಚಾರವು ವಸ್ತುತಃ ಜಡವಲ್ಲ; ಆದರೆ ವಿಚಾರ-ಸರಣಿಯಲ್ಲಿ ಜಡತ್ವವು ಅಂಟಿಕೊಳ್ಳುವ ಸಂಭವವಿದೆ, ಎಂದೇ ಪರಿಚಿತ ವಿಚಾರಗಳಿಂದ ಭಿನ್ನವಾದ ಎಂತಹ ಯೋಗ್ಯ ವಿಚಾರವಿದ್ದರೂ ಜನತೆ ಅದನ್ನು ಸಂಶಯ ದೃಷ್ಟಿಯಿಂದ ನೋಡುವದು. ಮತ್ತು ಅದನ್ನು ಬೇಗ ಸ್ವೀಕರಿಸಲು ಸಿದ್ಧವಾಗುವದಿಲ್ಲ. ಹೊಸದೆಂಬುದನ್ನು ಒಂದು ವೇಳೆ ವಿಚಾರ-ಶೀಲ-ವ್ಯಕ್ತಿ ಒಪ್ಪಿದರೂ ಸಮಾಜವು ಅದನ್ನು ಅಷ್ಟು ಬೇಗ ಒಪ್ಪಲಾರದು. ಹಳೆಯದೆಲ್ಲ ಹೊನ್ನೆಂಬ ಭಾವನೆ ಸಮಾಜದಲ್ಲಿ ಬೇರೂರಿರುತ್ತದೆ. ವ್ಯಕ್ತಿಗಿಂತ ಸಮಾಜವು ಹೆಚ್ಚು ಪರಂಪರಾಗತ ಶರಣ, ಪ್ರತಿಗಾಮಿ.

ಓದು ಬರಹ ಲೆಕ್ಕಗಳು ಶಾಲೆಯ ಗುರುಗಳೆಂದು ತಿಳಿದು ಆಚರಿಸುತ್ತ ಬಂದ ಸಮಾಜಕ್ಕೆ ಶಾಲೆಯು ಚಿಕ್ಕ ಕುಟುಂಬವಾಗಿ ಮಾರ್ಪಡುವದು ಬೇಡಾದಲ್ಲಿ ಆಶ್ಚರ್ಯವೇನು? ಇದರಲ್ಲಿ ಪರಂಪರಾಗತ ರೂಢಿಯ ಶಕ್ತಿ ಎಷ್ಟೆಂಬುದು ಕಂಡು ಬರುವದು. ಕೌಟುಂಬಿಕ ಜೀವನದ ಬಟ್ಟುವಟಿಕೆಗಳು ಆರಂಭವಾದಂದಿನಿಂದ ಶಿಕ್ಷಕರು ಮೊದಲಿಗಿಂತ ಹೆಚ್ಚಿನ ಹೊಣೆ ಹೊರಬೇಕಾಗಿದೆ. ಓದು, ಬರೆಹ, ಲೆಕ್ಕ ಮತ್ತಿನ್ನಿತರ ಪುಸ್ತಕೀಯ ಜ್ಞಾನಕ್ಕೆ ಹೊಣೆಗಾರರಾಗಿದ್ದ ಶಿಕ್ಷಕರು ಈಗ ಮಗುವಿನ ಸಾಮಾಜಿಕವಿಕಾಸ, ತನ್ಮೂಲಕ ಸರ್ವತೋಮುಖ ವಿಕಾಸಕ್ಕೆ ಹೊಣೆಗಾರರಾಗಬೇಕಾಗಿ ಬಂದಿದೆ. ಆದುದರಿಂದ ಶಿಕ್ಷಕರ ಕರ್ತವ್ಯವನ್ನೂ, ಪಾತ್ರವನ್ನೂ ಅರಿಯದ ಅಧ್ಯಾಪಕರು ಶಾಲೆಯಲ್ಲಿಯ ಕೌಟುಂಬಿಕ ಜೀವನವೆಂದೊಡನೆ ಮೂಗು ಮುರಿದರೆ ಆಶ್ಚರ್ಯ ಪಡಬೇಕಾಗಿಲ್ಲ.

ತಾನುಂಡದ್ದೇ ಅಮೃತ, ತಾನು ಕಂಡದ್ದೇ ಸತ್ಯವೆಂದು ತಿಳಿಯುವ ಸಾಮಾನ್ಯ ಜನತೆಗೆ ಶಿಕ್ಷಣ ಸಂಸ್ಥೆಯು ಒಂದು ಮಾದರಿಯ ಮನೆಯಾಗಿ ಕಾರ್ಯ ಮಾಡಿದುದರ ಸಿಹಿ ಅನುಭವವಿಲ್ಲ. ಸಾರಾ-ಸಾರ ವಿಚಾರಶಕ್ತಿಯೂ ಇಲ್ಲ. ಓದು, ಬರಹ, ಲೆಕ್ಕ ಅರ್ಥವಿಲ್ಲದ ಅಂಕೆ-ಸಂಖ್ಯೆ ಇತಿಹಾಸದ ತಾರೀಖುಗಳಲ್ಲಿಯಾಂತ್ರಿಕ ತರಬೇತಿ ಹೊಂದಿದ ಸಾಮಾನ್ಯ ಆಪ್ಪರಜ್ಞಾರಿಗೆ ಅವರ ಮಕ್ಕಳು ಅವುಗಳಲ್ಲಿ ಪಾಂಡಿತ್ಯ ತೋರದಿದ್ದರೆ ರೊಚ್ಚಿಗೇಳುತ್ತಾರೆ; ಲೋಕ ಮುಳುಗಿದಂತಾಗುತ್ತದೆ. ಶಾಲೆಗಳು ದಾರಿ ತಪ್ಪಿವೆಯೆಂದು ದೂರುತ್ತಾರೆ. ಅಶಿಕ್ಷಿತ ಜನತೆಯ ವಿಚಾರಗಳು ಸದ್ಯದ ಕೆಲವು ಅಸಂತುಷ್ಟ, ಶಿಕ್ಷಕರಿಂದಲೂ ಇತರ ಸುಶಿಕ್ಷಿತ ಮಧ್ಯಮ ವರ್ಗದಿಂದಲೂ ಪ್ರಚೋದಿತವಾಗಿವೆ. ಮೇಲುಮಟ್ಟದ, ಮಧ್ಯಮ ವರ್ಗದವರೆನಿಸಿದ ಪ್ರಾಧ್ಯಾಪಕರೂ,ನಕೀಲರು, ಡಾಕ್ಟರರು, ಮತ್ತು ಉಚ್ಚ ಸರಕಾರೀ ನೌಕರರಿಗೆ ಶಾಲೆಯಲ್ಲಿ ಈ ಬಗೆಯ ಸಾಮಾಜಿಕ ವಾತಾವರಣದ ಅವಶ್ಯಕತೆ ಅನಿಸದು. ಅವರ ಮನೆಗಳಲ್ಲಿ ಸಹಜವಾಗಿ ದೊರೆಯುವ ವಾತಾವರಣದಲ್ಲಿ ವೈಯಕ್ತಿಕ ಸ್ವಚ್ಛತೆ, ಆರೋಗ್ಯ ಸಾಂಸ್ಕೃತಿಕ ಸಂಸರ್ಗಗಳು ತಕ್ಕ ಮಟ್ಟಿಗೆ ದೊರೆಯುವದರಿಂದ ತಮ್ಮ ಮಕ್ಕಳಿಗೆ ಶಿಕ್ಷಣದ ಸಾಧನಗಳಾದ ಓದು ಬರಹ ಲೆಕ್ಕಗಳಲ್ಲಿ ಯಾಂತ್ರಿಕ ಕೈಚಳಕು ಬೇಕಾಗಿದೆ. ಸದ್ಯಕ್ಕೆ ಪುಸ್ತಕೀಯ ಶಿಕ್ಷಣಕ್ಕೆ ಅನುಗುಣವಾದ ಶಬ್ದ (ಸಂಜ್ಞೆ) ಮತ್ತು ಜ್ಞಾಪಕ ಶಕ್ತಿ ಪ್ರಧಾನ ಪರೀಕ್ಷೆಗಳಲ್ಲಿ ಹೆಚ್ಚಿನ ಸ್ಥಾನ ಪಡೆದು ತಮ್ಮಂತೆ ನೌಕರಿಗಳಲ್ಲಿ ಸೇರುವ ಶಬ್ದದಂಗಡಿಕಾರರಾಗಬೇಕಾಗಿದೆ.

ಆದ್ದರಿಂದ ಅವರು ಬದಲಾಗುತ್ತಿರುವ ಜಗತ್ತಿನ ವಿಚಾರ ಪ್ರವಾಹಕ್ಕೆ ಎದುರಾಗಿ ನಿಂತಿದ್ದಾರೆ. ಅದು ಅವರ ತಪ್ಪಲ್ಲ. ಅಲ್ಪಸಂಖ್ಯಾಕರಾದ ತಮ್ಮ ವಿಶಿಷ್ಟ ಬೇಡಿಕೆಯಂತೆ ಬಹು ಸಂಖ್ಯೆಯಲ್ಲಿರುವ ಜನತೆಗೆ ಬೇಕಾದ ಸಾಮಾನ್ಯ ಶಿಕ್ಷಣ ರೂಪುಗೊಳ್ಳಬೇಕೆಂದು ಅವರ ಬಯಕೆ.

ಶಿಕ್ಷಣ ತಜ್ಞರೆನಿಸಿಕೊಳ್ಳುವವರಲ್ಲಿ ಕೆಲವರಿಗೆ ಕೌಟುಂಬಿಕ ಜೀವನದ ಅವಶ್ಯಕತೆಯು ತಿಳಿದರೂ ಅವರ ಕೂಗು ಸಂತೆಯ ಗದ್ದಲದಲ್ಲಿ ಕೇಳದಾಗಿದೆ. ಇನ್ನುಳಿದವರಿಗೆ ಶಿಕ್ಷಣಶಾಸ್ತ್ರ ಮಾನಸಶಾಸ್ತ್ರಗಳು ಕೇವಲ ಪುಸ್ತಕ ಪಾಂಡಿತ್ಯಕ್ಕಾಗಿವೆಯೇ ವಿನಃ ಆಚರಿಸಲಕ್ಕಲ್ಲ. ರೂಢಿಗೆ ಜೋತು ಬಿದ್ದು ಸಾರಾ-ಸಾರ ವಿಚಾರ ಶಕ್ತಿಯನ್ನೇ ಒತ್ತಿ ಹಾಕಿದಂತೆ ಹಳಿಯುವದರೊಡನೆ ''ಹೂ'' ಗುಡ್ಡ ಸತ್ತಿದ ಉದಾಹರಣೆಗಳೂ ಸಾಕಷ್ಟಿವೆ. ವೈಜ್ಞಾನಿಕ ದೃಷ್ಟಿಯಲ್ಲಿ ಹಿಂದುಳಿದ ಭಾರತಕ್ಕೆ ಪ್ರತ್ಯಕ್ಷ ಪ್ರಯೋಗದಿಂದ ಯಾವದೊಂದು ತತ್ವವನ್ನು ಒರೆಗೆ ಹಚ್ಚುವ ಅಭ್ಯಾಸವಿಲ್ಲ. ಅದರ ಪರಿಣಾಮವಾಗಿ ವಾಚಾಳಿಗಳ ಅಭಿಪ್ರಾಯಕ್ಕೆ ತೀವ್ರ ಕಿವಿ ನೋಲುತ್ತಾರೆ.

ಜೀವನದ ಬೆಲೆಗಳಲ್ಲಿರುವ ಭಿನ್ನಾಭಿಪ್ರಾಯಗಳೇ ಇದಕ್ಕೆ ಕಾರಣ. ಶಿಕ್ಷಣವು ಯಾತಕ್ಕಾಗಿ ಬೇಕು? ಜೀವನಕ್ಕಾಗಿಯೋ ಅಥವಾ ಓದು ಬರಹ ಲೆಕ್ಕಗಳಿಗಾಗಿಯೊ? ಶಿಕ್ಷಣ ಮಾನಸಶಾಸ್ತ್ರಗಳಲ್ಲಿ ಅಸಾಧಾರಣ ಸಂಶೋಧನೆಗಳನ್ನು ಮಾಡುತ್ತ ಬಂದ ಶಿಕ್ಷಣಜ್ಞರು ಶಿಕ್ಷಣದಲ್ಲಿ ಕೌಟುಂಬಿಕ ಜೀವನಕ್ಕೆ ಎಂದೂ ಇಲ್ಲದ ಪ್ರಾಧಾನ್ಯತೆಯನ್ನು ಇಂದು ಕೊಡಹತ್ತಿದ್ದಾರೆ. "ಜನತೆಯೆ ಜನಾರ್ದನ" "ಜನವಾಣಿಯೇ ವಿಶ್ವವಾಣಿ" "ಪ್ರಜೆಯೇ ಸ್ವಯಂ ಪ್ರಭು'' ಎಂಬ ಹೊಸ ವಿಚಾರಗಳು ಆಧುನಿಕ ತತ್ವಜ್ಞಾನದ ಅಗ್ರಪೂಜೆ ಪಡೆದಾಗಿನಿಂದ '' ಶಿಕ್ಷಣವು ಜೀವನಕ್ಕಾಗಿದೆ"ಯೆಂಬ ಅರಿವು ಉಂಟಾಗಹತ್ತಿದೆ. ಜೀವಿಸಿಯೇ "ಜೀವನ ಕಲೆಯನ್ನು" ಕಲಿಯಬೇಕಾದುದರಿಂದ ಪುಸ್ತಕಗಳು ಅವುಗಳ ಹಳೆಯ ಪೀಳಿಗೆಗಳಾದ ಓದು, ಬರೆಹ, ಲೆಕ್ಕಗಳೂ ಗೌಣಸ್ಥಾನದಲ್ಲಿವೆ. ಅವು ಉಪಯುಕ್ತ ಸಾಧನಗಳು ಮಾತ್ರ, ಗುರಿಗಳಲ್ಲ.

(ಮುಂದಿನ ಸಂಚಿಕೆಗೆ ಮುಂದುವರಿಯುವದು.)

ವಿದ್ಯಾರ್ಥಿಗಳೇ ಪರೀಕ್ಷೆಯಲ್ಲಿ ನಿಮ್ಮ ಯಶವನ್ನು ನಿಶ್ಚಿತಗೊಳಿಸಬೇಕೇ ?

ಹಾಗಿದ್ದರೆ

ಪ್ರಶ್ನೋತ್ತರ ದೀಪಿಕೆ

ಭೂಗೋಲ ಮತ್ತು ಇತಿಹಾಸ

ಇವುಗಳನ್ನು ತಪ್ಪದೇ ಓದಿರಿ !

ಈ ಪುಸ್ತಕಗಳು ಮುಲ್ಕೀ ಮತ್ತು ಸ್ಕಾಲರ್ ಶಿಪ್ ಪರೀಕ್ಷೆಯ, ಹೊಸ ಅಭ್ಯಾಸ ಪತ್ರಿಕೆಯ ಪೂರ್ಣ ವಿಷಯಗಳನ್ನೊಳಗೊಂಡಿದ್ದು, ಇತ್ತೀಚಿನ ಭೌಗೋಲಿಕ, ರಾಜಕೀಯ, ಹಾಗು ಐತಿಹಾಸಿಕ ಬದಲಾವಣೆಗಳನ್ನೆಲ್ಲಾ ಒಳಗೊಂಡಿವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಲೇ ಬೇಕಾದ ಪುಸ್ತಕಗಳು.

ಬೆಲೆ ಪ್ರತಿಯೊಂದಕ್ಕೆ ೦—೧೨—೦. (ಅಂಚೇ ವೆಚ್ಚ ಪ್ರತ್ಯೇಕ).

ಇಂದೇ ನಿಮ್ಮಲ್ಲಿಯ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ. ಅಥವಾ ಕೆಳಗಿನ ವಿಳಾಸಕ್ಕೆ ಬರೆಯಿರಿ:-

ವೀಣಾ ಬುಕ್—ಡಿಪೋ.

ಮಾರುತೀ ಬೀದಿ, ಬೆಳಗಾವಿ

ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗೆ
ಅತ್ಯುಪಯುಕ್ತವಾದ ಹೊಸ ಪುಸ್ತಕಗಳು

೧. ಹೊಸ ಪ್ರಶ್ನೋತ್ತರ ಇತಿಹಾಸ

ಬರೆದವರು:— ಶ್ರೀ. ಭೀ. ಶಂ. ಪೂಜಾರ ಮಾಸ್ತರ, ಬೆಲೆ: ೧—೪—೦

ವಿದ್ಯಾರ್ಥಿಗಳು ಇತಿಹಾಸ ಪರೀಕ್ಷೆಯಲ್ಲಿ ಸಂಪೂರ್ಣ ಯಶಸ್ವಿಯಾಗುವಷ್ಟು ವಿಷಯವನ್ನು ಪ್ರಶ್ನೋತ್ತರ ರೂಪದಿಂದ ಬರೆದಿರುವರು. ೩೦೦-೪೦೦ ಪುಟದ ಇತಿಹಾಸ ಪಠ್ಯಪುಸ್ತಕ ಓದುವದ ಕ್ಕಿಂತಲೂ ಈ ಪುಸ್ತಕವನ್ನು ಓದಿದರೆ ವಿಶೇಷ ಸಹಾಯವಾಗುವದು.

ಈ ಪುಸ್ತಕದ ಕೊನೆಗೆ ರಾಜಕೀಯ ಮುಂದಾಳುಗಳ ಸಂಕ್ಷಿಪ್ತ ಚರಿತ್ರೆಯೂ ರಾಜ್ಯಘಟನೆಯ ಸಂಪೂರ್ಣ ವಿವರಣೆಯೂ ವಿವರಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ತಕ್ಕ ಉತ್ತರಗಳನು ಕೊಡಲು ಸಮರ್ಥರಾಗುವಂತೆಯೂ ಪ್ರಶ್ನೆಗಳ ನಿಶ್ಚಿತ ಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವಂತೆಯೂ ಬರೆಯಲ್ಪಟ್ಟಿದೆ. ಇಂದಿನ ವರೆಗೆ (ಐದು ವರ್ಷಗಳ) ಪರೀಕ್ಷೆಯ ಪ್ರಶ್ನೆಗಳನ್ನು ಬಿಡಿಸಿದ್ದಾರೆ. ಎಲ್ಲ ಪ್ರಶ್ನೋತ್ತರ ಇತಿಹಾಸ ಪುಸ್ತಕಗಳಿಗಿಂತಲೂ ಇದು ಹೊಸ ಪುಸ್ತಕವಾಗಿದೆ.

೨. ಹೊಸ ಪ್ರಶ್ನೋತ್ತರ ಜಮಾಖರ್ಚು

ಬರೆದವರು:— ಶ್ರೀ. ಭೀ. ಬಂ. ರಾಜಪುರೋಹಿತ ಮಾಸ್ತರ, ಬೆಲೆ ೧—೦—೦

'ಜಮಾಖರ್ಚು' ಈ ವಿಷಯವು ಬಹು ನೀರಸವಾದುದು. ಆದುದರಿಂದ ವಿದ್ಯಾರ್ಥಿಗಳು ಬಹಳ ತೊಂದರೆಗೊಳಗಾಗುವರು. ಈ ತೊಂದರೆ ನೀಗಿಸಲು ಈ ಪುಸ್ತಕವು ರಚಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಇದೊಂದೆ ಪುಸ್ತಕ ಅಭ್ಯಸಿಸುವದರಿಂದ ಈ ವಿಷಯದ ಪರೀಕ್ಷೆಯಲ್ಲಿ ಅವರು ನಿಶ್ಚಿತವಾಗಿ ಯಶಸ್ವಿಯಾಗುವರು. ಇಂದಿನವರೆಗೆ ೫ ವರ್ಷಗಳ ಪರೀಕ್ಷೆಯ ಪ್ರಶ್ನೆಗಳ ಉತ್ತರಗಳನ್ನೂ ಕೆಲವು ಹೊಸ ಮಾದರಿಯ ಪ್ರಶ್ನೆಗಳನ್ನೂ ಈ ಪುಸ್ತಕದಲ್ಲಿ ನೋಡಬಹುದು.

ಪುಸ್ತಕ ಬೇಕಾದವರು ಕೂಡಲೇ ತರಿಸಿಕೊಳ್ಳಿರಿ.

ಪಿ. ಸಿ. ಶಾಬಾದಿಮಠ ಬುಕ್ಕಡಿಪೊ, ಗದಗ

ನಿಮ್ಮ ಸ್ಥಳಿಕ ಪುಸ್ತಕದ ಅಂಗಡಿಯಲ್ಲಿ ವಿಚಾರಿಸಿರಿ.

ತ್ವರೆ ಮಾಡಿರಿ! ಇಂದೇ ಸಂಗ್ರಹಿಸಿರಿ!

ಹಬ್ಬ-ಹುಣ್ಣಿವೆಗಳು

ಬೆಲೆ: ೦—೧೨—೦

ಎಲ್ಲರಲ್ಲಿಯೂ ಇರಬೇಕಾದ ಪುಸ್ತಕ. ಹಬ್ಬಗಳು ರೂಢಿಯಲ್ಲಿ ಏಕೆ ಬಂದವು? ಅವುಗಳಿಗಿರತಕ್ಕ ಐತಿಹಾಸಿಕ ಹಿನ್ನೆಲೆ ಮತ್ತು ಮಹತ್ವ ಕುರಿತು ಸರಳ ಶೈಲಿಯಲ್ಲಿ ವಿವೇಚಿಸಲಾಗಿದೆ.

ತ್ವರೆ ಮಾಡಿರಿ! ಇದೀಗ ತಯಾರಾಗಿವೆ.

ಲಘುಪಾಠಮಾಲೆ-೧ ಇತಿಹಾಸ ಬೆಲೆ ೦—೬—೦

,, ೨ ಭೂಗೋಲ ಬೆಲೆ ೦—೬—೦

,, ೩ ಭೂಮಿತಿ-ಜಮಾಖರ್ಚು ೦—೬—೦

,, ೪ ವ್ಯಾಕರಣ (ಅಚ್ಚಿನಲ್ಲಿ)

ಈ ಚಿಕ್ಕ ಪುಸ್ತಕಗಳು ಮುಲ್ಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೂ ೫-೬ನೇ ಇಯತ್ತ್ರೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿವೆ. ಈಗಾಗಲೆ ಈ ಮಾಲೆಯು ಬಹುಜನರಿಂದ ಮನ್ನಣೆ ಪಡೆದಿದೆ.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಕನ್ನಡ ನಾಡಿನಲ್ಲಿಯೇ ಪ್ರ-ಪ್ರಥಮವಾಗಿ, ಪೂರ್ಣವಾಗಿ ಹೊರಟ ಗಣಿತಮಾಲೆ ಇದೊಂದೇ!

ನೂತನ ಗಣಿತ

ಲೇಖಕರು: ಗಲಗಲಿ

(೧ರಿಂದ ೭ನೆಯ ವರೆಗಿನ ವರ್ಗಗಳಿಗಾಗಿ ಪ್ರತ್ಯೇಕ ಗಣಿತಗಳು)

ಸರಕಾರದವರಿಂದ ಮಾನ್ಯತೆ ಪಡೆದಿವೆ. ಕನ್ನಡ ನಾಡಿನ ಪ್ರತಿಯೊಂದು ಶಾಲೆಯಲ್ಲಿಯೂ ಉಪಯೋಗಿಸಲ್ಪಡುತ್ತಿವೆ. ಬೆಲೆಯಾದರೂ ಅತ್ಯಲ್ಪ. ಹೊಸ ಅಭ್ಯಾಸಪದ್ಧತಿಕೆಗಳನ್ನು ಅನುಸರಿಸಲಾಗಿದೆ. ವಿದ್ವಜ್ಜನರ ಮನ್ನಣೆಯನ್ನೂ ಪಡೆದಿವೆ. ಎಲ್ಲರ ಪ್ರೇಮಾದರಗಳನ್ನೂ ಗಳಿಸಿವೆ.

ಅಂತೇ ಇವು ಶ್ರೇಷ್ಠ ಗಣಿತಗಳು

ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ; ಸಾಕಷ್ಟು ಸಂಖ್ಯೆಯಲ್ಲಿ ಪೂರೈಸುವೆವು.

ಆಕಳವಾಡಿ ಬುಕ್-ಡಿಪೋ, ಧಾರವಾಡ

ಪುಟ ೨೬೦) ಮೂಲ ಶಿಕ್ಷಣ (ಬೆಲೆ: ೩-೦-೦

ಲೇಖಕರು:— ಶ್ರೀ. ಮ. ಗು. ಹಂದ್ರಾಳ, ಬಿ.ಎ., (ಆನರ್ಸ) ಬಿ. ಟಿ.
(ಪಿನ್ಸಿಪಾಲ, ಸರಕಾರಿ ಕ. ಗಂ. ಟ್ರೇ. ಕಾ. ಧಾರವಾಡ.)

ಮೂಲ ಶಿಕ್ಷಣದ ಬಗೆಗೆ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಕೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ.

ಸತ್ಯ, ಅಹಿಂಸೆ, ಅಸ್ಪೃಶ್ಯತಾನಿವಾರಣೆ ಸ್ವದೇಶಪ್ರೇಮ ಇತ್ಯಾದಿ ರಾಷ್ಟ್ರೀಯ ಭಾವನೆಗಳ ವಿಶೇಷತಃ ಗಾಂಧೀಜಿಯ ವಿಧಾಯಕ ವಿಚಾರಗಳ

ಭಾರತೀಯರ ಕಥೆಗಳು

ಕನ್ನಡ ೩ನೆಯ ವರ್ಗಕ್ಕೆ

ಲೇಖಕ:—ಶ್ರೀ ಹಿರೇಮಠ ಬೆಲೆ ೮ ಆಣೆ

ಮ. ಬುದ್ಧನಿಂದ ದಾದಾಭಾಯಿ ನವರೋಜಿ. ತಥಾ ಮ. ಗಾಂಧೀಜಿಯವರಿಗಿನ ಕಥೆಗಳನ್ನು ಸುರಸ ಹಾಗು ಸರಳ ಶೈಲಿಯಲ್ಲಿ ರಚಿಸಿದೆ.

ಸಾಮಾನ್ಯ ಜ್ಞಾನ

ಮತ್ತು

ಧಾರವಾಡ ಜಿಲ್ಲೆಯ ಭೂಗೋಲ

ಪೌರನೀತಿ ಸಹಿತ ಬೆಲೆ ೧೦ ಆಣೆ.

೩ನೆಯ ವರ್ಗಕ್ಕೆ ಪಠ್ಯಪುಸ್ತಕದ ಜೊತೆಗೆ ಈ ಎರಡೇ ಪುಸ್ತಕಗಳು ಸಾಕು!

ಮಾರಾಟಗಾರರು:—ಆಕಳವಾಡಿ ಬುಕ್‌ಡಿಪೋ, ಧಾರವಾಡ.

ಮಕ್ಕಳ ಸಚಿತ್ರ ಅಂಕಗಣಿತ

ಪ್ರಾಥಮಿಕ ೧, ೨, ೩ನೆಯ ತರಗತಿಗಳಿಗೆ

ಹೊಸ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟುವು! ಹೊಸ ಶಿಕ್ಷಣಪದ್ಧತಿಗೆ ಹೊಂದಿಕೊಳ್ಳುವಂತಿ ವಿಷಯ ವಿವೇಚನೆಯನ್ನೊಳಗೊಂಡುವು! ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಉದಾಹರಣೆಗಳು! ಸುಲಭವಾದ ಶೈಲಿ, ಮಕ್ಕಳ ಮನಸೆಳೆಯುವ, ಕಣ್ಣಿಳಿಸುವ ಸುಂದರ ಚಿತ್ರಗಳು !! ಮಕ್ಕಳಿಗೆ ಅತ್ಯುಪಯುಕ್ತ!

೧ನೆಯ ತರಗತಿಯ ಅಂಕಗಣಿತ : ಬೆಲೆ ೦–೫–೦

೨ನೆಯ ತರಗತಿಯ ಅಂಕಗಣಿತ : ಬೆಲೆ ೦–೭–೦

೩ನೆಯ ತರಗತಿಯ ಅಂಕಗಣಿತ : ಬೆಲೆ ೦–೧೦–೦

ರಾಮಾಶ್ರಯ ಬುಕ್-ಡಿಪೊ, ಧಾರವಾಡ.

ಸ್ವತಂತ್ರ ಭಾರತೀಯ ರಾಜ್ಯತಂತ್ರ

(ಸಚಿತ್ರ)

ಲೇಖಕರು : ಶ್ರೀ. ನಾರಾಯಣ ಶರ್ಮ

ಎಸ್. ಎಸ್. ಸಿ (ಮ್ಯಾಟ್ರಿಕ್), ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಮುಲ್ಕಿ) ಹಾಗು ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ (ಪಿ. ಟಿ. ಸಿ.) ಗಳ ಹೊಸ ಅಭ್ಯಾಸ ಪತ್ರಿಕೆಗಳಿಗೆ ಅನುಸಾರವಾಗಿ ಬರೆಯಲ್ಪಟ್ಟಿದು. ಇದೊಂದೇ ಪುಸ್ತಕದಲ್ಲಿ ಮೂರು ಪರೀಕ್ಷೆಗಳಿಗೆ ಅವಶ್ಯವಾದ ಭಾರತೀಯ ರಾಜ್ಯತಂತ್ರದ ತ್ರಿವೇಣೀ ಸಂಗಮ! ವಿಷಯಕ್ಕನುಗುಣವಾದ ಸುಂದರ ಚಿತ್ರಗಳು! ನಕಾಶಗಳು! ಚಿತ್ರಪಟಗಳು! ಗಹನವಾದ ವಿಷಯವನ್ನ ಸುಲಭವಾಗಿ ತಿಳಿಯುವ ಶೈಲಿಯಲ್ಲಿ ಪ್ರತಿಪಾದಿಸಲಾಗಿದೆ.

ಬೆಲೆ : ೧—೦—೦ ಮಾತ್ರ

ಪ್ರಕಾಶಕರು :

ರಾಮಾಶ್ರಯ ಬುಕ್-ಡಿಪೊ, ಧಾರವಾಡ

ವ್ಯಾವಹಾರಿಕ ಗಣಿತವು

(ಭಾಗ ೧, ೨, ೩)

೫, ೬, ೭ನೆಯ ಇಯತ್ತೆಯವರಿಗಾಗಿ

" ಅನೇಕ ವರ್ಷಗಳಿಂದ ನನಗೆ ಚೆನ್ನಾಗಿ ಪರಿಚಿತರಾದ ಶ್ರೀಮಾನ್ ಆನಂತರಾವ ಬೋಡೆಯವರ " **ವ್ಯಾವಹಾರಿಕ ಗಣಿತ** "ದ ಎಲ್ಲ ಭಾಗಗಳನ್ನು ನಾನು ಕೂಲಂಕುಷವಾಗಿ ಓದಿ ನೋಡಿದೆನು. ಈ ಪುಸ್ತಕವು ಅವರ ೩೫ ವರ್ಷಗಳ ಶಿಕ್ಷಣಕಾರ್ಯದ ಮತ್ತು ಅನುಭವದ ಪರಿಪಕ್ವವಾದ ಫಲವಾಗಿರುವದೆಂದು ಹೇಳಲಿಕ್ಕೆ ನನಗೆ ಸಂತೋಷವಾಗುತ್ತದೆ. ಇದು ಒಳ್ಳೆಯ ಯೋಜನೆಯ ತಳಹದಿಯ ಮೇಲೆ ರಚಿಸಿದ್ದಾಗಿದೆ; ಮತ್ತು ಹೊಸ ಅಭ್ಯಾಸಪತ್ರಿಕೆಯಂತೆ ಎಲ್ಲ ಅಂಶಗಳನ್ನು ಒಳಗೊಂಡಿದೆ. ಅಲ್ಲದೆ ಸರಿಯಾದ ಅನುಕ್ರಮದಲ್ಲಿ ಕೊಡಲಾಗಿರುವ, ಉತ್ತಮವಾಗಿ ಆರಿಸಿದ ನಿತ್ಯಜೀವದಿಂದ ಆಯ್ದುಕೊಂಡ ಉದಾಹರಣೆಗಳನ್ನು ಕೊಡಲಾಗಿದೆ. ಇದು ಇಂದು ಯೋಜನೆಯ ತಳಹದಿಯ ಮೇಲೆ ರಚಿಸಲಾದ ಪಠ್ಯಪುಸ್ತಕಗಳ ವಿರಲತೆಯಿಂದ ಉಂಟಾಗಿರುವ ಪ್ರತಿಕೂಲತೆಯನ್ನು ಹೋಗಲಾಡಿಸಿ ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿ ಕಂಡುಬರುವದರಲ್ಲಿ ಸಂಶಯವಿಲ್ಲ." ಎಂದು ಎಸ್. ಟಿ. ಕಾಲೇಜಿನ ಗಣಿತ ವಿಷಯದ ಪ್ರಾಧ್ಯಾಪಕರಾದ ಶ್ರೀಮಾನ್ **ಪಿ. ಎಸ್. ಮಳಗಾವಕರರು** M. A., B. T., M. Ed. ಇವರು ಹೇಳುತ್ತಾರೆ.

ಪ್ರತಿಗಳು ದೊರೆಯುವ ಸ್ಥಳ : ಎ. ವ್ಹಿ. ಬೋಡೆ ಪುಲಬಾಗ ೨೨೪/೪೭ ಬೆಳಗಾವಿ

ಅಲ್ಪಾವಧಿಯಲ್ಲಿಯೇ ಪ್ರಖ್ಯಾತಿ ಪಡೆದು, ಕನ್ನಡ ನಾಡಿನಲ್ಲೆಲ್ಲ ಉಪಯೋಗಿಸಲಾಗುತ್ತಿರುವ ಶ್ರೀ. ಗಲಗಲಿಯವರ

ನೂತನ ಕಿಸೆಯ ಕೈಪಿಡಿ ಮಾಲೆ

[ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ]

(೧) ಆರೋಗ್ಯಶಾಸ್ತ್ರ	೦-೬-೦	(೨) ಪರೀಕ್ಷೆಯ ಗುಟ್ಟು	೦-೬-೦
(೩) ಶಾಸ್ತ್ರೀಯ ವಿಷಯ	೦-೬-೦	(೪) ಗಣಿತ ರಹಸ್ಯ	೦-೬-೦
(೫) ಭೂಮಿತಿ	೦-೬-೦	(೬) ಜನಾಖರ್ಚು	೦-೬-೦
(೭) ಪ್ರಬಂಧ ಲೇಖನ	೦-೬-೦	(೮) ವ್ಯಾಕರಣಚ್ಛಂದೋಲಂಕಾರ	೦-೬-೦
(೯) ಭಾಷೆಯ ಅಂತರಂಗ	೦-೬-೦		

ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ವಿಷಯನಿರೂಪಣೆಯುಳ್ಳ ಇಂಥ ಪುಸ್ತಕಗಳು ಬೇರೆ ಇಲ್ಲ. ಕಾರಣ ವಿದ್ಯಾರ್ಥಿಗಳು ಶ್ರೀ. ಗಲಗಲಿಯವರ ಕೃತಿಗಳನ್ನು ಕೊಂಡು ಓದಿ ತೇರ್ಗಡೆಹೊಂದಲಡ್ಡಿಯಿಲ್ಲ. ಇಂದೇ ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ !

ವ್ಯಾಪಾರಿಗಳಿಗೆ ಧಾರಳ ಕಮೀಶನ್ !!

ಆಕಳವಾಡಿ ಬುಕ್-ಡಿಪೋ, ಧಾರವಾಡ

ಜಯ-ಹಿಂದ

ಟೆಕ್ಸ್ಟ್ ಬುಕ್ ಕಮಿಟಿಯವರಿಂದಲೂ, ಮೇಲಧಿಕಾರಿಗಳಿಂದಲೂ ಮಾನ್ಯತೆ ಪಡೆದು, ಶಿಕ್ಷಣ ತಜ್ಞರಿಗೂ ಶಿಕ್ಷಕ-ಶಿಕ್ಷಕಿಯರಿಗೂ ಶಾಲಾ ಬಾಲಕರಿಗೂ

ಪ್ರೀತಿಗೆ ಪಾತ್ರವಾದ ಪುಸ್ತಕವೆಂದರೆ

ಇದೊಂದೇ

ಪ್ರಗತಿ ಮಾರ್ಗದರ್ಶನ

ಇದು ಧಾರವಾಡ, ವಿಜಾಪುರ ಜಲ್ಲೆಗಳ ಸ್ಕೂಲು ಬೋರ್ಡುಗಳಲ್ಲಿಯೂ ಮ್ಯು. ಸ್ಕೂಲು ಬೋರ್ಡಿನಲ್ಲಿಯ ಪ್ರಾಥಮಿಕ ಶಾಲೆಗಳ ೫-೬ನೆಯ ವರ್ಗಕ್ಕೆ ಪುಸ್ತಕವೆಂದು ಮಂಜೂರಾಗಿದೆ. ಈ ಪುಸ್ತಕವು ಚಿಕ್ಕಮಕ್ಕಳ ಬೌದ್ಧಿಕ, ಮಾನಸಿಕ, ನೈತಿಕ ಶಕ್ತಿಗಳನ್ನು ಬಲಪಡಿಸುವದು. ಇಂದೇ ತರಿಸಿಕೊಳ್ಳಿರಿ.

ಬೆಲೆ: ೧-೪-೦

ಸಿಗುವ ಸ್ಥಳ: ಗ್ರಂಥಕರ್ತರಲ್ಲಿಯೂ, ಗದಗ ಮತ್ತು ಹುಬ್ಬಳ್ಳಿ ಹೊಂಬಾಳಿ ಬಂಧುಗಳಲ್ಲಿಯೂ

ಶರಭರಾಜ ಕೋಡಿಕೊಪ್ಪಮಠ. ಮಾಸ್ತರ

ಸರಕಾರಿ ಪ್ರ್ಯಾಕ್ಟಿಸಿಂಗ ಸ್ಕೂಲ, ವಿಜಾಪುರ.

ಒನೆಯ ಇಯತ್ತೆಯ ಹೊಸ ಅಭ್ಯಾಸಪತ್ರಿಕೆಯಂತೆ ಹೊಸ ಮಾದರಿಯಿಂದ ರಚಿಸಿದ

ಭಾರತ ರಾಜ್ಯ ಘಟನೆ

(ಸಚಿತ್ರ)

ಸುಧಾರಿಸಿದ ಎರಡನೆಯ ಆವೃತ್ತಿ

ಫೆಬ್ರುವರಿ ೧೯೩೨

ಲೇಖಕರು:— ವಿ. ಕ. ನಂದಗಾಂವ

ಬೆಲೆ ೦—೧೨—೦

ಮಾನ್ಯರಾದ ಎಸ್.ಎನ್. ಅಂಗಡಿ, ಪ್ರಿ ರೆಡ್ಡಿ, ಪ್ರಿ. ಜೋಶಿ, ಪ್ರಿ. ಇಂಚಲ, ಪ್ರಿ. ವರ್ಟಿ, ಪ್ರಿ. ಚಿಕ್ಕರಮನೆ, ಶ್ರೀ. ಗೋಖಲೆ ಕೇಶವರಾಯರು, ಶ್ರೀ. ಶಾನಭಾಗ (ಡಿ.ಎನ್.ಪಿ.) ಮುಂತಾದವರಿಂದಲೂ ಪಠ್ಯ ಪುಸ್ತಕ ಸಮಿತಿಯವರಿಂದಲೂ ಮಾನ್ಯ ಮಾಡಲ್ಪಟ್ಟಿದೆ.

ಪ್ರಕಾಶಕರು: **ನಿ. ವಿ. ನಂದಗಾಂವ**

೬೧೯ ಮಠಗಲ್ಲಿ, ಬೆಳಗಾಂವ

ಮನೆಮನೆಗೆ ಅವಶ್ಯ ಸಂಗ್ರಹಿಸಲೇ ಬೇಕಾದ

ಚಿ. ಶ್ರೀ. ಕುಲಕರ್ಣಿಯವರ ಪುಸ್ತಕಗಳು

ಚಿಕ್ಕ ಕಥೆಗಳು

	ರೂ.	ಆ.
ಪ್ರಲ್ಹಾದ	೦	೨
೧೫ಂದಳನೆಯ ತರಗತಿಯ ಕತೆಗಳು	೧	೨
ಮಹಾತ್ಮಾ ಗಾಂಧಿ	೦	೪
ಅಕಬರ-ಬೀರಬಲ್ಲರ ವಿನೋದ ಕತೆ	೦	೬
ಭಾರತೀಯ ಐತಿಹಾಸಿಕ ಕಥೆಗಳು	೦	೮
ರಾಮಕೃಷ್ಣ ನೀತಿಯ ಕಥೆ	೦	೬

ಇತರ ಪುಸ್ತಕಗಳು

ಶ್ರೀವೆ ಕಪೀಶ ಸ್ತೋತ್ರ	೦	೨
ಶ್ರೀರಾಮರಕ್ಷಾ	೦	೫

ತ್ರಿರಂಗಿ ಚಿತ್ರದ ಪುಸ್ತಕಗಳು

ಶಕುಂತಲೆ	೦	೬
ರಾಷ್ಟ್ರೀಯ ಮಹಾಪುರುಷರು	೦	೧೨
ಭಗವಾನ್ ಶ್ರೀರಾಮ	೩	೦

ಅವುಗಳಲ್ಲದೆ ಬೇರೆ ಕಥೆಯ ಪುಸ್ತಕಗಳೂ ದೊರೆಯುತ್ತವೆ.

ಸರಸ್ವತಿ ಪುಸ್ತಕ ಭಾಂಡಾರ

ಬಸವನ ಬೀದಿ, ಬೆಳಗಾಂವಿ

ಹೊಸಪುಟದ! ಹೊಸಪುಟದ!

ಶಿಕ್ಷಣ ದರ್ಶನ

ಲೇಖಕರು: **ಶ್ರೀ. ನಾ. ಲ. ಬಾಪಟ,** ಬಿ. ಎ. ಬಿ.ಟಿ.ಮುಖ್ಯಾಧ್ಯಾಪಕರು,ಕರ್ನಾಟಕಹೈಸ್ಕೂಲ್ ಮಾಳಮರಡಿ, ಧಾರವಾಡ ಬೆಲೆ: ೧-೮-೦. ಟ್ರೇನಿಂಗ ಪಡೆಯುತ್ತಿರುವವರಿಗೂ ಶಿಕ್ಷಕರಿಗೂ ಅತ್ಯುಪಯುಕ್ತವಾದುದು.

ಪುರೋಗಾಮಿ ಶಿಕ್ಷಕ

ಬೆಲೆ ೦-೧೨-೦

ಲೇಖಕರು: **ಗಜೇಂದ್ರಗಡಶಾಮರಾಯರು,** ಬೇಸಿಕ್ ಹೊಸ ಅಭ್ಯಾಸ ಪತ್ರಿಕೆಯ ಮೇರೆಗೆ ಸುಂದರ ಶೈಲಿಯಲ್ಲಿ ಬರೆದಿದ್ದಾರೆ.

ಸ್ಟೂಡಂಟ್ಸ್ ಒನ್ ಬುಕ್‌ಡಿಪೊ, ಧಾರವಾಡ

ಗೌರೀಶ ಗ್ರಂಥ ಪ್ರಕಟನಾಲಯದಿಂದ ಪ್ರಕಟವಾದ
ಹೊಸ ಹೊತ್ತಿಗೆಗಳು

೧. **ಕರ್ನಾಟಕದ ಐತಿಹಾಸಿಕ ಕಥೆಗಳು.** ೪ನೇ ಇಯತ್ತಿಗೆ — ಬೆಲೆ ೦-೧೪-೦

ಲೇಖಕರು :- ಶ್ರೀಯುತ ಬಸಪ್ಪ ಮಲ್ಲಪ್ಪ ಶಿಂಪಿ, ಬಿ.ಎ.ಬಿ.ಟಿ.
ರಿಟಾಯರ್ಡ ಅ. ಎ. ಇ. ದಕ್ಷಿಣ ಭಾಗ, ಧಾರವಾಡ.

೨. **ಭೂಮಂಡಲ ಬೋಧಿನಿ ಭಾಗ ೧.** ೪ನೆಯ ಇಯತ್ತಿಗೆ — **ಬೆಲೆ ೦-೧೨-೦**

ಲೇಖಕರು :- ಕೈ. ಶಿ. ಸೋ. ಕುಲಕರ್ಣಿ.

೩. **ಭೂಮಂಡಲ ಬೋಧಿನಿ ಭಾಗ ೨.** ೫ನೆಯ ಇಯತ್ತಿಗೆ — **ಬೆಲೆ ೧ ೪ ೦**

ಲೇಖಕರು :- ಶ್ರೀಯುತ ಎ. ಜಿ. ಕುಲಕರ್ಣಿ ಬಿ.ಎ.ಬಿ.ಟಿ.
ಮತ್ತು ಶ್ರೀಯುತ ಕಾರಡಗಿ ಬಿ.ಎ.

೪. **ಭೂಮಂಡಲ ಬೋಧಿನಿ ಭಾಗ ೩.** ೬ನೆಯ ಇಯತ್ತಿಗೆ — **ಬೆಲೆ ೧-೧೦-೦**

ಲೇಖಕರು :- ಸದರೀಯವರು

೫. **ಭೂಮಂಡಲ ಬೋಧಿನಿ ಭಾಗ ೪.** ೭ನೆಯ ಇಯತ್ತಿಗೆ — **ಬೆಲೆ ೨-೨-೦**

ಲೇಖಕರು :- ಸದರೀಯವರು

೬. **ಸ್ವತಂತ್ರ ಭಾರತದ ಗಣರಾಜ್ಯ ಘಟನೆ.** ೭ನೆಯ ಇಯತ್ತಿಗೆ — **ಬೆಲೆ ೦-೧೨ ೦**

ಲೇಖಕರು :- ಆದ್ಯ ರಂಗಾಚಾರ್ಯ ಎಂ. ಎ. (ಲಂಡನ)

೭. **ಭಾರತ ರಾಜ್ಯಘಟನೆಯ ತಿಳಿನೋಟ.** ೬ನೆಯ, ೭ನೆಯ ಇಯತ್ತಿಗಳಿಗೆ — **ಬೆಲೆ ೦-೮-೦**

ಲೇಖಕರು :- ಶ್ರೀ. ಗ. ಸ. ಹಾಲಪ್ಪ ಎಂ. ಎ. ಮಹಾರಾಜಾ
ಕಾಲೇಜ, ಮೈಸೂರ.

ಮೇಲಿನ ಎಲ್ಲ ಪುಸ್ತಕಗಳು ಅವುಗಳ ಮುಂದೆ ಕಾಣಿಸಿದ ಇಯತ್ತಿಗಳಿಗೆ ೧೯೫೪ರ ವರೆಗೆ **ಪಠ್ಯ ಪುಸ್ತಕಗಳೆಂದು ಸರಕಾರದವರಿಂದ ಮಂಜೂರಾಗಿವೆ.**

೮. **ಮನಸ್ಸು ಮತ್ತು ಶಿಕ್ಷಣ ಸಮಸ್ಯೆ.** ಟ್ರೇನಿಂಗ ಕಾಲೇಜದ ೨ನೆಯ ವರ್ಷದವರಿಗೆ ಪೂರಕ-
ವಾಚನವೆಂದು ಮಂಜೂರಾಗಿದೆ. **ಬೆಲೆ ೦-೧೨-೦**

ಲೇಖಕರು :- ಶ್ರೀ. ಕಾರಡಗಿ ವೀರಭದ್ರಪ್ಪನವರು ಎಂ. ಎ. ಎಲ್ ಎಲ್. ಬಿ.

೧. **ಮಾತಿನ ಮುನ್ನಡೆ.** ೪ನೆಯ ಇಯತ್ತಿಗೆ | ೩. **ಮಾತಿನ ಮುನ್ನಡೆ.** ೬ನೆಯ ಇಯತ್ತಿಗೆ
೨. **ಮಾತಿನ ಮುನ್ನಡೆ.** ೫ನೆಯ ಇಯತ್ತಿಗೆ | ೪. **ಮಾತಿನ ಮುನ್ನಡೆ.** ೭ನೆಯ ಇಯತ್ತಿಗೆ

೫. ಪತ್ರಗಳ ಪರಿಚಯ. ೬-೭ನೆಯ ಇಯತ್ತಿಗಳಿಗೆ.
ಇವೆಲ್ಲವೂ ಪೂರಕ ವಾಚನಗಳೆಂದು ಮಂಜೂರಾಗಿವೆ.

ಪ್ರಕಾಶಕರು :

ಶಂಭುಲಿಂಗಪ್ಪ ಶಿವರುದ್ರಪ್ಪ ಕುಲಕರ್ಣಿ, ಧಾರವಾಡ.

Printed by M. A. Kamat, B. sc. at Jai Hind Art Press, Javlipeth, Dharwar. Edited and Published by M. G. Handral B. M. Shintri, S. R. Tatti, & Y. D. Nadkarni Jointly at the Kannada Prathamik Shikshan Office, Govt. Training College for Men, Dharwar.